ಸಂಕಲನ

ವರ್ಷ ೭

ಜನೆವರಿ + ಫೆಬ್ರವರಿ

೨೦೦೭

೩೧

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಅಷ್ಟದಿಕ್ಕು ಪ್ರಕಾಶನ, ಬೆಂಗಳೂರು

ಕನ್ನಡ ಸಾಹಿತ್ಯ ಕಳೆದೊಂದು ಶತಮಾನದಲ್ಲಿ ಗಳಿಸಿಕೊಂಡಿರುವ ಹಿರಿಮೆ, ಯಶಸ್ಸು ನಿಜಕ್ಕೂ ಬೆರಗು ಹುಟ್ಟಿಸುವಂಥದು. ಈ ಸಾಧನೆಯ ಹಿಂದೆ ಭಾಷಾಂತರಗಳ ಮಹತ್ವವೂ ಇದೆಯೆಂಬುದನ್ನು ಮರೆಯಲಾಗದು. ಹಾಗೆ ನೋಡಿದರೆ ನಮ್ಮಲ್ಲಿ ಮೊದಲು ಪ್ರಕಟವಾದದ್ದು ಭಾಷಾಂತರಗಳೇ ಹೊರತು ಸ್ವತಂತ್ರ ಕೃತಿಗಳಲ್ಲ. ಬಿ. ವೆಂಕಟಾಚಾರ್ಯರು ಮತ್ತು ಗಳಗನಾಥರು ಬಂಗಾಲಿ, ಮರಾಠಿ ಭಾಷೆಗಳಿಂದ ಅನುವಾದಿಸಿದ ಕಾದಂಬರಿಗಳು ಕನ್ನಡದಲ್ಲಿ ಸ್ವತಂತ್ರ ಕಾದಂಬರಿಗಳ ಸೃಷ್ಟಿಗೆ ಕಾರಣವಾದುವು. ಬಿ.ಎಂ.ಶ್ರೀ. ಅನುವಾದಿಸಿದ 'ಇಂಗ್ಲಿಷ್ ಗೀತಗಳ' ಪ್ರಭಾವವಂತೂ ಅದೆಷ್ಟು ಗಾಢವಾಗಿತ್ತೆಂದರೆ ಆ ನಂತರ ನಮ್ಮಲ್ಲಿ ರಮ್ಯ ಕಾವ್ಯದ ಒಂದು ಪರಂಪರೆಯೇ ಸೃಷ್ಟಿಯಾಯಿತು.

ಈಗಂತೂ ನಾವು ಹಿಂದೆಂದಿಗಿಂತಲೂ ಹೆಚ್ಚಾಗಿ ಪ್ರಸ್ತುತ ಕಾಲವನ್ನು ಜಗತ್ತಿನ ಇತರ ದೇಶ, ಭಾಷೆ, ರಾಜಕೀಯ, ಸಮಾಜ, ಸಂಸ್ಕೃತಿಗಳ ಜೊತೆ ಹಂಚಿಕೊಳ್ಳುತ್ತಿದ್ದೇವೆ. ಪರಸ್ಪರ ಅವಲಂಬನೆ ಮತ್ತು ಪ್ರಭಾವ ಎಂದಿಗಿಂತ ಈಗ ಅನಿವಾರ್ಯವೂ ತೀಕ್ಷ್ಣವೂ ಆಗಿದೆ. ಇಂಥ ಸಂದರ್ಭದಲ್ಲಿ ಜಗತ್ತಿನ ಇತರ ಭಾಷೆಗಳ ಮಹತ್ವದ ಸಾಹಿತ್ಯಕೃತಿ ಗಳನ್ನು ಕನ್ನಡದಲ್ಲಿ ಪಡೆದು ಓದುವುದು ನಮ್ಮ ಮನಸ್ಸಿನ ಮತ್ತು ಭಾಷೆಯ ಆರೋಗ್ಯಕ್ಕೆ ಅಗತ್ಯವಾದದ್ದು. ಈ ನಿಟ್ಟಿನಲ್ಲಿ ವಿಶಿಷ್ಟ ಹೆಜ್ಜೆಯಾಗಿ, ಜಗತ್ತಿನ ಸಾಹಿತ್ಯಕ್ಕೊಂದು ಬೆಳಕಿಂಡಿಯಾಗುವ ಸದುದ್ದೇಶದಿಂದ ಆರಂಭವಾಗಿದೆ ಅಷ್ಟದಿಕ್ಕು ಪ್ರಕಾಶನ. ಅಶೋಕ ಹೆಗಡೆ ಮತ್ತು ಗೋಪಾಲಕೃಷ್ಣ ಪೈ ಈ ಮಾಲಿಕೆಯ ರೂವಾರಿಗಳು.

ಒಳ್ಳೆಯ ಭಾಷಾಂತರವು ಸುಲಭವಲ್ಲ. ವಾಚ್ಯಾರ್ಥದ ಜೊತೆಗೇ ಮೂಲ ಕೃತಿಯ ಲಯ ಮತ್ತು ಭಾಷೆಯನ್ನು ಸಮರ್ಥವಾಗಿ ಕನ್ನಡ ಜಾಯಮಾನಕ್ಕೆ ಅನುಗುಣವಾಗಿ ತಂದಾಗಲೇ ಒಂದು ಅನುವಾದವು ಕನ್ನಡ ಕೃತಿಯಷ್ಟೇ ಸಂತೋಷವನ್ನು ನಮಗೆ ಕೊಡುವುದು ಸಾಧ್ಯ. ಕನ್ನಡದ ಪ್ರಸಿದ್ಧ ಸೃಜನಶೀಲ ಲೇಖಕ ಲೇಖಕಿಯರೇ ಈ ಕೆಲಸವನ್ನು ಅಷ್ಟದಿಕ್ಕು ಪ್ರಕಾಶನಕ್ಕಾಗಿ ನಿರ್ವಹಿಸಲಿದ್ದಾರೆ. ಗೌರವ ಸಂಪಾದಕರಾಗಿರುವ ಎಸ್. ದಿವಾಕರ್ ಜಗತ್ತಿನ ಸಾಹಿತ್ಯದ ಅಪಾರ ರಾಶಿಯಿಂದ ಮಹತ್ವದ ಮತ್ತು ನಮ್ಮ ಸಂದರ್ಭಕ್ಕೆ ಪ್ರಸ್ತುತವಾದ ಕೃತಿಗಳನ್ನು ಆಯ್ದುಕೊಡಲಿದ್ದಾರೆ. ಲೇಖಕರಲ್ಲಿ ಹಲವರು ನೊಬೆಲ್ ಪ್ರಶಸ್ತಿ ಪಡೆದವರು. ಜೊತೆಗೆ ಭಾರತೀಯ ಭಾಷೆಗಳ ಬರಹಗಾರರೂ ಇರುತ್ತಾರೆ. ನಮ್ಮ ಅನುಭವ ಜಗತ್ತನ್ನೂ ಓದಿನ ಸಂತೋಷವನ್ನೂ ಹೆಚ್ಚಿಸಲಿರುವ ಈ ವಿಶಿಷ್ಟ ಯೋಜನೆಯಲ್ಲಿ ಪಾಲುಗೊಳ್ಳುವ ಮೂಲಕ ಇದನ್ನು ನಿಮ್ಮದಾಗಿಸಿಕೊಳ್ಳಿ.

ಅಷ್ಟದಿಕ್ಕು ವರ್ಷಕ್ಕೆ ಎರಡು ಕಂತುಗಳಲ್ಲಿ ಒಟ್ಟು ಹತ್ತು ಪುಸ್ತಕಗಳನ್ನು ಹೊರತರುತ್ತದೆ. ಅಂದರೆ ಆರು ತಿಂಗಳಿಗೊಮ್ಮೆ ಸುಮಾರು ೧೩೦-೧೪೦ ಪುಟಗಳುಳ್ಳ ೫ ಪುಸ್ತಕಗಳ ಬಿಡುಗಡೆ. ಮೊದಲ ಕಂತಿನ ೫ ಪುಸ್ತಕಗಳು ೨೦೦೭ ರ ಮಾರ್ಚ್ ತಿಂಗಳಲ್ಲಿ ಬಿಡುಗಡೆಯಾಗುತ್ತವೆ. ನೀವು ನೀಡಲಿರುವ ೬ ತಿಂಗಳ/೧ ವರ್ಷದ ಚಂದಾ ಹಣವನ್ನು ಚೆಕ್ ಅಥವಾ ಡಿಡಿ ಮುಖಾಂತರ ಈ ಕೆಳಕಂಡ ವಿಳಾಸಕ್ಕೆ ಕಳಿಸಿಕೊಡಿ. ಚೆಕ್/ಡಿಡಿಗಳನ್ನು 'ಅಷ್ಟದಿಕ್ಕು ಪ್ರಕಾಶನ'ದ ಹೆಸರಿನಲ್ಲಿ ಕಳಿಸಬೇಕು. ಚೆಕ್ ಕಳಿಸುವ ಹೊರ ಊರುಗಳ ಚಂದಾದಾರರು ರೂ. ೫೦ ಬ್ಯಾಂಕ್ ಕಮೀಶನ್ ಸೇರಿಸಿ ಕಳಿಸತಕ್ಕದ್ದು. ಚಂದಾದಾರರು ತಮ್ಮ ಪೂರ್ಣ ವಿಳಾಸವನ್ನು (ಪಿನ್‌ಕೋಡ್ ಸಮೇತ) ಸ್ಫುಟವಾಗಿ ಬರೆದು ಕಳಿಸಬೇಕಲ್ಲದೆ ತಮ್ಮ ದೂರವಾಣಿ ಸಂಖ್ಯೆಯನ್ನೂ ಈಮೇಲ್ ಇದ್ದರೆ ಅದರ ಐಡಿಯನ್ನೂ ತಿಳಿಸಿದರೆ ಅನುಕೂಲ.

ಬಿಡಿ ಪ್ರತಿ : ರೂ. ೧೦೦; **ಅರೆವಾರ್ಷಿಕ ಚಂದಾ :** ರೂ. ೩೭೫ (೫ ಪುಸ್ತಕಗಳಿಗೆ)

ವಾರ್ಷಿಕ ಚಂದಾ : ರೂ. ೭೭೫ (೧೦ ಪುಸ್ತಕಗಳಿಗೆ) ಅಂಚೆ ವೆಚ್ಚ ಸೇರಿ.

೧೦೪-ಎ, ಅಮರಜ್ಯೋತಿ ಅಪಾರ್ಟ್‌ಮೆಂಟ್ಸ್, ಯಡಿಯೂರು ಕೆರೆ ಎದುರು, ೮೫, ಕನಕಪುರ ರಸ್ತೆ,
ಬೆಂಗಳೂರು-೫೬೦ ೦೮೨; ಮೊಬೈಲ್ : ೯೮೮೦೧ ೪೧೭೧೮/೯೮೪೫೫ ೩೭೦೯೯/೯೮೮೬೨ ೧೧೩೦೮
ಫೋನ್ : ೦೮೦-೨೬೭೭೧೨೦೧; e-mail : ashtadikku@gmail.com

ಸಂಕಲನ

ಜನೆವರಿ + ಫೆಬ್ರುವರಿ ೨೦೦೭

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC

SANKALANA :

A Kannada Literary Magazine

Volume 6, Issue 1 : January + February 2007

Edited by Dr. Siddhaling Pattanshetti

Hoomane, Shridevinagar, Vidyagiri, Dharwad - 580 004

Printed by Saraswati Offset Printers, Shivaji Road, Dharwad - 580 001

•

•

•

ಸಂಕಲನ - ೩೧

ಸಂಪುಟ ೬, ಸಂಚಿಕೆ ೧ : ಜನೆವರಿ + ಫೆಬ್ರುವರಿ ೨೦೦೭

ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

✆ : ೦೮೩೬-೨೪೬ ೨೭೧೮

ಸಿ. ಪ. : ೯೪೪೮೬ ೩೦೬೩೭, ಹೇಮಾ : ೯೪೪೮೮ ೬೧೬೦೪

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

ವಾರ್ಷಿಕ ಚಂದಾ ರೂ. ೨೦೦/- (ಚೆಕ್ ೨೨೦/-)

೨೦೦೫, ೨೦೦೬, ೨೦೦೭ ಈ ೩ ವರ್ಷಗಳ ಚಂದಾ ರೂ. ೫೦೦/- (ಚೆಕ್ ೫೫೦/-)

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಕ್ರಾಸ್, ಜೋಶಿ ಫಾರ್ಮ್, ಧಾರವಾಡ - ೫೮೦ ೦೦೮

ಮೊಬೈಲ್ : ೯೯೮೦೩ ೮೧೮೬೯

ಸಂಕಲನ -೩೧ : ಪರಿವಿಡಿ

೧. ಒನ್ನೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೫

೨. 'ಕೃತಿಸ್ವಾಮ್ಯ ಕಾನೂನು ೧೯೫೭'ರ ಮುಖ್ಯಾಂಶಗಳು – ವೆಂಕಟೇಶ ಕುಲಕರಣಿ ೬-೧೧

೩. ಅವಿನಾಶ ಓಗಲೆ ಅವರ ೫ ಮರಾಠೀ ಕವಿತೆಗಳು – ಶಂಕರ ತಲ್ಲೂರ ೧೧-೧೩

೪. ಸುಲ್ತಾನಾ ಹೇಳಿದ ಸತ್ಯ – ಭಾರತಿ, ಗದಗ ೧೩-೧೮

೫. ಹಲವು 'ಹನಿ'ಗಳು – ಸಿ.ಪಿ.ಕೆ. ೧೮-೧೯

೬. ಅಕ್ಕಮಹಾದೇವಿಯ ವಚನಗಳು – ಎಲ್. ವಿ. ಶಾಂತಕುಮಾರಿ ೨೦-೨೯

೭. ಮೂರು ಕವಿತೆಗಳು – ವಿದ್ಯಾಧರ ಮುತಾಲಿಕ ದೇಸಾಯಿ ೩೦-೩೧

೮. ಜನಪ್ರಿಯ ರಂಗಭೂಮಿ ಯಾಕಾಗಬಾರದು? – ಪ್ರಸನ್ನ ೩೨-೩೪

೯. ನನ್ನ ಶಾಲಾ ಗುರುಗಳು : *ಗೌರವ-೧೪* – ಪರಮೇಶ್ವರ ಹೆಗಡೆ ೩೫-೩೯

೧೦. ಕಥಾನಗರ -೨ – ಜೋಗಿಂದರ್ ಪಾಲ್ / ಅಬ್ದುಲ್ ಮಜೀದ್ ಖಾನ್ ೩೯-೪೪

೧೧. ೫ ರುಬಾಯಿ + ೨ ಗಜಲು – ಜಂಬಣ್ಣ ಅಮರಚಿಂತ ೪೪-೪೫

೧೨. ಕವಿರಾಜಮಾರ್ಗಮಂಥನ : ಲೇಖನಮಾಲೆ - ೧೧ –ಷ. ಶೆಟ್ಟರ್ ೪೬-೫೮

೧೩. ಕೆನಡಾದ ಕವಿ ಐರ್ವಿಂಗ್ ಲೇಟನ್‌ರ ೩ ಕವಿತೆಗಳು – ಬಿ. ಎ. ಸನದಿ ೫೯-೬೦

೧೪. ಪಯಣ – ಜಗದೀಶ ಮಂಗಳೂರಮಠ ೬೦-೬೧

೧೫. ನಾಲ್ಕು ಕಿರುಗವಿತೆ – ಬಸವರಾಜ ಪಿ. ಡೋಣೂರ ೬೧

೧೬. ಪುಸ್ತಕ ಪರಿಶೀಲನೆ : ೬೨-೭೭

೧. ಒರೆಗಲ್ಲು : ಬೆಸಗರಹಳ್ಳಿ ರಾಮಣ್ಣ;

೨. ಧರೆ ಮೇಲೆ ಉರಿಪಾದ : ಕೃಷ್ಣಮೂರ್ತಿ ಬಿಳಿಗೆರೆ –ಶ್ಯಾಮಸುಂದರ ಬಿದರಕುಂದಿ

೩. ಒಂಟಿ ಸಲಗ : ಮ. ಸು. ಕೃಷ್ಣಮೂರ್ತಿ – ದೇಶಪಾಂಡೆ ಸುಬ್ಬರಾಯ

೪. ಗದಗ ತೋಂಟದಾರ್ಯ ಮಠದ ಹಸ್ತಪ್ರತಿ ಸೂಚಿ : ಸಂ. ಪಿ. ಕೆ. ರಾಠೋಡ;

೫. ಎಚ್. ಆರ್. ರಘುನಾಥಭಟ್ಟ ಸ್ಮರಣೆ : ಸಂ. ಲಕ್ಷ್ಮಣ್ ತೆಲಗಾವಿ – ಅಶೋಕ ಶೆಟ್ಟರ್

೬. ಎತ್ತಣಿಂದೆತ್ತ : ಕು. ಗೋ. – ಅರುಣಾ ಹೆಬ್ರಿ

೭. ಗಾಂಧೀಜಿ ಎಂದೆಂದಿಗೂ ಪ್ರಸ್ತುತ : ಕೃ. ಶ್ರೀ. ದೇಶಪಾಂಡೆ – ಮೋತಿಲಾಲ ಹಲವಾಯಿ

೮. ಎಲೆಯ ಮರೆಯಲ್ಲಿ : ಎಸ್ಕೆ ಕೊನೆಸಾಗರ – ಶಶಿಧರ ತೋಡಕರ

೯. ಕುಣಿಸಲು ನೀನು : ಸುಮಿತ್ರಾ ಹಲವಾಯಿ – ದುಷ್ಯಂತ ನಾಡಗೌಡ

೧೦. ಜನ್ಮ ಸಾರ್ಥಕ : ಬಿ. ಸುಬ್ರಾಯ ಶಾಸ್ತ್ರೀ – ನೆಂಪು ನರಸಿಂಹ ಭಟ್ಟ

೧೧. ಒಂದು ಬೊಗಸೆ ಧ್ಯಾನ : ಸಂಕುಲಜೀವ – ಪ್ರಕಾಶ ಭಟ್

೧೨. ಇರುಳು ಕಾಣಿಸಿದ ಆಕಾಶ : ಟಿ. ಆರ್. ರಾಧಾಕೃಷ್ಣ;

೧೩. ದಾರಿ ಯಾವುದಯ್ಯಾ : ಬಂದಗದ್ದೆ ರಾಧಾಕೃಷ್ಣ – ಚಂದ್ರಶೇಖರ ವಸ್ತ್ರದ

೧೪. ಪುಟ್ಟ ಪಾದದ ಗುರುತು : ಸುನಂದಾ ಪ್ರಕಾಶ ಕಡಮೆ – ಬಸವರಾಜ ವಕ್ಕುಂದ

೧೫. ಕಪ್ಪು ಕಾಗೆಯ ಹಾಡು;

೧೬. ಗುಡುಗುಡು ಮುಮ್ಮಟ ದೇವರು : ಮೂರ್ತಿ ದೇರಾಜೆ – ಪ್ರಸಾದ್ ರಕ್ಷಿದಿ .

೧೭. ಸಂಕಲನ : ಅನಿಸಿಕೆ ೭೭-೭೯

೧೮. ಕಡೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೮೦ + ಆವರಣ ಪುಟ ೩

ಸಂಪಾದಕರ ಮಾತು

ಸಂಕಲನ ಐದು ವರ್ಷಗಳನ್ನು ಸಂತೋಷ, ಹೆಮ್ಮೆಯಿಂದ ಪೂರಯಿಸಿದೆ. ೨೦೦೨ ರ ಜನೆವರಿ ೧೪ ರಂದು ಪ್ರಕಟವಾದ ಮೊದಲ ಸಂಚಿಕೆಯಲ್ಲಿ ನಾವು ಹಾಕಿಕೊಂಡ ಗೌರವ-ರೇಖೆಗಳನ್ನು ಇನ್ನಷ್ಟು ಗೌರಪಯುತವಾಗಿ ವಿಸ್ತರಿಸಿಕೊಳ್ಳುತ್ತ, ಸಮೃದ್ಧಗೊಳಿಸುತ್ತ ಸಾಗಿದ್ದೇವೆ. ನಮ್ಮ ಈ ಪಥಕ್ರಮಣಕ್ಕೆ ನೆರವಾದ, ಕಾರಣರಾದ ಎಲ್ಲರಿಗೂ ಕೃತಜ್ಞರಾಗಿದ್ದೇವೆ.

ಸಂಕಲನ-೩೧ ಆರನೆಯ ವರ್ಷದ ಮೊದಲ ಸಂಚಿಕೆ. ನಮ್ಮ ನಿಯಮಿತತನ, ನಿಷ್ಠೆ, ಆತ್ಮವಿಶ್ವಾಸಗಳು ಇನ್ನಷ್ಟು ಹೆಚ್ಚುವಂತೆ ಮಿತ್ರರು, ಅಭಿಮಾನಿಗಳು ಜೊತೆಗೆ ಬರುತ್ತಿದ್ದಾರೆ. ನಿಧಾನವಾಗಿಯಾದರೂ ಸರಿ, ಇಂಥ ಪ್ರಶಂಸೆ, ಪ್ರೀತಿ ಸಂಕಲನಕ್ಕೆ ಸಿಗುತ್ತಿದೆ ಎಂಬುದು ಸಮಾಧಾನ.

ಭಾರತದ ಎಲ್ಲ ಭಾಷೆಗಳ ಎಲ್ಲ ರೀತಿಯ ಲೇಖಕರಿಗೆ ಮತ್ತು ಪ್ರಕಾಶಕರಿಗೆ ಅನುಕೂಲವಾಗುವ ಕೃತಿಸ್ವಾಮ್ಯ ಕಾನೂನು– ಕಾಪಿ ರಾಯಿಟ್ ಆ್ಯಕ್ಟ್– ಕುರಿತು ಒಂದು ಲೇಖನವನ್ನು ಆ ಬಗ್ಗೆ ಚೆನ್ನಾಗಿ ತಿಳಿದವರಿಂದ ಬರೆಸಬೇಕು, ಲೇಖಕರು ಹಾಗೂ ಪ್ರಕಾಶಕರಿಗೆ ಇದರ ಅನಿವಾರ್ಯ ಅರಿವನ್ನು ತಲುಪಿಸಬೇಕು ಎಂದು ಬಹುಕಾಲದಿಂದ ಅಪೇಕ್ಷಿಸಿದ್ದೆವು. ಧಾರವಾಡದ ಪ್ರತಿಷ್ಠಿತ ನ್ಯಾಯವಾದಿ, ಲೇಖಕ ವೆಂಕಟೇಶ ಕುಲಕರಣಿ ಅವರು ಕೊಟ್ಟ ಕೃತಿಸ್ವಾಮ್ಯ ಕಾನೂನಿನ ಮುಖ್ಯ ವಿವರಗಳುಳ್ಳ ಒಂದು ಲೇಖನವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ಅಗತ್ಯ ಬಿದ್ದರೆ, ಓದುಗರು ಇಷ್ಟಪಟ್ಟರೆ ಈ ವಿಷಯದ ಒಂದು ಸುದೀರ್ಘ ಲೇಖನಸಾಲೆಯನ್ನು ತಾನು ಕೊಡಬಲ್ಲೆ ಎಂದು ವೆಂ. ಕು. ಅವರು ಹೇಳಿದ್ದಾರೆ. ಅವರಿಗೆ ಸಂಕಲನದ ಕೃತಜ್ಞತೆಗಳು.

'ನನ್ನ ಅವ್ವ ನನ್ನ ಅಪ್ಪ' ಮಾಲಿಕೆಯಲ್ಲಿ ಈವರೆಗೆ ೩೦ ಕೃತಜ್ಞತಾ ಲೇಖನ ಪ್ರಕಟವಾಗಿವೆ. ಮತ್ತು 'ನನ್ನ ಶಾಲಾ ಗುರುಗಳು' ಮಾಲಿಕೆಯಲ್ಲಿ ೧೩ ಗೌರವ ಲೇಖನ ಪ್ರಕಟವಾಗಿವೆ. ನಮ್ಮ ಪರಂಪರೆ, ಸಂಸ್ಕೃತಿ, ಮಾನವೀಯ ಮೌಲ್ಯವರ್ಧನೆಯ ನಿಟ್ಟಿನಲ್ಲಿ ಬಾಲ್ಯ ಹಾಗೂ ಭಾವನಾತ್ಮಕ ಬದುಕನ್ನು ಹೆಚ್ಚು ಹೆಚ್ಚು ಬಂಧುರಗೊಳಿಸುವಂಥ ಈ ಮಾಲಿಕೆಯ ಲೇಖನಗಳ ಮಹತ್ವವನ್ನು ವಿವರಿಸಿ ಹೇಳಬೇಕಾಗಿಲ್ಲ. ಈವರೆಗೆ ಈ ಮಾಲಿಕೆಗಳ ಲೇಖನಗಳನ್ನು ತಪ್ಪದೇ ಪ್ರಕಟಿಸುತ್ತ ಬಂದಿದ್ದೇವೆ. ಇನ್ನೂ ೧೫-೨೦ ಸಂಚಿಕೆಗಳಿಗೆ ಆಗುವಷ್ಟು ಲೇಖನ ಪ್ರಕಟನೆಗಾಗಿ ಕಾದಿವೆ.

ಈ ಮಾಲಿಕೆಗಳ ಲೇಖನಗಳಿಂದಾಗಿ ವಿಮರ್ಶೆ, ಕತೆ, ಏಕಾಂಕ ಮುಂತಾದ ಕ್ಷೇತ್ರಗಳ ಹಲವಾರು ಒಳ್ಳೊಳ್ಳೆಯ ಲೇಖನ ನಮ್ಮಲ್ಲಿ ಇನ್ನೂ ಉಳಿದಿವೆ. ಅವುಗಳಿಗೆ ಅವಕಾಶ ನೀಡುವ ಉದ್ದೇಶದಿಂದ ಆರನೆಯ ವರ್ಷದ ಪ್ರಸ್ತುತ ಸಂಚಿಕೆಯಿಂದ ಒಂದು ಬದಲಾವಣೆ ಮಾಡಿದ್ದೇವೆ. ಇನ್ನು ಮುಂದೆ ಪ್ರತಿ ಸಂಚಿಕೆಯಲ್ಲಿ ಒಮ್ಮೆ 'ಶಾಲಾ ಗುರುಗಳು', ಮತ್ತೊಮ್ಮೆ 'ಅವ್ವ ಅಪ್ಪ' ಹೀಗೆ ಪ್ರಕಟಿಸುತ್ತೇವೆ. ಇದರಿಂದಾಗಿ ಅಂಥ ಲೇಖನ ಕಳಿಸಿದವರು ಇನ್ನಷ್ಟು ಹೆಚ್ಚು ಅವಧಿಯ ವರೆಗೆ ಪ್ರಕಟಣೆಗಾಗಿ ಕಾಯಬೇಕಾಗುತ್ತದೆ. ಲೇಖಕ ಮಿತ್ರರ ಸಹಕಾರ ಕೋರುತ್ತೇವೆ.

೧ ಜನೆವರಿ ೨೦೦೭

ಹೂಮನೆ, ಧಾರವಾಡ-೪

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಮೂಲ ಹೆಸರು ಬಿಹಾರೀಲಾಲ್ ಚೌಬೆ. 'ರೀತಿಕಾಲ'ದ ಹಿಂದೀ ಸಾಹಿತ್ಯದೊಳಗ 'ಬಿಹಾರೀ' ಅನ್ನುವ ಹೆಸರಿನಿಂದ ಪ್ರಖ್ಯಾತಿ ಪಡೆದ ಶೃಂಗಾರ ಕವಿ. ಮುಕ್ತಕ ಕಾವ್ಯ ಪರಂಪರೆಯ ಸಮ್ರಾಟ. ಇವನ 'ಸತ್‌ಸಈ'ಯೊಳಗ ಈತನಕ ಕ್ರೋಡೀಕೃತವಾದ ದೋಹೆ ೭೪೦ ಕ್ಕಿಂತ ಹೆಚ್ಚು. ತುಲಸೀದಾಸರ 'ರಾಮಚರಿತಮಾನಸ'ದ ಬಗ್ಗೆ ಬಂದ್ಹಾಂಗ 'ಬಿಹಾರೀ ಸತ್‌ಸಈ' ಬಗ್ಗೆನೂ ಅಸಂಖ್ಯ ವ್ಯಾಖ್ಯಾನ ಗ್ರಂಥ ಬಂದಾವು. ಹಿಂದೀ ಅಲ್ಲದ ಉರ್ದೂ, ಸಂಸ್ಕೃತದಾಗೂ ಬಂದಾವು.

ಗ್ವಾಲಿಯರ್ ಹತ್ತಿರದ ಗೋವಿಂದಪುರದೊಳಗ ೧೭ ನೇ ಶತಕದ ಆರಂಭದೊಳಗ ಹುಟ್ಟಿದ ಬಿಹಾರೀ ರಸ, ಅಲಂಕಾರ, ಛಂದೋವಿವರ, ಧ್ವನಿ-ವೈಶಿಷ್ಟ್ಯ, ವಕ್ರೋಕ್ತಿ-ವಿಲಾಸ, ರಸಿಕತೆ, ಮಾಧುರ್ಯ, ಕಾವ್ಯಸೌಷ್ಠವ ಇತ್ಯಾದಿ ಇಡುಕಿರಿದ ಕವಿ. ಬುಂದೇಲಖಂಡ, ಮಥುರಾಗಳಲ್ಲಿ ಬಾಲ್ಯ, ಯೌವನ ಕಳೆದ ಬಿಹಾರಿ ಅಲ್ಪಕಾಲ ಮುಗಲ್ ದೊರೆ ಶಾಹ್‌ಜಹ್ಞಾನಲ್ಲಿ, ನಂತರ ಜಯಪುರದ ರಾಜ ಜಯಸಿಂಹನ ಆಸ್ಥಾನದಲ್ಲಿ ಇದ್ದ. ಅವನನ್ನು ಬಹುವಾಗಿ ಮೆಚ್ಚಿದ್ದ ಜಯಸಿಂಹ ಅವನ ಒಂದೊಂದು ದೋಹಾಕ್ಕ ಒಂದೊಂದು ಬಂಗಾರದ ನಾಣ್ಯ ಕೊಡತಿದ್ದನಂತ.

ಕೃಷ್ಣ ರಾಧೆ ನಾಯಕ ನಾಯಕಿ. ಇದು ನೆಪ. ಅವರ ಮಿಲನ, ವಿರಹ, ವಿನೋದ, ಸಖ್ಯ; ಕೃಷ್ಣನ ಬಾಲಲೀಲೆ, ರಾಸ, ಪೂತನಾವಧ, ವಿಶ್ವರೂಪದರ್ಶನ, ರುಕ್ಮಿಣೀಹರಣ ಮುಂತಾದ ಘಟನೆ; ಪ್ರಕೃತಿ ಸೌಂದರ್ಯ, ಉಪದೇಶ, ರಾಜನೀತಿ ಸಂಸ್ಕೃತಿಗಳು ಈ ದೋಹಾಗಳಲ್ಲಿ ತುಂಬಿಕೊಂಡಾವು. ಈಟದರಾಗ ಇಡೀದನ್ನ, ಬಿಂದುವಿನೊಳಗ ಸಿಂಧುವನ್ನು ತುರುಕುವ ಚಟ, ಅಭ್ಯಾಸ, ಪ್ರೀತಿ, ಪ್ರಾವೀಣ್ಯ, ಪರಿಣತಿಯನ್ನ ಬಿಹಾರಿ ಸಾಧಿಸಿದ್ದ. ಶಬ್ದ, ಅರ್ಥಗಳ ರಮಣೀಯತೆ, ಚಾತುರ್ಯ, ಸಹಜತೆಗಳನ್ನ ಕರಗತ ಮಾಡಿಕೊಂಡಿದ್ದ. ಪ್ರಯತ್ನಪೂರ್ವಕ ವಿದ್ವತ್ ಕವಚಗಳ ಭಾವಕೋಶಗಳಲ್ಲಿ ಎಲ್ಲಾ ಭಾವ-ರಸಗಳನ್ನ ಹಿಚಿಕಿ ಹಿಚಿಕಿ ಸೂತ್ರದ ಹಪ್ಪಳದ್ಹಂಗ ಮಾಡಿ ಹೊಂದಿಸಿಟ್ಟಾನ. ಮಂಗಲಾಚರಣದ ಸ್ತುತಿಶ್ಲೋಕದ್ಹಂಗ ಇರುವ ಒನ್ನೇ ದೋಹಾ ನೋಡೂಣು :

ಮೇರೀ ಭವ-ಬಾಧಾ ಹರೌ, ರಾಧಾ ನಾಗರಿ ಸೋಇ ।
ಜಾ ತನ್ ಕೀ ಝ್ಞಾಈಂ ಪರೈ, ಸ್ಯಾಮು ಹರಿತ-ದುತಿ ಹೋಇ ॥

ಯಾವ ರಾಧಾಳ ದೇಹದ ನೆರಳು ಬಿದ್ದ ಕೂಡಲೇ ಶ್ಯಾಮ(ಕಪ್ಪು) ಬಣ್ಣದ ಕೃಷ್ಣ ಹಸಿರು ಬಣ್ಣದಾವ್ನ ಆಗತಾನೋ / ಯಾವ ರಾಧಾಳ ದೇಹವನ್ನು ನೋಡಿದ ಕೂಡಲೇ ಶ್ರೀಕೃಷ್ಣ ಪ್ರಸನ್ನಚಿತ್ತನಾಗತಾನೋ / ಯಾವ ರಾಧಾನ್ನ ನೆನೆಸಿದ ಕೂಡಲೇ ಕಪ್ಪು ಬಣ್ಣದ ನೋವು, ದುಃಖ, ದೈನ್ಯ ದುರಿತಗಳು ಕಳೆಗುಂದಿ ನಶಿಸಿ ಹೋಗತಾವೋ, ಅಂಥಾ ಆ ಚತುರೆ ರಾಧಾ ನನ್ನ ಭವ-ಬಾಧೆಗಳನ್ನ, ಪ್ರಾಪಂಚಿಕ ದುಃಖಗಳನ್ನ ನಿವಾರಿಸಲಿ.

ಇಲ್ಲಿ ಝ್ಞಾಈಂ=ನೆರಳು, ದೃಷ್ಟಿ, ಧ್ಯಾನ, ಲಕ್ಷ್ಯ; ಶ್ಯಾಮ=ಕಪ್ಪು ಬಣ್ಣದವ, ಶ್ರೀಕೃಷ್ಣ, ದುಃಖ, ಪಾಪ ಇತ್ಯಾದಿ; ಹರಿತ=ಹಸಿರು, ಪ್ರಸನ್ನತೆ, ಹೃತ್-ದ್ಯುತಿ, ಕಳೆಗುಂದು, ನಶಿಸು, ಭಾವರಹಿತ ಇತ್ಯಾದಿ. ಹಿಂಗ ಅನೇಕ ಅರ್ಥಗಳ ಗುಲಾಲುಪುಡಿಯನ್ನ ಒಮ್ಮೆಗೇ ಚಿಮ್ಮಿಬಿಡತಾನ ಬಿಹಾರಿ. ಭಾರತೀಯ ಕಾವ್ಯಪರಂಪರೆಯ ಮಂಗಲಾಚರಣದ ಆಶೀರ್ವಾದಾತ್ಮಕ, ನಮಸ್ಕಾರಾತ್ಮಕ, ವಸ್ತುಸೂಚಕ ಈ ಮೂರೂ ವಿಧಾನಗಳನ್ನ ಈ ದೋಹಾದೊಳಗ ತುರುಕಿದ್ದು ನೋಡಿದರ ಈ ವಿಹಾರಿ-ಬಿಹಾರಿಯ ಭಾಷಾಜ್ಞಾನ, ಕಾವ್ಯಕೌಶಲ, ಪಾಂಡಿತ್ಯ ಪ್ರದರ್ಶನ ಸಹಜ ಗೊತ್ತಾಗತಾವ. ಇದು ಹಸೇ ಕಡಲೆನೋ ಒಣಾ ಕಡಲೆನೋ ಕಬ್ಬಿಣದ ಕಡಲೆನೋ ಓದುಗರೇ ನಿರ್ಧರಿಸಕೋಬೇಕು.

'ಕೃತಿಸ್ವಾಮ್ಯ ಕಾನೂನು ೧೯೫೭' ರ ಮುಖ್ಯಾಂಶಗಳು

ವೆಂಕಟೇಶ ಕುಲಕರಣಿ

ಭಾರತದಲ್ಲಿ ೧೯೫೭ ರ ಜೂನ್ ೪ ರಂದು ಅಂಗೀಕೃತವಾಗಿ, ೧೯೫೮ ರ ಜನೆವರಿ ೨೧ ರಂದು ಈ ಕೃತಿಸ್ವಾಮ್ಯ ಕಾನೂನು, ಜಾರಿಯಲ್ಲಿ ಬಂದಿತು. ಈ ಕಾನೂನು ಇಡೀ ಭಾರತಕ್ಕೆ ಅನ್ವಯವಾಗುವುದು. ಈ ಕಾನೂನಿನಲ್ಲಿ ೧೫ ಪ್ರಕರಣಗಳಿದ್ದು, ೭೯ ಕಲಂಗಳಿವೆ. ಇವು ಪ್ರಾಸ್ತಾವಿಕ, ಕೃತಿಸ್ವಾಮ್ಯ ಕಚೇರಿ, ಕೃತಿಸ್ವಾಮ್ಯ ಮಂಡಳಿ, ಕೃತಿಸ್ವಾಮ್ಯ, ಕೃತಿಸ್ವಾಮ್ಯದ ಮೂಲಕರ್ತೃ ಹಾಗೂ ಕೃತಿಸ್ವಾಮ್ಯಧಾರಕನ ಹಕ್ಕುಗಳು, ಕೃತಿಸ್ವಾಮ್ಯದ ಅವಧಿ, ಲೈಸನ್ಸುಗಳು, ಬಿತ್ತರಿಸುವ ಹಕ್ಕುಗಳು, ಅಂತಾರಾಷ್ಟ್ರೀಯ ಕೃತಿಸ್ವಾಮ್ಯ, ಕೃತಿಸ್ವಾಮ್ಯ ನೋಂದಣೀಕರಣ, ಕೃತಿಸ್ವಾಮ್ಯದ ಉಲ್ಲಂಘನೆ, ದಿವಾಣಿ ಪರಿಹಾರಗಳು, ಅಪರಾಧಗಳು, ಮೇಲ್ಮನವಿಗಳು ಹಾಗೂ ಸಂಕೀರ್ಣ ಎಂದು ಹೀಗೆ ೧೫ ಪ್ರಕರಣಗಳಲ್ಲಿ ಈ ಕಾನೂನಿನ ವಿಭಜನೆ ಮಾಡಿದ್ದಾರೆ. ಕೃತಿಸ್ವಾಮ್ಯವು ಆಯಾ ಕೃತಿಯ ಕರ್ತೃವಿಗೆ, ಆತನ ಕೃತಿಗೆ ಸಂಬಂಧಪಟ್ಟಂತೆ ನೀಡಲಾದ ರಕ್ಷಣೆಯ ಹಕ್ಕು ಆಗಿರುತ್ತದೆ. ಅದು ಕಲಾಕೃತಿಯಾಗಿರಬಹುದು, ಸಂಗೀತ, ನಾಟಕ, ನೃತ್ಯ, ಸಾಹಿತ್ಯದ ಯಾವುದೇ ಪ್ರಕಾರವಾಗಿರಬಹುದು. ಒಬ್ಬ ವ್ಯಕ್ತಿಯ ಹಕ್ಕಿಗೆ ಒಳಪಟ್ಟ ಸಾಹಿತ್ಯ ಕೃತಿಯೇ ಆಗಿರಲಿ, ನಾಟಕ, ಸಂಗೀತ ಕೃತಿಯೇ ಆಗಿರಲಿ, ಕಲಾಕೃತಿಯೇ ಆಗಿರಲಿ ಅದನ್ನು ಪ್ರತಿ ಮಾಡುವ, ಮಾರುವ, ರೂಪಾಂತರಿಸುವ, ನಿಯಂತ್ರಿಸುವ ಹಕ್ಕು ಆ ಕೃತಿಕಾರನಿಗೆ ಇರುತ್ತದೆ.

ಯಾರ ಕೃತಿಸ್ವಾಮ್ಯ? ಯಾವುದು ಕೃತಿಸ್ವಾಮ್ಯ? :

ಒಂದು ಕೃತಿಯನ್ನು ಒಬ್ಬ ವ್ಯಕ್ತಿ ಒಂದು ಸಲ ಪ್ರಕಟಿಸಿದರೆ, ತರುವಾಯ ಮತ್ತೊಮ್ಮೆ ಅದನ್ನು ಪ್ರಕಟಿಸಲು, ರೂಪಾಂತರ ಮಾಡಲು, ಪ್ರದರ್ಶನ ಏರ್ಪಡಿಸಲು, ಸಾಹಿತ್ಯಸ್ವಾಮ್ಯ ಅಧಿಕಾರ, ಕಾನೂನು ಮೇರೆಗೆ ನಿಗದಿಯಾದ ಅವಧಿಯಲ್ಲಿ, ಆ ಲೇಖಕನಿಗೆ ಅಥವಾ ಆ ಹಕ್ಕನ್ನು ಪಡೆದುಕೊಂಡವರಿಗೆ ಇರುತ್ತದೆ.

೭ ನೇ ಕಲಂನಲ್ಲಿ ಇದಕ್ಕೆ ಸಂಬಂಧಪಟ್ಟಂತೆ ವ್ಯಾಖ್ಯೆಗಳಿದ್ದು, 'ಒಂದು ನಾಟಕವಾದರೆ ಅದನ್ನು ನಾಟಕೇತರ ಸಾಹಿತ್ಯವಾಗಿ ಮಾರ್ಪಡಿಸುವುದು, ಸಾಹಿತ್ಯಕೃತಿಯಾದರೆ ಅದನ್ನು ನಾಟಕವಾಗಿ ರೂಪಾಂತರಿಸುವುದು, ಅಥವಾ ಅವುಗಳನ್ನು ಸಂಕ್ಷಿಪ್ತವಾಗಿ ಪುಸ್ತಕ ರೂಪದಲ್ಲಿ ಪ್ರಕಟಿಸುವುದು, ಪತ್ರಿಕೆ, ಸಾಪ್ತಾಹಿಕ ಅಥವಾ ಪಾಕ್ಷಿಕ ಪತ್ರಿಕೆಗಳಲ್ಲಿ ಮರುಪ್ರಕಟಿಸುವುದು, ಕಲಾಕೃತಿಯಾದರೆ ಚಿತ್ರಕಲೆ, ಶಿಲ್ಪಕಲೆ, ರೇಖಾಚಿತ್ರ, ಛಾಯಾಚಿತ್ರ, ನಕಾಶೆ, ಅಥವಾ ಕಲಾಕೃತಿ ಗುಣಗಳುಳ್ಳ ಯಾವುದೇ ಕೃತಿ' ಎಂದು ವಿವರಿಸಲಾಗಿದೆ.

ಲೇಖಕನೆಂದರೆ ಸಾಹಿತಿ ಅಥವಾ ನಾಟಕ ಕೃತಿಯಾದರೆ ಅದರ ಲೇಖಕ, ಸಂಗೀತ ಕೃತಿಯಾದರೆ ಅದರ ನಿರ್ಮಾಪಕ, ಭಾವಚಿತ್ರವಾದರೆ ಅದನ್ನು ತೆಗೆದವನು, ಸಿನೆಮಾ ಆದರೆ ಅದು ಪೂರ್ಣಗೊಂಡಾಗ ಅದರ ಮಾಲೀಕನಾಗುವವನು. ಆಕಾಶವಾಣಿ ಬಿತ್ತರಣೆ ಎಂದರೆ ನಿಸ್ತಂತು(wireless)ವಿನ ಮೂಲಕ ಜನತೆಗೆ ಬಿತ್ತರಣೆ ಮಾಡುವುದು, ಮತ್ತು ಮರುಪ್ರಸಾರಣ ವನ್ನು ಒಳಗೊಂಡಿರುತ್ತದೆ. ಕೃತಿಸ್ವಾಮ್ಯದ ಉಲ್ಲಂಘನೆ ಎಂದರೆ ಸಾಹಿತ್ಯಿಕ, ಸಂಗೀತಕ್ಕೆ

ಸಂಬಂಧಪಟ್ಟದ್ದು, ಕಲಾಕೃತಿಯಾಗಿದ್ದರೆ, ಅದರ ಮರುಪ್ರಕಟಣೆ, ಸಿನಿಮಾ ಆಗಿದ್ದರೆ ಅದರ ಪ್ರತಿ ಮಾಡುವುದು, ಅಥವಾ ಆ ಸಿನೆಮಾದಲ್ಲಿದ್ದ ಯಾವುದೇ ಧ್ವನಿಮುದ್ರಿತ ಭಾಗವನ್ನು ಪುನಃ ನಿರ್ಮಿಸುವುದು ಆಗಿವೆ.

ಪ್ರಕಟಣೆಯೆಂದರೆ ಒಂದು ಕೃತಿಯ ಪೂರ್ತಿ ಮರುಪ್ರಕಟಣೆ ಅಥವಾ ಆಂಶಿಕ ಪ್ರಕಟಣೆ ಆಗಿರಬಹುದು. ಕೃತಿಸ್ವಾಮ್ಯದ ಬಗ್ಗೆ ತಂಟೆ, ತಕರಾರುಗಳಿದ್ದರೆ, ಕೃತಿಸ್ವಾಮ್ಯ ಮಂಡಳಿಯು ಆ ವಿಷಯವನ್ನು, ಕಲಂ ೧೧ ರ ಮೇರೆಗೆ ಅಸ್ತಿತ್ವದಲ್ಲಿ ಬಂದ, ಕೃತಿಸ್ವಾಮ್ಯ ಮಂಡಳಿ ನಿರ್ಧರಿಸುತ್ತದೆ.

ಕೃತಿಸ್ವಾಮ್ಯ ಕಚೇರಿ :

ಈ ಕಾನೂನಿನ ಉದ್ದೇಶಗಳ ಈಡೇರಿಕೆಗಾಗಿ ಕೃತಿಸ್ವಾಮ್ಯ ಕಚೇರಿಯನ್ನು ಸ್ಥಾಪಿಸಲಾಗಿರುತ್ತದೆ. ಈ ಕಚೇರಿಯು ಕೃತಿಸ್ವಾಮ್ಯ ನಿಬಂಧಕರ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡುತ್ತದೆ. ಕೇಂದ್ರ ಸರಕಾರವು ಕೃತಿಸ್ವಾಮ್ಯಗಳ ನಿಬಂಧಕರನ್ನು ಒಬ್ಬರು ಅಥವಾ ಅದಕ್ಕಿಂತಲೂ ಹೆಚ್ಚು ಉಪನಿಬಂಧಕರನ್ನು ನೇಮಿಸಬಹುದು. ಕೃತಿಸ್ವಾಮ್ಯ ಮಂಡಳಿಯು ಒಬ್ಬರು ಚೇರಮನ್‌ರು ಹಾಗೂ ಎರಡಕ್ಕಿಂತ ಕಡಿಮೆಯಿಲ್ಲದ ಹಾಗೂ ಎಂಟಕ್ಕಿಂತ ಹೆಚ್ಚಿಲ್ಲದಂತೆ ಸದಸ್ಯರನ್ನು ಹೊಂದಿರುತ್ತದೆ. ಇದರ ಚೇರ್‌ಮನ್‌ರು ಸುಪ್ರೀಂ ಕೋರ್ಟಿನ ಅಥವಾ ಹೈಕೋರ್ಟಿನ ಸದ್ಯದ ನ್ಯಾಯಾಧೀಶರು ಅಥವಾ ಮಾಜಿ ನ್ಯಾಯಾಧೀಶರು ಅಥವಾ ಹೈಕೋರ್ಟಿನ ನ್ಯಾಯಾಧೀಶರಾಗಲು ಅರ್ಹತೆ ಹೊಂದಿದವರೂ ಆಗಿರಬಹುದು.

ಎಂದಿನಿಂದ ಜಾರಿ :

ಇವೆಲ್ಲ ಪ್ರಾಸ್ತಾವಿಕ ವಿಷಯಗಳಾಗಿದ್ದು, ಲೇಖಕರಿಗೆ ಪ್ರಕಾಶಕರಿಗೆ ಸಂಬಂಧಪಟ್ಟ ಮಹತ್ವದ ವಿಷಯಗಳನ್ನು ಇಲ್ಲಿ ಪರಿಗಣಿಸಬಹುದಾಗಿದೆ. .

ಒಂದು ಕೃತಿ, ಭಾರತದಲ್ಲಿ ಪ್ರಥಮ ಬಾರಿ ಪ್ರಕಟವಾಗಿದ್ದರೆ, ಪ್ರಕಟಣೆಗೊಂಡ ದಿನ, ಅಥವಾ ಭಾರತದ ಹೊರಗೆ ಪ್ರಕಟಣೆಗೊಂಡಿದ್ದರೆ, ಅದು ಪ್ರಕಟಗೊಂಡ ದಿನದಿಂದ ಅದರ ಕರ್ತೃವು ಕೃತಿಸ್ವಾಮ್ಯದ ಹಕ್ಕುದಾರನಾಗಿರುತ್ತಾನೆ. ಅಪ್ರಕಟಿತ ಕೃತಿಯಾಗಿದ್ದರೆ, ಅದರ ಹಕ್ಕು ಕೃತಿಕಾರನದೇ ಆಗಿರುತ್ತದೆ. ಕೃತಿಸ್ವಾಮ್ಯವು ಈ ಮುಂದೆ ಕಾಣಿಸಿದ ಹಕ್ಕನ್ನು ಒಳಗೊಂಡಿರುತ್ತದೆ. ಸಾಹಿತ್ಯಿಕ, ನಾಟಕಕ್ಕೆ ಸಂಬಂಧಪಟ್ಟ, ಇಲ್ಲವೆ ಸಂಗೀತ ಕೃತಿಯಾಗಿದ್ದರೆ ಅದನ್ನು ಮರು ಪ್ರಕಟಿಸುವ, ಸಾರ್ವಜನಿಕರೆದುರು ಪ್ರದರ್ಶಿಸುವ, ಆ ಕೃತಿಯನ್ನು ಭಾಷಾಂತರ ಮಾಡುವ, ಚಲನಚಿತ್ರ ಮಾಡುವ, ಬಿತ್ತರಗೊಳಿಸುವ, ರೂಪಾಂತರಗೊಳಿಸುವ ಹಕ್ಕು ಕೃತಿಸ್ವಾಮ್ಯಧಾರಕನದೇ ಇರುತ್ತದೆ.

ಕೃತಿಸ್ವಾಮ್ಯದ ಮೊದಲನೆಯ ಹಕ್ಕುದಾರನು ವೃತ್ತಪತ್ರಿಕೆಯ ಅಥವಾ ಯಾವುದೇ ಸಾಪ್ತಾಹಿಕ, ಅಥವಾ ಮಾಸಿಕದಲ್ಲಿ ನೌಕರಿ ಮಾಡುತ್ತಿದ್ದರೆ, ನೌಕರಿಯ ಅವಧಿಯಲ್ಲಿ ತನ್ನ ಕೃತಿಯನ್ನು ಅದಕ್ಕೆ ಸಂಬಂಧಪಟ್ಟಂತೆ ನಿರ್ಮಿಸಿದ್ದರೆ ಆ ವೃತ್ತಪತ್ರಿಕೆಯ ಮಾಲೀಕನು ಆ ಕೃತಿಯ ಸ್ವಾಮ್ಯ ಹೊಂದಿರುತ್ತಾನೆ. ಕೃತಿಸ್ವಾಮ್ಯವನ್ನು ಅದರ ಧಾರಕನು ಮತ್ತೊಬ್ಬ ವ್ಯಕ್ತಿಗೆ ಅಥವಾ ಸಂಸ್ಥೆಗೆ, ತನ್ನ ಕೃತಿಸ್ವಾಮ್ಯವನ್ನು ಪೂರ್ತಿಯಾಗಿ ಅಥವಾ ಭಾಗಶಃ ಕೊಡಬಹುದಾಗಿದೆ. ಅದರಲ್ಲಿ ಸಮಯದ ನಿರ್ಬಂಧವನ್ನು ಹಾಕಬಹುದು. ಒಬ್ಬ ಲೇಖಕನು ತಾನು ಮುಂದೆ

ಬರೆಯಬಹುದಾದ ಕೃತಿಸ್ವಾಮ್ಯದ ಹಕ್ಕನ್ನು ಬೇರೊಬ್ಬರಿಗೆ ಕೊಡಬಹುದು. ಅದು, ಆ ಕೃತಿಯು ಅಸ್ತಿತ್ವದಲ್ಲಿ ಬಂದಮೇಲೆ ಜಾರಿಯಲ್ಲಿ ಬರುವುದು. ಈ ಸ್ವಾಮ್ಯ ನೀಡುವಿಕೆ ಬರಹದಲ್ಲಿದ್ದು, ಕೃತಿಸ್ವಾಮ್ಯಧಾರಕನ ಸಹಿ ಇದ್ದರೆ ಮಾತ್ರ ಅದಕ್ಕೆ ಬೆಲೆ ಬರುತ್ತದೆ.

ಸ್ವಾಮ್ಯದ ಅವಧಿ :

ಕೃತಿಸ್ವಾಮ್ಯಧಾರಕನು, ಕೃತಿಸ್ವಾಮ್ಯ ಮಂಡಳಿಗೆ ಬರೆದು ತನ್ನ ಕೃತಿಯ ಬಗ್ಗೆ ಸಂಪೂರ್ಣ ಹಾಗೂ ಭಾಗಶಃ ಹಕ್ಕುಗಳನ್ನು ಬಿಟ್ಟುಕೊಡಬಹುದು. ಕೃತಿಸ್ವಾಮ್ಯದ ಅವಧಿಯು ಒಂದು ಕೃತಿಯ ಕೃತಿಕಾರ ಬದುಕಿದ್ದಾಗ ಪ್ರಕಟವಾಗಿದ್ದರೆ, ಕೃತಿಕಾರ ತೀರಿಕೊಂಡ ವರ್ಷದ ಅನಂತರದ ಪಂಚಾಂಗ ವರ್ಷದ ಆದಿಯಿಂದ ೬೦ ವರ್ಷಗಳ ಕಾಲ ಅದರ ಸ್ವಾಮ್ಯ ಇರುತ್ತದೆ. ಸಂಯುಕ್ತ ಕರ್ತೃತ್ವದ ಕೃತಿಯಾಗಿದ್ದರೆ, ಕೃತಿಕಾರರ ಪೈಕಿ ಕೊನೆಯಲ್ಲಿ ಮರಣ ಹೊಂದಿದವನ ಮರಣದ ಮುಂದಿನ ಪಂಚಾಗ ವರ್ಷದ ಆದಿಯಿಂದ ೬೦ ವರ್ಷಗಳ ವರೆಗೆ ಸ್ವಾಮ್ಯ ಇರುತ್ತದೆ. ಕೃತಿ ಛಾಯಾಚಿತ್ರವಾಗಿದ್ದರೆ ಅದರಲ್ಲಿ ಸ್ವಾಮ್ಯ, ಅದು ಪ್ರಕಟವಾದ ವರ್ಷದ ಅನಂತರದ ವರ್ಷದ ಆದಿಯಿಂದ ೬೦ ವರ್ಷಗಳ ವರೆಗೆ ಉಳಿಯುತ್ತದೆ. ಚಲನಚಿತ್ರ ಇಲ್ಲವೆ ಧ್ವನಿಮುದ್ರಿಕೆ ಆಗಿದ್ದರೆ, ಅದು ಪ್ರಕಟವಾದ ವರ್ಷದ ಅನಂತರದ ವರ್ಷದ ಆದಿಯಿಂದ ೬೦ ವರ್ಷಗಳ ವರೆಗೆ ಅದರಲ್ಲಿ ಸ್ವಾಮ್ಯ ಇರುತ್ತದೆ. ಸರ್ಕಾರಿ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳ ಕೃತಿಗಳಲ್ಲಿ ಸ್ವಾಮ್ಯ, ಅವು ಪ್ರಕಟವಾದ ವರ್ಷದ ಅನಂತರದ ವರ್ಷದ ಆದಿಯಿಂದ ೬೦ ವರ್ಷಗಳ ತನಕ ಉಳಿಯುತ್ತದೆ. ಹೆಸರಿಲ್ಲದೆ ಇಲ್ಲವೆ ಗುಪ್ತನಾಮದಲ್ಲಿ ಒಂದು ಕೃತಿ ಪ್ರಕಟವಾಗಿದ್ದರೆ ಅದು ಪ್ರಕಟವಾದ ವರ್ಷದ ಅನಂತರದ ವರ್ಷದ ಆದಿಯಿಂದ ೬೦ ವರ್ಷಗಳ ವರೆಗೆ ಸ್ವಾಮ್ಯ ಇರುತ್ತದೆ. ಆದರೆ ಈ ಅವಧಿ ಮುಗಿಯುವ ಮೊದಲೇ ಕೃತಿಕಾರನಾರು ಎಂದು ತಿಳಿದುಬಂದಲ್ಲಿ ಹಾಗೆ ತಿಳಿದುಬಂದ ವರ್ಷದ ಅನಂತರದ ವರ್ಷದ ಆದಿಯಿಂದ ೬೦ ವರ್ಷಗಳ ವರೆಗೆ ಕೃತಿಯ ಸ್ವಾಮ್ಯ ಉಳಿಯುತ್ತದೆ. ಒಂದು ಸಾಹಿತ್ಯ, ನಾಟಕ, ಸಂಗೀತ, ಅದರ ರಚಕನಿಗೆ ಸ್ವಾಮ್ಯವಿದ್ದು, ಅವನು ಜೀವಂತ ಇರುವಾಗ ಕೃತಿ ಪ್ರಕಟವಾಗದಿದ್ದಲ್ಲಿ ಅದು ಪ್ರಕಟವಾದ ವರ್ಷದ ಅನಂತರದ ವರ್ಷದ ಆದಿಯಿಂದ ೬೦ ವರ್ಷಗಳ ವರೆಗೆ ಸ್ವಾಮ್ಯ ಉಳಿಯುತ್ತದೆ.

ಆಕಾಶವಾಣಿ ಭಾಷಣ :

ಒಂದು ಕಾರ್ಯಕ್ರಮವು ಆಕಾಶವಾಣಿಯಲ್ಲಿ ಬಿತ್ತರಣೆಗೊಂಡರೆ ಆಕಾಶವಾಣಿಯವರಿಗೆ ಒಂದು ವಿಶೇಷ ಹಕ್ಕು ಇರುತ್ತದೆ. ಅದನ್ನು 'ಮರುಪ್ರಸಾರಣೆ' ಮಾಡುವ ಹಕ್ಕು ಎನ್ನುತ್ತಾರೆ. ಒಬ್ಬ ವ್ಯಕ್ತಿ ಒಂದು ಭಾಷಣವನ್ನು ಆಕಾಶವಾಣಿಯಲ್ಲಿ ಮಾಡಿದರೆ, ಒಂದು ನಾಟಕ, ಕಥೆ ಪ್ರಸಾರಗೊಂಡರೆ, ಆಕಾಶವಾಣಿಯು ಅವುಗಳ ಮರುಪ್ರಸಾರಣೆಯ ಹಕ್ಕನ್ನು ಆ ಕಾರ್ಯಕ್ರಮ ಪ್ರಥಮ ಸಲ ಬಿತ್ತರಣೆಗೊಂಡ ದಿನದಿಂದ ಮುಂದಿನ ಪಂಚಾಗ ವರ್ಷದ ಆದಿಯಿಂದ ೨೫ ವರ್ಷಗಳ ವರೆಗೆ ಹೊಂದಿರುತ್ತದೆ. ಈ ಹಕ್ಕಿನ ಅವಧಿ ಮುಗಿಯುವ ಮೊದಲು ಯಾರಾದರೂ ಅದರ ಮರುಪ್ರಸಾರವನ್ನು ಪೂರ್ಣತಃ ಅಥವಾ ಭಾಗಶಃ ಮಾಡಿದರೆ, ಬಳಕೆ ಮಾಡಿದರೆ, ಆತನು ಮೂಲ ಕೃತಿಸ್ವಾಮ್ಯಧಾರಕನ ಹಕ್ಕನ್ನು ಉಲ್ಲಂಘಿಸಿದಂತೆ ಆಗುತ್ತದೆ.

ಕೃತಿಸ್ವಾಮ್ಯದ ಉಲ್ಲಂಘನೆ - ನಿವಾರಣೋಪಾಯ :

ನಾವು ಸಾಮಾನ್ಯವಾಗಿ, ಹೆಚ್ಚಾಗಿ ಗಮನಿಸಬೇಕಾದ ಅಂಶವೇನೆಂದರೆ, ಕೃತಿಸ್ವಾಮ್ಯದ ಉಲ್ಲಂಘನೆ ಹಾಗೂ ಅದರ ನಿವಾರಣೋಪಾಯಗಳು. ಯಾವುದೇ ಒಬ್ಬ ವ್ಯಕ್ತಿಯು ಮೂಲ ಕೃತಿಸ್ವಾಮ್ಯಧಾರಕನ ಅನುಮತಿ ಇಲ್ಲದೇ ಕೃತಿಸ್ವಾಮ್ಯ ಉಲ್ಲಂಘನೆ ಮಾಡಿ, ನಾಟಕ ಪ್ರದರ್ಶನ, ಅಥವಾ ಕೃತಿ ಪ್ರದರ್ಶನ ಮಾಡಲು, ಲಾಭಕ್ಕಾಗಿ ಸ್ಥಳ ನೀಡಿದರೆ, ಅದು ಕಾನೂನು ಮೇರೆಗೆ ಅಪರಾಧವಾಗುತ್ತವೆ. ಯಾವುದೇ ವ್ಯಕ್ತಿಯು ಒಂದು ಕೃತಿಯ ಸ್ವಾಮ್ಯ ಉಲ್ಲಂಘನೆ ಮಾಡಿ, ಪ್ರಕಟಗೊಂಡ ಕೃತಿಯನ್ನು ಮಾರಾಟ ಮಾಡಿದರೆ, ಬಾಡಿಗೆಗೆ ಕೊಟ್ಟರೆ, ಮೂಲಸ್ವಾಮ್ಯಧಾರಕನ ಹಕ್ಕಿಗೆ ಚ್ಯುತಿ ಬರುವಂತೆ ಯಾವುದೇ ಕ್ರಮ ಕೈಗೊಂಡರೆ, ಅಂತಹ ಕೃತಿಯನ್ನು ಭಾರತಕ್ಕೆ ಆಮದು ಮಾಡಿಕೊಂಡರೆ, ಆತನು ಈ ಕಾನೂನಿನಡಿ ಅಪರಾಧ ಮಾಡಿದಂತೆ ಆಗುತ್ತದೆ.

ಇಲ್ಲಿಯ ವರೆಗೆ ಕಾನೂನು ನಿಷೇಧಾತ್ಮಕವಾಗಿ ಹೇಳಿದ್ದನ್ನು ನೋಡಿದರೆ, ಅದು ಪ್ರತಿಬಂಧನದ ಬಗ್ಗೆ ಹೇಳುತ್ತದೆ ಎನ್ನಬಹುದು.

ಇದು ಉಲ್ಲಂಘನೆ ಅಲ್ಲ :

ಕೃತಿಸ್ವಾಮ್ಯ ಕಾನೂನಿನಡಿಯಲ್ಲಿ ಮುಂದೆ ಹೇಳಲಾದ ಅಂಶಗಳು ಕೃತಿಸ್ವಾಮ್ಯದ ಉಲ್ಲಂಘನೆ ಅಲ್ಲ. ಒಂದು ಸಾಹಿತ್ಯಿಕ ಕೃತಿ, ನಾಟಕ, ಸಂಗೀತ ಅಥವಾ ಕಲಾತ್ಮಕ ವಿಷಯದ ಬಗ್ಗೆ ಸಂಶೋಧನೆ ಮಾಡುವುದು, ಪತ್ರಿಕೆಗಳಲ್ಲಿ ಟೀಕೆ ಅಥವಾ ವಿಮರ್ಶೆ ಮಾಡುವುದು, ಪ್ರಚಲಿತ ಘಟನೆಗಳ ಬಗ್ಗೆ ಒಂದು ಸಾಹಿತ್ಯಿಕ ಕೃತಿ ಅಥವಾ ನಾಟಕ ಅಥವಾ ಇತರ ಯಾವುದೇ ಕಲಾಕೃತಿಯ ಬಗ್ಗೆ ಪತ್ರಿಕೆಯಲ್ಲಿ ಅಥವಾ ಬಾನುಲಿಯಲ್ಲಿ ಅಥವಾ ಸಿನೆಮಾದಲ್ಲಿ ಅಥವಾ ಛಾಯಾಚಿತ್ರದಲ್ಲಿ ಮೂಲಕೃತಿಯ ಬಳಕೆಯಾದರೆ ಅದು ಕೃತಿಸ್ವಾಮ್ಯದ ಉಲ್ಲಂಘನೆಯಲ್ಲ. ನ್ಯಾಯಾಲಯದ ಆದೇಶ ಅಥವಾ ತೀರ್ಪನ್ನಾಗಲಿ ಪ್ರಕಟಿಸಿದರೆ ಅದು ಸಹ ಕಾನೂನಿನ ಉಲ್ಲಂಘನೆಯಲ್ಲ. ಈ ಕಾನೂನಿನ ಅಡಿಯಲ್ಲಿ ಹೇಳಿದ ಕಾಲಮಿತಿಯ ಅವಧಿ ಮುಗಿದ ಮೇಲೆ ಪ್ರಕಟಗೊಂಡ ಕೃತಿಯ ಬಗ್ಗೆ, ಅದು ಉಲ್ಲಂಘನೆಯೆಂದು ಹೇಳಲಾಗದು.

ಪರಿಹಾರ - ವಿಶೇಷ ಹಕ್ಕು :

ಯಾರೇ ಆಗಲಿ ತಮ್ಮ ಕೃತಿಸ್ವಾಮ್ಯದ ಉಲ್ಲಂಘನೆಯಾಗಿದೆ ಎಂದು ನ್ಯಾಯಾಲಯಕ್ಕೆ ಹೋಗಿ ಪರಿಹಾರ ಪಡೆದುಕೊಳ್ಳಲು ಈ ಕಾನೂನಿನ ೫೫ ನೇ ಕಲಂನಲ್ಲಿ ಅವಕಾಶವಿದೆ. ಕೃತಿಕಾರನು ನ್ಯಾಯಾಲಯದಲ್ಲಿ ದಾವೆ ಹೂಡಿ ಕೃತಿಸ್ವಾಮ್ಯದ ಉಲ್ಲಂಘನೆಯಾಗದಂತೆ ಪ್ರತಿಬಂಧಕಾಜ್ಞೆ ಪಡೆಯಬಹುದು. ಒಂದು ವೇಳೆ ಉಲ್ಲಂಘನೆಯಾಗಿದ್ದರೆ ನಷ್ಟ ಪರಿಹಾರ ಕೇಳಬಹುದು; ಅಥವಾ ಕಾನೂನಿನಲ್ಲಿ ಉಲ್ಲೇಖಿಸಿದ ಯಾವುದೇ ಪರಿಹಾರ ಕೇಳಬಹುದು.

ಕೃತಿಕಾರನಿಗೆ ಕೆಲವು ವಿಶಿಷ್ಟ ಹಕ್ಕುಗಳನ್ನು ಕಾನೂನು ನೀಡಿದೆ. ಕೃತಿಕಾರನು ಕೃತಿಸ್ವಾಮ್ಯವನ್ನು ಬೇರೊಬ್ಬರಿಗೆ ಕೊಟ್ಟಿದ್ದರೂ, ಆ ಕೃತಿಗೆ ತನ್ನ ಹೆಸರನ್ನು ಪಡೆಯುವ ಹಕ್ಕನ್ನು ಹೊಂದಿರುತ್ತಾನೆ. ತನ್ನ ಕೃತಿಯನ್ನು ವಿದ್ರೂಪಗೊಳಿಸಿದರೆ, ಬದಲಾವಣೆ ಮಾಡಿದರೆ, ತನ್ನ ಘನತೆ-ಗೌರವಕ್ಕೆ ಧಕ್ಕೆ ಬರುವಂತೆ, ಆ ಕೃತಿಗೆ ಸಂಬಂಧಪಟ್ಟಂತೆ, ಏನೇ ಕೆಲಸ ಮಾಡಿದರೂ ಅದಕ್ಕೆ ಪರಿಹಾರ ಪಡೆಯಲು, ಅದನ್ನು ತಡೆಹಿಡಿಯುವಂತೆ ನ್ಯಾಯಾಲಯಕ್ಕೆ ಕೋರಲು ವಿಶೇಷ ಹಕ್ಕನ್ನು ಪಡೆದಿರುತ್ತಾನೆ. ೬೩ ನೇ ಕಲಂ, ಕೃತಿಸ್ವಾಮ್ಯದ ಉಲ್ಲಂಘನೆಯನ್ನು ಮಾಡಿದರೆ ಅದಕ್ಕೆ ನೀಡುವ

ದಂಡನಿಯಮದ ಬಗ್ಗೆ ಹೇಳುತ್ತದೆ. ಇದರನ್ವಯ ಯಾವುದೇ ವ್ಯಕ್ತಿ, ಗೊತ್ತಿದ್ದೂ ಕೃತಿಸ್ವಾಮ್ಯ ವನ್ನು ಉಲ್ಲಂಘಿಸಿದರೆ, ಅಥವಾ ಉಲ್ಲಂಘಿಸಲು ಸಹಕಾರ ಮಾಡಿದರೆ, ಅಂತಹ ಅಪರಾಧಕ್ಕೆ ಒಂದು ವರ್ಷದ ವರೆಗೆ ಶಿಕ್ಷೆ ಅಥವಾ ದಂಡ, ಅಥವಾ ಇವೆರಡಕ್ಕೂ ಅವನು ಗುರಿಯಾಗುವನು. ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ದೂರು ಸಲ್ಲಿಸಿ, ದಂಡಾಧಿಕಾರಿಗಳು ಮೊಕದ್ದಮೆಯನ್ನು ವಿಚಾರಣೆಗೆ ಅಂಗೀಕರಿಸಿದ್ದರೆ, ನ್ಯಾಯಾಧೀಶರು ವಾರಂಟ್ ಇಲ್ಲದೇ, 'ಕೃತಿಸ್ವಾಮ್ಯದ ಉಲ್ಲಂಘನೆಯಾಗಿದೆ' ಎಂದು ಹೇಳಲಾದ, ಕೃತಿಗಳನ್ನು ಎಲ್ಲಿ ದೊರೆಯುತ್ತವೆಯೋ ಅಲ್ಲಿ ಜಪ್ತಿ ಮಾಡಲು ಆದೇಶಿಸಬಹುದು. ಜಪ್ತಿಯಾದ ಕೃತಿಗಳನ್ನು ಸಾಧ್ಯವಾದಷ್ಟು ಬೇಗ ನ್ಯಾಯಾಲಯದಲ್ಲಿ ಹಾಜರಪಡಿಸಬೇಕು. ಜಪ್ತಿಯಾದ ೧೫ ದಿನಗಳಲ್ಲಿ, ಇದರಲ್ಲಿ ಆಸಕ್ತಿ ಇದ್ದ ವ್ಯಕ್ತಿಯು, ತನಗೆ ಆ ಕೃತಿಗಳನ್ನು ಮರಳಿಸಬೇಕು ಎಂದು ಅರ್ಜಿ ಕೊಡಬಹುದು. ನ್ಯಾಯಾಧೀಶರು, ಆ ಅರ್ಜಿಯನ್ನು ವಿಚಾರಿಸಿ ಸೂಕ್ತ ಆದೇಶ ನೀಡಬಹುದಾಗಿದೆ. ಹಾಗೂ ತೀರ್ಮಾನವಾದ ಅರ್ಜಿಯ ಮೇಲೆ ಮೇಲ್ಮನವಿ ಸಲ್ಲಿಸಬಹುದು.

'ಕೃತಿಚೌರ್ಯ'ವೆಂದರೆ ಕೃತಿಸ್ವಾಮ್ಯದ ಉಲ್ಲಂಘನೆ :

ಕೇಂದ್ರ ಸರಕಾರ ಕೃತಿಸ್ವಾಮ್ಯ ನಿಯಮಗಳನ್ನು ರಚಿಸಿದ್ದು, ಅದರಲ್ಲಿ ೨೮ ನಿಯಮಗಳು ಇವೆ. ೧ ನೇ ಅನುಸೂಚಿಯಲ್ಲಿ ೬ ನಮೂನೆಗಳು ಇದ್ದು, ೨ ನೇ ಅನುಸೂಚಿಯಲ್ಲಿ ಈ ಕಾನೂನಿನಡಿ ಕೊಡಬೇಕಾದ ಶುಲ್ಕದ ಬಗ್ಗೆ ಹೇಳಲಾಗಿದೆ.

ಸಾಮಾನ್ಯವಾಗಿ ನಾವು ಯಾವುದನ್ನು ಕೃತಿಚೌರ್ಯ ಎಂದು ಹೇಳುತ್ತೇವೆಯೋ ಅದು ಕಾನೂನಿನ ದೃಷ್ಟಿಯಲ್ಲಿ ಕೃತಿಸ್ವಾಮ್ಯದ ಉಲ್ಲಂಘನೆಯಾಗಿರುತ್ತದೆ. ಒಬ್ಬನ ಕೃತಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಕಳುವು ಮಾಡಿಕೊಂಡು 'ಆ ಕೃತಿ ತನ್ನದೇ' ಎಂದು ಹೇಳುವುದು ಕೃತಿಚೌರ್ಯ. ಇದು ಸಾಹಿತ್ಯ ಪ್ರಪಂಚದ ಕಳ್ಳತನ. ಇನ್ನು ಅನೇಕ ಸಲ, ಯಾವುದೇ ವ್ಯಕ್ತಿ, ಸ್ವಂತ ಲಾಭಕ್ಕಾಗಿಯೋ ಅಥವಾ ಇನ್ನೊಬ್ಬರನ್ನು ಅವಮಾನಕ್ಕೆ ಗುರಿಪಡಿಸಬೇಕೆಂದೋ, 'ಕೃತಿಸ್ವಾಮ್ಯದ ಉಲ್ಲಂಘನೆಯಾಗಿದೆ'ಯೆಂದು ವಾದ ಹೂಡುತ್ತಾನೆ. ಒಂದು ಮೂಲ ವಸ್ತುವಿದ್ದರೆ ಅದರ ಮೇಲೆ ಹತ್ತು ಜನ ಹತ್ತು ರೀತಿಯ ವ್ಯಾಖ್ಯಾನ ಮಾಡಬಹುದು. ಪ್ರತಿಕೂಲ ಅಭಿಪ್ರಾಯ ಮಂಡಿಸಬಹುದು. ಹಾಗಿದ್ದಾಗ ಅದು ಕೃತಿಚೌರ್ಯವೂ ಅಲ್ಲ, ಕೃತಿಸ್ವಾಮ್ಯದ ಉಲ್ಲಂಘನೆಯೂ ಅಲ್ಲ.

ಪ್ರಕಾಶಕರು ಗಮನಿಸಬೇಕು :

ಪ್ರಕಾಶಕರಿಗೆ ಸಂಬಂಧಪಟ್ಟಂತೆ ತಿಳಿಸಬೇಕಾದ ವಿಷಯವೆಂದರೆ, ಯಾವುದೇ ಲೇಖಕ, ಪ್ರಕಟಣೆಗೆ ಪುಸ್ತಕ ಕೊಟ್ಟರೆ, ಕೃತಿಸ್ವಾಮ್ಯದ ಬಗ್ಗೆ ಬರಹದಲ್ಲಿ ನಮೂದಿಸದೇ ಪ್ರಕಟ ಮಾಡುವುದು ಕ್ಷೇಮವಲ್ಲ. ಪ್ರತಿಯೊಬ್ಬ ಪ್ರಕಾಶಕ, ಕೃತಿಸ್ವಾಮ್ಯ ಸಂಜ್ಞೆಯಾದ '©' ಈ ಚಿಹ್ನೆಯನ್ನು ಹಾಕದೇ ಇದ್ದರೆ, 'ಬರ್ನ್ಸ್ ಕನ್‌ವೆನ್ಶನ್' ಮೇರೆಗೆ, ಅದು ಆ ಲೇಖಕನ ಕೃತಿಸ್ವಾಮ್ಯವನ್ನು ಸಿದ್ಧಪಡಿಸಲು ಕಷ್ಟವಾಗುತ್ತದೆ. ಕೃತಿಕಾರನು ಗ್ರಂಥದ ಸ್ವಾಮ್ಯವನ್ನು ಒಂದನೇ ಪ್ರಕಟಣೆಗೆ ಕೊಟ್ಟಿದ್ದಾನೋ ಅಥವಾ ಮುಂದಿನ ಎಲ್ಲ ಪ್ರಕಟಣೆಗಳ ಹಕ್ಕನ್ನು ಕೊಟ್ಟಿದ್ದಾನೋ ಇವರ ಉಲ್ಲೇಖ ಬರಹದಲ್ಲಿರಬೇಕು. ಯಾವುದೇ ಇನ್ನೊಬ್ಬ ವ್ಯಕ್ತಿ, ತನ್ನ 'ಕೃತಿಸ್ವಾಮ್ಯದ ಉಲ್ಲಂಘನೆಯಾಗಿದೆ' ಎಂದು ಮೊಕದ್ದಮೆ ಹೂಡಿದರೆ, ಪ್ರಕಾಶಕನು ಒಬ್ಬ ಪ್ರತಿವಾದಿಯಾಗಿ

ನ್ಯಾಯಾಲಯಕ್ಕೆ ಅಲೆದಾಡಬೇಕಾಗುತ್ತದೆ. ಕೈ ತಪ್ಪಿಯೋ, ಮರೆವಿನಿಂದಲೋ, ನಿಷ್ಕಾಳಜಿಯಿಂದಲೋ, ಪ್ರಕಾಶಕರು ತಮ್ಮ ರಕ್ಷಣೆ ತಾವು ಮಾಡಿಕೊಳ್ಳದಿದ್ದರೆ, ಮುಂದೆ ಕಾನೂನಿನ ತೊಂದರೆಗೆ ಗುರಿಯಾಗುವುದಲ್ಲದೇ, ಆರ್ಥಿಕ ನಷ್ಟವನ್ನು ಅನುಭವಿಸುತ್ತಾರೆ.

ಕರ್ನಾಟಕದಲ್ಲಿ ಪ್ರತಿಯೊಬ್ಬ ಲೇಖಕ ಅಥವಾ ಪ್ರಕಾಶಕ ತಾನು ಬರೆದ ಅಥವಾ ಪ್ರಕಟಪಡಿಸಿದ ಕೃತಿಯ ಮೂರು ಪ್ರತಿಗಳನ್ನು, 'ನಿರ್ದೇಶಕರು, ಗ್ರಂಥಸ್ವಾಮ್ಯ ವಿಭಾಗ, ರಾಜ್ಯ ಸಾರ್ವಜನಿಕ ಗ್ರಂಥಾಲಯ, ಕಬ್ಬನ್ ಪಾರ್ಕ್, ಬೆಂಗಳೂರು'– ಈ ವಿಳಾಸಕ್ಕೆ ರಜಿಸ್ಟರ್ಡ್ ಅಂಚೆಯ ಮೂಲಕ ಪರತ ಪಾವತಿ ಪಡೆದು ಕಳುಹಿಸಲೇಬೇಕು. ಆಗ ಕೃತಿಸ್ವಾಮ್ಯವು ಅಲ್ಲಿ ನೋಂದಣಿಯಾಗುತ್ತದೆ. ಇದು ಮುಂದೆ ಯಾವುದೇ ತರಹದ ತಂಟೆ-ತಕರಾರುಗಳು ಬಂದಾಗ ಪ್ರಕಾಶಕರಿಗೆ ಅನುಕೂಲವಾಗುತ್ತದೆ. ಇದಲ್ಲದೇ, 'ನ್ಯಾಶನಲ್ ಲೈಬ್ರರಿ, ಬೆಲ್ವೆಡೆರೆ, ಕೋಲ್‌ಕಾತಾ; ಕೊನ್ನೆಮರಾ ಲೈಬ್ರರಿ, ಅಡಿಯಾರ್, ಎಗ್ಮೋರ್, ಚೆನ್ನೈ; ಸೆಂಟ್ರಲ್ ಲೈಬ್ರರಿ, ಫೋರ್ಟ್ ಮುಂಬಯಿ; ದೆಹಲಿ ಪಬ್ಲಿಕ್ ಲೈಬ್ರರಿ, ಸರೋಜಿನಿನಗರ, ಹೊಸದೆಹಲಿ' ಇವುಗಳಿಗೆ ತಲಾ ಒಂದು ಪ್ರತಿ ಕಳುಹಿಸಬೇಕು. ಸಾಮಾನ್ಯವಾಗಿ ಯಾರೂ ಕಳುಹಿಸುವುದಿಲ್ಲ. ಹೀಗೆ ಕಳುಹಿಸಿದರೆ ಅಲ್ಲಿ ಅವು ನೋಂದಾಗಿ ರುಜುವಾತಿಗೆ ಅನುಕೂಲವಾಗುತ್ತದೆ. ತನ್ನ ಜಿಲ್ಲೆಯ ಜಿಲ್ಲಾಧಿಕಾರಿಗೆ ಒಂದು ಪ್ರತಿ ಕಳಿಸಬೇಕು. ಪ್ರೆಸ್ ಹಾಗೂ ಪುಸ್ತಕ ನೊಂದಣಿ ಕಾನೂನಿನ ೧೮ ನೇ ಕಲಂ ಅಡಿ, ಮುದ್ರಕ-ಪ್ರಕಾಶಕ ಪುಟದ ನಮೂನೆ ಹೇಗಿರಬೇಕೆಂದು ಹೇಳಲಾಗಿದೆ. ಆ ನಮೂನೆಯಲ್ಲಿಯೇ, ಇಂಗ್ಲಿಷಿನಲ್ಲಿ ಪ್ರಕಟಿಸಿದ ಎಲ್ಲ ಮೇಲಿನ ಗ್ರಂಥಾಲಯಗಳಲ್ಲಿ ನಮ್ಮ ಪುಸ್ತಕ ತಕ್ಷಣ ನೋಂದಾಯಿತವಾಗುವುದು.

(ಈ ಬಗ್ಗೆ ಹೆಚ್ಚಿನ ವಿವರ ಬೇಕಿದ್ದರೆ, ಸ್ವವಿಳಾಸ ಬರೆದ, ೫ ರೂ. ಅಂಚೆಚೀಟಿ ಹಚ್ಚಿದ ಪಾಕೀಟನ್ನು ಕೆಳಗಿನ ವಿಳಾಸಕ್ಕೆ ಕಳಿಸಿದಲ್ಲಿ. ಅದರ ನಮೂನೆಯ ಝೆರಾಕ್ಸ್ ಪ್ರತಿಯೊಂದಿಗೆ ಇತರ ವಿವರ ತಿಳಿಸಲಾಗುವುದು.)

■ **ವೆಂಕಟೇಶ ಕುಲಕರಣಿ :** ನ್ಯಾಯವಾದಿ, ಜಾಗೃತಭಾರತ, ೧ನೇ ತಿರುವು, ಸಾಧನಕೇರಿ, ಧಾರವಾಡ-೮

■

ಅವಿನಾಶ ಓಗಲೆ ಅವರ ೫ ಮರಾಠೀ ಕವಿತೆಗಳು — ಶಂಕರ ತಲ್ಲೂರ

೧. ಉಸಮಡಿಕೆ (ಗಜಲ್)

ಕವಿತೆ ಇನ್ನೂ ಒಳಗಿಂದೊಳಗೆ ಉರಿಯುತ್ತ ಇಹುದು
ಕವಿತೆ ಇನ್ನೂ ಒಳಗಿಂದೊಳಗೆ ಕೊರೆಯುತ್ತ ಇಹುದು
ಕವಿತೆಗೆ ಇನ್ನೂ ದೊರೆತಿಲ್ಲ ಸ್ವಂತದ ಹಾದಿಯು
ದಿಕ್ಕು ತೋಚದೆ ಒಳಗೊಳಗೆ ಸುಳಿಯುತ್ತ ಇಹುದು
ಹೂವಾಗಿ ಅರಳುತ್ತಿಲ್ಲ ಕವಿತೆಯು ಅದು ಇನ್ನೂ
ಒಳಗಿಂದೊಳಗೆ ಮೊಗ್ಗು ಅಕಾಲಿಕ ಉದುರುತ್ತ ಇಹುದು
ಬೆರಳನು ಹಿಡಿದು ಸುತ್ತಲು ನಿಂತಿವೆ ಸುಂದರ ಶಬ್ದಗಳು
ಹುಚ್ಚು ಕವಿತೆ ಕೈಯ ಕೊಸರುತ್ತ ಓಡುತ್ತ ಇಹುದು
ಎಂಥ ಉಸಮಡಿಕೆ, ದಗಮಗ ಮತ್ತು ಎಂಥ ದೂರವು
ನಾನು ಹೊರಗೆ, ಕವಿತೆ ಒಳಗೆ ತಳಮಳಿಸುತ್ತ ಇಹುದು.

೨. ದಿವಸ

ಗೇಣೆತ್ತರ ದಿನ್ನೆಗೆ ಹಿಮಾಲಯ ಅನ್ನುವ ದಿವಸ
ನಿಂತ ನೀರಿನ ಹೊಂಡಕ್ಕೆ ಮಹಾಸಾಗರ ಅನ್ನುವ ದಿವಸ
ಕುಂಡದಲ್ಲಿಯ ಸಸಿಗೆ ಹೆಮ್ಮರ ಅನ್ನುವ ದಿವಸ
ಲೊಚಗುಟ್ಟುವ ನಾಯಿಗೆ ಐರಾವತ ಅನ್ನುವ ದಿವಸ
ಮಿರುಗುವ ಚಮಚಾಗಿರಿಗೆ ಯೋಗದಾನ ಅನ್ನುವ ದಿವಸ
ಮಿಣುಕು ಮಿಣುಕು ಮಿಂಚು ಹುಳುವಿಗೆ ಸೂರ್ಯ ಅನ್ನುವ ದಿವಸ
ತಮ್ಮ ಬೆನ್ನ ತಾವೆ ತಟ್ಟಿಕೊಳ್ಳುವ ದಿವಸ
ತಮ್ಮ ಡೊಳ್ಳು ತಾವೆ ಬಾರಿಸಿಕೊಳ್ಳುವ ದಿವಸ

೩. ಇಲ್ಲಿಂದಲೆ ಕೈಯ ಮುಗಿಯುವೆನು

ದೇವರೆ ನಿನ್ನ ದ್ವಾರದ ಮುಂದೆ ಮೋಟರುಗಳ ಸಾಲು
ಕಾಲ್ನಡಿಗೆಯಲಿ ಬಂದೆ ದರುಶನಕೆ ಒಳಗ್ಹೋಗೆ ಬರಲಿ ಹೇಳು?
ದೇವರೆ ನಿನ್ನ ದರುಶನಕೆ ಬರುವರು ಮಂತ್ರಿಮಹೋದಯರು
ಬಂದೂಕನು ತೋರಿಸಿ ತಡೆಯುವರು ಸಂರಕ್ಷಕ ದಳದವರು.
ದೇವರೆ ನಿನ್ನ ನೈವೇದ್ಯಕೆ ಹಣ್ಣು ಹಂಪಲ ಸಿಹಿ ತಿಂಡಿರಾಶಿ
ಎಲ್ಲಿ ಅಡಗಿಸಿಕೊಳ್ಳಲಿ ಹೇಳು ಬೆಲ್ಲ ಕೊಬ್ಬರಿಯ ವಾಟಿ?
ದೇವರೆ ನಿನ್ನ ಹೊನ್ನ ಕಿರೀಟದಿ ಲಕ್ಷ ಲಕ್ಷ ಮುತ್ತುರತ್ನ
ನಡೆಸಿಹೆ ನನ್ನ ಕೈಯಲ್ಲಿಯ ನಾಣ್ಯ ಮುಚ್ಚಿಕೊಳ್ಳುವ ಯತ್ನ
ದೇವರೆ ನಿನ್ನ ಮೈಮೇಲೆ ಹೊಸ ಹೊಸ ಒಡವೆ ದಿನದಿನವು
ನಿನಗೆಂತು ತಿಳಿದೀತು ನನ್ನ ಹಸಿದ ಹೊಟ್ಟೆಯ ನೋವು?
ದೇವರೆ ನಿನ್ನ ಕಾಲಿನ ಕೆಳಗೆ ಈಗ ಬೆಳ್ಳಿಯ ಇಟ್ಟಂಗಿ
ನಿನ್ನ ದರುಶನಕೆ ತಿಕೀಟ ಹರಿಯುವನು ಪೂಜಾರಿ ಭಟ್ಟಂಗಿ
ದೇವರೆ ನಿನ್ನ ಮಂದಿರದ ಹಳೆಯ ದಾರಿಯ ತೊರೆಯುವೆನು
ನಿನ್ನನು ಹೃದಯದಿ ಇಟ್ಟು, ಇಲ್ಲಿಂದಲೆ ಕೈಯ ಮುಗಿಯುವೆನು.

೪. ಜಗತ್ತು ಎಷ್ಟು ಹತ್ತಿರ ಹತ್ತಿರ

ಬರುತ್ತಿದೆ ಜಗತ್ತು ಎಷ್ಟು ಹತ್ತಿರ ಹತ್ತಿರ
ಜಗದ ಮೂಲೆ ಮೂಲೆಯ ಗೆಳೆಯ ಗೆಳತಿಯರೊಡನೆ
ಮೊಬಾಯಿಲಿನಲ್ಲಿ ಮೈಮರೆತು ಮನಸೋಕ್ತ ಮಾತ
ನಾಡುವ ಸಮಯ, ನನ್ನ ಮುದಿ ತಂದೆ ನನ್ನೆಡೆಗೆ-
ಅತಿ ಆಶೆ ಹೊತ್ತು ನೋಡುತ್ತ ಕಾತುರದಲ್ಲಿ
ಕಾಯುತ್ತಲಿದ್ದರು ಅವರೊಂದಿಗು ನಾನೆರಡು
ಮಾತು ನೇರ ಮಾತಾಡಬಹುದೆಂದು ಮನೆಯಲ್ಲಿ-
ಎದುರು ಕುಳಿತು : ಫಲಿಸಲಿಲ್ಲವರ ಬಯಕೆ ನೋಡು
ಮೊನ್ನೆ ಅಂದರವರು "ಮೊಬಾಯಿಲ ಎಷ್ಟು ಸೋವಿ
ಆಗಿಹವು ನೋಡು ಮಗು, ತಂದು ಕೊಡು ನನಗೊಂದ

ನಿನಗಾಗುವದು ಸುಲಭ ಮೊಬಾಯಿಲದಿ ವಿಚಾರಿ-
ಸಲು ನನ್ನ ಆರೋಗ್ಯ ಪಕ್ಕದ ಕೋಣೆಯಿಂದ."
ಬಂದರೂ ಸಹಿತ ಜಗತ್ತು ಹತ್ತಿರ ಹತ್ತಿರ
ಆಗುತಿವೆ ಮನುಷ್ಯ ಸಂಬಂಧ ದೂರ ದೂರ.

೫. ಬುಡಮೇಲು

ಅಡ್ಡಮಳೆಗೆ ಉರುಳಿದವು ಮರ ಅಂಧಾದುಂಧ
ಗಿಡಮರಗಳು ಆಗುವದಿಲ್ಲ ಹಾಗೆ ಬುಡಮೇಲು.
ಕೆಳಗಿನ ಬೇರುಗಳು ಹರಿದುಕೊಳ್ಳುವವು ಮೊದಲು
ವರ್ಷಗಟ್ಟಲೆ ಬೆಳೆದಿರುವ ನೆಲದ ಸಂಬಂಧ
ಒಣಗುವವು, ಒಣಗೊಣಗಿ ಉದುರುವವು ಎಲೆಗಳು
ಹೀರುವವು ಚಿಗುರೆಲೆಗಳು ಮರದ ಅಳಿದುಳಿದಂಥ
ಜೀವರಸ : ಮಳೆ ಬಿಸಿಲು ಮಾಡುವವು ಆಘಾತ
ಒಂದೊಂದೆ ಆಗಿ ಕಳಚುವವು ಟೊಂಗೆಗಳು ಟೊಳ್ಳು
ಬದುಕುವವು ಮುದಿಯ ಮರ ಹಳೆ ನೆನಪಿನಲ್ಲಿ
ಮರಳಲಾರವು ನಳನಳಿಸುವ ಹಸುರಿಗೆ ಮತ್ತೆ
ಒಂದು ದಿನ ಎಲ್ಲವೂ ಸಹಿಸಲಾರದ ವ್ಯಥೆ
ಕಟ್ಟಲಾರವು ಗೂಡು ಹಕ್ಕಿಗಳು ಇನ್ನಿಲ್ಲಿ
'ಬುಡಮೇಲು' ನೋವ ಹೊತ್ತ ಮರದ ಕೊನೆಯ ಚಿತ್ರ
ಅಡ್ಡಮಳೆ, ಬಿರುಗಾಳಿ ಎಲ್ಲ ನಿಮಿತ್ತ ಮಾತ್ರ.

■ ಶಂಕರ ತಲ್ಲೂರ : ೧೭೨, ಹಿಂದವಾಡಿ, ಬೆಳಗಾವಿ-೫೯೦ ೦೧೧ ■

ಸುಲ್ತಾನಾ ಹೇಳಿದ ಸತ್ಯ* — ಭಾರತಿ, ಗದಗ

ರಾಜ ಮನೆತನದೊಂದಿಗೆ ಸಂಬಂಧ ಹೊಂದಿದ ನಮ್ಮ ಕುಟುಂಬಕ್ಕೆ ಇತರರಿಗೆ ಇರದ ಹಲವು ಸೌಲಭ್ಯ, ಆಯ್ಕೆಗಳಿದ್ದವು. ನನ್ನ ಮೊದಲ ಹೆರಿಗೆಗೆಂದು ನಾನು ಆಸ್ಪತ್ರೆಯಲ್ಲಿ ಸೇರಿದೆ. ನನ್ನ ಪತಿ ಕರೀಂ ಆಸ್ಪತ್ರೆಯಲ್ಲಿನ ಮೂರು ವಾರ್ಡುಗಳನ್ನೇ ಅರಮನೆಯ ಮೂರು ಕೊಠಡಿಗಳಾಗಿ ಪರಿವರ್ತಿಸಿದನು. ಲಂಡನ್‌ನಿಂದ ಒಳಾಂಗಣ ಅಲಂಕರಿಸುವ ಕಲಾಕಾರರು ಬಂದು ತಾಯಿ-ಮಗುವಿನ ಹಾಸಿಗೆ, ತೊಟ್ಟಿಲು, ನೆಲಕ್ಕೆ ಮೆದುಹಾಸು, ಬಾಗಿಲು, ಕಿಟಕಿಗಳಿಗೆ ಸಮುದ್ರನೀಲಿ ಬಣ್ಣದ ತೆರೆಗಳನ್ನು ಹಾಕಿ ಸಿದ್ಧಪಡಿಸಿದರು. ಲಂಡನ್‌ನಿಂದ ಆರು ಪರಿಣತ ದಾದಿಗಳು ನನ್ನ ಹೆರಿಗೆಗೆ ಸಹಾಯ ಮಾಡಲು ಬಂದರು. ನನ್ನ ಚೊಚ್ಚಲು ಹೆರಿಗೆಯ ಸಂಭ್ರಮವೋ ಸಂಭ್ರಮ. ಕರೀಂನ ನಂಬಿಕೆಯಂತೆ ನಾನು ಗಂಡು ಮಗುವನ್ನೇ ಹೆರಬೇಕಿತ್ತು. ಬರಲಿರುವ ಕುಲದೀಪಕನಿಗೆಂದು ಈ ಎಲ್ಲ ಸಡಗರ ಸಂಭ್ರಮ.

ಹೆರಿಗೆಯ ನಂತರ ನನ್ನ ಮಗನೊಡನೆ ಬೆಚ್ಚಗೆ ಮೆತ್ತೆಯ ಮೇಲೆ ತಾಯ್ತನದ ಸುಖ ಅನುಭವಿಸುತ್ತ ಮಲಗಿದ್ದೆ. ನನ್ನ ಮಗ ನನ್ನ ತೋಳಿನಲ್ಲಿ ಸುರಕ್ಷಿತವಾಗಿದ್ದ. 'ಗಂಡುಮಗು'

---

* ಇಂಗ್ಲಿಶ್ ಮೂಲ : ಜೀನ್ ಪಿ. ಸ್ಯಾಸನ್ ಅವರ 'ಪ್ರಿನ್ಸೆಸ್' ಪುಸ್ತಕದ ಒಂದು ಅಧ್ಯಾಯ

ಹುಟ್ಟಿದ್ದರಿಂದ ಕರೀಂನನ್ನು ಓಡಿಯುವವರೇ ಇರಲಿಲ್ಲ. ಆದರೆ ನಿಧಾನವಾಗಿ ಇತರ ಕೋಣೆಗಳಲ್ಲಿದ್ದ ಸಾವೂದಿಯ ಸಾಮಾನ್ಯ ಮಹಿಳೆಯರಿಂದ ನನಗೆ ಹತ್ತು ಹಲವು ರಹಸ್ಯಗಳು ತಿಳಿದುಬಂದು ಬೆಚ್ಚಿಬೀಳಿಸಿದವು. ಎಷ್ಟೋ ಹಸುಕಂದಗಳನ್ನು ನರ್ಸರಿಯಲ್ಲಿಡಲಾಗಿತ್ತು. ಅವುಗಳನ್ನು ನಿಟ್ಟಿಸುತ್ತ ನಿಂತ ತಾಯಿಯರ ಗೋಳಿನ ಕಥೆಗಳು ಭಯಾನಕವಾಗಿದ್ದವು.

ನನ್ನ ಮೊದಲ ಮಗ ಜನಿಸಿದಾಗ ನನಗೆ ೧೮ ವರ್ಷ ತುಂಬಿದ್ದವು. ಆದರೆ ಇಲ್ಲಿ ಹದಿಮೂರು ವರ್ಷದ ಬಾಲೆಯರು ಎಳೆ ಕಂದನಿಗೆ ಜನ್ಮವಿತ್ತು ಅವುಗಳನ್ನು ನೋಡಿಕೊಳ್ಳುತ್ತಿರುವುದು ಕಂಡುಬಂದಿತು. ನನ್ನದೇ ವಯೋಮಾನದವರಂತೂ ಮೂರನೆಯ-ನಾಲ್ಕನೆಯ ಹೆರಿಗೆಗೆ ಬಂದಿದ್ದರು.

ಒಬ್ಬ ಪುಟ್ಟ ತಾಯಿ ನನ್ನ ಕಣ್ಣಿಗೆ ಬಿದ್ದಳು. ಕರಾಳ ಭವಿಷ್ಯವನ್ನೆದುರಿಸುವ ಭಯ ಅವಳ ಕಪ್ಪು ದುಂಡು ಕಣ್ಣುಗಳಲ್ಲಿ ಮಡುಗಟ್ಟಿತ್ತು. ಮೆಲ್ಲನೆ ಅವಳೊಡನೆ ಮಾತಾಡಿ ಅವಳ ಸ್ನೇಹ ಗಳಿಸಿದೆ. ನಂತರ ತಾನಾಗಿಯೇ ಅವಳು ತನ್ನ ಗೋಳಿನ ಕಥೆ ಹೇಳಿದಳು. ಹನ್ನೆರಡು ವರ್ಷದ ಅವಳನ್ನು ಐವತ್ಮೂರರ ವರನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಪಕ್ಕದ ಹಳ್ಳಿಯಲ್ಲಿದ್ದ ಅವಳು ಐದು ದಿನ ಹೆರಿಗೆ ಬೇನೆ ತಿಂದು ಮನೆಯಲ್ಲಿ ಹೆರಿಗೆಯಾಗದ ಕಾರಣ ಆಸ್ಪತ್ರೆಗೆ ಕರೆತರಲ್ಪಟ್ಟಿದ್ದಳು. ಆ ಬಾಲೆ ಹೇಳಿದಂತೆ ಅವಳ ಪತಿ ತುಂಬ ಕಟ್ಟುಮಸ್ತಾದ ಬಲಿಷ್ಠನಾಗಿದ್ದು ಹಗಲು-ರಾತ್ರಿ ಹಲವಾರು ಬಾರಿ ಅವಳೊಡನೆ 'ಕೂಡುತ್ತಿದ್ದ'. ಆ ಅಸಹನೀಯ ವೇದನೆ ಅವಳ ಮುಖದ ಮೇಲೆ ಈಗಲೂ ಪ್ರತಿಫಲಿತವಾಗಿತ್ತು. ಇಷ್ಟಾಗಿ ಈಗ ಅವಳು ಹೆಣ್ಣುಮಗುವಿಗೆ ಜನ್ಮ ಕೊಟ್ಟ ಕಾರಣ ಅವಳ ಪತಿ ಬಂದು ಅವಳನ್ನು ಕರೆದೊಯ್ಯುವ ಯಾವ ಭರವಸೆಯೂ ಇರಲಿಲ್ಲ. ಅವನ ಇತರ ಮೂವರು ಪತ್ನಿಯರು ಗಂಡು ಹೆತ್ತಿದ್ದರು. ತನ್ನೆದುರಿರುವ ಕರಾಳ ಭವಿಷ್ಯ ನೆನೆದು ಹುಡುಗಿ ಮ್ಲಾನವದನಳಾಗಿ ನಿಂತ ದೃಶ್ಯ ನನ್ನ ಮನಸ್ಸಿನಿಂದ ಮರೆಯಲಾಗಲೇ ಇಲ್ಲ.

ಮಾರನೆಯ ದಿನ ಬೆಳಗ್ಗೆ ನನ್ನ ಮುಂಜಾವಿನ ವಾಯುವಿಹಾರ ಮುಗಿಸಿ ಬರುವಾಗ ಪಕ್ಕದಲ್ಲಿದ್ದ ವಾರ್ಡೊಂದರ ಮುಂದೆ ಗಾರ್ಡೊಬ್ಬ ಪಹರೆ ಕಾಯುತ್ತಿದ್ದ. ನಾನು ರಾಜಕುಟುಂಬದ ಸಂಬಂಧಿಕರಾರೋ ಹೆರಿಗೆಗೆ ಬಂದಿರಬಹುದೆಂದು ಭಾವಿಸಿದೆ. ನನ್ನ ಕೊಠಡಿಗೆ ಮರಳಿದ ನಾನು ನನ್ನ ವಾರ್ಡಿನ ದಾದಿಯನ್ನು ಈ ಕುರಿತಾಗಿ ಕೇಳಲು ವಾರ್ಡ್ ನಂ. ೨೧೨ ರಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಅವಳು ಹೇಳತೊಡಗಿದಳು.

ಹಿಂದಿನ ದಿನವಷ್ಟೇ ಆಸ್ಪತ್ರೆಯ ಸಿಬ್ಬಂದಿಯೆಲ್ಲ ದಿನ ತುಂಬಿ ಹೆರಲಿದ್ದ ತುಂಬು ಗರ್ಭಿಣಿ ಬಾಲೆಯೋರ್ವಳ ಕಾಲು ಕೈಗೆಲ್ಲ ಕೋಳ ತೊಡಿಸಿ ಗಾರ್ಡುಗಳ ರಕ್ಷಣೆಯಲ್ಲಿ ಕರೆತಂದುದನ್ನು ಕಂಡು ಗಾಬರಿಗೊಂಡರಂತೆ. ಆ ಗಾರ್ಡುಗಳೊಡನೆ ಒಬ್ಬ ಆಡಳಿತಾಧಿಕಾರಿ ಹಾಗೂ ಕೋಪದಿಂದ ಕುದಿಯುತ್ತಿದ್ದ 'ಮುತವ್ವಾ'ಗಳು (ಮುಸ್ಲಿಂ ಧಾರ್ಮಿಕ ಮುಖಂಡರು) ಇದ್ದರಂತೆ. ಆ ಆಡಳಿತಾಧಿಕಾರಿಯು ಗರ್ಭಿಣಿ ಬಾಲೆಯನ್ನು ನೋಡಿಕೊಳ್ಳಲು ಒಬ್ಬ ವೈದ್ಯನನ್ನು ನೇಮಿಸಿದ್ದಾನಂತೆ. ಆ ವೈದ್ಯ ಆಸ್ಪತ್ರೆಯ ಸಿಬ್ಬಂದಿಗೆ ಹೇಳಿದ್ದೇನೆಂದರೆ, ಆ ಗರ್ಭಿಣಿ ಬಾಲೆಯನ್ನು 'ಶರಿಯಾ' ಕೋರ್ಟಿನಲ್ಲಿ ವಿಚಾರಣೆಗೆ ಒಳಪಡಿಸಲಾಗಿ ಅವಳು ವ್ಯಭಿಚಾರಿ

ಎಂದು ತೀರ್ಮಾನವಾಯಿತಂತೆ. ಮುಸ್ಲಿಂ ಕಾನೂನಿನ ಪ್ರಕಾರ ಇದು ದೇವರ ವಿರುದ್ಧ ಮಾಡುವ ಗಂಭೀರ ಅಪರಾಧ. ಅದಕ್ಕಿರುವ ಶಿಕ್ಷೆಯೆಂದರೆ ಛಡಿ ಏಟು ಹಾಕುವುದು ಅಥವಾ ಅದಕ್ಕಿಂತ ಕಠಿಣತಮ ಶಿಕ್ಷೆ. ಅಂತಹ ಶಿಕ್ಷೆ ವಿಧಿಸಲಾಗುವುದೋ ಇಲ್ಲವೋ ಎಂದು ಕಾಯಲು ಆ 'ಮುತವ್ವಾ'ಗಳು ಅಲ್ಲಿಯೇ ವಾಸ್ತವ್ಯ ಹೂಡಿದ್ದರು. ಆ ವೈದ್ಯನು ಭಾರತೀಯ ಮೂಲದ ಮುಸಲ್ಮಾನನಾಗಿದ್ದನು. ಆ ಬಾಲೆಯ ಅಪರಾಧಕ್ಕೆ ಶಿಕ್ಷೆ ಛಡಿ ಏಟು ಎಂದಿದ್ದರೂ ಆ ಬಾಲೆಯ ತಂದೆ ಅವಳಿಗೆ ಮರಣದಂಡನೆಯನ್ನೇ ವಿಧಿಸಬೇಕೆಂದು ಪಟ್ಟು ಹಿಡಿದಿದ್ದನಂತೆ. ಅದೂ ಸಾರ್ವಜನಿಕ ಸ್ಥಳದಲ್ಲಿ ಕಲ್ಲೇಟು ಹೊಡೆದು ಸಾಯಿಸುವುದು. ಹೆರಿಗೆಯಾಗುವ ವರೆಗೂ ಆ ಬಾಲೆಯನ್ನು ಗಾರ್ಡುಗಳು ಕಾಯಬೇಕಿತ್ತು. ಹೆರಿಗೆಯಾದ ತಕ್ಷಣವೇ ಅವಳನ್ನು ಕಲ್ಲೇಟು ಹೊಡೆದು ಸಾಯಿಸಲು ತೀರ್ಮಾನಿಸಲಾಗಿತ್ತು.

ಆ ರಾತ್ರಿ ನನ್ನ ಪತಿ ಕರೀಂ ಆ ಬಾಲೆಯ ಕುರಿತು ಸಂಗ್ರಹಿಸಿದ ವರದಿ ಹೀಗಿತ್ತು : ಆ ಬಾಲೆ ಅನೇಕ ಹದಿಹರೆಯದ ಹುಡುಗರೊಂದಿಗೆ ಕಾಮಕೇಳಿಯಲ್ಲಿ ಪಾಲ್ಗೊಂಡ ಪರಿಣಾಮವಾಗಿ ಗರ್ಭಿಣಿಯಾಗಿದ್ದಳು. ಅದಕ್ಕೆ ನಾನು ಕರೀಂನನ್ನು, ಆ ಹುಡುಗಿಗಂತೂ ಶಿಕ್ಷೆ ವಿಧಿಸುವರು; ಮತ್ತೆ ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದ ಆ ಹದಿಹರೆಯದ ಹುಡುಗರಿಗೇನು ಶಿಕ್ಷೆ? – ಎಂದು ಪ್ರಶ್ನಿಸಿದೆ. ಅದಕ್ಕೆ ಕರೀಂ ಮೌನ ತಳೆದನು. ಏಕೆಂದರೆ ಅರಬ್ಬರ ಪ್ರಪಂಚದಲ್ಲಿ ಇಂಥ ಪ್ರಕರಣದಲ್ಲಿ ತಪ್ಪೆಲ್ಲವನ್ನೂ ಹೆಣ್ಣಿನ ಹೆಗಲಿಗೇ ಹೊರಿಸಲಾಗುತ್ತದೆ.

ನಾನು ಮನೆಗೆ ಹೊರಡುವ ತಯಾರಿಯಲ್ಲಿದ್ದಾಗ ಬ್ರಿಟಿಶ್ ನರ್ಸ್ ಬಂದು ಆ ಪ್ರಕರಣದ ಮತ್ತಷ್ಟು ವಿವರಗಳನ್ನು ಹೇಳಿದಳು. ಆ ವಿವರ ಭಾರತೀಯ ಮೂಲದ ಮುಸಲ್ಮಾನ್ ವೈದ್ಯ ಸಂಗ್ರಹಿಸಿದ್ದನಂತೆ : ಆ ಗರ್ಭಿಣಿ ಬಾಲೆ ಅಂದು ನಸುಕಿನಲ್ಲಿ ಹೆಣ್ಣುಮಗುವಿಗೆ ಜನ್ಮವಿತ್ತಿದ್ದಳು. ಮೂವರು 'ಮುತವ್ವಾ'ಗಳು, ಗಾರ್ಡುಗಳು ಅವಳ ಕಾವಲಿಗೆ ಅಲ್ಲಿಯೇ ಇದ್ದರು. ಹೆರಿಗೆಯ ನಂತರ ಲೇಬರ್ ವಾರ್ಡಿನಿಂದ ಅವಳನ್ನು ಗಾಲಿಕುರ್ಚಿಯಲ್ಲಿ ಕೋಳ ತೊಡಿಸಿ ಕುಳ್ಳಿರಿಸಿ ಗಾರ್ಡು ಹಾಗೂ 'ಮುತವ್ವಾ'ಗಳ ಸಮಕ್ಷಮದಲ್ಲಿ ಅವಳ ವಾರ್ಡಿಗೆ ಸಾಗಿಸಿದ್ದರು. ಏಕೆಂದರೆ ಯಾವುದೇ ವಿದೇಶಿ ವೈದ್ಯ ಅನುಕಂಪದಿಂದ ಆ ಬಾಲೆಯ ತಪ್ಪಿಸಿಕೊಳ್ಳುವಿಕೆಗೆ ಸಹಾಯ ಮಾಡಬಾರದೆಂಬ ಉದ್ದೇಶದಿಂದ. ಅಂದೇ ಆ ಎಳೇ ಹಸೀ ಬಾಣಂತಿಯನ್ನು ಕಲ್ಲೇಟಿನಿಂದ ಸಾಯಿಸಲು ಕರೆದೊಯ್ಯಲಾಗುವುದೆಂದು ಭಾರತೀಯ ಮೂಲದ ವೈದ್ಯನಿಗೆ 'ಮುತವ್ವಾ'ಗಳು ತಿಳಿಸಿದ್ದರಂತೆ. ಹಸುಕಂದನ ಭವಿಷ್ಯವಂತೂ ಅತಂತ್ರವಾಗಿತ್ತು. ಮಗು ಹೆಣ್ಣಾದುದರಿಂದ ಗಂಡನ ಮನೆಯವರಿಗಾಗಲಿ, ತಾಯಿಯ ಮನೆಯವರಿಗಾಗಲಿ ಅದನ್ನು ಒಯ್ದು ಸಾಕುವ ಯಾವ ಆಸಕ್ತಿಯೂ ಇರಲಿಲ್ಲ. ಅದರ ರಕ್ಷಣೆಯ ಹೊಣೆಯನ್ನು ಎರಡೂ ಕುಟುಂಬಗಳೂ ನಿರಾಕರಿಸಿದ್ದವು.

ಆದರೆ ಆ ಹಸೀ ಬಾಣಂತಿ ಭಾರತೀಯ ಮೂಲದ ವೈದ್ಯನಿಗೆ ನಿಜವಾಗಿ ನಡೆದುದು ಏನೆಂದು ಹೇಳಿದ್ದಳಂತೆ. ಅವಳ ಹೆಸರು ಅಮಲ್. ರಿಯಾದ್‌ನ ವರ್ತಕನ ಮಗಳಾದ ಅವಳು ಹದಿಮೂರು ವರ್ಷದವಳಾಗಿದ್ದಳು.

ಒಂದು ಗುರುವಾರ ರಾತ್ರಿ (ಭಾರತದಲ್ಲಿ ಶನಿವಾರ ಅರ್ಧ ದಿನ, ರವಿವಾರ ಪೂರ್ಣ ದಿನ ರಜೆ ಇರುವಂತೆ ಸವೂದಿಯಲ್ಲಿ ಗುರುವಾರ ಅರ್ಧ ದಿನ ಶುಕ್ರವಾರ ಪೂರ್ಣ ದಿನ

ರಜೆ) ಅಮಲ್‌ಳ ತಂದೆ ತಾಯಿಗಳು ಊರಿಗೆ ಹೋಗಿದ್ದರು. ಶನಿವಾರ ರಾತ್ರಿವರೆಗೂ ಅವರು ಮರಳುವ ಭರವಸೆಯಿರಲಿಲ್ಲ. ಆ ಬಾಲೆಯ ರಕ್ಷಣೆಗೆಂದು ವಾಹನ ಚಾಲಕ ಹಾಗೂ ಮೂವರು ಫಿಲಿಪಿನೋ(ಫಿಲಿಪೈನ್ ದೇಶದ) ಹೆಣ್ಣಾಳುಗಳನ್ನು ಮನೆಯಲ್ಲಿಟ್ಟಿದ್ದರು. ಅಮಲಳ ಇತರ ಸೋದರ ಸಂಬಂಧಿಗಳು ತಮ್ಮ ಹೆಂಡಿರೊಂದಿಗೆ ಬೇರೆ ಬೇರೆ ಕೊಠಡಿಯಲ್ಲಿದ್ದರು. ಅಮಲಳ ಅಣ್ಣ ಮಾತ್ರ ಅವಳೊಡನಿದ್ದನು. ಅವನಿಗೆ ತಂಗಿಯ ಬಗ್ಗೆ ಕಾಳಜಿ ವಹಿಸಲು ಹೇಳಲಾಗಿತ್ತು. ಆದರೆ ತಂದೆ ತಾಯಿ ಮನೆಯಲ್ಲಿಲ್ಲದ ಸುಸಂದರ್ಭವನ್ನು ತಮ್ಮ ಸ್ನೇಹಿತರೊಡನೆ ಸೇರಿ 'ಪಾರ್ಟಿ' ಮಾಡಲು ಆಯ್ಕೆ ಮಾಡಿಕೊಂಡಿದ್ದನು. ಮೇಲಿನ ಕೊಠಡಿಯಲ್ಲಿ ಅಮಲಳಿದ್ದಳು. ಅಂದು ರಾತ್ರಿ ಕೆಳಗಿನ ಕೊಠಡಿಯಿಂದ ಕೇಕೆ, ಗದ್ದಲ, ಜೋರು ಧ್ವನಿಯಲ್ಲಿ ಒದರುವ ಸ್ಟೀರಿಯೋ ಸದ್ದು ಕೇಳಿಬರತೊಡಗಿದವು. ತಲೆನೋವಿನಿಂದ ಬಳಲುತ್ತಿದ್ದ ಅಮಲ ರಾತ್ರಿಯುಡುಪಿನಲ್ಲಿಯೇ ಕೆಳಗಿನ ಕೋಠಡಿಗೆ ಹೋಗಿ ಸ್ಟೀರಿಯೋದ ಧ್ವನಿ ಕಡಿಮೆ ಮಾಡಲು ಕೇಳಿಕೊಳ್ಳಲೆಂದು ಹೋದಳು. ಅಲ್ಲಿ ಅವಳ ಅಣ್ಣ ಹಾಗೂ ಅವನ ಸ್ನೇಹಿತರು 'ಮಾರಿಜುವಾನಾ' ಎಂಬ ಮಾದಕವಸ್ತುವನ್ನು ಸಿಗರೇಟಿನಂತೆ ಸೇದುತ್ತ ಮತ್ತರಾಗಿದ್ದುದು ಕಂಡುಬಂದಿತು. ಕೋಣೆಯಲ್ಲಿ ಮಂದ ಬೆಳಕಿತ್ತು. ಅವಳ ಧ್ವನಿ ಅಣ್ಣನಿಗೆ ಕೇಳಿಸಲೇ ಇಲ್ಲ. ಅಂದಾಗ ಅವಳು ಅನಿವಾರ್ಯವಾಗಿ ಕೊಠಡಿಯ ಒಳಗೆ ಹೋದಳು. ಅಲ್ಲಿ ಅವಳ ಅಣ್ಣ ಕಣ್ಣಿಗೆ ಬೀಳಲಿಲ್ಲ. ಅವನ ಸ್ನೇಹಿತರು 'ಮಾರಿಜುವಾನಾ'ದ ಮತ್ತಿನಲ್ಲಿ ಅಮಲಳನ್ನು ನೋಡಿ ಕಾಮೋತ್ತೇಜಿತರಾಗಿ ಅವಳ ಮೇಲೆ ಎರಗಿ ಮೂವರೂ ಒಬ್ಬರ ನಂತರ ಒಬ್ಬರು ಅವಳ ಶೀಲಹರಣ ಮಾಡಿದರು. ಅವಳು ಎಷ್ಟೇ ಕೂಗಿಕೊಂಡರೂ ಸ್ಟೀರಿಯೋದ ಜೋರು ಧ್ವನಿಯಲ್ಲಿ ಅವಳ ಕ್ಷೀಣ ಧ್ವನಿ ಯಾರಿಗೂ ಕೇಳಿಸಲೇ ಇಲ್ಲ. ಆ ಸಮಯದಲ್ಲಿ ಅವಳ ಅಣ್ಣ ಶೌಚಾಲಯ ದಲ್ಲಿ ಪ್ರಜ್ಞೆ ತಪ್ಪಿ ಬಿದ್ದಿದ್ದನು.

ಮರುಬೆಳಗ್ಗೆ ಅಮಲಳನ್ನು ವಾಹನಚಾಲಕ ಮತ್ತು ಫಿಲಿಪಿನೋ ಹೆಣ್ಣಾಳುಗಳು ಹತ್ತಿರದ ಆಸ್ಪತ್ರೆಗೆ ಕರೆದೊಯ್ದರು. ವೈದ್ಯರು ಪೊಲೀಸರಿಗೆ ತಿಳಿಸಿದರು. ಪೊಲೀಸರ ಮೂಲಕ 'ಮುತವ್ವಾ'ಗಳಿಗೂ ಈ ವಿಷಯ ತಿಳಿದು ಬಂದಿತು. ಅಮಲಳು ಅವಳ ಅಣ್ಣನ ಸ್ನೇಹಿತರ ಹೆಸರು ಹೇಳಲು ಅಸಮರ್ಥಳಾಗಿದ್ದಳು. ಏಕೆಂದರೆ ಅವಳಿಗೆ ಅವರ ಪರಿಚಯವೇ ಇರಲಿಲ್ಲ. ಆದರೂ ಅವಳ ಅಣ್ಣನಿಂದ ಅವನ ಸ್ನೇಹಿತರ ಹೆಸರುಗಳನ್ನು ಸಂಗ್ರಹಿಸಲಾಯಿತು. ಅಷ್ಟೊತ್ತಿಗಾಗಲೇ ಅವನ ಸ್ನೇಹಿತರು ತಮ್ಮ ಮೇಲೆ ಯಾವ ಆಪಾದನೆಯೂ ಬರದಂತೆ ಕಟ್ಟುಕಥೆಯೊಂದನ್ನು ಸೃಷ್ಟಿಸಿದ್ದರು. ಆ ಪ್ರಕಾರ, "ಗುರುವಾರ ರಾತ್ರಿ ಅವರು ಅಮಲಳ ಅಣ್ಣನೊಟ್ಟಿಗೆ ಸ್ಟೀರಿಯೋದಲ್ಲಿ ಸಂಗೀತ ಕೇಳುತ್ತ ತಮಾಷೆ ಮಾಡುತ್ತ ಕುಳಿತಿದ್ದರು. ಅಮಲಳೇ ಖುದ್ದು ಅವರ ಕೋಣೆಗೆ ಬಂದಳು. ಮೈ ಕಾಣುವಂತಹ, ಅವರನ್ನು ಉತ್ತೇಜಿಸುವಂತಹ, ಉಡುಪು ಧರಿಸಿದ್ದಳು. ಅಷ್ಟೇ ಅಲ್ಲ, ಅವರೊಡನೆ ಅಶ್ಲೀಲ ಚೇಷ್ಟೆಯಲ್ಲಿ ತೊಡಗಿದಳು. ಅವರ ತೊಡೆಯ ಮೇಲೆ ಕೂಡುವ ದಿಟ್ಟತನ ತೋರಿಸಿದ್ದಲ್ಲದೇ ಅವರನ್ನು ಮುದ್ದಿಸಿ ಕಾಮಕೇಳಿಗೆ ಆಹ್ವಾನಿಸಿದಳು. ಅವರು ಇದರಿಂದ ಉತ್ತೇಜಿತರಾಗಿ ಅವಳಿಚ್ಛೆಯಂತೆಯೇ ಅವಳನ್ನು ತಣಿಸಿದರು. ಊರಿಂದ ಮರಳಿದ ಅಮಲಳ ತಂದೆ ತಾಯಿಗೆ ಈ ವಿಷಯ ಹೇಳಿದಾಗ ತಂದೆ ಮಗನ ಮತ್ತು ಅವನ ಸ್ನೇಹಿತರ ಮಾತು ನಂಬಿದನು. ತಾಯಿ ಮಾತ್ರ ನಂಬಲಿಲ್ಲ.

ಆದರೆ ಅವಳ ಅಭಿಪ್ರಾಯಕ್ಕೆ ಯಾವ ಬೆಲೆಯೂ ಇರಲಿಲ್ಲ. ಅಮಲಳ ಅಣ್ಣ ಮಾದಕ ವಸ್ತು ಸೇವಿಸಿದ ತನ್ನ ಕಳ್ಳತನ ಹೊರಬಂದೀತೆಂಬ ಭಯದಿಂದ ತಂಗಿಯ ಮಾತಿಗೆ ಯಾವ ಬೆಲೆಯನ್ನೂ ಕೊಡಲಿಲ್ಲ, ನಿಜ ಸಂಗತಿಯನ್ನೂ ಹೇಳಲಿಲ್ಲ.

ಆ ಎಳೆ ತಾಯಿಯ ಮನಃಸ್ಥಿತಿ, ಭಯ, ಆತಂಕ, ಹತಾಶೆ ಊಹಿಸಿಕೊಂಡೇ ನಾನು ನಡುಗಿ ಹೋದೆ. ಇಂದು ಅವಳು ಕಲ್ಲೇಟಿನಿಂದ ಸಾಯುವವಳಿದ್ದಳು. ನಾನು ಸ್ವತಃ ಈ ರೀತಿ ಕಲ್ಲೇಟಿನಿಂದ ಸಾಯಿಸುವುದನ್ನು ಯಾವತ್ತೂ ನೋಡಿರಲಿಲ್ಲ. ಆದರೆ ನಮ್ಮ ವಾಹನ ಚಾಲಕ ಓಮರ್ ಈ ಕುರಿತು ತಾನು ನೋಡಿದ ಘಟನೆಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದನು. ಅದು ಈಗ ನನ್ನ ನೆನಪಿಗೆ ಬಂದಿತು.

ರಿಯಾದ್‌ನಿಂದ ತುಸು ದೂರದಲ್ಲಿದ್ದ ಹಳ್ಳಿಯೊಂದರಲ್ಲಿ ಹೆಂಗಸೊಬ್ಬಳು ವ್ಯಭಿಚಾರಿಣಿ(?) ಎಂದು ತಿಳಿದುಬಂದಿತ್ತು. ಅವಳಿಗೆ ಕಲ್ಲೇಟಿನಿಂದ ಹೊಡೆದು ಸಾಯಿಸುವ ಶಿಕ್ಷೆ ವಿಧಿಸಿದ್ದರು. ಓಮರ್ ಅದನ್ನು ನೋಡಲು ಹೋಗಿದ್ದ.

ಕಲ್ಲೇಟಿನಿಂದ ಹೊಡೆದು ಸಾಯಿಸಲು ಸಾರ್ವಜನಿಕ ಸ್ಥಳವನ್ನೇ ಆಯ್ಕೆ ಮಾಡಿರಲಾಗುತ್ತದೆ. ಅಂದು ಆ ನಿಗದಿಪಡಿಸಿದ ಸ್ಥಳದಲ್ಲಿ ಬೆಳಗಿನಿಂದಲೇ ಜನ ಸೇರತೊಡಗಿದ್ದರು. ಆ ದುರಾಚಾರಿ ಹೆಂಗಸನ್ನು ನೋಡಲು ಅವರೆಲ್ಲ ಕುತೂಹಲದಿಂದ ಕಾದಿದ್ದರು. ಬಿಸಿಲೇರತೊಡಗಿದಂತೆ ಜನರ ಚಡಪಡಿಕೆ ಹೆಚ್ಚಿ ತಾಳ್ಮೆ ಕಳೆದುಕೊಳ್ಳತೊಡಗಿದರು. ಅಷ್ಟರಲ್ಲಿ ಸುಮಾರು ಇಪ್ಪತ್ತೈದು ವರ್ಷದ ಮಹಿಳೆಯೊಬ್ಬಳನ್ನು ಪೋಲೀಸರು ಎಳೆದು ತಂದರು. ಅವಳು ತುಂಬ ಸುಂದರಳಾಗಿದ್ದಳು.

ಆ ಮಹಿಳೆಯ ಕೈಗಳನ್ನು ಕಟ್ಟಲಾಗಿತ್ತು. ತಲೆ ಬಾಗಿದ್ದ ಅವಳ ಮುಖಭಾವ ಏನೆಂದು ತಿಳಿಯಲಾಗಲಿಲ್ಲ. ಒಬ್ಬ ಅಧಿಕಾರಿ ಅವಳ ಮೇಲಿನ ಆಪಾದನೆಗಳನ್ನು ಗಟ್ಟಿಯಾಗಿ ಓದಿದನು. ಹಳೆಯ ಹೊಲಸು ಚಿಂದಿ ಅರಿವೆಯೊಂದನ್ನು ಅವಳ ಬಾಯಲ್ಲಿ ತುರುಕಿ ಮುಖಕ್ಕೆ ಕಪ್ಪು ಬಟ್ಟೆ ಹೊದಿಸಲಾಯಿತು. ಬಲವಂತವಾಗಿ ಅವಳನ್ನು ಮೊಳಕಾಲೂರಿಸಿ ಕುಳ್ಳಿರಿಸಲಾಯಿತು. ಬಲಿಷ್ಠ ಆಡಳಿತಾಧಿಕಾರಿಯೊಬ್ಬ ಬಂದು ಅವಳ ಬೆನ್ನ ಮೇಲೆ ಐವತ್ತು ಛಡಿ ಏಟು ಬಾರಿಸಿದನು.

ಜಲ್ಲಿ ಕಲ್ಲುಗಳನ್ನು ಹೊತ್ತ ಟ್ರಕ್ ಒಂದು ಬಂದು ಕಲ್ಲಿನ ರಾಶಿಯನ್ನು ಬಯಲಲ್ಲಿ ಸುರಿಯಿತು. ಅಪರಾಧ ಓದಿದ ಅಧಿಕಾರಿ ಈಗ ಶಿಕ್ಷೆ ಪ್ರಾರಂಭ ಎಂದು ಘೋಷಿಸಿದನು. ಗುಂಪಿನಲ್ಲಿದ್ದ ಜನ (ಹೆಚ್ಚಿನ ಪಾಲು ಗಂಡಸರೇ) ಕಲ್ಲಿನ ರಾಶಿಯಿಂದ ಕಲ್ಲುಗಳನ್ನು ಆಯ್ದು ಆ ಹೆಂಗಸಿಗೆ ಗುರಿ ಇಟ್ಟು ಎಸೆಯತೊಡಗಿದರು. ಕಲ್ಲಿನ ಹೊಡೆತಕ್ಕೆ ಸಿಕ್ಕ ಅವಳ ದೇಹ ನಲುಗಿ ನೆಲದ ಮೇಲುರುಳಿ ವಿಲಿವಿಲಿ ಒದ್ದಾಡತೊಡಗಿತು. ಎಷ್ಟೋ ಸಮಯದ ವರೆಗೆ ಆ ಮಹಿಳೆಯ ಕೋಮಲ ಶರೀರದ ಮೇಲೆ ಕಲ್ಲಿನ ಮಳೆಗರೆಯುತ್ತಲೇ ಇತ್ತು. ಕೂಡಿದ ಜನಸಮೂಹ ಮಧ್ಯೆ ಮಧ್ಯೆ ವೈದ್ಯನೊಬ್ಬ ಬಂದು ಅವಳು ಬದುಕಿರುವಳೋ ಸತ್ತಿರುವಳೋ ಎಂದು ಪರೀಕ್ಷಿಸುವಾಗ ಮಾತ್ರ ಕಲ್ಲಿನ ಮಳೆ ನಿಲ್ಲುತ್ತಿತ್ತು. ಎರಡು ಗಂಟೆಗಳ ಸತತ ಕಲ್ಲು ಹೊಡೆತದ ನಂತರ ವೈದ್ಯ ಅವಳು ಸತ್ತಿರುವಳು ಎಂದು ಘೋಷಿಸಿದ. ಆಗ ಕಲ್ಲೇಟು ನಿಂತಿತು.

ನೆನಪಿನ ಸುಳಿಯಿಂದ ಮರಳಿ ಪ್ರಜ್ಞೆಗೆ ಬಂದ ನಾನು ವಾರ್ಡಿನ ಹೊರಬಂದು ನೋಡಿದೆ. ಗಾರ್ಡುಗಳ ಮಧ್ಯೆ ತಲೆ ತಗ್ಗಿಸಿ ಆ ಎಳೆ ತಾಯಿ ಕೊನೆಯ ಪಯಣಕ್ಕೆ ಹೊರಟಿದ್ದಳು.

ತಗ್ಗಿಸಿದ ತಲೆಯಿಂದಾಗಿ ಅವಳ ಮುಖಭಾವ ಓದಲಾಗಲಿಲ್ಲ. ಮಸಣದೆಡೆಗೆ ಕೊನೆಯ ಪಯಣಕ್ಕೆ ಬಂಧು ಬಾಂಧವರು, ಹೆತ್ತಿದವರು, ಹೊಂದಿದವರು, ಯಾರೂ ಬೀಳ್ಕೊಡದೇ ಕ್ರೂರ ಶಿಕ್ಷೆ ಅನುಭವಿಸಲು ಆ ಎಳೆತಾಯಿ ಏಕಾಂಗಿಯಾಗಿ ಹೊರಟಿದ್ದಳು. ಆ ನಿರಪರಾಧಿ ಮುಗ್ಧ ಪುಟ್ಟ ಹೆಣ್ಣುಮಗಳ ಮುಖ ನನ್ನ ಮನದಲ್ಲಿ ಭಯ ಆತಂಕ ಗಾಬರಿಗಳ ಬಿರುಗಾಳಿ ಎಬ್ಬಿಸಿತು. ವಾರ್ಡಿಗೆ ಓಡಿಬಂದು ನಾನು ನನ್ನ ಕಂದನನ್ನು ಗಟ್ಟಿಯಾಗಿ ತಬ್ಬಿಕೊಂಡೆ. ಈ ದೇಶದಲ್ಲಿ ಹೆಣ್ಣು ಹುಟ್ಟಿದಾಕ್ಷಣವೇ ಅದನ್ನು ಕೊಂದು ಈ ಗಂಡಸರಿಗೆ ಹೆಣ್ಣುಗಳೇ ಸಿಗದಂತೆ ಮಾಡಬೇಕು ಎಂದು ನನ್ನಲ್ಲೇ ಹೇಳಿಕೊಂಡೆ. ನಾನು ಮಗನ ಮುಗ್ಧ ಮುಖವನ್ನೇ ದಿಟ್ಟಿಸುತ್ತ ಇವನೂ ದೊಡ್ಡವನಾದ ಮೇಲೆ ಇಂಥದೇ ಕಾನೂನು ಎತ್ತಿ ಹಿಡಿಯುವನಾ? —ಎಂದು ನನ್ನಲ್ಲೇ ಪ್ರಶ್ನಿಸಿಕೊಂಡೆ!

■ ಭಾರತಿ : 'ಚೈತ್ರ', ಎಂಆಯ್‌ಜಿ-೨, ೧೩೫-೧೩೬, ಸಿದ್ಧಲಿಂಗನಗರ, ಗದಗ-೫೮೨ ೧೦೩ ■

ಹಲವು 'ಹನಿ'ಗಳು

ಸಿ.ಪಿ.ಕೆ.

---

೧. ಸಾವು
ತಾಯಿ;
ಬದುಕು
ಮಲತಾಯಿ!

೨. ವಯಸ್ಸಾದಂತೆ
ಕೂದಲು ಉದುರಿಹೋಗುವುದು
ಏನಚ್ಚರಿ!
ನಾವೆ ಉದುರಿ ಹೋಗಲು
ಸಿದ್ಧರಾಗಿರುತ್ತೇವೆ!

೩. ಬರಬೇಕು ಸಾವು,
ಹೇಗೆ?
ಪಾರಿಜಾತದ ಹೂವು
ತೊಟ್ಟು ಕಳಚಿ
ಥಟ್ಟನುದುರುವ ಹಾಗೆ!

೪. "ಕೋಡಗನನ್ನು ಕೋಳಿ
ನುಂಗಿದ" ಹಾಗೆ
ಕೃತಿಯನ್ನು
(ಮತಿಯನ್ನು ಕೂಡ)
ನುಂಗಿಹಾಕಿದೆ ಮಾತು!

೫. ಕರೆದವರಿಗೆ
ಬರದು ಸಾವು;
ನೆನಪಿಲ್ಲದವರಿಗೆ
ಅದರ ಬರವು!

೬. ಕವಿ, ವಿಮರ್ಶಕರಿಗೆ
ಯಾವಾಗಲೂ
ಪರಸ್ಪರ ಮುನಿಸು;
ಈ ಇಬ್ಬರು 'ಮುನಿ'ಗಳ
ಮಧ್ಯೆ ನಲುಗುತ್ತದೆ,
ವಾಚಕನ ಮನಸು!

೭. ಕವಿತೆ
ಹಣತೆ;
ಆದರೆ ನಾವು
'ಹಣ-'ಕ್ಕೆ ಪ್ರಾಶಸ್ತ್ಯವಿತ್ತು,
'-ತೆ'ಯನ್ನು ತೆಗೆದುಹಾಕಿದ್ದೇವೆ!

೮. ನಾವೆಲ್ಲ
ಪೂತನೀ ಮೋಹಿನಿಯ
ಮೊಲೆಮಂಡಲಕ್ಕೆಳಸಿ
ಹತರು!
ಅಜಿತನೊಬ್ಬನೆ : ಕೃಷ್ಣ!

೯. ಮಾನಿನಿ
ಮಧುಪಾನ ಮಾಡಿದರೆ
ಮತ್ತಷ್ಟು ಮಧುರೆ!
ಆದರೆ ಧೂಮಪಾನ
ಮಾಡಿದರೆ?
ಆ ಕಾ(ಧೂ)ಮಿನಿಯ
ಅಧರ ಪಾನಕ್ಕೆ
ಯಾರು ಮುಂದಾಗುತ್ತಾರೆ?

೧೦. ಕೆಲವರು
ದೀರ್ಘಾಯುಗಳಿರಬಹುದು;
ಆದರೆ ವಾಸ್ತವವಾಗಿ
ಹುಟ್ಟಿದಂದೆ ಸತ್ತಿರುತ್ತಾರೆ;
ಇಲ್ಲವೆ, ಸತ್ತೇ ಹುಟ್ಟಿರುತ್ತಾರೆ!

೧೧. ಹೆಣ್ಣು ಬರಿಯ ಮಾಧುರ್ಯ,
ಹೆಣ್ಣು ಬರಿಯ ಮಾರ್ದವ
ಎಂದು ಭ್ರಮಿಸುವ ಗಂಡು
ಗ್ರಹಿಸುತ್ತಾನೆ, ಸತ್ಯದಲ್ಲಿ
ಕೇವಲ ಅರ್ಧವ!

೧೨. ನೀನು ನನ್ನನ್ನು
ಪ್ರೀತಿಸದಿರಬಹುದು;
ಆದರೆ ನಾನು ನಿನ್ನನ್ನು
ಪ್ರೀತಿಸುವುದನ್ನು
ತಡೆಗಟ್ಟುವೆ ಹೇಗೆ?

೧೩. ಈಗಿನ ಹೆಣ್ಣುಗಳೆಲ್ಲ
ಕೆಟ್ಟು ಹೋಗಿದ್ದಾರೆಂದು
ತಿಳಿಯಬೇಕಿಲ್ಲ!
ಇದ್ದಾರೆ ಬಹುಮಂದಿ
ಅಕ್ಷತೆಯರು;
ನಕ್ಷತ್ರ ಕನ್ಯೆಯರು!

೧೪. ಎಷ್ಟೋ ಹಾಸಿಗೆಗಳಲ್ಲಿ
ಸಲ್ಲಾಪಿಸತಕ್ಕವು
ದಂಪತಿಗಳ
ಮುಖಗಳಲ್ಲ,
ಬೆನ್ನುಗಳು!
(ಬೆನ್ನುಡಿ?)

೧೫. ಕಬ್ಬದ ಹೆಣ್ಣೆ,
ಕಬ್ಬು ಹಣ್ಣು ಬಿಟ್ಟರೂ
ಎಣೆಯಾಗದು ನಿನ್ನ
ಮಾಧುರ್ಯಕ್ಕೆ!
ಸಾವ, ಕೆಡುವ
ಹೆಣ್ಣುಗಳನೊಯ್ದು
ಒಲೆಯೊಳಗಿಕ್ಕೆ!

೧೬. ಪ್ರತಿ ಮಾಸ,
ಪ್ರತಿ ವರ್ಷ
ಹೊಸತಾಗುವುದು
ಕ್ಯಾಲೆಂಡರ್ ಮಾತ್ರ,
ಬದುಕಲ್ಲ!

೧೭. ಉರುಳಿತು ಬರ್ಲಿನ್ ಗೋಡೆ;
ಕರಗುತ್ತಿದೆಯಂತೆ
ಚೀನಾದ ಮಹಾ ಗೋಡೆ!
ಕರಗುವುದೆ ಎಂದಾದರೂ
ನರನರರ ನಡುವಣ
ನಾನಾ ಅಡ್ಡಗೋಡೆ?

೧೮. ಈ ಹುಡುಗಿಯರು
ಯಾರ ಕಿಚ್ಚಾಗುತ್ತಾರೊ
ಯಾರ ಹುಚ್ಚಾಗುತ್ತಾರೊ
ಅಥವಾ ಪತಿಗಿರಲಿ,
ಅತ್ತೆ ಮಾವಂದಿರಿಗೂ
ಅಚ್ಚು ಮೆಚ್ಚಾಗುತ್ತಾರೊ-
ಯಾರು ಬಲ್ಲರು?

■ ಪಿ. ಪಿ. ಕೆ. : ೨೨೬೫/೧೯, 'ಭಾರತಿ', ೬ನೇ ಕ್ರಾಸ್, ೪ನೇ ಮೇನ್,
ವಿನಾಯಕನಗರ, ಮೈಸೂರು-೫೭೦ ೦೧೨ ■

ಅಕ್ಕಮಹಾದೇವಿಯ ವಚನಗಳು — ಎಲ್. ವಿ. ಶಾಂತಕುಮಾರಿ

ಹನ್ನೆರಡನೆಯ ಶತಮಾನದಲ್ಲಿನ ವೀರಶೈವ ಶರಣ ಸಂಕುಲದಲ್ಲಿ ಅಲ್ಲಮಪ್ರಭು. ಬಸವಣ್ಣ ಮತ್ತು ಅಕ್ಕಮಹಾದೇವಿ ಇವರ ಜೀವನ ಹಾಗೂ ವಚನಗಳು ಅತ್ಯಂತ ವೈಶಿಷ್ಟ್ಯಪೂರ್ಣವಾಗಿವೆ. ಬಸವಣ್ಣನವರ ಜೀವನ ಹಾಗೂ ವಚನಗಳಲ್ಲಿ ಕಂಡುಬರುವ ಸಾಮಾಜಿಕ, ಧಾರ್ಮಿಕ ಸುಧಾರಣೆಯ ಧೋರಣೆಗಳಾಗಲೀ, ಚಳುವಳಿ, ಕ್ರಾಂತಿಗಳ ಎಳೆಗಳಾಗಲೀ ಅಲ್ಲಮಪ್ರಭು ಹಾಗೂ ಅಕ್ಕಮಹಾದೇವಿಯ ವಚನಗಳಲ್ಲಿ ನೇರವಾಗಿ ಮುಖ್ಯ ಧಾರೆಯಂತೆ ಕಂಡು ಬರದಿದ್ದರೂ, ಅಕ್ಕಮಹಾದೇವಿಯ ಜೀವನವೇ ಜ್ವಲಂತ ಕ್ರಾಂತಿಯಾಗಿಯೂ, ತನ್ನ ಸಮಕಾಲೀನ ಸಮಾಜದ ಕಟ್ಟುಪಾಡುಗಳ ವಿರುದ್ಧದ ಅತ್ಯಂತ ತೀವ್ರ ಪ್ರತಿಭಟನೆಯಾಗಿಯೂ ರೂಪುಗೊಂಡಿದೆ. ಇನ್ನು ಅಲ್ಲಮಪ್ರಭುವಾದರೋ, ಅತ್ತ ಇತ್ತ ಸುತ್ತಲೂ ಚಲಿಸುವ ಚಾವಟಿಯಂತೆ, ತನ್ನ ತೀಕ್ಷ್ಣ ವ್ಯಂಗ್ಯ ವಿಡಂಬನೆಗಳಿಂದ ಸಮಕಾಲೀನ ಸಮಾಜದ ಓರೆಕೋರೆಗಳನ್ನು ತೆರೆದು ತೋರಿಸುತ್ತಾ, ಟೀಕಿಸುತ್ತಾ, ವಿಮರ್ಶಿಸುತ್ತಾ ಅವಧೂತನಂತೆ ಸಾಗುತ್ತಿದ್ದ. ಅಲ್ಲಮ ಜಂಗಮ ಎನ್ನುವ ಪದದ ನಿಜವಾದ ಅರ್ಥದ ಸಾಕಾರ ರೂಪವಾಗಿದ್ದವನು. ಹಾಗಾಗಿ ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ ತಮ್ಮ ವೈಯಕ್ತಿಕ ನೆಲೆಗಟ್ಟುಗಳಲ್ಲಿಯೇ ನಿಂತು ತಮ್ಮ ವ್ಯಕ್ತಿತ್ವಗಳ ವಿಶಿಷ್ಟತೆಯಿಂದ ವಚನ ಚಳುವಳಿಯೊಂದಿಗೆ ತಮ್ಮನ್ನು ತಾವು ಒಂದಾಗಿಸಿಕೊಂಡಿದ್ದರೆನಿಸುತ್ತದೆ.

ವೀರಶೈವ ಶರಣ ಸಮುದಾಯದಲ್ಲಿ ದಾಂಪತ್ಯಧರ್ಮ– ಅಂದರೆ ಗೃಹಸ್ಥಾಶ್ರಮ– ಅಧ್ಯಾತ್ಮ ಸಾಧನೆಯ ದಾರಿಯಲ್ಲಿ ಅಡ್ಡವಾಗುವುದಿಲ್ಲವೆಂಬ ನಂಬಿಕೆಯಿದ್ದಿತು. ವೇದಕಾಲದ ಅನೇಕ ಋಷಿ ಮುನಿಗಳೂ ಸಹ ಗೃಹಸ್ಥರಾಗಿ ಪತ್ನೀ ಪುತ್ರರನ್ನು ಹೊಂದಿ ನಿತ್ಯ ನೈಮಿತ್ತಿಕ ಕಾರ್ಯಗಳಲ್ಲಿ ತೊಡಗಿಯೂ ತಪಶ್ಚರ್ಯೆಯನ್ನು ನಡೆಸುತ್ತಿದ್ದರು. ಆದರೂ ಸಂನ್ಯಾಸಾಶ್ರಮ ಶ್ರುತಿ ವಿರುದ್ಧವಲ್ಲ, ಮೋಕ್ಷಸಾಧನೆಗೆ ಅದು ಅತ್ಯುತ್ತಮ ಮಾರ್ಗವೆಂಬ ಪರಿಕಲ್ಪನೆಯೂ ಬೆಳೆದು ಬಂದಿತು. ಶಂಕರಾಚಾರ್ಯರು ಸಂನ್ಯಾಸಾಶ್ರಮಕ್ಕೇ ಹೆಚ್ಚು ಒತ್ತುಕೊಟ್ಟವರು. ಬಹುಶಃ ಆ ವೇಳೆಗೆ ಹೆಚ್ಚಾಗಿದ್ದ ಬೌದ್ಧ ಶ್ರಮಣರ ಸಂಖ್ಯೆಯೂ ಇದಕ್ಕೆ ಕಾರಣವಾಗಿರಬಹುದು. ಈ ನಿಟ್ಟಿನಿಂದ ಪರಿಶೀಲಿಸುವಾಗ ಅಲ್ಲಮಪ್ರಭು ಹಾಗೂ ಅಕ್ಕಮಹಾದೇವಿ, ತಮ್ಮ ಕಾಲದ ಶರಣರು ಒಪ್ಪಿ ಆಚರಿಸುತ್ತಿದ್ದ ಗೃಹಸ್ಥಧರ್ಮವನ್ನು ತ್ಯಜಿಸಿ, (ದಾಂಪತ್ಯ ಜೀವನದಿಂದ ವಿಮುಖರಾಗಿ, ಒಂದು ರೀತಿಯಲ್ಲಿ) ಪರಿವ್ರಾಜಕ ಧರ್ಮವನ್ನು ಆಯ್ದುಕೊಂಡರೆನಿಸುತ್ತದೆ. ಈ ಆಯ್ಕೆಗೆ ಅವರದೇ ಆದ ವೈಯಕ್ತಿಕ ಕಾರಣಗಳಿರಬಹುದು. ಅಕ್ಕಮಹಾದೇವಿ ಮಧುರಭಾವದ ಮೂಲಕ ತನ್ನ ಇಷ್ಟದೈವ ಚೆನ್ನಮಲ್ಲಿಕಾರ್ಜುನನನ್ನು ಒಲಿಸಿ ಸಾಕ್ಷಾತ್ಕರಿಸಿಕೊಳ್ಳುವ ಮಾರ್ಗವನ್ನು ತನ್ನದಾಗಿಸಿಕೊಂಡರೆ, ಅಲ್ಲಮಪ್ರಭು ಗುಹೇಶ್ವರನೆಂಬ ಶೂನ್ಯವನ್ನು, ಬಯಲನ್ನು ಸಾಕ್ಷಾತ್ಕರಿಸಿಕೊಂಡ ಅದ್ಭುತ ಚೇತನವಾಗುತ್ತಾನೆ.

ಈ ಬರಹದಲ್ಲಿ ನಾನು ಅಕ್ಕಮಹಾದೇವಿಯ ವಚನಗಳ ಬಗೆಗೆ, ಆ ವಚನಗಳಿಂದ ತಿಳಿದುಬರಬಹುದಾದ ಆಕೆಯ ಜೀವನದ ಸಂಗತಿಗಳ ಬಗೆಗೆ ನನ್ನ ಅನಿಸಿಕೆಗಳನ್ನು ಸೀಮಿತಗೊಳಿಸುತ್ತೇನೆ. ಮೀರಾಬಾಯಿ, ಆಂಡಾಳ್ ಮುಂತಾದ ಸಂತರಂತೆ ಅಕ್ಕಮಹಾದೇವಿ ಕೂಡ

ತನ್ನ ಇಷ್ಟದೈವವನ್ನು ಪತಿಯನ್ನಾಗಿ, ಪ್ರಿಯತಮನನ್ನಾಗಿ ಭಾವಿಸಿ ಅವನ ಸಾಮೀಪ್ಯ, ಸಾನ್ನಿಧ್ಯ, ಸಾಯುಜ್ಯಗಳಿಗಾಗಿ ಹಾತೊರೆದವಳು. ಮೀರಾಬಾಯಿಯಂತೆಯೇ ಒತ್ತಾಯದ ಮದುವೆಗೊಪ್ಪಿ ನಂತರ ಆ ಬಂಧನವನ್ನು ಕಳಚಿ ಬಂದವಳು. ಆದರೆ ಅವರಿಬ್ಬರಲ್ಲಿ ಕಂಡುಬರದ ದಿಟ್ಟತನ, ಪ್ರತಿಭಟನೆಯ ಉಗ್ರ ರೀತಿ ಅಕ್ಕಮಹಾದೇವಿಯಲ್ಲಿ ಕಂಡುಬರುತ್ತದೆ. ಸಂಸಾರವೆಂಬ ಬಂಧನವನ್ನು ಕಳಚಿ ಬರುವಲ್ಲಿ ಉಟ್ಟ ಬಟ್ಟೆಯನ್ನು ಕಳಚಿ, ಅರಮನೆಯನ್ನು ತೊರೆದು ಹೊರಗೆ ಬಂದ ಮಹಿಳೆ ಅಕ್ಕಮಹಾದೇವಿಯೊಬ್ಬಳೇ ಎನಿಸುತ್ತದೆ. ಕಾಲದ ಈ ಅಂತರದಲ್ಲಿ– ಸುಮಾರು ಎಂಟುನೂರು ವರ್ಷಗಳ ನಂತರ– ಅಕ್ಕಮಹಾದೇವಿ ದಿಗಂಬರೆಯಾಗಿ ಅರಮನೆಯಿಂದ ಹೊರಗೆ ಬಂದಳೋ, ತನ್ನ ವಿಪುಲ ಕೇಶರಾಶಿಯಿಂದ ತನ್ನನ್ನು ಮುಚ್ಚಿಕೊಂಡು ಹೊರಬಂದಳೋ, ಒರಟು ಕಂಬಳಿ ಹೊದ್ದು ಹೊರಬಂದಳೋ ಎನ್ನುವುದು ಅಂಥ ಪ್ರಮುಖ ಸಂಗತಿಯೆಂದೆನಿಸುವುದಿಲ್ಲ. ಆದರೆ, ಜೀವನದಲ್ಲಿ ಪ್ರತಿಯೊಬ್ಬನಿಗೂ, ಒಂದಲ್ಲ ಒಂದು ಬಾರಿ, ಈ ಪ್ರಾಪಂಚಿಕ ವಸ್ತುಗಳೆಲ್ಲವೂ - ಅನ್ನ, ವಸ್ತ್ರ, ಹಣ, ಕಾಮ ಎಲ್ಲವೂ ಉಪಾದಿ ಗಳೆನಿಸಿ, ಎಲ್ಲವನ್ನೂ ತೊರೆಯುವ ಕಿತ್ತೆಸೆಯುವ ತೀವ್ರ ಬಯಕೆ ಮೂಡುವುದಂತೂ ನಿಜ. ಒಂದು ನೆಲೆಯಲ್ಲಿ ಮಹಾದೇವಿ ಎಲ್ಲ ಮನುಷ್ಯರ ಇಂತಹ ಬಯಕೆಯ ಇಚ್ಛೆಯ– ಅರೆಗಳಿಗೆ ಮೂಡುವಂಥ ಇಚ್ಛೆಯ– ಪ್ರತೀಕವಾಗುತ್ತಾಳೆ.

ಮತ್ತೊಂದು ನೆಲೆಯಲ್ಲಿ ವ್ಯಕ್ತಿ, ವ್ಯಕ್ತದಲ್ಲಿ ಮೂರ್ತದಲ್ಲಿ, ತನ್ನ ಅಭೀಷ್ಟವನ್ನು ಸಾಕ್ಷಾತ್ಕರಿಸಿಕೊಳ್ಳುವುದರಲ್ಲಿ ವಿಫಲನಾಗಿ ಹತಾಶನಾದಾಗ ಆ ವ್ಯಕ್ತಿಯ ಅಸ್ತಿತ್ವ, ಅವ್ಯಕ್ತ ಅಮೂರ್ತಗಳನ್ನು ಅದೆಷ್ಟು ಗಾಢವಾಗಿ ಅಂಟಿಸಿಕೊಳ್ಳುತ್ತದೆ ಎಂಬುದಕ್ಕೆ ಅಕ್ಕಮಹಾದೇವಿಯ ವಚನಗಳು ನಿದರ್ಶನವಾಗುತ್ತವೆ. ವಿವಾಹಿತ ಮಹಿಳೆಯಾಗಿ, ಆ ವಿವಾಹ ಮತ್ತು ತನ್ನ ಪತಿ, ತನ್ನ ಅಧ್ಯಾತ್ಮ ಪ್ರವೃತ್ತಿಗೆ, ತನ್ನ ಆಚಾರ ವಿಚಾರಗಳಿಗೆ ಅಡ್ಡಿ ಬಂದಾಗ ತೀವ್ರ ಪ್ರತಿಭಟನೆ ತೋರಿ, ಸಾಂಸಾರಿಕ ಬಂಧನದಿಂದ ಆಚೆ ಬಂದು ತೀವ್ರ ಪ್ರತಿಭಟನೆ ತೋರಿದ ದಿಟ್ಟ ಹೆಣ್ಣಾಗಿ, ಬಹುಶಃ ಆ ನಿರ್ದಿಷ್ಟ ಕಾಲಘಟ್ಟದಲ್ಲಿ, ಪ್ರಥಮ ಹೆಣ್ಣಾಗಿ ಅಕ್ಕಮಹಾದೇವಿ ಪ್ರಮುಖ ಳಾಗುತ್ತಾಳೆ. ಹೆಣ್ಣು, ಗಂಡಿನ ನೆರಳಾಗಿ– ಅವನ ಕೈಕೆಳಗೆ ಬಾಳಬೇಕೆಂಬ ನಿಯಮವಿದ್ದ ಕಾಲದಲ್ಲಿ, ಗಂಡಿನ ನೆರವಿಲ್ಲದೆ, ಯಾರ ಆಶ್ರಯವೂ ಇರದೇ ಪರಿವ್ರಾಜಕಳಂತೆ, ಸಂನ್ಯಾಸಿ ಯಂತೆ ದೇಶ ದೇಶ ತಿರುಗಿ ತನ್ನ ಇಷ್ಟದೈವವನ್ನು ಸಾಕ್ಷಾತ್ಕರಿಸಿಕೊಳ್ಳಲು ಹೊರಟ ಹೆಣ್ಣು ಅಕ್ಕಮಹಾದೇವಿ. ಒಂದು ರೀತಿಯಲ್ಲಿ ಅವಳು ತನ್ನ ಯುಗಧರ್ಮದ ಸೀಮೋಲ್ಲಂಘನ ಮಾಡಿದವಳೆನ್ನಬಹುದು.

ಮತ್ತೂ ಒಂದು ನೆಲೆಯಿಂದ ಅಕ್ಕಮಹಾದೇವಿ ಪ್ರಮುಖಳಾಗುತ್ತಾಳೆ. ಗಂಡು ಹೆಣ್ಣುಗಳಲ್ಲಿನ ಪರಸ್ಪರ ಸೆಳೆತ, ಒಬ್ಬರೊಡನೊಬ್ಬರು ಒಂದಾಗಬೇಕೆಂಬ ಬಯಕೆ–ಅದರಲ್ಲೂ ದೈಹಿಕವಾಗಿ ಒಂದಾಗಬೇಕೆನ್ನುವ ಬಯಕೆ– ಮನುಷ್ಯರಲ್ಲಿನ ಮೂಲ ಪ್ರವೃತ್ತಿಗಳಲ್ಲಿ ಒಂದು. ಆದರೆ ಈ ತೀವ್ರ ಬಯಕೆ ಹೆಣ್ಣು ಗಂಡಿನ ಪರಸ್ಪರ ಸಮಾಗಮದಿಂದ ಕ್ಷಣ ಕಾಲ ಶಮನಗೊಂಡರೂ ಮತ್ತೆ ಮತ್ತೆ ತೀವ್ರವಾಗಿ ಬಾಧಿಸುವುದೂ ಸಹ ಸತ್ಯ. ಇಂತಹ ಸಮಾಗಮ ಗಳಿಂದುಂಟಾಗುವ ಅತೃಪ್ತಿಯಿಂದಾಗಿ, ಕೇವಲ ದೈಹಿಕ ಬಯಕೆ, ತೃಪ್ತಿ, ಮಿಲನಗಳನ್ನು ಮೀರಿದಂತಹ ಎಂತಹುದೋ ಒಂದು ಸಂಬಂಧ ಸಮಾಗಮಗಳಿಗಾಗಿ ವ್ಯಕ್ತಿಯ ಅಸ್ತಿತ್ವ

ಹಾತೊರೆಯುವುದೂ ಸಹ ನಿಜ. ಎಷ್ಟೋ ವೇಳೆ ಹೆಣ್ಣು ಗಂಡಿನ ಸಂಬಂಧದಲ್ಲಿ ಜಾತಿ ಕುಲ ಅಂತಸ್ತುಗಳು ಉಪಾಧಿಗಳಾಗಿಬಿಡುತ್ತವೆ. ಅಂತೆಯೇ ದೈಹಿಕ ಮಿಲನದ ಸಂದರ್ಭದಲ್ಲಿ, ಮೈಮೇಲಿನ ಬಟ್ಟೆ ಕೂಡ ಉಪಾಧಿಯೆನಿಸಬಹುದು. ಗಂಡು ಹೆಣ್ಣನ್ನು, ಗಂಡು ಗಂಡನ್ನು ತೀವ್ರವಾಗಿ ಬಯಸುವಂತೆಯೇ, ಹೆಣ್ಣು ಅಥವಾ ಗಂಡು, ಈ ಲೋಕದ್ದಲ್ಲದ, ಮಹಾಚೈತನ್ಯವೊಂದರಲ್ಲಿ ಒಂದಾಗಲು ತೀವ್ರವಾಗಿ ಇಚ್ಛಿಸಿದಾಗ ಅಲ್ಲಿ ಭಕ್ತ ಮತ್ತು ದೈವದ ನಡುವಿನ ಸಾಕ್ಷಾತ್ಕಾರ, ಸಮಾಗಮಗಳ ಕಲ್ಪನೆ ಉಂಟಾಗುತ್ತದೆ. ಶರಣ ಸತಿ ಲಿಂಗ ಪತಿ ಎಂದೋ, ಸಖಭಾವವೆಂದೋ, ಜೀವಾತ್ಮ-ಪರಮಾತ್ಮಗಳ ಮಿಲನವೆಂದೋ ಕರೆಯಬಹುದಾದಂತಹ ಈ ತೀವ್ರ ಇಚ್ಛೆಯನ್ನು ಆಧ್ಯಾತ್ಮಿಕ ಹಂಬಲ ಎನ್ನಬಹುದು. ಈ ಹಂಬಲಕ್ಕೆ ಕಾರಣ, ಈ ಪಂಚೇಂದ್ರಿಯ ಪ್ರಪಂಚದಲ್ಲಿ ಮೂರ್ತರೂಪಗಳ ಸಮಾಗಮಗಳಿಂದ ಉಂಟಾಗುವ ಆನಂದ, ಸಂತೃಪ್ತಿಗಳಲ್ಲಿನ ಕ್ಷಣಿಕತೆ ಮತ್ತು ಪರಿಮಿತಿಗಳು, ಹಾಗೂ ಲೈಂಗಿಕ ಕ್ರಿಯೆಯ ಅನುಭವಕ್ಕೆ ಅಂಟಿಕೊಂಡಿರುವ ಇಂದ್ರಿಯಗಳ ಅಂಟು, ನಂಟು, ವಿಷಯ ವಾಸನೆಯೆಂಬ ಕಳಂಕ ಎನ್ನಬಹುದು. ಆದರೆ ಪರಮಾತ್ಮ ಅಥವಾ ಲಿಂಗ ಎಂಬ ನಿರಾಕಾರ ಅಮೂರ್ತದೊಡನೆ, ವ್ಯಕ್ತಿಯ ಜೀವ-ಆತ್ಮ ಒಂದಾಗುವ ಪರಿಕಲ್ಪನೆಯಲ್ಲಿ, ಪಂಚೇಂದ್ರಿಯಗಳಲ್ಲಿನ ವಿಷಯವಾಸನೆಯ ಅಂಟಿರದೆ ಈ ಐಕ್ಯತೆ ಪಂಚೇಂದ್ರಿಯಗಳ ಸ್ತರವನ್ನು ಮೀರಿರುತ್ತದೆ. ಪರಮಾತ್ಮ ಅಥವಾ ಲಿಂಗ ಎನ್ನುವ ಅಮೂರ್ತ ಒಂದು ಶುದ್ಧ ಮಹಾಶೂನ್ಯವೆನ್ನಬಹುದು. ಅಂತಹ ಶುದ್ಧ ಮಹಾಶೂನ್ಯದೊಡನೆ ಒಂದಾಗಬೇಕಾದರೆ ಈ ವೈಯಕ್ತಿಕ ಆತ್ಮ-ಜೀವ, ತನ್ನೆಲ್ಲ ಉಪಾಧಿಗಳನ್ನೂ ಕಳಚಬೇಕು. ಹೀಗೆ ವೈಯಕ್ತಿಕ ಅಸ್ತಿತ್ವ ಶುದ್ಧ ಶೂನ್ಯವಾಗಬೇಕಾದರೆ, ಅಂತರಂಗದ ಅರಿಷಡ್ವರ್ಗಗಳು ಬುದ್ಧಿ, ಭಾವ, ಮನಸ್ಸು, ತ್ರಿಕರಣಗಳಷ್ಟೇ ಅಲ್ಲದೇ, ಚರ್ಮ, ಮಾಂಸ, ರಕ್ತ, ಮೂಳೆ, ಮಜ್ಜೆ, ಹೊರಗಣ ಬಟ್ಟೆ ಮುಂತಾದ ಎಲ್ಲವನ್ನೂ ಕಳಚಿಕೊಂಡು ನಿಲ್ಲುವಂತಹ ಸ್ಥಿತಿಯನ್ನು ತಲುಪಬೇಕು. ಜೀವ ಇಂತಹ ಶುದ್ಧ ಶೂನ್ಯ ಸ್ಥಿತಿಯನ್ನು ತಲುಪಿದಾಗ ಮಾತ್ರ, ಆ ಶುದ್ಧ ಮಹಾಶೂನ್ಯದೊಡನೆ ಒಂದಾಗಬಹುದೆನಿಸುತ್ತದೆ. ಜೀವಕ್ಕೆ, ಆಗ ತನ್ನ MICRO NOTHINGNESS ಅನ್ನು MACRO NOTHINGNESS ನಲ್ಲಿ ಒಂದಾಗಿಸಲು ಸಾಧ್ಯವಾಗುತ್ತದೆ. ಇಂತಹದೊಂದು ಐಕ್ಯತೆ ಮರ್ತ್ಯ-ಮರ್ತ್ಯರ ನಡುವೆ ಸಾಧ್ಯವಾಗುವುದಿಲ್ಲವಾಗಿ ಅಕ್ಕಮಹಾದೇವಿ, ಮೀರಾ ಮತ್ತು ಅನೇಕ ಭಕ್ತರು, ಸಾಧಕರು ಹೆಣ್ಣು ಗಂಡೆಂಬ ಭೇದವಿರದೆ ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ಅವನೊಡನೆ ಒಂದಾಗಿ, ಉರಿಯನ್ನು ಸೋಕಿದ ಕರ್ಪೂರವಾಗುವುದಕ್ಕಾಗಿ ಹಪಹಪಿಸುವುದು. ಮಹಾ ಸಾಧಕಳೊಬ್ಬಳಾಗಿ ಅಕ್ಕಮಹಾದೇವಿ ಹಾಯ್ದುಬಂದಿರುವ ಕಠಿಣ ಹಾದಿಯನ್ನೂ, ಅವಳ ತೀವ್ರ ವೇದನೆ ತಹತಹಗಳನ್ನೂ ಅವಳ ವಚನಗಳು ಅಭಿವ್ಯಕ್ತಿಸುತ್ತವೆ.

ಚೆನ್ನಮಲ್ಲಿಕಾರ್ಜುನ ಅವಳ ಪಾಲಿಗೆ ಸಾಕಾರನೂ ಹೌದು ನಿರಾಕಾರನೂ ಹೌದು; ಸಗುಣನೂ ಹೌದು ನಿರ್ಗುಣನೂ ಹೌದು; ಅವನು ಮಹಾಕಾಶ, ಮಹಾಶುದ್ಧ ಶೂನ್ಯ, ಹಾಗೂ ಮೂರ್ತರೂಪದಲ್ಲಿ ಪ್ರಕಟಗೊಂಡಿರುವ ಅಮೂರ್ತ ಚೇತನ. ಆ ಮೂರ್ತರೂಪದ ಅಮೂರ್ತ ಚೇತನವನ್ನು ಮೂರ್ತರೂಪದಲ್ಲಿಯೇ ಸೇರಿ ಅದರಲ್ಲಿ ಒಂದಾಗಿ ಅಮೂರ್ತಳಾಗುವ ಅಸಾಧಾರಣ ಬಯಕೆ ಮತ್ತು ಪ್ರಯತ್ನಗಳೇ ಅಕ್ಕಮಹಾದೇವಿಯ ಜೀವನದ

ಗುರಿ, ಅವುಗಳ ಅಭಿವ್ಯಕ್ತಿಯೇ ಅವಳ ವಚನಗಳ ಆಶಯ ಕೂಡ. ಇಂತಹ ತೀವ್ರ ಬಯಕೆ ಸಾಧನೆಗಳು, ಸಾಧನೆಯ ಹಾದಿಯಲ್ಲಿನ ವೇದನೆ ತೊಡಕುಗಳು ಅನೇಕ ಭಕ್ತರ ಸಾಧನೆ, ಬಯಕೆಗಳೂ ಆಗಿರುವುದರಿಂದಾಗಿ ಈ ವಚನಗಳು ವೈಯಕ್ತಿಕತೆಯ ಮಜಲನ್ನು ಮೀರಿ ಸಾರ್ವತ್ರಿಕತೆಯನ್ನೂ ಸಾರ್ವಕಾಲಿಕತೆಯನ್ನೂ ಸಾಧಿಸುತ್ತವೆ. ಇಂತಹ ಸಾಧಕಿ ಅಕ್ಕಮಹಾದೇವಿ ಉಟ್ಟ ಬಟ್ಟೆ ಕಳಚುವುದೊಂದು ಸಾಂಕೇತಿಕ ಕ್ರಿಯೆ ಮಾತ್ರ. ಬೆತ್ತಲೆ ಎನ್ನುವುದು ಜೀವಿಗಳ ಸಹಜಸ್ಥಿತಿಯೂ ಹೌದು. ಅಕ್ಕಮಹಾದೇವಿಯ ಸಾಧನೆಯ ಹಾದಿಯಾದರೂ ಎಂತಹುದು? "ಅಲ್ಲ ಅಲ್ಲವೆನ್ನುವ ಅಲ್ಲಮನ ಬಯಲು / ಅಕ್ಕನ ಅಕ್ಕರೆಯ ಮಧುರ ರಸದಲಿ ಮುಳುಗಿ / ಚೆನ್ನಮಲ್ಲಿಕಾರ್ಜುನನೆಂಬ ಬಯಲಾಗಿ ನಿಲುವ / ಸೋಜಿಗವ ಕಂಡು ಮೂಕವಾಗಿತ್ತೆನ್ನ ಮನ." (ಶಾಂತಕುಮಾರಿ). ಹೆಣ್ಣು ಗಂಡಿನ ನಡುವಣ ಮಿಲನೇಚ್ಛೆಯ, ತೀವ್ರ ಬಯಕೆಯ ಕಿರುತೊರೆಯಂತೆ, ಮಧುರ ಭಾವದಿಂದಾರಂಭವಾಗುವ ಮಹಾದೇವಿಯಕ್ಕನ ಈ ತೀವ್ರೇಚ್ಛೆ, ಮತ್ತು ಮತ್ತೂ ಉತ್ಕಟಗೊಂಡು, ವಿಸ್ತಾರವಾಗಿ ಹರಡಿ, ಆಳದಲ್ಲಿಳಿದು, ಊರ್ಧ್ವಮುಖವಾಗಿ ಚಿಮ್ಮುವ, ಅಮೂರ್ತವನ್ನಪ್ಪುವ ಮಹಾ ಅಭೀಪ್ಸೆಯ, ಅಧ್ಯಾತ್ಮದ ಮಹಾಪೂರವಾಗುವ ಸೊಗಸನ್ನಿಲ್ಲಿ ಕಾಣುತ್ತೇವೆ. ಅಲ್ಲಮಪ್ರಭುವಿನ ವಚನಗಳಲ್ಲಿ ಸಾಧಕನೊಬ್ಬನು ಸಿದ್ಧಿ ಪಡೆದಿರುವ ಸ್ಥಿತಿಯು ಅಭಿವ್ಯಕ್ತಗೊಂಡರೆ, ಅಕ್ಕಮಹಾದೇವಿಯ ವಚನಗಳಲ್ಲಿ ಸಾಧನೆಯ ಹಂತದಲ್ಲಿ ಸಾಧಕ ಅನುಭವಿಸುವ ತೀವ್ರ ಭಾವನೆಗಳ ಚಿತ್ರಣ ಅಭಿವ್ಯಕ್ತಗೊಳ್ಳುತ್ತದೆ. ಅಕ್ಕನಲ್ಲಿ ಭಕ್ತಿಯ, ಪ್ರೇಮದ ಆರ್ದ್ರ ಭಾವಕ್ಕೆ ಹೆಚ್ಚು ಒತ್ತು ಹಾಗೂ ಅದರೊಡನೆ ಶೃಂಗಾರ ಭಾವಕ್ಕೂ ಎಡೆಯಿದೆ. ಅಲ್ಲಮನಲ್ಲಿ ಜ್ಞಾನಮಾರ್ಗಕ್ಕೆ, ವೈರಾಗ್ಯ ವಿಡಂಬನೆಗಳಿಗೆ ಹೆಚ್ಚು ಒತ್ತು ಕಂಡುಬರುತ್ತದೆ. ಪರಿಣಾಮ ಎರಡೂ ಕಡೆಯೂ ಒಂದೇ ಬಯಲೊಡನೆ ಬಯಲಾಗುವುದು, ಶೂನ್ಯದೊಡನೆ ಶೂನ್ಯವಾಗುವುದು. ಮಾನವೀಯ ಸಂಬಂಧಗಳಂತೆ, ಹೆಣ್ಣು ಗಂಡಿನ ಸಂಬಂಧಗಳಂತೆಯೇ, ಸಾಧಕ ಚೇತನ ಹಾಗೂ ವಿಶ್ವಚೇತನಗಳ ನಡುವಿನ ಸಂಬಂಧ ಕೂಡ ಅತ್ಯಂತ ಸಂಕೀರ್ಣ ಹಾಗೂ ಸೂಕ್ಷ್ಮವಾದದ್ದು. ಮೀರಾ ಆಗಬಹುದು, ಆಂಡಾಳ್ ಆಗಬಹುದು, ಮಹಾದೇವಿ ಅಕ್ಕ, ಚೈತನ್ಯ ಪ್ರಭು, ರಾಮಕೃಷ್ಣ ಪರಮಹಂಸರಾಗಬಹುದು, ಎಲ್ಲ ಸಾಧಕರಲ್ಲಿಯೂ ಕಂಡುಬರುವ ಉತ್ಕಟ ಇಚ್ಛೆ, ಮೂರ್ತರೂಪದಲ್ಲಿ ವ್ಯಕ್ತಗೊಂಡಿರುವ ವ್ಯಕ್ತಿಚೇತನ, ಅಮೂರ್ತ, ಅವ್ಯಕ್ತವಾಗಿರುವ ವಿಶ್ವಚೇತನದಲ್ಲಿ ಒಂದಾಗುವ ಆ ವಿಶ್ವಚೇತನವಾಗಿಬಿಡುವಂತಹ ಮಹದಿಚ್ಛೆ.

ಇಂತಹ ಅಧ್ಯಾತ್ಮ ಸಾಧನೆಯಲ್ಲಿ ಗಂಡು ಹೆಣ್ಣೆಂಬ ಭೇದವಿಲ್ಲವೆಂದು ಅಕ್ಕಮಹಾದೇವಿಯ ಹಲವು ವಚನಗಳು ಸಾರುತ್ತವೆ.

"ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ. / ಗಂಡು ಗಂಡಾದಡೆ ಹೆಣ್ಣಿನ ಸೂತಕ. / ಮನದ ಸೂತಕ ಹಿಂಗಿದಡೆ / ತನುವಿನ ಸೂತಕಕ್ಕೆ ತೆರಹುಂಟೆ? / ಅಯ್ಯಾ, ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ. / ಎನ್ನ ದೇವ ಚೆನ್ನಮಲ್ಲಿಕಾರ್ಜುನನೆಂಬ ಗುರುವಂಗೆ / ಜಗವೆಲ್ಲ ಹೆಣ್ಣು ನೋಡಾ ಅಯ್ಯಾ." (ವ.ಸಂ. ೪೨೯, ದ್ವಿತೀಯ ಮುದ್ರಣ-೨೦೦೧)

"ಮೊಲೆ ಮೂಡಿ ಬಂದಡೆ ಹೆಣ್ಣೆಂಬರು/ಮೀಸೆ ಕಾಸೆ ಬಂದಡೆ ಗಂಡೆಂಬರು/ನಡುವೆ ಸುಳಿವ ಆತ್ಮನು ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ ರಾಮನಾಥಾ" ಎಂದು ಜೇಡರ ದಾಸಿಮಯ್ಯ ಹೇಳಿದರೆ ಅಕ್ಕ ತನ್ನ ವಚನದಲ್ಲಿ, ಹೆಣ್ಣು ತಾನು ಹೆಣ್ಣು ಎಂಬ ಭಾವ ತಾಳುವುದೇ,

ಗಂಡು ತಾನು ಗಂಡೆಂಬ ಭಾವ ತಾಳುವುದೇ ಸೂತಕ ಅಂಟಿದಂತೆ ಎನ್ನುವ ಪರಿಕಲ್ಪನೆಯನ್ನು, ದೈಹಿಕ ಸ್ತರದಿಂದ ಮಾನಸಿಕ ಸ್ತರಕ್ಕೇರಿಸುತ್ತಾಳೆ. ಹೆಣ್ಣು, ಗಂಡು ತನ್ನ ಹೆಣ್ತನ ಗಂಡ್ತನಗಳನ್ನು ಅನುಭವ ಮಾಡಿದರೆ, ತಾವು ಹೆಣ್ಣು ಗಂಡೆಂಬ ಅಂಶ ಮನದಲ್ಲಿ ಸುಳಿದರೆ ಇಬ್ಬರಿಗೂ ಸೂತಕ ತಗಲುವ ನಿಶ್ಚಿತತೆ ಇರುತ್ತದೆ. ಈ ಮನಸ್ಸಿನ ಸೂತಕ ಹಿಂಗಿದರೆ ತನುವಿನ ಸೂತಕಕ್ಕೆ ಎಡೆಯೇ ಇರುವುದಿಲ್ಲ. ಅಕ್ಕಮಹಾದೇವಿ ಇಷ್ಟಕ್ಕೇ ನಿಲ್ಲುವುದಿಲ್ಲ, "ಚೆನ್ನಮಲ್ಲಿಕಾರ್ಜುನನೆಂಬ ಗುರುವಂಗೆ ಜಗವೆಲ್ಲ ಹೆಣ್ಣು ನೋಡಾ" ಎಂಬ ಭೂಮ ಕಲ್ಪನೆಯೊಂದಿಗೆ ವಚನ ಮುಕ್ತಾಯವಾಗುತ್ತದೆ. ಚೆನ್ನಮಲ್ಲಿಕಾರ್ಜುನನೆಂಬ ಶ್ರೇಷ್ಠನೊಬ್ಬನೇ ಗಂಡು, ಅವನೇ ಕಾರಣಪುರುಷ, ಮಿಕ್ಕ ಜೀವಿಗಳೆಲ್ಲರೂ ಕೇವಲ ಹೆಣ್ಣುಗಳು ಮಾತ್ರ– ಅದರಲ್ಲಿ ಗಂಡು ಹೆಣ್ಣೆಂಬ ವಿಭೇದವಿರಲು ಸಾಧ್ಯವಿಲ್ಲ. ಇಡಿಯ ಸೃಷ್ಟಿಯೇ ಹೆಣ್ಣಾಗಿ ಚೆನ್ನಮಲ್ಲಿಕಾರ್ಜುನ ಪುರುಷನಾಗುತ್ತಾನೆ. –ಹೀಗೆ ಪರಸ್ಪರ ದೈಹಿಕ ಮಟ್ಟದ ವಿಭೇದವಳಿದು, ಮಾನಸಿಕ ಮಟ್ಟದ ವಿಭೇದವೂ ಅಳಿದು ಕಡೆಗೆ ಇಡೀ ಸೃಷ್ಟಿ ತನ್ನ ಕರ್ತನಿಗೆ ಹೆಣ್ಣಾಗಿ ಬಿಡುವ ಅಧ್ಯಾತ್ಮದ ಉನ್ನತ ಕಲ್ಪನೆಯ ಅದ್ಭುತ ಚಿತ್ರಣವೊಂದನ್ನು ಕಂಡರಿಸುತ್ತದೆ ಈ ವಚನ.

ಮತ್ತೊಂದು ವಚನದಲ್ಲಿ ಹೆಣ್ಣುಗಂಡುಗಳಲ್ಲಿ ಸಹಜವಾಗಿಯೇ ತಮ್ಮ ಗುಹ್ಯಾಂಗಗಳ ಬಗೆಗಿರುವ ನಾಚಿಕೆಯ ಭಾವನೆಯ ಬಗೆಗೆ ಹೇಳುತ್ತಾಳೆ : "ನಾಣಮರೆಯ ನೂಲು ಸಡಿಲಲು / ನಾಚುವರು ನೋಡಾ ಗಂಡು ಹೆಣ್ಣೆಂಬ ಜಾತಿಗಳು. / ಪ್ರಾಣದೊಡೆಯ ಜಗದೊಳಗೆ ಮುಳುಗಲು ತೆರಹಿಲ್ಲದಿರಲು / ದೇವರ ಮುಂದೆ ನಾಚಲೆಡೆಯುಂಟೆ? / ಚೆನ್ನಮಲ್ಲಿಕಾರ್ಜುನ ಜಗವೆಲ್ಲ ಕಣ್ಣಾಗಿ ನೋಡುತ್ತಿರಲು / ಮುಚ್ಚಿ ಮರಸುವ ಠಾವಾವುದು ಹೇಳಯ್ಯಾ." (ವ.ಸಂ. ೨೫೨)

ದೇಹದ ಬೇರೆ ಯಾವ ಭಾಗಕ್ಕೂ ಇರದ ಈ ಮುಚ್ಚುಮರೆ, ಗುಹ್ಯಾಂಗಗಳಿಗೇತಕ್ಕೆ ಎನ್ನುವ ಅಕ್ಕಮಹಾದೇವಿಯ ಪ್ರಶ್ನೆ ಆಕೆ ಸಾಧಿಸಿದ್ದ ಮಾನಸಿಕ ಪರಿಪಕ್ವತೆಯನ್ನು ಅಭಿವ್ಯಕ್ತಿಸುವುದಲ್ಲದೇ, ಚೆನ್ನಮಲ್ಲಿಕಾರ್ಜುನ ಅಂತಃಸಾಕ್ಷಿಯಾಗಿ, ಬಹಿಃಸಾಕ್ಷಿಯಾಗಿ, ಜಗವೆಲ್ಲ ನೋಡುತ್ತಿರುವನೆಂಬುದನ್ನೂ, ಜಗತ್ತನ್ನೇ ಆ ದೈವ ತುಂಬಿಕೊಂಡಿರುವುದನ್ನು ಸಾಕ್ಷಾತ್ಕರಿಸಿಕೊಂಡಿರುವ ಚೇತನ ಅಕ್ಕನದೆಂದೂ ಕೂಡ ಸೂಚಿಸುತ್ತದೆ.

ಗಂಡಿನ ರಕ್ಷಣೆಯನ್ನು ತೊರೆದು, ಅಪ್ಪ ಅಮ್ಮ ಬಂಧುಗಳ ಆಶ್ರಯಕ್ಕಾಶಿಸದೇ ಯಾರದೇ ಹಂಗಿಲ್ಲದೆ, ಜೀವನದ ಪರಮೋಚ್ಚ ಗುರಿ ಎಂದಿರುವ ಪರಮಾತ್ಮ ಸಾಕ್ಷಾತ್ಕಾರವನ್ನು ಪಡೆದವಳು ಅಕ್ಕಮಹಾದೇವಿ. ತನ್ನ ಜೀವನ ಒಡ್ಡಿದ ಕಟ್ಟುಗಳನ್ನು, ಪರಿಮಿತಿಗಳನ್ನು ಕಿತ್ತೊಗೆದು ಸಮಕಾಲೀನ ಸಮಾಜದ ರೂಢ ಸಂಪ್ರದಾಯವನ್ನು ಮುರಿದು ತೀವ್ರ ರೀತಿಯಲ್ಲಿ ಪ್ರತಿಭಟಿಸಿ, ಲೌಕಿಕದ ಪರಿಧಿಯಿಂದ ಅಲೌಕಿಕದ ಪರಿಧಿಗೆ ಸೀಮೋಲ್ಲಂಘನ ಮಾಡಿದ, ಕನ್ನಡ ನಾಡಿನ ಮೊದಲ ಮಹಿಳೆ ಎನ್ನಬಹುದೇನೋ– ಆಂಡಾಳ್, ಮೀರಾ ಮೊದಲಾದ ಬೇರೆ ಬೇರೆ ಪ್ರದೇಶದ ಮಹಿಳೆಯರು ತಮ್ಮ ಆರಾಧ್ಯ ದೈವದ ಸಾಮೀಪ್ಯ, ಸಾನ್ನಿಧ್ಯ, ಸಾಯುಜ್ಯಗಳಿಗಾಗಿ ಹಂಬಲಿಸಿದರಾದರೂ, ಅವರು ಅಕ್ಕಮಹಾದೇವಿಯಂತೆ ಕಾಡುಮೇಡುಗಳಲ್ಲಿ ಅಲೆದವರಲ್ಲ. ಮೀರಾ ಕೂಡ ತನಗೆ ಒಲ್ಲದ ಮದುವೆಯಿಂದ ಬಿಡಿಸಿಕೊಂಡು ಬಂದು ಗಿರಿಧರನನ್ನರಸಿದಳಾದರೂ, ಅಕ್ಕಮಹಾದೇವಿಯ ಮಾರ್ಗವೇ ಬೇರೆ. ಅಕ್ಕಮಹಾದೇವಿ ಪರಿವ್ರಾಜಕ ವ್ರತ

ತೊಟ್ಟ ಸಾಧಕಿ. ಅಲೆಮಾರಿಯ ತಪಶ್ಚರ್ಯೆ ಆಕೆಯದು. ಜೀವನದ ಅರಿಷಡ್ವರ್ಗಗಳ ವನದಿಂದ ಬಿಡಿಸಿಕೊಂಡು ಆಚೆ ಬಂದಲ್ಲದೆ ಆಕೆ ಕದಳಿಯನ್ನು ಹೊಗುವಂತಿಲ್ಲ.

ವೈಯಕ್ತಿಕ ಜೀವನದಲ್ಲಿ ನಡೆದಿರಬಹುದಾದ ಘಟನೆಗಳ ಬಗೆಗೆ ಮಹಾದೇವಿ ಅತ್ಯಂತ ಸೂಚ್ಯವಾಗಿ ತಿಳಿಸುತ್ತಾಳೆ. ಮಹಾದೇವಿಯ ಅನುಪಮ ಸೌಂದರ್ಯಕ್ಕೆ ಮೋಹಗೊಂಡ ಕೌಶಿಕ ಅವಳನ್ನು ಒತ್ತಾಯದಿಂದ ಮದುವೆಯಾದನೆಂದೂ, ಶಿವಭಕ್ತೆಯಾದ ಅವಳ ಕರಾರು, ನಿಬಂಧನೆಗಳಿಗೆ ಒಪ್ಪಿದ್ದವನು, ನಂತರ ಶಿವಪೂಜೆಗೆ ಅಡ್ಡಿಪಡಿಸಿದಾಗ ಮೂರು ಬಾರಿ ಕ್ಷಮಿಸಿ ನಾಲ್ಕನೆಯ ಬಾರಿಗೆ ಅರಮನೆಯ ಬಂಧನವನ್ನು ಕಿತ್ತು ಬಿಸುಟು ಬಂದಳೆಂದು ಐತಿಹ್ಯ. ಇದು ಮಹಾದೇವಿಯ ಜೀವನದಲ್ಲಿನ ಅಗ್ನಿದಿವ್ಯ. ಲೌಕಿಕ ಸುಖಭೋಗಗಳಲ್ಲಿ ನಿರತಳಾಗಿ ಸಂತೃಪ್ತಳಾಗುವ ಸಾಮಾನ್ಯ ಹೆಣ್ಣಾಗಿರಲಿಲ್ಲ ಮಹಾದೇವಿ. ಅಧ್ಯಾತ್ಮ ಸಾಧನೆಯಲ್ಲಿ ನಿರತವಾಗಿದ್ದ ಆ ಊರ್ಧ್ವಗಾಮೀ ಚೇತನಕ್ಕೆ ಅರಮನೆಯ ಸುಖಭೋಗ, ಲೈಂಗಿಕ ಜೀವನ ಎಲ್ಲವೂ ಜುಗುಪ್ಸೆ, ಹೇಸಿಗೆ ಎಂದೆನಿಸಿರಬಹುದು. ಆದರೆ ಕಾಲ ತುಂಬಿ ಬರುವ ವರೆಗೂ ಬಿಟ್ಟು ಹೋಗಲಾರದ ಬದ್ಧತೆಯೂ ಇದ್ದಿರಬಹುದು. ತಾನು ಪತಿಯನ್ನು, ಪತಿಯ ಮನೆಯನ್ನು ಬಿಟ್ಟು ಬಂದುದನ್ನು ಹೀಗೆ ತಿಳಿಸುತ್ತಾಳೆ : "ಮೂರು ತಪ್ಪ ಹೊರಿಸಿ ಬಂದವಳಿಗೆ / ಇನ್ನಾರ ಕೊಂಡು ಕೆಲಸವೇತಕ್ಕೆ? /ಹೋಗದಿಹೆನೆ, ಹೋಗಿಹೆನೆ ಜ್ಞಾನಕ್ಕೆ ಹಾನಿ. / ಅರೆಗೋಣ ಕೊಯ್ದುವನಂತೆ ಇನ್ನೇವೆ? / ಈ ಗುಣವ ಬಿಡಿಸಾ ಎನ್ನ ತಂದೆ ಚೆನ್ನಮಲ್ಲಿಕಾರ್ಜುನಾ." (ವ.ಸಂ.೩೪೩)

ಈ 'ತಪ್ಪು' ಎಂತಹದಾಗಿದ್ದಿರಬಹುದು? ಕೌಶಿಕ ಮಹಾದೇವಿಯನ್ನು ಹೇಗೆ ಒತ್ತಾಯಿಸಿರಬಹುದು ತನ್ನ ಕಾಮದಾಹ ತೀರಿಸಿಕೊಳ್ಳಲು ಎಂಬ ಸುಳಿವು ಮತ್ತು, ಅಕ್ಕಮಹಾದೇವಿ ಮತ್ತು ಕೌಶಿಕರ ಇಜ್ಜೋಡು ದಾಂಪತ್ಯದ ಬಗೆಗೆ ಈ ಮುಂದಿನ ವಚನ ಸುಳಿಹು ನೀಡುತ್ತದೆ : "ಎಮ್ಮೆಗೊಂದು ಚಿಂತೆ; ಸಮ್ಮಗಾರಗೊಂದು ಚಿಂತೆ. / ಧರ್ಮಿಗೊಂದು ಚಿಂತೆ; ಕರ್ಮಿಗೊಂದು ಚಿಂತೆ. / ಎನಗೆ ಎನ್ನ ಚಿಂತೆ. ತನಗೆ ತನ್ನ ಕಾಮದ ಚಿಂತೆ. / ಒಲ್ಲೆ ಹೋಗು. ಸೆರಗ ಬಿಡು ಮರುಳೆ / ಎನಗೆ ಚೆನ್ನಮಲ್ಲಿಕಾರ್ಜುನ ದೇವರು / ಒಲಿವರೊ ಒಲಿಯರೊ ಎಂಬ ಚಿಂತೆ!" (ವ.ಸಂ. ೧೧೮)

ಸೆರಗು ಹಿಡಿದೆಳೆವ ಕೌಶಿಕನ ಹಿಡಿತದಿಂದ ಬಿಡಿಸಿಕೊಂಡು ಬಂದ ಮಹಾದೇವಿ ತನ್ನ ಅರಮನೆಯ ವೇಷಭೂಷಣಗಳಿಗೂ, ಈಗಿನ ವೇಷಭೂಷಣಗಳಿಗೂ ಇರುವ ಅಂತರವನ್ನು ಹೀಗೆ ತಿಳಿಸುತ್ತಾಳೆ : "ಗುರು ಪಾದತೀರ್ಥವೆ ಮಂಗಳ ಮಜ್ಜನವೆನಗೆ./ವಿಭೂತಿಯೆ ಒಳಗುಂದದರಿಷಿಣವೆನಗೆ/ದಿಗಂಬರವೆ ದಿವ್ಯಾಂಬರವೆನಗೆ./ಶಿವಭಕ್ತರ ಪಾದರೇಣುವೆ ಅನುಲೇಪವೆನಗೆ./ರುದ್ರಾಕ್ಷಿಯೆ ಮೈದೊಡಿಗೆಯೆನಗೆ./ಶರಣರ ಪಾದರಕ್ಷೆಯೆ ಶಿರದಲ್ಲಿ ತೊಂಡಿಲು ಬಾಸಿಗವೆನಗೆ./ಚೆನ್ನಮಲ್ಲಿ ಕಾರ್ಜುನನ ಮದುವಳಿಗೆಗೆ/ಬೇರೆ ಶೃಂಗಾರವೇಕೆ ಹೇಳಿರೆ ಅವ್ವಗಳಿರಾ!" (ವ.ಸಂ. ೨೦೦)

ದಾರಿಯಲ್ಲಿ ನಡೆಯುವಾಗ ಅವಳ ವೇಷ ಭೂಷಣಗಳ ಬಗೆಗೆ ಪ್ರಶ್ನಿಸಿರಬಹುದಾದ ಹೆಣ್ಣುಮಕ್ಕಳಿಗೆ ಕೊಟ್ಟಿರುವ ಉತ್ತರದಲ್ಲಿ ಮಹಾದೇವಿಯು ಅರಮನೆಯನ್ನು ಬಿಟ್ಟು ಬಂದಮೇಲೆ ಹೇಗಿದ್ದಿರಬಹುದೆಂಬ ಚಿತ್ರಣ ದೊರೆಯುತ್ತದೆ. ಹೀಗೆ ಅರಮನೆಯ ಬಂಧನವನ್ನು ಮಾತ್ರವಲ್ಲ, ತನ್ನ ಸಮಕಾಲೀನ ಸಮಾಜವು ಒಪ್ಪಿದ್ದ, ನಿಯಮಗಳನ್ನೇ ಪ್ರತಿಭಟಿಸಿ ಸಾಮಾಜಿಕ

ಸ್ತರದಲ್ಲಿ ಸೀಮೋಲ್ಲಂಘನ ಮಾಡಿದ ಮಹಾದೇವಿಯ ಮಾನಸಿಕ ಪಕ್ವತೆ, ಧೃಡತೆಗಳ ಬಗೆಗೆ ಗೌರವ ಮೂಡುತ್ತದೆ. ಅಂದು ಅರಮನೆಯ ಸೆರೆಯಿಂದ ಮುಕ್ತಳಾಗಿ, ದಿಗಂಬರೆಯಾಗಿಯೋ, ಕೇಶಾಂಬರೆಯಾಗಿಯೋ, ಒರಟು ಕಂಬಳಿಯಿಂದ ತನ್ನ ಸುಕುಮಾರ ದೇಹವನ್ನು ಮುಚ್ಚಿಕೊಂಡೋ ಹೊರಬಂದ ಮಹಾದೇವಿಯನ್ನು ಯಾರೂ,– ಯಾವ ಗಂಡೂ– ಕಾಡಲಿಲ್ಲವೆ? ತನ್ನ ಜೀವನದ ಕಡೆತನಕ ಹಾಗೆಯೇ ಇದ್ದುಬಿಟ್ಟಳೆ? ಹಾಗಿದ್ದರೆ, ಯೌವನ ತುಂಬಿ ತುಳುಕುತ್ತಿದ್ದ ಅನುಪಮ ಲಾವಣ್ಯವತಿಯಾದ ಮಹಾದೇವಿ ಅದಿನ್ನೆಷ್ಟು ರೀತಿಯ ಮನೋಕ್ಲೇಶ, ಭಂಗಗಳನ್ನನುಭವಿಸಿದ್ದಿರಬಹುದು? ತನ್ನನ್ನು ಹೆಣ್ಣೆಂದು ಕಂಡು ಆಶಿಸಿದವರನ್ನು, ಕಾಮದ ಕಣ್ಣಿಂದ ನೋಡಿ ಕಾಡಿದವರನ್ನು ಕುರಿತು ಮಹಾದೇವಿ ಹೀಗೆ ಹೇಳುತ್ತಾಳೆ : "ನೋಡುವ ಕಂಗಳಿಗೆ ರೂಪಿಂಬಾಗಿರಲು / ನೀವು ಮನ ನಾಚದೆ ಬಂದಿರಣ್ಣಾ. / ಕೇಳಿದ ಶ್ರೋತ್ರ ಸೊಗಸಿಗೆ ನೀವು ಮರುಳಾಗಿ ಬಂದಿರಣ್ಣಾ. / ನಾರಿಯೆಂಬ ರೂಪಿಂಗೆ ನೀವು ಒಲಿದು ಬಂದಿರಣ್ಣಾ. / ಮೂತ್ರವು ಬಿಂದು ಒಸರುವ ನಾಳವೆಂದು /ಕಂಗಾಣದೆ ಮುಂದುಗೆಟ್ಟು ಬಂದಿರಣ್ಣಾ. / ಬುದ್ಧಿಗೇಡಿತನದಿಂದ ಪರಮಾರ್ಥದ ಸುಖವ ಹೋಗಲಾಡಿಸಿಕೊಂಡು / ಇದಾದ ಕಾರಣವೆಂದರಿಯದೆ. / ನೀವು ನರಕ ಹೇತುವೆಂದರಿತು ಮನ ಹೇಸದೆ ಬಂದಿರಣ್ಣಾ. / ಚೆನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿಹ ಪುರುಷರೆನಗೆ ಸಹೋದರರು. / ಛೀ, ಹೋಗಾ ಮರುಳೆ." (ವ.ಸಂ. ೨೭೧)

"ಬಟ್ಟಿಹ ಮೊಲೆಯ ಭರದ ಜವ್ವನದ ಚೆಲುವ ಕಂಡು ಬಂದಿರಣ್ಣಾ. / ಅಣ್ಣಾ ನಾನು ಹೆಂಗೂಸಲ್ಲ; ಅಣ್ಣಾ, ನಾನು ಸೂಳೆಯಲ್ಲ. / ಅಣ್ಣಾ, ಮತ್ತೆ ನನ್ನ ಕಂಡು ಕಂಡು ಆರೆಂದು ಬಂದಿರಣ್ಣಾ? / ಚೆನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿನ ಪರಪುರುಷನು / ನಮಗಾಗದ ಮೋರೆ ನೋಡಣ್ಣಾ"(೨೯೨) ಇಂತಹ ವಚನಗಳು ಮಹಾದೇವಿ ಒಂಟಿಯಾಗಿ ದಿಗಂಬರೆಯಾಗಿಯೋ, ಕೇಶಾಂಬರೆಯಾಗಿಯೋ, ತನ್ನ ದಾರಿ ಕಂಡುಕೊಳ್ಳಲು, ಚೆನ್ನಮಲ್ಲಿಕಾರ್ಜುನನ ವಧು ತಾನೆಂದುಕೊಂಡು ಊರುಗಳಲ್ಲಿ ಗ್ರಾಮಗಳಲ್ಲಿ ನಡೆಯುತ್ತಿದ್ದಾಗ ತನ್ನ ಸಮಕಾಲೀನ ಸಮಾಜದ ಪುರುಷರಿಂದ ಅನುಭವಿಸಿರಬಹುದಾದ ಕೋಟಲೆಯನ್ನೂ, ಭಂಗವನ್ನೂ, ಅವುಗಳನ್ನು ಅವಳು ತನ್ನ ಆಧ್ಯಾತ್ಮಿಕ ಶಕ್ತಿಯಿಂದ ಹಾಗೂ ದಿಟ್ಟತನದಿಂದ ಮತ್ತು ಪ್ರೀತಿಯಿಂದ ತಿಳಿಯಹೇಳುವುದರ ಮೂಲಕ ಕಾಡಬಂದವರನ್ನು ಮಣಿಸಿರಬಹುದಾದ ಪರಿಯನ್ನೂ ಸೂಚಿಸುತ್ತವೆ. ಅಂತೆಯೇ ಎಂತಹ ಆಧ್ಯಾತ್ಮಿಕ ಶಕ್ತಿಯಿದ್ದರೂ ದೇಹದ ಏರು ಜವ್ವನದ ಚೆಲುವು ಕಂಡವರನ್ನು ಆಕರ್ಷಿಸಿ ಸೆಳೆಯುತ್ತಿದ್ದುದನ್ನೂ ಅಭಿವ್ಯಕ್ತಿಸುತ್ತದೆ. ಕೌಶಿಕನೊಬ್ಬನ ಕಾಮದ ಕಾಟದಿಂದ ಮುಕ್ತಳಾಗಿ ಬಂದ ಮಹಾದೇವಿ ಬೀದಿಬೀದಿಯಲ್ಲಿ ಅದೆಷ್ಟು ಕೌಶಿಕರನ್ನೆದುರಿಸಬೇಕಾಯಿತೋ? ದಾರಿಹೋಕರು ಆಕೆಯ ರೂಪಿನಿಂದ ಆಕರ್ಷಿತರಾಗಿ ಕಾಡಿದರೆ, ಕಲ್ಯಾಣದಲ್ಲಿನ ಅಲ್ಲಮಾದಿ ಶರಣರು ಆಕೆಯ ವೈರಾಗ್ಯದ ನೆಲೆಗಟ್ಟನ್ನೇ ಪ್ರಶ್ನಿಸುತ್ತಾರೆ. ಆಕೆಯ ಬತ್ತಲೆಯ ಸತ್ಯವನ್ನೇ ಪರೀಕ್ಷಿಸುವಂತೆ 'ಕಾಮನ ಮುದ್ರೆ'ಗಳನ್ನು ಏಕೆ ಮರೆಮಾಡಿಕೊಂಡಿದ್ದಾಳೆಂದು ಪ್ರಶ್ನಿಸುತ್ತಾರೆ. ಆಗ ತಾನೇಕೆ 'ಕಾಮನ ಮುದ್ರೆ'ಗಳನ್ನು ಕೇಶದಿಂದ ಮುಚ್ಚಿಕೊಂಡಿದ್ದೇನೆಂದು ಅನುಭವ ಮಂಟಪದ ಶರಣರಿಗೆ ತಿಳಿಸುತ್ತಾಳೆ : "ಫಲ ಒಳಗೆ ಪಕ್ವವಾಗಿಯಲ್ಲದೆ./ಹೊರಗಳ ಸಿಪ್ಪೆ

ಒಪ್ಪಗೆಡಮು./ಕಾಮನ ಮುದ್ರೆಯ ಕಂಡು ನಿಮಗೆ ನೋವಾದಿಹಿತೆಂದು/ಆ ಭಾವದಿಂದ ಮುಚ್ಚಿದೆ/ಇದಕ್ಕೆ ನೋವೇಕೆ? ಕಾಡದಿರಣ್ಣಾ./ಚೆನ್ನಮಲ್ಲಿಕಾರ್ಜುನದೇವರದೇವನ ಒಳಗಾದವಳ." (ವ.ಸಂ. ೨೮೯)

ಮಹಾದೇವಿಯದು ಇಜ್ಜೋಡು ದಾಂಪತ್ಯ. ಇವಳು ಶಿವಪೂಜೆಗೆ ಕುಳಿತರೆ ಅವನಿಗೆ ಕಾಮವಾಂಛೆ ಹೆಡೆಯೆತ್ತುತ್ತದೆ. ಎಷ್ಟು ದಿನ ನಡೆದೀತು ಈ ಸಂಸಾರ? ಮದುವೆಗೆ ಮೊದಲೆ ಇಂಥ ಪರಿಸ್ಥಿತಿ ಬರಬಹುದೆಂದು ಊಹಿಸಿದ್ದ ಮಹಾದೇವಿ, ಮೂರು ತಪ್ಪುಗಳನ್ನು ಕ್ಷಮಿಸುವ ಕರಾರು ಹಾಕಿದ್ದು, ತನ್ನ ಬಿಡುಗಡೆಯ ದಾರಿಯನ್ನು ಸುಗಮ ಮಾಡಿಕೊಂಡಿದ್ದಳಾದರೂ, ಆ ಹಾದಿ ಬಹುಶಃ ಅವಳೂ ಊಹಿಸದಿದ್ದ ಹಾದಿಯೆನಿಸುತ್ತದೆ. ಚೆನ್ನಮಲ್ಲಿಕಾರ್ಜುನನ ಸೌಂದರ್ಯಕ್ಕೆ– ವ್ಯಕ್ತ ಹಾಗೂ ಅವ್ಯಕ್ತ– ಮನ ಕೊಟ್ಟು ಪೂಜಿಸುತ್ತಿದ್ದ ಮಹಾದೇವಿಯ ಸೌಂದರ್ಯಕ್ಕೆ ಮರುಳಾಗಿ ಕಾಮಕೇಳಿಗೆಳಸುವ ಗಂಡನನ್ನು ಹೇಗೆ ನಿವಾರಿಸುವುದು, ನಿಭಾಯಿಸುವುದು? ಅಕ್ಕಮಹಾದೇವಿಯದು ತತ್‌ಕ್ಷಣದ ಪ್ರತಿಕ್ರಿಯೆ ಎನಿಸುತ್ತದೆ. "ಸೆರಗ ಬಿಡು" ಮರುಳೆ ಎಂದು, ಗಂಡನಿಂದ ಹಾಗೂ ಬಟ್ಟೆ ಬರೆಗಳೆಂಬ ಸಮಾಜದ ಸಂಕೋಲೆಯಿಂದ ಒಮ್ಮೆಗೇ ಬಿಡಿಸಿಕೊಂಡುಬಿಡುತ್ತಾಳೆ. "ಈ ದೇಹದ ಬೆತ್ತಲೆಯನ್ನು, ಭಾವದ ಬೆತ್ತಲೆಯನ್ನು, ಮನಸಿನ ಬೆತ್ತಲೆಯನ್ನು, ಒಳಗಿನೊಳಗಿನ ಬೆತ್ತಲೆಯನ್ನು ನೀನನುಭವಿಸಬಲ್ಲೆಯಾ? ಅರಗಿಸಿಕೊಳ್ಳಬಲ್ಲೆಯಾ? ಅರಿತುಕೊಳ್ಳಬಲ್ಲೆಯಾ?" ಎಂಬಂತಹ ಪ್ರಶ್ನೆಗಳನ್ನೆತ್ತುವಂತಹ ಆಕೆಯ ಈ ಕೃತ್ಯದಲ್ಲಿ, ಸಂಸಾರ, ಗಂಡ, ಲೈಂಗಿಕ ಕ್ರಿಯೆ ಎಲ್ಲದರ ಬಗೆಗೂ ಹೇಸಿಗೆ, ತಿರಸ್ಕಾರ ಜುಗುಪ್ಸೆಗಳ ಜೊತೆಗೇ, ಪ್ರತಿಭಟನೆ ಮತ್ತು ತನ್ನ ಬಗೆಗೆ ಒಂದಿಷ್ಟು ಆತ್ಮ ಮರುಕವಿಲ್ಲದ ದಿವ್ಯ ನಿರ್ಲಕ್ಷ್ಯ ಕಂಡುಬರುತ್ತವೆ. ಅಂತೆಯೇ ಗಂಡು ಹೆಣ್ಣುಗಳಾದಿಯಾಗಿ ಸಮಾಜ ತನ್ನ ಬಗೆಗೆ ತಾಳುವ ಭಾವನೆಯ ಬಗೆಗೂ ಇದೇ ನಿರ್ಲಕ್ಷ್ಯ ಹಾಗೂ ತಿಳಿವಳಿಕೆಯಿಂದ ಮೂಢರು ಎಂಬ ಮರುಕ ಕಂಡುಬರುತ್ತದೆ. ಮಹಾದೇವಿ ತಾಳಿದ ಈ ಹಠಾತ್ ನಿಲುವನ್ನು ಅರಗಿಸಿಕೊಳ್ಳಲಾಗದೇ ಕೌಶಿಕನಂತೆಯೇ, ಅಂದಿನ ಸಮಾಜವೂ ದಿಗ್ಮೂಢವಾಗಿದ್ದುದಂತೂ ನಿಜ. ಎಂಟುನೂರು ವರ್ಷ ಕಳೆದರೂ, ಪ್ರತಿ ಶತಮಾನದಲ್ಲಿಯೂ ಸಾವಿರ ಸಾವಿರ ಹೆಣ್ಣುಗಳನ್ನು ಬಲಾತ್ಕಾರಕ್ಕೊಳಪಡಿಸಿ ಬೆತ್ತಲಾಗಿಸಿರಬಹುದು, ಅತ್ಯಾಚಾರ ಮಾಡಿರಬಹುದು. ಆದರೆ ಸ್ವಇಚ್ಛೆಯಿಂದ ಅಧ್ಯಾತ್ಮ ಸಿದ್ಧಿಯ ಹಾದಿಯಲ್ಲಿ ಅಕ್ಕನಂತೆ ಹುಟ್ಟುಡುಗೆಯಲ್ಲಿ, ಬಟ್ಟಬಯಲಾಗಿ ನಿಂತು, ಕಂಡವರಿಂದ ನಮೋ ನಮೋ ಎನಿಸಿಕೊಂಡ ಹೆಣ್ಣಿನ ಉದಾಹರಣೆ ಮತ್ತೊಂದಿಲ್ಲ.

ಅಂದು ಅರಮನೆಯಿಂದ ಹೊರಗೆ ಬಂದ ಮಹಾದೇವಿಯ ಅಂತರಂಗದಲ್ಲಿ ಯಾವ ಮಹಾ ಸಂಘರ್ಷ ನಡೆದಿದ್ದಿರಬಹುದು? ಯೌವನದ ಆ ಸಂವೇದನಾಶೀಲ ಮನಸ್ಸಿನಲ್ಲಿ ಅದಾವ ಮಧುರಭಾವಗಳು ತುಡಿಯುತ್ತಿದ್ದಿರಬಹುದು? ಆಂಡಾಳ್ ಕೃಷ್ಣನ ಬಗೆಗೆ ತಾಳಿದ್ದಂತೆ ಮಹಾದೇವಿ ಚೆನ್ನಮಲ್ಲಿಕಾರ್ಜುನನ ಬಗೆಗೆ ತಾಳಿದ್ದ ಮಧುರ ಭಾವನೆಗಳು, ಆಕೆಯ ಪತಿಯೊಂದಿಗೆ ನಡೆಸಬೇಕಾಗಿದ್ದ ಲೈಂಗಿಕ ಜೀವನದ ಅನಿವಾರ್ಯತೆಯಲ್ಲಿ ಕಂದಿಹೋಗುತ್ತಿದ್ದವೇ? ಆ ಒಂದು ಗಳಿಗೆಯಲ್ಲಿ ಯಾವ ಸಂಘರ್ಷಕ್ಕೂ ಅವಕಾಶವೇ ಇರದೆ, ಒಳಗೆ ಆವರಿಸಿದ್ದ ಶೂನ್ಯ ಅವಳನ್ನು ಬಡಿದೆಬ್ಬಿಸಿ ಆಚೆ ನೂಕಿರಬಹುದೇ? ಗಂಡು ಹೆಣ್ಣೆಂಬ ಅಂತರವಿಲ್ಲದೆ ಪ್ರತಿ ವ್ಯಕ್ತಿಯ ಅಸ್ತಿತ್ವದ ಪ್ರಜ್ಞಾಪಾತಳಿಯ ಮೇಲೆ ಹೆಡೆ ಮುದುರಿ ಸುರುಳಿ

ಸುತ್ತಿ ಮಲಗಿರುವ ಶೂನ್ಯ, ಹೆಡೆ ಬಿಚ್ಚಿ ಸುರುಳಿಸುರುಳಿಯಾಗಿ ಮೇಲೆದ್ದು ನಿಲ್ಲುತ್ತಾ ಅಸ್ತಿತ್ವದ ಒಂದೊಂದು ಅಣುವನ್ನೂ ಆವರಿಸಿಕೊಳ್ಳುತ್ತಿರುವಾಗ, ವ್ಯಕ್ತಿಗೆ ತಾನಿರುವ ಪರಿಸರ ತನ್ನ ಸುತ್ತುಮುತ್ತು ಮತ್ತು ತಾನು ಎಲ್ಲವೂ ಅಳಿಸಿ ಹೋಗಲಿ ಎನಿಸಿದರೂ, ಹಾಗಾಗದಿದ್ದಾಗ, ಕಳಚಲು ಸಾಧ್ಯವಾಗಬಹುದಾದದ್ದನ್ನೆಲ್ಲಾ ಕಳಚಿ ಬಿಸುಟು, ಆ ಒಳಗಿನ ಶೂನ್ಯಕ್ಕೆ ಸಂವಾದಿಯಾಗು ವಂತಹ ಶೂನ್ಯವನ್ನು ಅರಸಿಕೊಂಡು ಹೊರಡುತ್ತದೆ ಆ ಅಸ್ತಿತ್ವ. ಇದೊಂದು ರೀತಿಯಲ್ಲಿ ಮಹಾಶೂನ್ಯದ ಅರಸುವಿಕೆ. ಆ ಶೂನ್ಯ ನೀಗುವುದಾದರೂ ಹೇಗೆ? ಯಾರಿಂದ? ಇದು ಈ ಲೋಕದ ಪರಿಧಿಯಲ್ಲಿ, ರಕ್ತಮಾಂಸಗಳ ಮೂರ್ತರೂಪದ (ಅಸ್ತಿತ್ವದಿಂದ) ವ್ಯಕ್ತಿತ್ವದಿಂದ ಸಾಧ್ಯವಾಗಲಾರದೆಂಬ ಅರಿವು ಅಕ್ಕನಿಗಿದೆ. ಮೊದಲಿನಿಂದಲೇ ಚೆನ್ನಮಲ್ಲಿಕಾರ್ಜುನನಲ್ಲಿ ಭಕ್ತಿಭಾವ ತಳೆದಿದ್ದ ಅಕ್ಕನ ಅಸ್ತಿತ್ವ ಸಂಪೂರ್ಣವಾಗಿ, ಲೌಕಿಕ ಜೀವನದಿಂದ ಒಂದು 'U' ತಿರುವನ್ನು ತೆಗೆದುಕೊಂಡು, ತನ್ನೆಲ್ಲ ಸಮಸ್ತವನ್ನೂ, ಆ ಅಮೂರ್ತದ ಮೂರ್ತ ಅಭಿವ್ಯಕ್ತವಾದ ಚೆನ್ನಮಲ್ಲಿಕಾರ್ಜುನನಲ್ಲಿ ನಿಶ್ಚಿತ ಠೇವಣಿಯಾಗಿಟ್ಟುಬಿಡುತ್ತದೆ, ಮತ್ತು ಮೂರ್ತದ ಪರಿಮಿತಿ ಯಿಂದ, ಆ ಅಪರಿಮಿತ ಅಮೂರ್ತದ ಸಾಕ್ಷಾತ್ಕಾರಕ್ಕಾಗಿ, ಸಂಸಾರದ ವಿಷಯ ವಾಸನೆಯ ಕಾಡನ್ನು ತೊರೆದು ಅಧ್ಯಾತ್ಮದ ಕದಳಿವನದತ್ತ ಪಯಣ ಕೈಗೊಳ್ಳುತ್ತದೆ ಮಹಾದೇವಿಯ ಅಸ್ತಿತ್ವ.

ಲೌಕಿಕದ ಗಂಡನನ್ನು ತೊರೆದು ಬಂದ ಮಹಾದೇವಿ ಅಲೌಕಿಕದ ಗಂಡನನ್ನು ಅರಸುವಾಗ ಅನುಭವಿಸುವ ಮಧುರಭಾವ, ವಿರಹದ ವೇದನೆ, ಆ ಗಂಡ ಒಲಿದನೋ ಇಲ್ಲವೋ ಎಂಬ ಚಿಂತೆ ಶಂಕೆಗಳು, ಕಲ್ಪನಾ ಸಮಾಗಮಗಳು ಇವೆಲ್ಲವೂ ಆಕೆಯ ವಚನಗಳಲ್ಲಿ, ಲೌಕಿಕದ ಛಾಯೆಯಿಂದಾವರಿಸಿಕೊಂಡು ಅಧ್ಯಾತ್ಮದ ಗಟ್ಟಿ ನೆಲೆಗಟ್ಟಿನಲ್ಲಿ ಅಭಿವ್ಯಕ್ತಗೊಂಡು, ಮಹಾದೇವಿ ಒಮ್ಮೆಗೇ ಪ್ರೇಮಿ-ಭಕ್ತೆ-ಸಾಧಕಿಯ ಅಪೂರ್ವ ತ್ರಿವೇಣೀ ಸಂಗಮವಾಗುತ್ತಾಳೆ. ಒಮ್ಮೊಮ್ಮೆ ಸಾಮಾನ್ಯ ಮಾನವರಾದ ನಮ್ಮೆಲ್ಲರನ್ನೂ ಕಾಡುವ ಈ ಪಂಚೇಂದ್ರಿಯ ಶರೀರವನ್ನು ಇಲ್ಲವಾಗಿಸಿಕೊಂಡು ಶುದ್ಧ ಚೇತನ, ಶುದ್ಧ ಶೂನ್ಯವಾಗಬೇಕೆಂಬ ಬಯಕೆ— ನಮ್ಮಲ್ಲಿ ಕ್ಷಣಕಾಲದ ಬಯಕೆ— ಮಹಾದೇವಿಯನ್ನು ನಮಗಿಂತ ಸಾವಿರಪಟ್ಟು ಹೆಚ್ಚಾಗಿ ಕಾಡಿದ್ದಿರಬೇಕು. ಸಾಧ್ಯವಿದ್ದಿದ್ದರೆ ಅಂದೇ ಅವಳು ಈ ಪಂಚೇಂದ್ರಿಯ ಶರೀರವನ್ನು ಇಲ್ಲವಾಗಿಸಿಕೊಂಡು, ಶುದ್ಧ ಶೂನ್ಯವಾಗಿ, ಬಯಲಾಗಿ ಚೆನ್ನಮಲ್ಲಿಕಾರ್ಜುನನೆಂಬ ಮಹಾಬಯಲನ್ನು ಸೇರುತ್ತಿದ್ದಳು. ಆದರದು ತೀವ್ರ ಸಾಧನೆಯಿಂದ, ಸಾಧಿಸಲ್ಪಡಬೇಕಾದದ್ದು. ಆಕೆ ಆರಿಸಿಕೊಂಡ ಮಾರ್ಗ ಮಧುರ ಭಾವ ತುಂಬಿದ ಕಠಿನ ಪರಿವ್ರಾಜಕರ ಅತ್ಯಂತ ಕಷ್ಟಕರ ಮಾರ್ಗ. ಪರಿವ್ರಾಜಕನಿಗಿರುವ ಬಟ್ಟೆಯ ಹಂಗಾಗಲೀ, ಮರೆಯಾಗಲೀ ಇಲ್ಲದ ಮಾರ್ಗವನ್ನಾರಿಸಿಕೊಂಡ ಮಹಾದೇವಿಯ ಮನಸ್ಸಿನಲ್ಲಿ ಮೂಡಿದ್ದಿರಬಹುದಾದ ಜುಗುಪ್ಸೆ, ಅಸಹ್ಯಗಳ ತೀವ್ರತೆ ಎಷ್ಟು ಯೋಚಿಸಿದರೂ ನಮ್ಮ ಕಲ್ಪನೆಗೆ ನಿಲುಕುವಂತಹುದಲ್ಲ. ಮಹಾದೇವಿಯಕ್ಕನ ಈ ನಿರ್ಧಾರದಲ್ಲಿ ಪರಿವ್ರಾಜಕ ಧರ್ಮ, ಜೈನಧರ್ಮ, ಶೈವಧರ್ಮ(ಶರಣಸತಿ ಲಿಂಗಪತಿ ಭಾವ) ಈ ಮೂರೂ ಪ್ರಭಾವಗಳು ಕಂಡುಬರುತ್ತವೆನಿಸುತ್ತದೆ.

"ಹಸಿವಾದಡೆ ಊರೊಳಗೆ ಭಿಕ್ಷಾನ್ನಗಳುಂಟು. / ತೃಷೆಯಾದಡೆ ಕೆರೆ ಹಳ್ಳ ಬಾವಿಗಳುಂಟು. / ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು. / ಶಯನಕ್ಕೆ ಹಾಳು ದೇಗುಲಗಳುಂಟು. /

ಚೆನ್ನಮಲ್ಲಿಕಾರ್ಜುನಯ್ಯಾ / ಆತ್ಮಸಂಗಾತಕ್ಕೆ ನೀನೆನಗುಂಟು." (ವ.ಸಂ. ೪೧೩). ಈ ವಚನದಲ್ಲಿ ನಿರೂಪಿತವಾಗಿರುವ ನಿಯಮಗಳು ಪರಿವ್ರಾಜಕ ಅಥವಾ ಸಂನ್ಯಾಸಾಶ್ರಮದ ನಿಯಮಗಳನ್ನೇ ಹೋಲುತ್ತವೆ. ಈ ರೀತಿಯ ಪರಿವ್ರಾಜಕ ನಿಯಮವನ್ನು ತನ್ನದಾಗಿಸಿಕೊಂಡು ಅನುಸರಿಸಿದ ಮೊದಲ ಮಹಿಳೆ ಅಕ್ಕಮಹಾದೇವಿ. ಅರಿಷಡ್ವರ್ಗಗಳನ್ನು ಹಸಿವು, ತೃಷೆ, ನಿದ್ರೆಗಳೆಂಬ ಜೀವಿಗಳಿಗೆ ಸಹಜವಾದ ಮೂಲ ಪ್ರವೃತ್ತಿಯನ್ನೂ, ಮನೆ, ಸಂಸಾರಗಳೆಂಬ ಭಾವನಾತ್ಮಕತೆಯನ್ನೂ ಗೆಲ್ಲುವುದು ಸುಲಭವೇನಲ್ಲ. "ಹಸಿವೆ ನೀನು ನಿಲ್ಲು ನಿಲ್ಲು; /ತೃಷೆಯೆ ನೀನು ನಿಲ್ಲು ನಿಲ್ಲು; / ನಿದ್ರೆಯೆ ನೀನು ನಿಲ್ಲು ನಿಲ್ಲು; /ಕಾಮವೆ ನೀನು ನಿಲ್ಲು ನಿಲ್ಲು..." (ವ.ಸಂ. ೪೧೫) ಎಂದು ಮಹಾದೇವಿ ಆಜ್ಞೆ ಮಾಡುತ್ತಿರುವುದನ್ನು ಕಂಡಾಗ, ಅವಳು ಈ ಪ್ರವೃತ್ತಿಗಳ ಮೇಲೆ ಹತೋಟಿ ಸಾಧಿಸಿ, ಅವುಗಳನ್ನು ಮೆಟ್ಟಿ ನಿವೃತ್ತಿಯೆಡೆಗೆ ಧಾವಿಸುತ್ತಿರುವುದರ ಅರಿವಾಗುತ್ತದೆ. ಮತ್ತೊಂದು ವಚನ ಜೈನ ಧರ್ಮದ ಪ್ರಭಾವ ಅಕ್ಕಮಹಾದೇವಿಯ ಮನಸ್ಸಿನ ಮೇಲೆ ಪರಿಣಾಮ ಮಾಡಿರಬಹುದೆಂಬ ಸಂಗತಿಗೆ ಪುಷ್ಟಿ ನೀಡುತ್ತವೆ. "ಕೈ ಸಿರಿಯ ದಂಡವ ಕೊಳಬಹುದಲ್ಲದೆ. / ಮೈ ಸಿರಿಯ ದಂಡವ ಕೊಳಲುಂಟೆ? / ಉಟ್ಟಂತಹ ಉಡಿಗೆ ತೊಡಿಗೆಯನೆಲ್ಲ ಸೆಳೆದುಕೊಳ್ಳಬಹುದಲ್ಲದೆ /ಮುಚ್ಚಿರ್ದ ಮುಸುಕಿರ್ದ ನಿರ್ವಾಣವ ಸೆಳೆದುಕೊಳಬಹುದೆ? / ಚೆನ್ನಮಲ್ಲಿಕಾರ್ಜುನದೇವರ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ /ಉಡುಗೆ ತೊಡುಗೆಯ ಹಂಗೇಕೋ ಮರುಳೇ" (ವ.ಸಂ. ೧೮೬). ಉಡಿಗೆ ತೊಡುಗೆಗಳ ಹಂಗು ಬಿಡುವಂತಹ ಪದ್ಧತಿ-ಪಂಥ-ಜೈನ ಧರ್ಮದಲ್ಲಿರುವುದಾದರೂ, ಮಹಿಳೆಯೊಬ್ಬಳು, ಆ ಧರ್ಮದಲ್ಲಿ ಉಡುಗೆ ತೊಡುಗೆಗಳ ಹಂಗು ಬಿಟ್ಟಿದ್ದು ಇದೆಯೇ? ಇದ್ದರೆ ನನಗೆ ತಿಳಿದಿಲ್ಲ. ಬಹುಶಃ ಈ ವಚನದ ಮಾತುಗಳು ಕೌಶಿಕನನ್ನುದ್ದೇಶಿಸಿ ಹೇಳಿದ್ದಾಗಿರ ಬಹುದು ಅಥವಾ ತನ್ನ ಉಡುಗೆ ತೊಡುಗೆಗಳ 'ಸ್ಥಿತಿ'ಯ ಬಗೆಗೆ ಟೀಕಿಸಿದವರನ್ನುದ್ದೇಶಿಸಿಯೂ ಹೇಳಿದವಾಗಿರಬಹುದು. ಈ ವಚನ ಮಹಾದೇವಿಯ ಪಕ್ವ ಮನಸ್ಸನ್ನೂ, ಅವಳ ದಿಟ್ಟ ಆಲೋಚನಾ ವಿಧಾನವನ್ನೂ ಅಭಿವ್ಯಕ್ತಿಸುತ್ತದೆ. ನಿರ್ವಾಣವೆನ್ನುವುದು ಸಹಜ ಸ್ಥಿತಿಯಷ್ಟೇ ಅಲ್ಲ ಅದು ಎಲ್ಲವನ್ನೂ ಮುಚ್ಚಿ ಮುಸುಗಿರುವಂತಹುದು. ಅದು ಮುಚ್ಚಿ ಮುಸುಕಿರುವುದಾದರೂ ಏನನ್ನು? ವ್ಯಕ್ತಿಯ ಒಳಗಿನ ಅಸ್ತಿತ್ವವನ್ನು, ಆತನ ಒಳಗನ್ನು. ಉಟ್ಟಂತಹ ಉಡಿಗೆ ತೊಡಿಗೆಗಳು ಪೂರಾ ಬಾಹ್ಯ ವಸ್ತುಗಳು, ಅವುಗಳನ್ನು ಸೆಳೆದುಕೊಂಡರೂ, ಒಳಗಿಗೆ ರಕ್ಷೆಯಾಗಿ ನಿಲ್ಲುವ ನಿರ್ವಾಣವನ್ನು ಸೆಳೆಯಲಾಗುವುದಿಲ್ಲ. ಬತ್ತಲೆಯನ್ನು ಬತ್ತಲೆ ಮಾಡಲಾದೀತೇ? ನಾಚಿಕೆ ಪಡಬೇಕಾದದ್ದು ಆ ಒಳಗಿನ ಅಸ್ತಿತ್ವದ ಸ್ವರೂಪಕ್ಕೇ ಹೊರತು, ಹೊರಗಿನ ಅಂಗಾಗಗಳಿಗಲ್ಲ. ಬೆತ್ತಲೆ ಎಲ್ಲವನ್ನೂ ಮುಚ್ಚಿ ಮುಸುಗಿದೆ ಎಂಬ ಕಲ್ಪನೆಯೇ ರೋಚಕ ಮತ್ತು ಭವ್ಯ. ಇಂತಹ ಪರಿಪಕ್ವ ಸ್ಥಿತಿ ಬಂದಾಗ ಬೆತ್ತಲೆಯೇ ಚೆನ್ನಮಲ್ಲಿಕಾರ್ಜುನನ ಬೆಳಕಿನುಡುಗೆಯಾಗಿಬಿಡುವ ಸೋಜಿಗವಾಗುತ್ತದೆ. ಬೆಳಕನುಟ್ಟವರಿಗೆ ಬೇರೆ ಉಡುಗೆ ಯಾಕೆ? ಬೆತ್ತಲೆ ಬೆಳಕಾಗಿಬಿಡುವ ಈ ಚೋದ್ಯ ಸಾಮಾನ್ಯನ ಊಹೆಗೆ, ಅನುಭವಕ್ಕೆ ನಿಲುಕದಂತಹದು.

(ಮುಂದುವರಿಯುವುದು)

■ ಎಲ್. ವಿ. ಶಾಂತಕುಮಾರಿ : # ೧೫೮, ರಾಮರಕ್ಷಾ, ೫ನೇ ಮೇನ್, ೫ನೇ ಕ್ರಾಸ್
ಪೂರ್ಣಪ್ರಜ್ಞ ಲೇಔಟ್, ಬನಶಂಕರಿ, ಬೆಂಗಳೂರು-೫೬೦ ೦೮೫ ■

೧. ಒಂದು ವ್ಯಕ್ತಿಚಿತ್ರ

ಆತ ನನ್ನ ಮನೆಯ ಕದ ತಟ್ಟಿದ ನಿನ್ನೆ
ಅಷ್ಟಿಷ್ಟು ಮುದುಡಿದ ಕೆಂದೊಗಟೆ
ಒಳಗಿಷ್ಟು ಸವೆದ ತಿರುಳೊಳಗೆ
ಹದಿನಾರು ಹದಿನೆಂಟರ ಮನಸು
ಒಮ್ಮೊಮ್ಮೆ ಹೊಟ್ಟೆ ಹಸಿದ ಭಿಕ್ಷುಕ
ಕೆಲವೊಮ್ಮೆ ಯಾರ ಕದ ತಟ್ಟಲೆಂಬ ತಿರುಕ
ಆದರೂ ಮನ ದೊಡ್ಡದಂತೆ
ತೆರೆದ ಹೃದಯ ವಿಶಾಲವಂತೆ
ಅಂತೆ ಮೊನ್ನೆ ತಾನೆ ಬೈ-ಪಾಸಾಗಿದೆ
ಆದರೇನಂತೆ, ಅಲ್ಲಿ
ದೋಚಲಾಗದ ಕದಿಯಲಾಗದ ರೋಗ-ರುಜಿನ ಬಾರದ
ವಸ್ತು ಒಂದಿದೆ. ಸವಕಳಿಯಾಗದೇ ಇದ್ದುದಿದ್ದಂತೇ
ಬೆಳೆದು ಸದೃಢವಾಗಬೇಕೆಂಬ ಆಸೆ
ಚರಾಚರಗಳೆಲ್ಲ ನಿತ್ಯ ಹಸುರ ನಗೆ ಸೂಸಬೇಕಂತೆ
ಸುತ್ತಲ ಕಣ್ಣೀರು-ಬಿಸಿಯುಸಿರು ತನ್ನೊಳಗೆ ಸೇರಬೇಕಂತೆ
ಎಲ್ಲ ಅತೃಪ್ತಿ ಕಲಸಿ
ಅಲ್ಪ ತೃಪ್ತಿ ಕೈತುತ್ತು ಹಂಚಬೇಕಿದೆಯಂತೆ
ಹರಿದ ಸೆರಗುಗಳಿಗೆಲ್ಲ ತೇಪೆ ಹೊಲಿಯುತ್ತ
ಹಳದೀ ಕಣ್ಣುಗಳಿಗೆ ಕಾಡಿಗೆ ಹಚ್ಚುತ್ತ
ಮಾತನಾಡದ ಮಮತೆಗಳಲ್ಲಿ
ಮಾತೆಯರೇ ಕಾಣುವಂತಾಗಬೇಕಂತೆ
ಕೆಸರ ಕೊಳದಲ್ಲಿಳಿದು ತಿಳಿ ನೀರ ಬೇರ್ಪಡಿಸಿ
ಒಣಗಿದ ಕೊಳವನೇ ಹೊಲ ಮಾಡಿ ಬೆಳೆ ಪಡೆಯಬೇಕಿದೆಯಂತೆ
ಅಂತೆಯೇ ಆತ ಮನೆ-ಮನೆಗಳ ಕದ ತಟ್ಟುತಿದ್ದಾನೆ
ತೆರೆದಿಡಿ ಕದ ತೆರೆದಿಡಿ
ನಾಳೆ ಬಂದಾನು ನಿಮ್ಮ ಮನೆಗೂ!

೨. ಬುನಾದಿ

ನನಗೆ ಆ ಊರು ಸೇರಬೇಕಿತ್ತು
ಮಧ್ಯ ನದಿ ಪ್ರವಾಹ ಗೊತ್ತಿಲ್ಲ ಈಜು
ಧುಮುಕುತ್ತೇನೆ ಬಿದಿರು ರೆಂಬೆಯ ಹಿಡಿದು
ಮುಳುಗೇಳಿ ಕೈಕಾಲು ಬಡಿಯುತ್ತ ಈಜು ಕಲಿಯುತ್ತ

ಈಜುತ್ತ ದಾಟುತ್ತೇನೆ ಆಗ ದಡಕೆ ಆ
ರೆಂಬೆ ಕೊಳಲಾಗಿ ಕೊಳಲು ನಾದಾಗಿ
ಮೊಳಕೆಯೊಡೆಯಲು ಎದೆಗೂಡಿನಲಿ
ಕೂಡುವದು ಬೆಚ್ಚಗೆ ತತ್ತಿಯಾಗಿ
    ಬರಬೇಕಿತ್ತು ಹಿಂತಿರುಗಿ ಜತೆಗೆ ಆಬಾಲವೃದ್ಧಾದಿ
    ಆ ನದಿ ದಾಟುವದು ಹೇಗೆ? ನಾವು ಅಂಬಿಗರಲ್ಲ ಯಾರೂ.
    ಕಲ್ಲು ಬಂಡೆಗಳನ್ನೆತ್ತಿ, ದಿಮ್ಮಿ ದಿಂಡುಗಳ ಸುತ್ತಿ
    ಸೇತು ಕಟ್ಟುಕಟ್ಟುತ್ತಲೆ ಬರುತ್ತೇವೆ ಈಚೆ ದಡದತ್ತ
    ಸಂಭ್ರಮದಿಂದ ಆಗ ಗೊತ್ತಾದದ್ದು
    ನನ್ನೆದೆಯ ಗೂಡಲ್ಲಿದ್ದ ತತ್ತಿಯೇ ಕಲ್ಲು ಬಂಡೆ ದಿಮ್ಮಿಯಾದದ್ದು
ಈಗ, ಆ ನದಿಯೇ ನನ್ನೊಳಗೆ ಸೇರಿದೆ
ಮೊಳಕೆಯೊಡೆದ ಕೊಳಲ ದನಿಗೆ
ಹರಡಿಸುತ್ತಿದೆ ನಾದ ತರಂಗ ತರಲತೆ
ನಾದ, ದನಿ-ದನಿ ಏಕತಾನತೆಗೆ
ಕಲ್ಲು ಬಂಡೆ ನವಿಲು ಕೋಗಿಲೆಗಳಾಗಿ ನಲಿದು
ದಿಮ್ಮಿ ದಿಂಡುಗಳ ಮುಗಿಲೋಳಿಯಾಗಿ ಮೆರೆದು
ಸ್ವರ್ಗವಾಗಿದೆ ನಿಸರ್ಗ ಸಮಾಜ ಮೈಮರೆತಿದೆ
ಬೇಕಿಲ್ಲ ನಮಗೀಗ ಈಜು ಊರುಗಳ ಗೋಜಲು.

೩. ತಲೆದಿಂಬು

ನನ್ನೆಲ್ಲ ದುಃಖ ತಳಮಳ ಅಷ್ಟಿಷ್ಟು ಸಂತಸ
ದಿನವಿಡಿ ಹಿಗ್ಗಿಸಿ - ಕುಗ್ಗಿಸಿ ಓಡಿಸಿ ನಡೆಸಿ ದಣಿಸಿ
ಕೊಂಚ ಕೂಡ್ರಿಸಿ ಹಗಲೋ ರಾತ್ರಿಯೋ ಅಂತೂ
ಕಣ್ಮುಚ್ಚಿ ಹಾಸಿಗೆ ಮೇಲೆ ಮೈ ಚೆಲ್ಲಿದಾಗ
'ಹಾಗೆಲ್ಲ ಚೆಲ್ಲಬೇಡ ಮೆತ್ತಗೆ ಮಲಗಿಸು'
ಎಂದು ಯಾರಾದರೂ ಅನ್ನಬೇಕೆನಿಸುವದು.
ಉಮ್ಮಳಿಕೆ ಹೆಚ್ಚಾದುದೇ ತಡ
ಸಹಾಯಕ್ಕೆ ಧಾವಿಸಿತ್ತು ತಾಯಿಯಂತೆ ಸಖಿಯಂತೆ
ತಾಯಿ ಸೆರಗು ಒದ್ದೆಯಾದಂತೆ
ನನ್ನೆಲ್ಲ ದುಃಖ ಹೀರಿತ್ತು ಗುಟ್ಟಾಗಿ
ನನ್ನದೇ ತಲೆ
ದಿಂಬು.

■ ವಿದ್ಯಾಧರ ಮುತಾಲಿಕ ದೇಸಾಯಿ : ಅಧ್ಯಕ್ಷರು, ಮುಂಬೆಳಕು ಕನ್ನಡ ಬಳಗ, # ೧೦, ೧ ನೇ ಮಹಡಿ, ದುರ್ಗಾನಿಕೇತನ ನಾಯ್ಕ ಬಿಲ್ಡಿಂಗ್, ರೇಲ್ವೆ ಸ್ಟೇಶನ್ ಹತ್ತಿರ, ಠಾಕುರ್ಲಿ(ಪೂ)-೪೨೧ ೨೦೧ ■

ಜನಪ್ರಿಯ ರಂಗಭೂಮಿ ಯಾಕಾಗಬಾರದು? — ಪ್ರಸನ್ನ

ಇತ್ತೀಚೆಗೆ (೧೯-೧೧-೨೦೦೬) ನಾನು ಧಾರವಾಡದಲ್ಲಿ 'ಕೋರ್ಟ್ ಮಾರ್ಶಲ್' ಎಂಬ ಸರಳವಾದ ಹಾಗೂ ಜನಪ್ರಿಯವಾದ ನಾಟಕವೊಂದನ್ನು ನೋಡಿದೆ. ಸದಾನಂದ ಸುವರ್ಣ ಅವರು ನಿರ್ದೇಶಿಸಿದ್ದ ಆ ನಾಟಕವನ್ನು ಮಂಗಳೂರಿನ ಸದಾನಂದ ಸುವರ್ಣ ಪ್ರತಿಷ್ಠಾನ ತಂಡದವರು ಅಭಿನಯಿಸಿದ್ದರು. ಸುವರ್ಣರ ಈ ರಂಗಕೃತಿಯು ಈಗಾಗಲೇ ಹಲವಾರು ಯಶಸ್ವಿ ಪ್ರದರ್ಶನಗಳನ್ನು ಕಂಡಿದೆಯಂತೆ. 'ಕೋರ್ಟ್ ಮಾರ್ಶಲ್' ಹಿಂದೀ ಮೂಲದ ಒಂದು ಸರಳ ನಾಟಕ. ಈ ನಾಟಕವನ್ನು ಬರೆದವರು ಸ್ವದೇಶ್ ದೀಪಕ್ ಎಂಬ ಒಬ್ಬ ಲೇಖಕ. ಈತ ಉತ್ತರ ಭಾರತದ ಮೀರತ್ ಸೇನಾ ಕಂಟೋನ್‌ಮೆಂಟ್ ಕಾಲೇಜ್ ಒಂದರಲ್ಲಿ ನೌಕರಿ ಮಾಡುತ್ತಿದ್ದರಂತೆ. ಹಾಗಾಗಿ 'ಕೋರ್ಟ್ ಮಾರ್ಶಲ್' ನಾಟಕಕ್ಕೆ ಬೇಕಿರುವ ಸೈನಿಕ ಬದುಕಿನ ಎಲ್ಲ ವಿವರಗಳೂ ಅವರಿಗೆ ಪರಿಚಿತವಾದದ್ದು.

ನಾನಾಗಲೇ ಹೇಳಿದ ಹಾಗೆ 'ಕೋರ್ಟ್ ಮಾರ್ಶಲ್' ಒಂದು ಜನಪ್ರಿಯ ನಾಟಕ. ಈ ದೇಶದ ಯಾವುದೇ ಭಾಷೆಯ, ಯಾವುದೇ ನಾಟಕ ಸ್ಪರ್ಧೆಗೆ ಹೋದರೂ, ಅಲ್ಲಿ ನಿಮಗೆ 'ಕೋರ್ಟ್ ಮಾರ್ಶಲ್' ನಾಟಕದ ಒಂದಲ್ಲ ಒಂದು ಪ್ರದರ್ಶನ ಕಣ್ಣಿಗೆ ಬಿದ್ದೀತು, ಅಷ್ಟು ಜನಪ್ರಿಯವಿದು. ಬಹುಶಃ ಇಂಗ್ಲಿಷ್ ಮೂಲದ ಯಾವುದೋ ಒಂದು ಸಸ್ಪೆನ್ಸ್ ಥ್ರಿಲ್ಲರ್‌ನಿಂದ ಸ್ಫೂರ್ತಿ ಪಡೆದಿರಬೇಕು 'ಕೋರ್ಟ್ ಮಾರ್ಶಲ್' ಎಂದುಕೊಂಡು ಕೊಂಚ ಅಸಡ್ಡೆಯಿಂದಲೇ ನಾನು ನಾಟಕ ನೋಡಲು ಹೋದೆ.

ನಾಟಕ ನೋಡಲು ಹೋದದ್ದು ಮತ್ತೊಂದು ಕಾರಣವೂ ಇತ್ತು. ಸಿದ್ದಲಿಂಗ ಪಟ್ಟಣಶೆಟ್ಟಿ ಯವರು ಈ ನಾಟಕವನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದಾರೆ. ಅವರ ಸ್ನೇಹದ ಬಲವಂತಕ್ಕೆ ಹೋದೆ ಎಂದರೂ ನಡೆದೀತು. ಪಟ್ಟಣಶೆಟ್ಟರಿಗೆ ಒಂದು ದೌರ್ಬಲ್ಯವಿದೆ. ಅನೇಕ ಸಲ ಅವರು ಮುಲಾಜಿಗೆ ಬಿದ್ದು ಬ್ಯಾಡದ ಕೆಲಸಗಳನ್ನೆಲ್ಲಾ ಮಾಡುತ್ತಿರುತ್ತಾರೆ. ಅವರ ವಿಮರ್ಶಾ ಪ್ರಜ್ಞೆ ಹಾಗೂ ಭಾಷೆಯ ಬಗೆಗಿನ ಅವರ ಗಾಢವಾದ ಪ್ರೀತಿಯ ಬಗ್ಗೆ ಗೊತ್ತಿದ್ದೂ, ಮುಲಾಜಿಗೆ ಬೀಳುವ ಅವರ ಪ್ರವೃತ್ತಿಯಿಂದಾಗಿ ನನಗೆ ಅನುಮಾನಗಳು ಕಾಡುತ್ತಿರುತ್ತದೆ. ಯಾವುದೋ ಶಿಷ್ಯನ ಬಲವಂತಕ್ಕಾಗಿ ಈ ಸರಳ ನಾಟಕವನ್ನು ಅನುವಾದಿಸುವ ಸಾಹಸಕ್ಕೆ ಅವರು ಕೈ ಹಾಕಿರಬೇಕು ಎಂಬ ಅನುಮಾನ ನನಗೆ. ಆದರೆ ಅಂದಿನ ನಾಟಕ ನನಗೆ ಹಿಡಿಸಿತು. ಅಂದು ಧಾರವಾಡದ ಸೃಜನಾ ರಂಗಮಂದಿರದಲ್ಲಿ ನನ್ನೊಟ್ಟಿಗೆ ನಾಟಕ ನೋಡಿದ, 'ಧಾರವಾಡ ಉತ್ಸವ'ದ ಅಂಗವಾಗಿ ಉಚಿತ ಪ್ರವೇಶ ಪಡೆದು ಬಂದಿದ್ದ, ಮಿಸಳಬಾಜಿ ಪ್ರೇಕ್ಷಕರಿಗೂ ಸಹ ಅಂದಿನ ಪ್ರದರ್ಶನ ಹಿಡಿಸಿತ್ತು. ಅದೇ ಸಂಜೆ ರಂಗಾಯಣದ ಕಲಾವಿದರು ಅಭಿನಯಿಸಿದ ಆ್ಯಂಟನ್ ಚೆಕಾಫ್‌ನ 'ಸೀಗಲ್' ನಾಟಕದ ಪ್ರದರ್ಶನಕ್ಕಿಂತ ಹೆಚ್ಚಾಗಿ ಈ ಸರಳ ನಾಟಕ ಪ್ರೇಕ್ಷಕರ ಮನಸ್ಸನ್ನು ಗೆದ್ದಿತ್ತು. ರಂಗಾಯಣ ಒಂದು ಹೆಸರಾಂತ ವೃತ್ತಿನಿರತ ತಂಡ, ಚೆಕಾಫ್ ವಿಶ್ವವಿಖ್ಯಾತ ನಾಟಕಕಾರ, ನಾಟಕವನ್ನು ನಿರ್ದೇಶಿಸಿದ ಬಹರುಲ್ ಇಸ್ಲಾಮ್ ಅಸ್ಸಾಮಿನ ಪ್ರತಿಭಾವಂತ ರಂಗನಿರ್ದೇಶಕ, ಚೆಕಾಫ್‌ನ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ್ದವರು ಕನ್ನಡದ ಹೆಸರಾಂತ ಕವಯಿತ್ರಿ ಹೇಮಾ ಪಟ್ಟಣಶೆಟ್ಟಿಯವರು. ಆದರೂ 'ಕೋರ್ಟ್ ಮಾರ್ಶಲ್' ಗೆದ್ದಿತ್ತು.

‘ಕೋರ್ಟ್ ಮಾರ್ಶಲ್’ ನಾಟಕ ಪ್ರದರ್ಶನ ಅಚ್ಚುಕಟ್ಟಾಗಿತ್ತು. ನಟನೆ ಕೊಂಚ ಹೆಚ್ಚೇ ಅನ್ನುವಷ್ಟು ನಾಟಕೀಯವಾಗಿತ್ತು. ಭಾವುಕತೆ ಹಾಗೂ ಮ್ಯಾನರಿಸಂಗಳು ಧಾರಾಳವಾಗಿದ್ದವು. ಜನಪ್ರಿಯ ರಂಗಭೂಮಿಯ ಮೂಲದ್ರವ್ಯ ಎನ್ನಬಹುದಾದ ರೋಚಕ ಕಥಾವಸ್ತು, ಕುತೂಹಲ ಉಳಿಸಿಕೊಳ್ಳುವ ನಾಟಕದ ಅಂತ್ಯ, ಗಟ್ಟಿ ಮೆಸೇಜ್, ನಾಟಕೀಯ ತಿರುವುಗಳು ಎಲ್ಲವೂ ಇದ್ದವು ಆ ನಾಟಕದಲ್ಲಿ. ಯಾಕಿರಬಾರದು?

ಇದು ನನ್ನನ್ನೇ ನಾನು ಕೇಳಿಕೊಂಡ ಪ್ರಶ್ನೆ. ಯಾಕಿರಬಾರದು? ನಾಟಕ ಕೃತಿಯೊಂದು ಸರಳವಾಗಿ ಹಾಗೂ ಕೊಂಚ ಭಾವುಕವಾಗಿ ಕತೆ ಹೇಳಿದರೆ ಅಂತಹ ಕೃತಿಯ ವಿಶ್ವಾಸಾರ್ಹತೆಯ ಬಗ್ಗೆ ನಾವು ಅನುಮಾನಪಡಬೇಕೆ? ನಾಟಕ ನೋಡುತ್ತಿರುವಾಗ ಎರಡು ಹನಿ ಕಣ್ಣೀರು ಉದುರಿದರೆ ನಾವು ಸಿನಿಕರಾಗಬೇಕೆ? ಈವರೆಗೆ ಆಧುನಿಕ ರಂಗಭೂಮಿಯ ಹೆಸರಿನಲ್ಲಿ ನಾವು ಮಾಡಿದ್ದಾದರೂ ಏನು? ಬೇಡದ ಸಂಕೇತಗಳು, ಬೇಡದ ಅನುಮಾನಗಳು, ಏಕಾಕಿತನ, ಮಧ್ಯಮ ವರ್ಗದ ವ್ಯರ್ಥಾಲಾಪ, ಜಾನಪದದ ಹೆಸರಿನಲ್ಲಿ ಪೋಲಿ ಮಾತುಗಳ ಪ್ರೋಕ್ಷಣೆ ಇಷ್ಟೇ ತಾನೆ? ಕಡೆಯಲ್ಲಿ ನಮಗೆ ಸಿಕ್ಕಿದ್ದಾದರೂ ಏನು? ಮಧ್ಯಮ ವರ್ಗದ ಪ್ರೇಕ್ಷಕರೂ ಸಹಿತ ನಮ್ಮನ್ನು ಕೈಬಿಟ್ಟು ನಡೆದರಲ್ಲವೆ? ಆಧುನಿಕ ರಂಗಭೂಮಿ ಹಾಗೂ ಸಾಹಿತ್ಯಗಳನ್ನು ಸಾರಾಸಗಟಾಗಿ ತಿರಸ್ಕರಿಸಬೇಕೆಂದು ನನ್ನ ಮಾತಿನ ಅರ್ಥವಲ್ಲ. ಆದರೆ ಅನುಮಾನದೊಟ್ಟಿಗೆ ನಂಬಿಕೆ, ಒಂಟಿತನದೊಟ್ಟಿಗೆ ಸಮಾಜಮುಖಿಯಾಗುವ ಯತ್ನ, ನಗರಜೀವನದೊಟ್ಟಿಗೆ ಗ್ರಾಮಜೀವನವನ್ನು ಅರಿಯುವ ಬಯಕೆ, ಮಾಸ್ತಿಯವರ ಸರಳತೆ, ಕುವೆಂಪು ಅವರ ಆದರ್ಶ, ಕಾರಂತರ ಕುತೂಹಲ, ಬೇಂದ್ರೆಯವರ ಆಟ, ಇವೂ ಇರಬೇಕಲ್ಲವೆ ರಂಗಕೃತಿಗಳಲ್ಲಿ?

‘ಕೋರ್ಟ್ ಮಾರ್ಶಲ್’ ನಾಟಕದ ಯಶಸ್ಸಿರುವುದು ಅದರ ವಸ್ತುವಿನಲ್ಲಿ. ಒಬ್ಬ ಸಾಧಾರಣ ಪೇದೆ, ಕಾವಲಿಗೆ ನಿಂತಿದ್ದವನು, ವಿನಾಕಾರಣವಾಗಿ ಇಬ್ಬರು ಹಿರಿಯ ಅಧಿಕಾರಿಗಳ ಮೇಲೆ ಗುಂಡು ಹಾರಿಸುತ್ತಾನೆ. ಒಬ್ಬ ಅಧಿಕಾರಿ ಸ್ಥಳದಲ್ಲಿಯೇ ಮೃತನಾಗುತ್ತಾನೆ. ಮತ್ತೊಬ್ಬ ಬದುಕುಳಿಯುತ್ತಾನೆ. ಸೈನಿಕ ನ್ಯಾಯಾಲಯದಲ್ಲಿ ಪೇದೆಯ ವಿರುದ್ಧ ಕೋರ್ಟ್ ಮಾರ್ಶಲ್ ನಡೆಯುತ್ತದೆ. ಕೋರ್ಟ್ ಮಾರ್ಶಲ್ ಮುಂದುವರಿದಂತೆ ಪೇದೆಯ ಜಾತಿ ನಮ್ಮ ಗಮನಕ್ಕೆ ಬರುತ್ತದೆ, ಜಾತಿಯ ಕಾರಣಕ್ಕಾಗಿ ಆತ ಅನುಭವಿಸಿದ ಮಾನಸಿಕ ಹಿಂಸೆ ಬಯಲಿಗೆ ಬರುತ್ತದೆ. ಆತನೊಬ್ಬ ಸರಳ ಮನುಷ್ಯ, ಶಿಸ್ತಿನ ಸಿಪಾಯಿ ಹಾಗೂ ಶ್ರೇಷ್ಠ ಕ್ರೀಡಾಪಟು ಎಂಬ ಸಂಗತಿ ಗಮನಕ್ಕೆ ಬರುತ್ತದೆ. ಆತನ ವಿರುದ್ಧ ಎತ್ತಿದ ಆರೋಪದ ಬೆರಳು ನಿಧಾನವಾಗಿ ಆತ ಕೊಲ್ಲಲೆತ್ನಿಸಿದ ಅಧಿಕಾರಿಯತ್ತ ತಿರುಗುತ್ತದೆ. ಅಧಿಕಾರಿಯ ಮೇಲ್ವರ್ಗ, ಮೇಲ್ಜಾತಿ, ಮೇಲರಿಮೆ, ಅಹಂಕಾರ, ಕ್ರೌರ್ಯ... ಇತ್ಯಾದಿಗಳು ಮೇಲೆದ್ದು ಬಂದು ಬಯಲಾಗುತ್ತವೆ. ತುಂಬ ರೋಚಕವಾದ ರೀತಿಯಲ್ಲಿ ನಾಟಕವು ಅಂತ್ಯ ಕಾಣುತ್ತದೆ.

ಇತ್ತೀಚಿನ ವರೆಗೆ ಮುಂಬಯಿಯಲ್ಲಿ ವಾಸಿಸುತ್ತಿದ್ದ ಸುವರ್ಣರನ್ನು ನಾನು ‘ಚೋಮನ ದುಡಿ’ ಚಲನಚಿತ್ರದ ನಿರ್ಮಾಪಕರು ಎಂದಷ್ಟೆ ಬಲ್ಲೆ. ಒಮ್ಮೆಗೆ ಎರಡೆರಡು ಕಾರಂತರನ್ನು (ಕಾದಂಬರಿಯ ಕರ್ತೃ ಶಿವರಾಮ ಕಾರಂತ ಹಾಗೂ ಚಿತ್ರ ನಿರ್ದೇಶಕ ಬಿ. ವಿ. ಕಾರಂತ) ಅರ್ಥಾತ್ ಎರಡೆರಡು ವಿಪರೀತ ಪ್ರತಿಭೆಗಳನ್ನು ಈ ಸಣಕಲ ಮನುಷ್ಯ ಅದು ಹೇಗೆ ನಿರ್ಮಾಪಕರಾಗಿ ನಿಭಾಯಿಸಿದ್ದರೆಂದು ನನಗೆ ಕುತೂಹಲವಿತ್ತು. ಇತ್ತೀಚಿನ ದಿನಗಳಲ್ಲಿ

ಬೆಂಗಳೂರಿನ ಎಸ್‌ಎಮ್‌ಎಚ್ ಹೋಟೆಲಿನಲ್ಲಿ ಸುವರ್ಣರು ಅಪರೂಪಕ್ಕೊಮ್ಮೆ ಎದುರಾಗುತ್ತಾರೆ; ವಿಪರೀತ ನಾಚಿಕೆಯ ಮನುಷ್ಯ, ಎರಡು ಮಾತೆಂದರೆ ಎರಡೇ ಮಾತು, ಹೆಚ್ಚಿಲ್ಲ ಕಡಿಮೆಯಿಲ್ಲ. ಇಷ್ಟಾದರೂ ಸದಾನಂದ ಸುವರ್ಣರ ರಂಗಭೂಮಿಯ ಗೀಳು ನನಗೆ ತಿಳಿದಿದ್ದಿಲ್ಲ.

ನಾಟಕದ ಮಾರನೆಯ ದಿನ ಸುವರ್ಣರೊಟ್ಟಿಗೆ ಮಾತನಾಡುತ್ತಿದ್ದಾಗ, ಅವರ ಬಗ್ಗೆ ಹಲವು ಕುತೂಹಲಕರ ಸಂಗತಿಗಳು ಗಮನಕ್ಕೆ ಬಂದವು. ಸುವರ್ಣರು ಐವತ್ತರ ದಶಕದಲ್ಲಿಯೇ ಮುಂಬಯಿನ ರಂಗ ತರಬೇತಿ ಶಾಲೆಯೊಂದರಲ್ಲಿ ವೈಜ್ಞಾನಿಕವಾದ ತರಬೇತಿ ಪಡೆದಿದ್ದರಂತೆ. ಯಥಾಪ್ರಕಾರ ಎಲ್ಲ ದಕ್ಷಿಣ ಕನ್ನಡದವರಂತೆ ಸುವರ್ಣರೂ ಮುಂಬಯಿಗೆ ಹೋದವರು, ರಾತ್ರಿ ಶಾಲೆಯಲ್ಲಿ ಕಲಿತವರು, ನಂತರ ಕಲಿಸಿದವರು ಹಾಗೂ ನಾಟಕದ ಗೀಳನ್ನು ಅಂಟಿಸಿಕೊಂಡವರು. ರಂಗಭೂಮಿಯ ಬಗ್ಗೆ ಸುವರ್ಣರಿಗಿರುವ ವಿಚಾರಗಳಿಗೂ, ಮುಂಬೈ ಚಿತ್ರರಂಗವನ್ನು ಅದರ ಆರಂಭದ ದಿನಗಳಲ್ಲಿ ಕಟ್ಟಿ ಬೆಳೆಸಿದ ಕೆ. ಎ. ಅಬ್ಬಾಸ್, ಬಲರಾಜ್ ಸಾಹ್ನಿ, ಕೈಫಿ ಆಜ್ಮಿ ಇತ್ಯಾದಿ ಕಲಾವಿದರಿಗಿದ್ದ ವಿಚಾರಗಳಿಗೂ ಹಲವು ಸಾಮ್ಯಗಳಿವೆ. ಸದಾನಂದ ಸುವರ್ಣರು ರಾಜಕೀಯವಾಗಿ ಎಡಪಂಥೀಯರಿರಲಿಕ್ಕಿಲ್ಲ. ಅದು ಮುಖ್ಯವೂ ಅಲ್ಲ. ಆದರೆ ಆತ ಒಬ್ಬ ಸಮಾಜಮುಖಿಯಾದ ರಂಗನಿರ್ದೇಶಕರು. ಮಂಗಳೂರಿನಲ್ಲಿ ನೆಲಸಿ, ರಂಗ ತಂಡ ಕಟ್ಟಿಕೊಂಡು, ಚಟುವಟಿಕೆ ನಡೆಸುತ್ತಿದ್ದಾರೆ.

ಇನ್ನು ಪಟ್ಟಣಶೆಟ್ಟರ ಅನುವಾದದ ಬಗ್ಗೆ ಒಂದೆರಡು ಮಾತನ್ನು ಇಲ್ಲಿ ಹೇಳದಿದ್ದರೆ ತಪ್ಪಾಗುತ್ತದೆ. ಕನ್ನಡದ 'ಕೋರ್ಟ್ ಮಾರ್ಶಲ್' ಯಶಸ್ವಿಯಾಗುವಲ್ಲಿ ಪಟ್ಟಣಶೆಟ್ಟರ ಕೊಡುಗೆ ದೊಡ್ಡದು. ಅದೊಂದು ಬೇರೆ ಭಾಷೆಯ ನಾಟಕ ಎಂದು ಅನ್ನಿಸುವುದೇ ಇಲ್ಲ. ಕನ್ನಡದ ನುಡಿಕಟ್ಟು, ಸಂದರ್ಭಗಳು, ಕನ್ನಡಿಗರ ಸಣ್ಣಪುಟ್ಟ ವಿವರಗಳನ್ನು ನಾಟಕದಲ್ಲಿ ವಿಪುಲವಾಗಿ ಬಳಸಿಕೊಂಡು, ಅದೊಂದು ಸ್ವತಂತ್ರ ಕೃತಿಯೇ ಹೌದು ಎನ್ನುವಷ್ಟು ಮುತುವರ್ಜಿಯಿಂದ ನಾಟಕವನ್ನು ಅನುವಾದಿಸಿದ್ದಾರೆ ಅವರು. ಪಟ್ಟಣಶೆಟ್ಟರು ಸ್ವತಂತ್ರವಾದ ಕನ್ನಡ ನಾಟಕಗಳನ್ನು ಬರೆಯಬೇಕು. ಅನುವಾದಗಳನ್ನು ಬೇರೆಯವರೂ ಮಾಡಿಯಾರು.

'ಕೋರ್ಟ್ ಮಾರ್ಶಲ್' ಉತ್ತಮ ಸಾಹಿತ್ಯ ಕೃತಿಯೆ? ಗೊತ್ತಿಲ್ಲ. ಅದು ಅಷ್ಟೊಂದು ಅವಸರದಲ್ಲಿ ನಿರ್ಧಾರವಾಗಬೇಕಾಗ ಸಂಗತಿಯೂ ಅಲ್ಲ. ರಂಗಭೂಮಿಗೆ ಸಾಹಿತ್ಯಿಕ ವ್ಯಸನ ಅತಿಯಾಗಬಾರದು. ಸಮಾಜಮುಖಿಯಾದ ಹಾಗೂ ಜನರನ್ನು ರಂಜಿಸಬಲ್ಲ ರಂಗಕೃತಿಗಳನ್ನು ಕಟ್ಟುತ್ತ ಹೋಗಬೇಕು ಕನ್ನಡ ರಂಗಭೂಮಿ. ಮಣ್ಣಿನ ಫಲವತ್ತತೆಯನ್ನು ಬೆಳೆಸುವ ಕೆಲಸವದು. ರಂಗಭೂಮಿ ಫಲವತ್ತಾದರೆ ಮಾತ್ರ ಉತ್ತಮ ಸಾಹಿತ್ಯ ಕೃತಿಗಳೆಂಬ ಬೃಹತ್ ವೃಕ್ಷಗಳು ಅಲ್ಲಿ ಬೆಳೆದಾವು. ಕಾಡುಗಿಡಗಳು, ಕಳೆಗಳು, ಹುಲ್ಲು, ಮುಳ್ಳುಕಂಟಿ ಇತ್ಯಾದಿಗಳಿಂದ ಆವೃತ್ತವಾದ ದಟ್ಟ ಪರಿಸರ ನಿರ್ಮಾಣವಾಗದೆ ತೇಗ ಬೀಟೆ ಹಲಸು ಹೆಬ್ಬಲಸಿನ ಮರಗಳನ್ನು ಬೆಳೆಸುತ್ತೇವೆ ಎಂಬ ಮಾತು ವ್ಯರ್ಥ ಸಾಹಸವಾಗುತ್ತದೆ ಅಷ್ಟೆ. ಆಧುನಿಕ ರಂಗಭೂಮಿ ಮಾಡಿದ ಸೋಷಿಯಲ್ ಫಾರೆಸ್ಟರಿಯ ಯತ್ನಗಳು ಇರುವ ಕಾಡನ್ನು ಕಡಿದು ನೀಲಗಿರಿ ಮರಗಳನ್ನು ನೆಡುವ ಯತ್ನವು, ಕಾಗದ ಕಾರ್ಖಾನೆಗಳಿಗೆ ಲಾಭದಾಯಕವೇ ಹೊರತು ಈ ನೆಲದ ಮಣ್ಣಿಗಲ್ಲ.

■ ಪ್ರಸನ್ನ : ಕವಿಕಾವ್ಯ ಟ್ರಸ್ಟ್, ಹೊನ್ನೇಸರ, ಹೆಗ್ಗೋಡು-೫೭೭ ೪೧೭ (ಸಾಗರ-ಶಿವಮೊಗ್ಗೆ) ■

ನನ್ನ ಶಾಲಾ ಗುರುಗಳು — ಪರಮೇಶ್ವರ ಹೆಗಡೆ

ನಾನು ಪ್ರಾಥಮಿಕ ಶಾಲೆಯಲ್ಲಿ ಐದನೇ ವರ್ಗ ಓದಿ ಮುಗಿಸುವ ಅವಧಿ ಎಂದರೆ ನನಗೆ ಕತ್ತಲೆಯ ದಿನಗಳು. ನಾನು ಏನನ್ನು ಓದಿದೆ, ನನಗೆ ಏನು ಕಲಿಸಿದರು– ಇದಾವುದೂ ನನಗೆ ನೆನಪಿಲ್ಲ. ಆಗ ನಡೆದ ಒಂದೆರಡು ಘಟನೆಗಳು ಮಾತ್ರ ನನ್ನ ಸ್ಮೃತಿಪಟಲದಲ್ಲಿ ಅಚ್ಚಳಿಯದೆ ಇವೆ.

ನಮ್ಮ ಮನೆಯಲ್ಲಿ ಮಂಗಳೂರು ಮಾಸ್ತರ ಎಂಬ ಮೇಧಾವಿ ಶಿಕ್ಷಕರಿದ್ದರು. ಅವರನ್ನು ಕಂಡರೆ ನಮಗೆಲ್ಲ ಭಯ ಹಾಗೂ ಭಕ್ತಿ. ಪ್ರತಿ ದಿನ ಶಾಲೆಗೆ ಹೋಗುವಾಗ ಅವರ ಕೈ ಹಿಡಿದುಕೊಂಡು ನಾನು ಶಾಲೆಗೆ ಹೋಗುತ್ತಿದ್ದೆ. ನಾನು ಒಂದನೇ ವರ್ಗದಲ್ಲಿದ್ದಾಗ, ನಾನು ಹಾಗೂ ನನ್ನ ಗೆಳೆಯ ಒಂದು ಸಣ್ಣ ಗಿಡವನ್ನೇರಿ ಕುಳಿತಿದ್ದೆವು. ನನ್ನ ಗೆಳೆಯ ನನಗೆ ಸಿಟ್ಟು ಬರುವಂಥ ಎಂಥದೋ ಮಾತನ್ನು ಹೇಳಿದ. ಕೂಡಲೇ ನಾನು ಅವನನ್ನು ಗಿಡದಿಂದ ನೂಕಿ ಕೆಳಗೆ ಕೆಡವಿದ್ದೆ. ಈ ತಪ್ಪಿಗಾಗಿ ಮಂಗಳೂರು ಮಾಸ್ತರರು ನನ್ನ ಕಾಲಿಗೆ ತಮ್ಮ ಛಡಿಯಿಂದ ಚೆನ್ನಾಗಿ ಏಟು ಕೊಟ್ಟಿದ್ದರು. ನಾನು ಎರಡನೇ ವರ್ಗಕ್ಕೆ ಬಂದಾಗ ಅವರು ವರ್ಗಾವಣೆ ಹೊಂದಿ ಬೇರೆಲ್ಲೋ ಹೋಗಿಬಿಟ್ಟಿದ್ದರು. ಅವರೋರ್ವ ಆದರ್ಶ ಶಿಕ್ಷಕರಾಗಿದ್ದರು ಹಾಗೂ ಯಾರೇ ಇನ್‌ಸ್ಪೆಕ್ಟರ್ ಬಂದರೂ ಅವರೇ ಈ ಶಿಕ್ಷಕರಿಗೆ ಅಂಜುತ್ತಿದ್ದರೆಂದು ನಮ್ಮ ಮನೆಯಲ್ಲಿ ಹೇಳುತ್ತಿದ್ದರು.

ನಂತರ ಬಂದವರು ಭಟ್ ಮಾಸ್ತರರು. ಅವರು ಸದಾ ಎಲೆ ಅಡಿಕೆ ಜಗಿಯುತ್ತಲೇ ಇರುತ್ತಿದ್ದರು. ಕಾರಣ ಅವರ ಬಾಯಿಂದ ಕೆಂಪು ರಸ ಸ್ರವಿಸುತ್ತಲೇ ಇರುತ್ತಿತ್ತು. ನಾನು ನನ್ನ ಮನೆಯಲ್ಲಿ ಹಾಗೂ ಗೆಳೆಯರೊಡನೆ ‘ಕವಳದ ಗೊಂಬೆ ಮಾಸ್ತರ’ರೆಂದು ಅವರನ್ನು ಕರೆಯುತ್ತಿದ್ದೆ. ಒಂದು ದಿನ ನಮಗೆಲ್ಲರಿಗೂ ಪಾಟಿಯ ಮೇಲೆ ಮಗ್ಗಿಯನ್ನು ಬರೆಯಲು ಹೇಳಿ ಅವರು ಕುಳಿತುಕೊಂಡಿದ್ದರು. ಆಗ ಅವರ ಹೆಂಡತಿ (ಹೊಸದಾಗಿ ಮದುವೆಯಾಗಿದ್ದರೆಂದು ತೋರುತ್ತದೆ) ಶಾಲೆಗೆ ಬಂದವಳು ನೇರವಾಗಿ ಹೋಗಿ ಅವರ ತೊಡೆಯ ಮೇಲೆ ಕುಳಿತುಕೊಂಡಳು. ನಮಗೆಲ್ಲ ನಾಚಿಕೆಯಾಯಿತು. ನಾನು ಶಾಲೆಯಲ್ಲಿ ತುಂಟನಾದುದರಿಂದ ಆ ಘಟನೆಯನ್ನು ಎಲ್ಲರ ಮುಂದೂ ಹೇಳುತ್ತಿದ್ದೆ.

ನಮ್ಮೂರಲ್ಲಿ ಕೇವಲ ನಾಲ್ಕನೇ ಕ್ಲಾಸಿನ ವರೆಗೆ ಮಾತ್ರ ಅಂದು ಶಿಕ್ಷಣ ಸಿಗುತ್ತಿತ್ತು. ಐದನೇ ಕ್ಲಾಸಿಗಾಗಿ ನಮ್ಮೂರಿಂದ ಸುಮಾರು ಎರಡು ಮೈಲು ದೂರದ ಯಡಳ್ಳಿಗೆ ನಾವು ಕಾಲ್ನಡಿಗೆಯಲ್ಲಿ ಹೋಗಬೇಕಾಗುತ್ತಿತ್ತು. ಅದು ಗಾಂವಟಿ ಶಾಲೆ. ಅಲ್ಲಿ ರಾ. ನ. ಹೆಗಡೆ ಎಂಬ ಹೆಡ್‌ಮಾಸ್ತರ್. ಅವರ ಕೆಳಗಿದ್ದ ಲಕ್ಷ್ಮೀನಾರಾಯಣ ಭಟ್ಟ ಎಂಬ ಅಸಿಸ್ಟಂಟ್ ಮಾಸ್ತರರು ನಮಗೆ ಕಲಿಸುತ್ತಿದ್ದರು. ಅವರಿಗೆ ಇಂಗ್ಲಿಷ್ ವ್ಯಾಮೋಹ. ಅಂಕಲೆ ಭಾಷಾಂತರ ಪಾಠಮಾಲೆಯನ್ನು ಇಚ್ಛೆ ಇದ್ದವರಿಗೆ ಮಾತ್ರ, ಕಲಿಸುತ್ತಿದ್ದರು. ಮೊದಲನೇ ಪಾಠದಿಂದ ಕೊನೆಯ ಪಾಠದ ವರೆಗೆ ಹಾಗೂ ಕೊನೆಯ ಪಾಠದಿಂದ ಮೊದಲನೇ ಪಾಠದ ವರೆಗೆ ನಾವು ಬಾಯಿಪಾಠ ಮಾಡಿ ಹೇಳಬೇಕಿತ್ತು. ಅವರು ಕಲಿಸಿದ ಹಾಗೂ ಬಾಯಿಪಾಠ ಮಾಡಿಸಿದ

ಭಾಷಾಂತರ ಪಾಠಮಾಲೆ ನನಗೆ ಮುಂದೆ ಅತ್ಯಂತ ಸಹಕಾರಿಯಾಗಿ, ಪ್ರಯೋಜನಕಾರಿಯಾಗಿ ಪರಿಣಮಿಸಿತು. ಒಂದು ದಿನ ಆ ನಮ್ಮ ಮಾಸ್ತರರಿಗೆ ಉತ್ಸಾಹ ಬಂದು ನಮ್ಮೊಡನೆ ಕಬಡ್ಡಿ ಆಡಲು ಬಂದರು. ಕಬಡ್ಡಿ ಕಬಡ್ಡಿ ಎಂದು ನಮ್ಮ ಕೋರ್ಟಿಗೆ ಬಂದಾಗ ನಾನು ಅವರ ಪುನ್ಯಪ್ರವೇಶವನ್ನು ಹಿಡಿದುಬಿಟ್ಟಿದ್ದರಿಂದ ಅವರು ಅಲ್ಲಿ ನಿಲ್ಲಲೇಬೇಕಾಯಿತು. ನಾವು ಗೆದ್ದೆವು. ಆದರೆ ಅವರು ಸಿಟ್ಟು ಮಾಡದೆ ನಕ್ಕು, 'ಎಲಾ ತುಂಟ' ಎಂದು ಹೇಳಿದ್ದು ಇನ್ನೂ ನೆನಪಿದೆ. ಉಳಿದ ವಿಷಯದ ಕಡೆ ನನ್ನ ಗಮನವಿರುತ್ತಿರಲಿಲ್ಲ.

ಐದನೇ ಇಯತ್ತೆಯಲ್ಲಿ ನಾನು ಸ್ವತಃ ಪಾಸಾಗಲಿಲ್ಲ. ನನ್ನನ್ನು, ನನ್ನ ಅಪ್ಪನು ದೊಡ್ಡ ಮನುಷ್ಯನೆಂಬ ಕಾರಣಕ್ಕಾಗಿ, ಮುಂದಿನ ಕ್ಲಾಸಿಗೆ ಎತ್ತಿ ಹಾಕಿದರು. ಆದರೆ ಆರನೇ ಇಯತ್ತೆಯನ್ನು ಕಲಿಯಬೇಕೆಂದರೆ ನಾವು ಆರು ಮೈಲು ದೂರದಲ್ಲಿರುವ ಶಿರಸಿ ಪಟ್ಟಣಕ್ಕೆ ನಡೆದೇ ಬರಬೇಕಾಗಿತ್ತು. ನಮ್ಮ ಮನೆಯವರಿಗೆ ಇದೊಂದು ಸಮಸ್ಯೆಯೇ ಆಯಿತು. ಆ ವೇಳೆಗೆ ಸರಿಯಾಗಿ ಕುಮಟಾ ತಾಲೂಕಿನ ಬೆತ್ತಗೇರಿ ಎಂಬ ಊರಿಂದ ವೆಂಕಟಸುಬ್ಬಾ ಭಟ್ಟ ಎಂಬ ಸಂಸ್ಕೃತ ವಿದ್ವಾಂಸರು ನಮ್ಮ ಮನೆಗೆ ಬಂದರು. ಒಂದೆರಡು ತಿಂಗಳು ಸಮಯ ನಮ್ಮ ಮನೆಯಲ್ಲೇ ಇರುತ್ತಿದ್ದರು. ಅವರು ನನ್ನ ತಂದೆ ಹಾಗೂ ದೊಡ್ಡಪ್ಪನವರಿಗೆ ನನ್ನನ್ನು ತಮ್ಮೂರಿಗೆ ಕರೆದುಕೊಂಡು ಹೋಗಿ ಓದಿಸುವುದಾಗಿ ಹೇಳಿದರು. ಅದರಿಂದ ನಮ್ಮ ಮನೆಯ ಹಿರಿಯರಿಗೆ ಸಮಸ್ಯೆಯಾದ ನನ್ನ ಮುಂದಿನ ಶಿಕ್ಷಣದ ವ್ಯವಸ್ಥೆಯಾದಂತಾಯಿತು. ಅವರು ಊರಿಗೆ ಹೋಗುವಾಗ ತಮ್ಮೊಡನೆ ನನ್ನನ್ನೂ ಕರೆದುಕೊಂಡು ಹೋದರು. ಆದರೆ ಅಲ್ಲಿಗೆ ಹೋಗಿ ಒಂಬತ್ತು ದಿನ ಕಳೆಯುವದರೊಳಗೆ ನಾನು ಮನೆಯ ನೆನಪನ್ನು ತಾಳಲಾರದೆ, ಹಟ ಮಾಡಿ ವಾಪಸ್ ನಮ್ಮ ಮನೆಗೆ ಬಂದುಬಿಟ್ಟೆ. ನನ್ನ ತಂದೆ ಹಾಗೂ ದೊಡ್ಡಪ್ಪನವರಿಗೆ ಅತ್ಯಂತ ಬೇಸರವಾಯಿತು. ದೊಡ್ಡಪ್ಪ ನನ್ನಪ್ಪನೊಡನೆ, 'ಇವನ ಜಾತಕದ ಪ್ರಕಾರ ಇವನಿಗೆ ಶಿಕ್ಷಣ ಚೆನ್ನಾಗಿದೆ ಎಂದು ಗಟ್ಟದ ಕೆಳಗೆ ಕಳಿಸಿದರೆ ಇವನು ವಾಪಸು ಬಂದು ನಮ್ಮ ಆಶೆಯ ಮೇಲೆ ನೀರೆರೆಚಿದ' ಎಂದು ಬೇಸರದಿಂದ ಹೇಳಿದ ಮಾತು ನನ್ನ ಕಿವಿಗಳ ಮೇಲೆ ಬಿದ್ದಿತು. ಮಾರನೇ ದಿನವೇ ನಾನು ಮತ್ತೆ ಬೆತ್ತಗೇರಿಗೆ ಹೋಗುತ್ತೇನೆಂದು ಹಟ ಹಿಡಿದು ತಿರುಗಿ ಹೋದೆ.

ನನಗೆ ಆರನೇ ವರ್ಗದಲ್ಲಿ ಕಲಿಸಿದ ಮಾಸ್ತರರ ಹೆಸರು ಮಾಸ್ತಿ ಗಿಡ್ಡಾ ಚಂದಾವರ ಎಂದು. ಒಂದು ಬಿಳೇ ಧೋತರ, ಬಿಳೇ ಅಂಗಿ ಹಾಗೂ ಬಿಳೇ ಟೋಪಿ ಧರಿಸಿ ಶಾಲೆಗೆ ಬರುತ್ತಿದ್ದರು. ನನಗೆ ಅಂಕಗಣಿತದಲ್ಲಿ ಆಸಕ್ತಿ ಮೂಡಿಸಿದವರು ಅವರು. ಏನೂ ತಿಳಿಯದ ನನ್ನಿಂದ 'ಗೆಜ್ಜಿ ಗಣಿತ'ಗಳನ್ನು ಮಾಡಿಸುತ್ತಿದ್ದರು. ಶಿಸ್ತಿನಿಂದ ಹೇಗೆ ಬದುಕಬೇಕೆಂಬುದನ್ನೂ ಕಲಿಸಿದರು. ಅವರ ಪ್ರೋತ್ಸಾಹದಿಂದ ನಾನು ಕೊಟ್ಟ ಅಭ್ಯಾಸದಲ್ಲಿ ಆಸಕ್ತಿ ಪಡೆದು, ವರ್ಗಕ್ಕೆ ಮೊದಲನೇ ಸ್ಥಾನ ಪಡೆಯತೊಡಗಿದೆ. ಇಂದಿಗೂ ಅವರನ್ನು ನೆನಪು ಮಾಡಿಕೊಂಡಾಗಲೆಲ್ಲ ನನ್ನ ಶಿರ ಕೃತಜ್ಞತೆಯಿಂದ ಬಾಗುವದು.

ಏಳನೇ ತರಗತಿಯಲ್ಲಿ ಪಾಸಾದ ನಂತರ ನನ್ನನ್ನು ವೆಂಕಟಸುಬ್ಬಾ ಭಟ್ಟರ ಮಗ ಎಸ್. ವಿ. ಭಟ್ಟರು, ತಾನೇ ಶಿಕ್ಷಕನಾಗಿದ್ದ ನ್ಯೂ ಇಂಗ್ಲಿಷ್ ಸ್ಕೂಲ್, ಹೊನ್ನಾವರಕ್ಕೆ ಕರೆದುಕೊಂಡು ಹೋಗಿ ಎಂಟನೇ ವರ್ಗಕ್ಕೆ ಸೇರಿಸಿದರು. ಆ ಅವಧಿ ನನ್ನ ವಿದ್ಯಾರ್ಥಿ ಜೀವನದಲ್ಲಿ ಸ್ವರ್ಣಯುಗ

ವೆಂದು ನಾನು ಪರಿಗಣಿಸುತ್ತೇನೆ. ಆರ್. ಎಸ್. ಶಾನಭಾಗ ಮಾಸ್ತರರು ಇಂಗ್ಲಿಷ್ ಕಲಿಸುತ್ತಿದ್ದರು. ವಿ. ಎಂ. ಕಾಮತ್, ಕಾಸರಕೋಡ, ಎಲ್. ವಿ. ಪೈ– ಈ ಎಲ್ಲ ಶಿಕ್ಷಕರಿಗೆ ನಾನು ಅಚ್ಚುಮೆಚ್ಚಿನವನಾದದ್ದು ನನ್ನ ಭಾಗ್ಯ. ಎಸ್. ವಿ. ಭಟ್ಟರು 'ಇಗ್ಗಪ್ಪ ಹೆಗ್ಗಡೇ ವಿವಾಹ ಪ್ರಹಸನ'ದಲ್ಲಿ ಗಣೇಶ ಭಟ್ಟರ ಪಾತ್ರವನ್ನು ನನ್ನಿಂದ ಮಾಡಿಸಿದರು. ಆ ಪಾತ್ರಕ್ಕಾಗಿ ನನಗೆ ಬಹುಮಾನವೂ ಬಂತು. ನನ್ನ ವ್ಯಕ್ತಿತ್ವದ ಬೆಳವಣಿಗೆಗೆ ಎಸ್. ವಿ. ಭಟ್ಟರ ಸಾನ್ನಿಧ್ಯ ಬಹಳ ಸಹಕಾರಿಯಾಯಿತು.

ಎಂಟನೇ ತರಗತಿಯಲ್ಲಿದ್ದಾಗ ಒಂದು ಘಟನೆ ನಡೆಯಿತು. ವಾರ್ಷಿಕ ಪರೀಕ್ಷೆ ಮುಗಿದರೂ ನಾನು ಮನೆಗೆ ಬಂದಿರಲಿಲ್ಲ. ಪರೀಕ್ಷೆಯ ಪರಿಣಾಮ ತಿಳಿದುಕೊಂಡು ನಮ್ಮೂರಿಗೆ ಬಂದರಾಯಿತು ಎಂದು ಅಲ್ಲಿಯೇ ಇದ್ದೆ. ಒಂದು ದಿನ ಎಸ್. ವಿ. ಭಟ್ಟರು ಮನೆಗ ಬಂದೊಡನೆ ನನಗೆ ಚಿತ್ರಕಲೆಯಲ್ಲಿ ಕಡಿಮೆ ಅಂಕ ಬಂದಿದೆ; ನನ್ನ ಸಹಪಾಠಿ ಹಾಗೂ ನನ್ನೊಡನೆ ಸ್ಪರ್ಧೆಯಲ್ಲಿದ್ದ ವಿ. ಜಿ. ಶೆಟ್ಟಿ ಆ ವಿಷಯದಲ್ಲಿ ಹೆಚ್ಚು ಅಂಕ ಪಡೆದುದರಿಂದ, ನಾನು ಮೊದಲನೇ ಸ್ಥಾನ ಪಡೆಯಲು ಅಸಮರ್ಥನಾಗಬಹುದೆಂದು ತಿಳಿಸಿದರು. ನಾನು ಖಿನ್ನನಾಗಿ ನಮ್ಮೂರಿಗೆ ಬಂದುಬಿಟ್ಟೆ. ಊರಿಗೆ ಬಂದು ಎಂಟು ದಿನಗಳಲ್ಲಿ ಎಸ್. ವಿ. ಭಟ್ಟರಿಂದ ಪತ್ರ ಬಂದಿತು. ನಾನು ಉಳಿದೆಲ್ಲ ವಿಷಯಗಳಲ್ಲಿ ಉತ್ತಮ ಅಂಕಗಳನ್ನು ಪಡೆದಿರುವದರಿಂದ ತರಗತಿಗೆ ನಾನೇ ಪ್ರಥಮನಾಗಿದ್ದೇನೆಂದು ತಿಳಿಸಿದ್ದರು. ಎಸ್. ವಿ. ಭಟ್ಟರು ನನ್ನ ಮೇಲಿಟ್ಟ ಪ್ರೀತಿ, ವಾತ್ಸಲ್ಯ ಹಾಗೂ ವಿಶ್ವಾಸ ನೆನೆದು ನನ್ನ ಕಣ್ಣು ಹನಿದುಂಬಿದವು.

ನಂತರ ೯ ನೇ ತರಗತಿಯಲ್ಲಿ ಓದಲು ನಾನು ಶಿರಸಿಯ ಶ್ರೀ ಮಾರಿಕಾಂಬಾ ಹೈಸ್ಕೂಲ್ ಸೇರಬೇಕಾಯಿತು. ನಾನು ಈ ಹೈಸ್ಕೂಲಿಗೆ ಸೇರಿದ ಮೊದಲನೇ ವಾರ ಭೂಗೋಲದ ಕಿರು ಪರೀಕ್ಷೆಯಾಯಿತು. ನಾನು ಆ ವಿಷಯದಲ್ಲಿ ಪಾಸಾದರೂ, ಉತ್ತಮ ಅಂಕ ಗಳಿಸಿರಲಿಲ್ಲ. ಆ ವಿಷಯವನ್ನು ನನಗೆ ಕಲಿಸುವ ನವಲಗುಂದ ಮಾಸ್ತರರು ನನಗೆ ಕಡಿಮೆ ಅಂಕ ಬಂದಿರುವದರಿಂದ ನನ್ನ ಅಭಿಮಾನಕ್ಕೆ ಧಕ್ಕೆ ಬರುವಂತಹ ಮಾತನಾಡಿದರು. ಆಗ ನಾನು ಛಲದಿಂದ ಅಭ್ಯಾಸ ಮಾಡಿದೆ, ಉತ್ತಮ ಅಂಕ ಗಳಿಸಿದೆ. ಆಗ ಅವರೇ ನನ್ನನ್ನು ಪ್ರಶಂಸಿಸಿದರು.

ನಮಗೆ ಶೇಖ ಮಾಸ್ತರರು ಇಂಗ್ಲಿಷ್ ಕಲಿಸುತ್ತಿದ್ದರು. ಒಂದು ಶಬ್ದವನ್ನೂ ಕನ್ನಡದಲ್ಲಿ ಹೇಳುತ್ತಿರಲಿಲ್ಲ. ಆದರೂ ಎಲ್ಲರಿಗೂ ಅರ್ಥವಾಗುತ್ತಿತ್ತು. ಅವರ ತಾಳ್ಮೆ ಮೆಚ್ಚುವಂತಹದು. ಅವರು ಸದಾ ನನ್ನ ನೆನಪಿನಲ್ಲಿದ್ದಾರೆ.

ನನ್ನ ೧೦ ಹಾಗೂ ೧೧ ನೇ ವರ್ಗದಲ್ಲಿ ಜಡೆ ಮಾಸ್ತರರು ಇಂಗ್ಲಿಷ್ ಕಲಿಸುತ್ತಿದ್ದರು. ಸಹಪಾಠಿಗಳು ಇಂಗ್ಲಿಷಿನಲ್ಲಿಯೇ ಮಾತನಾಡಿಕೊಳ್ಳುವಂತೆ ಪ್ರೇರೇಪಿಸುತ್ತಿದ್ದರು. ಅವರು ಹಾಗೆ ಮಾಡಿದ್ದರಿಂದ ಮುಂದೆ ನನಗೆ ಕಾಲೇಜಿಗೆ ಹೋದಾಗ ತೊಂದರೆಯಾಗಲಿಲ್ಲ. ಮಾಡಗೇರಿ ಮಾಸ್ತರರು ನಮಗೆ ಇತಿಹಾಸದ ಪಾಠ ಮಾಡುತ್ತಿದ್ದರು. The great warrior fell ಎಂದು ಹೇಳುತ್ತಿರುವಾಗ ಅವರೇ ಬಿದ್ದುಬಿಡುತ್ತಿದ್ದರು. ಪಾಠದಲ್ಲಿ ಅಷ್ಟು ಮಗ್ನರಾಗುತ್ತಿದ್ದರು. ಅವರು ಸಿಟ್ಟು ಮಾಡಿದ್ದನ್ನು ಯಾರೂ ಕಂಡಿಲ್ಲ. ಅವರು ಕಲಿಸುವಾಗ ವರ್ಗದ ಕೋಣೆಯ ಸುತ್ತ ತಿರುಗುತ್ತಿದ್ದರು. ತುಂಟ ವಿದ್ಯಾರ್ಥಿಗಳು ಅವರು ತಮ್ಮ ಹತ್ತಿರ ಬಂದಾಗ ಅವರ ಕೋಟಿನ ಜೇಬಿನಲ್ಲಿ ಏನಾದರೂ ವಸ್ತು ಹಾಕುತ್ತಿದ್ದರು. ನಂತರ ಅವರು ಒಂದು ಸುತ್ತು ಹಾಕಿ ಬಂದ

ನಂತರ ಅದನ್ನು ಅವರ ಜೇಬಿನಿಂದ ತೆಗೆದುಕೊಳ್ಳುತ್ತಿದ್ದರು. ಇಷ್ಟೆಲ್ಲಾ ನಡೆದರೂ ಮಾಡಗೇರಿ ಮಾಸ್ತರರಿಗೆ ಏನೂ ಗೊತ್ತಾಗುತ್ತಿರಲಿಲ್ಲ. ನಮಗೆ ಅವರ ಏಕಾಗ್ರತೆಯೇ ಒಂದು ಪಾಠವಾಗಿತ್ತು.

ವರಖೇಡಿ ಮಾಸ್ತರರು ಸಂಸ್ಕೃತ ಕಲಿಸುತ್ತಿದ್ದರು. ಯಾರಾದರೂ ಹುಡುಗರು ತುಂಟತನ ಮಾಡಿದರೆ ಅವರನ್ನು ಮಾರುಕಟ್ಟೆ ಸುತ್ತುಹಾಕಿಕೊಂಡು ಬಾ ಎಂದು ಹೊರಗೆ ಕಳುಹಿಸುತ್ತಿದ್ದರು. ಹಾಗೆ ಹೇಳುವದರಲ್ಲೂ ಪ್ರೇಮವಿರುತ್ತಿತ್ತು. ಪಾಠ ಕಲಿಸುವಾಗ ಅವರು ಪಾಠ ಕಲಿಸುತ್ತಾರೆಂದು ಅನಿಸುತ್ತಿರಲಿಲ್ಲ. ಏನೋ ಸುಭಾಷಿತಗಳನ್ನು ಹೇಳುತ್ತಿದ್ದಾರೆಂದು ಅನಿಸುತ್ತಿತ್ತು, ಅವರ ಸಂಸ್ಕೃತ ಪಾಠ ನಮ್ಮ ಮನದಲ್ಲಿ ಅಚ್ಚಳಿಯದೆ ಇರುತ್ತಿತ್ತು. ಎಂಥ ಕ್ಲಿಷ್ಟ ವಿಷಯವನ್ನೂ ಸರಳವಾಗಿ ಹೇಳಿಕೊಡುವ ಕಲೆ ಅವರಿಗೆ ಸಾಧಿತವಾಗಿತ್ತು.

ರಾಘವೇಂದ್ರರಾವ್ ಎನ್ನುವವರು ನಮ್ಮ ಹೆಡ್‌ಮಾಸ್ತರರು. ಅವರು ನಮಗೆ ಪ್ರಶ್ನೆ ಕೇಳಿದಾಗ ಅವರ ಮನಸ್ಸಿನಲ್ಲಿದ್ದ ಉತ್ತರವನ್ನು ನಾವು ಅವರು ಕಲಿಸಿದ ಶಬ್ದಗಳಲ್ಲೇ ಹೇಳಬೇಕಿತ್ತು. ತಪ್ಪಿದರೆ 'ಥೂ ಕತ್ತೆ, ಹತ್ತು ಬೆಂಚಾ, ಮುಂಡೆಮೋಸ್ತು' ಎಂದು ಬೆಂಚಿನ ಮೇಲೆ ನಿಲ್ಲಿಸುತ್ತಿದ್ದರು. ಒಮ್ಮೆ 'cleared spot' ಇದರ ಅರ್ಥವೇನೆಂದು ಎಲ್ಲರಿಗೂ ಕೇಳಿದರು. ಯಾರೂ ಉತ್ತರ ಹೇಳದಿದ್ದಾಗ ನಾನು 'ಕಡಿಮು ಸ್ವಚ್ಛ ಮಾಡಿದ ಜಾಗ' ಎಂದೆ. 'ಇಲ್ಲಿದೆ ನೋಡಿ, ರತ್ನ' ಎಂದು ನನ್ನನ್ನು ಹೊಗಳಿದರು. ಮತ್ತೊಮ್ಮೆ ನನಗೆ ಅದೇ ಪ್ರಶ್ನೆ ಕೇಳಿದರು. ಆಗ ನಾನು 'ಸ್ವಚ್ಛ ಮಾಡಿದ ಜಾಗ' ಎಂದಷ್ಟೇ ಹೇಳಿದೆ. ಕೂಡಲೇ 'ಥೂ ಕತ್ತೆ, ಅಷ್ಟೂ ನೆನಪಿಲ್ಲವೇ' ಎಂದು ನನ್ನನ್ನು ಕಸದ ಬುಟ್ಟಿಯಲ್ಲಿ ನಿಲ್ಲಿಸಿದರು. ಒಮ್ಮೆ ನನ್ನ ವರ್ಗದ ಹುಡುಗಿಯರೆಲ್ಲರೂ ಅವರು ಕೇಳಿದ ಪ್ರಶ್ನೆಗೆ ಉತ್ತರ ಹೇಳಲು ಅಸಮರ್ಥರಾದಾಗ ರಾಘವೇಂದ್ರರಾವ್ ಅವರ ಮುಂದೆ ನಿಂತು, ಕೈ ಆರತಿ ಮಾಡಿ, 'ಕತ್ತೆ ಕೋಣಾಯ ಮಂಗಳಂ' ಎಂದದ್ದು ಇಂದಿಗೂ ನೆನಪಿಗೆ ಬರುತ್ತದೆ. ರಾಘವೇಂದ್ರರಾವ್ ಹೆಡ್‌ಮಾಸ್ತರರು ಮಕ್ಕಳೊಡನೆ ಕಠೋರವಾಗಿ ನಡೆದುಕೊಂಡರೂ, ವಿದ್ಯಾರ್ಥಿಗಳಿಗೆ ಅವರ ಬಗ್ಗೆ ಗೌರವವಿತ್ತು. ಕಾರಣ ಅವರು ಯಾವಾಗಲೂ ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಗಳಿಸಿ, ವಿಷಯ ಜ್ಞಾನವನ್ನು ಪರಿಪೂರ್ಣವಾಗಿ ಹೊಂದಬೇಕೆಂದು ಬಯಸುತ್ತಿದ್ದರು.

ರಾಯಕರ ಮಾಸ್ತರರು ನಮಗೆ ಚಿತ್ರಕಲೆ ಕಲಿಸುತ್ತಿದ್ದರು. ಬಿಳೀ ಪಂಜೆ, ಬಿಳೀ ಶರಟು ಒಂದು ಕೋಟು ಧರಿಸುತ್ತಿದ್ದರು. ತಲೆಯ ಮೇಲೆ ಕರಿ ಟೋಪಿ ಶೋಭಿಸುತ್ತಿತ್ತು. ಅವರು ಗ್ರಂಥಾಲಯದ ದೇಖರೇಖ ನೋಡಿಕೊಳ್ಳುತ್ತಿದ್ದರು. ನನಗೆ ಓದುವ ಹವ್ಯಾಸವನ್ನು ಅವರೇ ಹಾಕಿಕೊಟ್ಟವರು. 'ರುಬಾಯಿಯಾತ್ ಆಫ್ ಓಮರ್ ಖಯ್ಯಾಮ್' ನನಗೆ ಕೊಟ್ಟು ಓದಿಸಿದರು. ನಾನು ಅದನ್ನು ಕಷ್ಟಪಟ್ಟು ಪದ್ಯರೂಪದಲ್ಲೇ ಕನ್ನಡಕ್ಕೆ ಭಾಷಾಂತರಿಸಿದೆ. ಆದರೆ ನಮಗೆ ಕನ್ನಡ ಕಲಿಸಿದ ವಸುಮತಿ ಸ್ವಾದಿ ಟೀಚರ್ ಅದನ್ನು ತೆಗೆದುಕೊಂಡು ನಂತರ ನನಗೆ ತಿರುಗಿ ಕೊಡಲೇ ಇಲ್ಲ. ಅವರು ಅದನ್ನು ಎಲ್ಲೋ ಕಳೆದುಬಿಟ್ಟಿದ್ದರು. ನಾನು ಕನ್ನಡ ಜಾಣ ಪರೀಕ್ಷೆಗೆ ಕುಳಿತುಕೊಳ್ಳುವಂತೆ ಮಾಡಿ, ನಾನು ಅದರಲ್ಲಿ ಪಾಸಾದಾಗ ಬಹಳ ಸಂತೋಷ ಪಟ್ಟವರು ವಸುಮತಿ ಸ್ವಾದಿ ಟೀಚರ್ ಅವರೇ. ನರಸಿಂಹ ಸ್ವಾದಿ ಎಂಬ ನಮ್ಮ ಹಿಂದೀ ಶಿಕ್ಷಕರು ನನ್ನನ್ನು ಪ್ರೋತ್ಸಾಹಿಸಿ, ನಾನು ಪ್ರವೇಶಿಕಾ ಪರೀಕ್ಷೆಗೂ ಕೂಡ್ರುವಂತೆ ಮಾಡಿದರು.

ಅದರಲ್ಲೂ ನಾನು ಪಾಸಾದಾಗ, ನನಗೆ ಅವರ ಹಳೇ ಸೈಕಲ್ ಕೊಟ್ಟು ಸಿಹಿ ತಿಂಡಿ ತರಿಸಿ, ಎಲ್ಲರಿಗೂ ಕ್ಲಾಸಿನಲ್ಲಿಯೇ ಹಂಚಿದರು.

ಕಾಮತ ಮಾಸ್ತರರು ಗಣಿತ ಕಲಿಸುತ್ತಿದ್ದರು. ಅವರದು ವಿಕ್ಷಿಪ್ತ ಸ್ವಭಾವವಾಗಿತ್ತು. ಹದಿನೈದನ್ನು ಎಂಟರಿಂದ ಗುಣಿಸಿದರೆ ಎಷ್ಟಾಗುವದೆಂದು ಹೇಳಲು ತಡವರಿಸುತ್ತಿದ್ದರೂ, ಹದಿನೈದು ಸಾವಿರದ ಎಂಟುನೂರಾ ತೊಂಬತ್ತನ್ನು ಏಳು ನೂರಾ ಹತ್ತರಿಂದ ಗುಣಿಸಿದರೆ ಎಷ್ಟಾಗುವದೆಂದು ಕ್ಷಣಾರ್ಧದಲ್ಲಿ ಬೋರ್ಡಿನ ಮೇಲೆ ಬರೆದುಬಿಡುತ್ತಿದ್ದರು. ಅವರಿಗೆ ಪೊಲೀಸರ ಹೆಸರು ಕೇಳಿದರೆ ಯಾವುದೋ ತರಹದ ಭಯವಿತ್ತೆಂದು ತೋರುತ್ತದೆ. ಅವರು ಗಣಿತವನ್ನು ಕೊಟ್ಟು ಅದರ ಉತ್ತರ ಕಂಡುಹಿಡಿಯಲು ಹೇಳಿದಾಗ, ಧಷ್ಟ ಹುಡುಗರು ಪೊಲೀಸರು ಬಂದರು ಎಂದು ಹೇಳಿದರೆ, ಅವರನ್ನು ಹುಡುಕಿಕೊಂಡು ಕಾಮತರು ಹೊರಗೆ ಹೋಗಿಬಿಡುತ್ತಿದ್ದರು. ಹೀಗಿದ್ದರೂ ಅವರು ಓರ್ವ ಉತ್ತಮ ಗಣಿತ ಶಿಕ್ಷಕರಾಗಿದ್ದರೆಂಬುವರಲ್ಲಿ ಸಂದೇಹವೇ ಇಲ್ಲ. ಅವರಿಗೆ ಪ್ರಾಸದ ಗೀಳು ಬೇರೆ ಇತ್ತು. 'ಒಂದು ಕಟ್ಟಿಗೆಯ ಪೆಟ್ಟಿಗೆಯ' ಎಂದು ಹೇಳಿ, ಕಟ್ಟಿಗೆ-ಪೆಟ್ಟಿಗೆ ಪ್ರಾಸ ಕೂಡುತ್ತದೆ, ನೋಡಿ, ಎಂದು ಸಂತೋಷದಿಂದ ಹೇಳುತ್ತಿದ್ದುದು ಇಂದಿಗೂ ನನಗೆ ನೆನಪಿದೆ. ನಮಗೆ ಬೀಜಗಣಿತ ಕಲಿಸಿದ ಭಟ್ಟ ಮಾಸ್ತರರನ್ನು, ವಿಜ್ಞಾನ ಕಲಿಸಿದ ಸುಬ್ಬರಾವ್ ಮಾಸ್ತರರನ್ನು ನಾನು ಎಂದೂ ಮರೆಯಲಾರೆ. ಅವರು ಆದರ್ಶ ಶಿಕ್ಷಕರಾಗಿದ್ದರು.

ನನಗೆ ಕಲಿಸಿದ ಎಲ್ಲ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಹಾಗೂ ಮಾಧ್ಯಮಿಕ ಶಾಲಾ ಶಿಕ್ಷಕರನ್ನು ಒಂದು ಸಾಲಿನಲ್ಲಿ ಕೂಡಿಸಿ, ಅವರೆಲ್ಲರಿಗೂ ಭಕ್ತಿಪೂರ್ವಕವಾಗಿ, ಗೌರವಪೂರ್ವಕವಾಗಿ ನಮಿಸಬೇಕೆನಿಸುತ್ತದೆ. ಅಂತಹ ಪ್ರಭಾವವನ್ನು ಅವರು ನನ್ನ ಮೇಲೆ ಬೀರಿದ್ದಾರೆ.

■ ಪರಮೇಶ್ವರ ಮ. ಹೆಗಡೆ : 'ಪೂರ್ಣಿಮಾ' ನಿವಾಸ, ಹೊಸಪೇಟೆ ವಿಸ್ತರಣೆ, ಶಿರಸಿ-೫೮೧ ೪೦೧ ■

ಕಥಾನಗರ - ೨

ಉರ್ದೂ : ಜೋಗಿಂದರ್ ಪಾಲ್ ಕನ್ನಡ : ಅಬ್ದುಲ್ ಮಜೀದ್ ಖಾನ್

೧. ಮತ್ತೊಮ್ಮೆ : "ನಿಮ್ಮ ರಾಕೆಟ್ಟು ಭೂವಲಯವನ್ನು ದಾಟಿ ಶೂನ್ಯವನ್ನು ಪ್ರವೇಶಿಸಿದಾಗ ನಿಮಗೆ ಏನನ್ನಿಸಿತು?"

"ದೇವರು ಮತ್ತೊಮ್ಮೆ ನಮ್ಮನ್ನು ಸ್ವರ್ಗದಿಂದ ಹೊರಗೆ ಎಸೆದುಬಿಟ್ಟಿದ್ದಾನೆ, ಎನಿಸಿತು!"

೨. ಅಪಕ್ವತೆ : "ನೀವು ತುಂಬ ಸಿಹಿಯಾಗಿದ್ದೀರಿ, ಬಾಬಾ!"

"ಅದೇ ನನ್ನ ತೊಂದರೆ, ಇನ್ನೂ ಕೊಂಚ ಹಸಿ ಮತ್ತು ಹುಳಿಯಾಗಿ ಇದ್ದಿದ್ದರೆ, ಮರಕ್ಕೆ ತಗುಲಿಕೊಂಡಿರುತ್ತಿದ್ದೆ."

೩. ಆವಶ್ಯಕತೆಗಳು : ಕೊನೆಯ ಉಸಿರಾಟದೊಂದಿಗೆ ಅವನ ದೃಷ್ಟಿ ಮಂದವಾಗತೊಡಗಿತ್ತು. ಅವನು ತನ್ನ ಹಾಸಿಗೆಯ ಮೇಲೆ ಅತ್ತಿತ್ತ ಕೈ ಬಡಿದನು.

"ಏನು ಬೇಕು, ಅಪ್ಪಾಜಿ?" ಅವನ ಮಗಳು ಅವನ ಮೇಲೆ ಬಾಗಿ ಕೇಳಿದಳು.

"ಕನ್ನಡಕ", ಅವನು ಬಲು ಪ್ರಯಾಸದಿಂದ ಹೇಳಿದ, "ನನ್ನ ಕಾಲ ಬಳಿ ಯಮ ನಿಂತಿದ್ದಾನೆ. ಆದರೆ ಸ್ಪಷ್ಟವಾಗಿ ಕಾಣಿಸುತ್ತಿಲ್ಲ."

೪. **ದೂರಸಂಪರ್ಕ :** ನನ್ನ ಹಲವಾರು ಪರಿಚಿತರು ಮತ್ತು ಅಗತ್ಯವಿರುವವರು, ಟೆಲಿಫೋನ್ ಮೂಲಕ ನನ್ನೊಡನೆ ಸಂಪರ್ಕ ಬೆಳೆಸಲು ಯತ್ನಿಸಿದಾಗೆಲ್ಲ ನನ್ನ ಟೆಲಿಫೋನ್ ಕಾರ್ಯನಿರತವಾಗಿರುತ್ತದೆ ಎಂದು ದೂರುತ್ತಾರೆ.

ಅಂತಹ ಸಂದರ್ಭಗಳಲ್ಲಿ ನಾನು ಸಹ ಯಾವುದಾದರೂ ಕೆಲಸದ ನಿಮಿತ್ತ ಬೇರೊಬ್ಬರೊಡನೆ ಸಂಪರ್ಕ ಸಾಧಿಸಲು ಪ್ರಯತ್ನಿಸುತ್ತ ಇರುತ್ತೇನೆ. ಮತ್ತು ವಿಪರ್ಯಾಸವೆಂದರೆ, ಆತನ ಟೆಲಿಫೋನ್ ಕೂಡ ಕಾರ್ಯನಿರತವಾಗಿಯೇ ಇರುತ್ತದೆ ಎಂಬುದನ್ನು ನಾನವರಿಗೆ ಹೇಗೆ ಸಮಝಾಯಿಸಲಿ? ಬಹುಶಃ ಅವನೂ...

೫. **ಜಲಜೀವಿ :** ನಾನು ಬಹುಕಾಲದಿಂದ ಒಂದು ಹಡಗಿನಲ್ಲಿ ನೌಕರಿ ಮಾಡುತ್ತಿದ್ದೇನೆ. ಸಮುದ್ರದೊಂದಿಗೆ ನನ್ನ ಸಂಬಂಧ ಶುರುವಾದ ಮೊದಲಲ್ಲಿ ನಾನು ಅದರಲ್ಲಿ ಮುಳುಗಿ ಹೋಗುತ್ತೇನೆ ಎಂಬ ಸಂದೇಹ ಉಂಟಾಗಿತ್ತು.

ಆದರೆ ಈಗ ಸಮುದ್ರವೇ ನನ್ನೊಳಗೆ ಮುಳುಗಿ ಹೋಗಿದೆ ಎಂದು ನನಗನ್ನಿಸುತ್ತಿದೆ.

೬. **ಮಿಲನ :** ಬಲು ಮಧುರ, ಬಹಳ ಅಪರಿಚಿತ ನಗರ ಅದಾಗಿತ್ತು...

ಅಲ್ಲಿ ನನಗೆ ಯಾರ ಪರಿಚಯವೂ ಇರಲಿಲ್ಲ.

ಉಹ್ಞುಂ, ಅವಳ ಪರಿಚಯ ಕೂಡ.

ಅಲ್ಲಿ ಅಕಸ್ಮಾತ್ ನಮ್ಮಿಬ್ಬರ ಭೇಟಿಯಾಯಿತು.

ಅವಳು ಯಾರಿದ್ದಳೋ, ಗೊತ್ತಿಲ್ಲ. ಆದರೆ ಮೊದಲ ನೋಟಕ್ಕೇ ಅವಳು ನನಗೆ ಸಂಪೂರ್ಣ ನನ್ನವಳಾಗಿ ತೋರಿದಳು.

ವಾಸ್ತವದಲ್ಲಿ, ನಾನು ನನ್ನ ಜೀವನದಲ್ಲಿ ಮೊದಲ ಬಾರಿ, ಇತ್ತ ನನ್ನ ಹೃದಯದಲ್ಲಿ ವಿಹರಿಸುತ್ತಿದ್ದೆ. ಇಲ್ಲಿ ಅವಳು ಎಂದಿನಿಂದ ನೆಲೆಸಿದ್ದಳೋ ತಿಳಿಯದು.

೭. **ಚೆಲುವು :** "ಅವಳು ಅಷ್ಟು ಕಪ್ಪು ಮತ್ತು ದಪ್ಪವಾಗಿದ್ದಾಳೆ. ಆದರೂ ನೀನವಳ ಮೇಲೆ ಪ್ರಾಣ ಬಿಡುತ್ತೀಯೆ?"

"ಹಾಗಲ್ಲ. ನಿನಗೆ ಅವಳಲ್ಲಿ ನಿನ್ನ ಅಸ್ತಿತ್ವ ಕಾಣುತ್ತದೆ, ಮತ್ತು ನನಗೆ ಸ್ವತಃ ಅವಳೇ ಕಾಣಿಸುತ್ತಾಳೆ."

೮. **ಆಸು ಪಾಸು :** ನಿರ್ಜನ ಕಾಡಿನಲ್ಲಿ ಏಕಾಕಿತನದ ಕಾರಣ, ನನಗೆ ಉಸಿರುಗಟ್ಟಿದಂತೆ ಆಗತೊಡಗಿತು. ಅದೇ ಅವಧಿಯಲ್ಲಿ ಮರವೊಂದರ ಚಂಚಲ ರೆಂಬೆಯೊಂದು ನನ್ನ ದಾರಿಯನ್ನು ಅಡ್ಡಗಟ್ಟಿತು, ಮತ್ತು ತನ್ನ ಮುಖದಿಂದ ಅಂಚಲವನ್ನು ಸರಿಸಿ ಉಸುರಿತು : "ನನ್ನೊಡನೆ ಯಾದರೂ ಮಾತಾಡುವುದಿಲ್ಲವೆ?"

೯. **ಜೀವನ :** ಈ ಗಟ್ಟಿಮುಟ್ಟಿಯಾದ ಕತೆಯೂ ಕೊಂಚ ದೂರ ಮಾತ್ರ ನನ್ನ ಜೊತೆ ನಡೆದು, ಸಡಿಲ ಹಾಗೂ ಮುದಿಯಾಗಿ ಹೋಯಿತು.

ಆದರೆ ನಾನಂತೂ ಮೊದಲಿನಂತೆ ನಿತ್ಯನೂತನೆಯಾಗಿದ್ದೆ, ಮತ್ತು ಹುರುಪಿನಿಂದ ನನ್ನ ಜಾಡಿನಲ್ಲಿ ಮುಂದೆ ಮುಂದೆ ಸಾಗುತ್ತಿದ್ದೆ. ನನ್ನ ಬಡಪಾಯಿ ಮುದಿ ಪ್ರಿಯತಮ ಏದುತ್ತಾ ಕೆಮ್ಮುತ್ತಾ ಬಲು ಪ್ರಯಾಸದಿಂದ ನನಗೆ ಜೊತೆ ಕೂಡುತ್ತಿದ್ದ. ಆದರೆ ಎಲ್ಲಿಯ ತನಕ? ಕೊನೆಗೆ ಸೋತು, ಸುಸ್ತಾಗಿ, ಒಂದು ತಾಣದಲ್ಲಿ ಅವನು ಕುಸಿದು ಗುಪ್ಪೆಯಾದ.

ನಾನು ಅವಸರವಸರವಾಗಿ ಸಂತಾಪ ಸೂಚಿಸಿ, ಅವನ ಆತ್ಮಶಾಂತಿಗಾಗಿ ಪ್ರಾರ್ಥಿಸಿ, ಇನ್ನೂ ಕಣ್ಣು ತೆರೆದಿರಲಿಲ್ಲ. ಅಷ್ಟರಲ್ಲೇ ನನ್ನ ಬದಿಯಿಂದ ಒಂದು ಪೋಲಿ ಸಿಳ್ಳು ಕೇಳಿಸಿತು.

ನಾನು ತಲೆ ಎತ್ತಿ ಅತ್ತ ನೋಡಿದಾಗ ಒಂದು ನವಯೌವನವುಳ್ಳ ಚೆಲುಮೊಗದ ಕತೆ ನನ್ನ ಕಡೆ ನೋಡಿ ನಕ್ಕು ಬಿಟ್ಟಿತು.

ಆಹ್! ನಾನು ಮೊದಲ ನೋಟದಲ್ಲೇ ಅವನ ಮೇಲೆ ಮೋಹಿತಳಾದೆ ಮತ್ತು ಕನ್ಯಾಸಹಜ ಆವೇಗದಿಂದ ಅವನತ್ತ ಸೆಳೆಯಲ್ಪಟ್ಟೆ : ಅವನು ಸ್ತಂಭೀಭೂತನಾಗಿ ನನ್ನತ್ತ ಒಲಿದ. ಮತ್ತು ನಾವು ಎಲ್ಲವನ್ನೂ ಮರೆತು ಕೈಯಲ್ಲಿ ಕೈಹಿಡಿದು ಮುಂದೆ ಸಾಗಿದೆವು.

೧೦. **ವಂದನಾರ್ಪಣೆ :** ಅಮೆರಿಕಾದಲ್ಲಿರುವ ಆಫ್ರಿಕನ್ ಮತ್ತು ಏಷ್ಯನ್ ನವನಿವಾಸಿಗಳ ಸಮ್ಮೇಳನ ವಾಷಿಂಗ್‌ಟನ್‌ನಲ್ಲಿ ಜರುಗುತ್ತಿದ್ದಾಗ, ಒಬ್ಬ ಅಮೆರಿಕನ್ ತನ್ನ ಭಾಷಣದಲ್ಲಿ ಬಲು ಜೋರಾದ ಅಭಿಪ್ರಾಯ ನೀಡಿದನು : "ಸಾಧ್ಯವಾದಷ್ಟು ಬೇಗ ನೀವೆಲ್ಲರೂ ಸ್ಥಳೀಯ ಜೀವನವಾಹಿನಿಯಲ್ಲಿ ಸೇರಿಕೊಳ್ಳಬೇಕು."

ಆ ನಂತರ ಒಬ್ಬ ರೆಡ್ ಇಂಡಿಯನ್ ವಂದನಾರ್ಪಣೆ ಮಾಡಲು ಎದ್ದು ನಿಂತು ಹೇಳಿದ : "ಲೇಡಿಸ್ ಅಂಡ್ ಜೆಂಟ್ಲ್‌ಮೆನ್, ಇಂದಿನ ನಮ್ಮ ವಿದ್ವಾಂಸ ಭಾಷಣಕಾರನ ಮಾತನ್ನು ನಾನು ನೂರಕ್ಕೆ ನೂರು ಅನುಮೋದಿಸುತ್ತೇನೆ. ನನ್ನ ಜನಾಂಗದ ಜನರನ್ನು ನೋಡಿರಿ. ಅವರು ಇತರ ಎಲ್ಲಾ ಕೋಮುಗಳ ಮೊದಲೇ ಇಲ್ಲಿನ ಪೌರತ್ವವನ್ನು ಪಡೆದಿದ್ದರು. ಆದರೂ ಅವರ ಇಮ್ಮಿಗ್ರೇಷನ್ ಸಂದೇಹಕ್ಕೆ ಗುರಿಯಾಗಿದೆ. ಏಕೆಂದರೆ ಸ್ಥಳೀಯ ವಾಹಿನಿಯಲ್ಲಿ ಸೇರಿಕೊಳ್ಳಲು ಅವರಿಗೆ ಇನ್ನೂ ಸಂಕೋಚವೆನಿಸುತ್ತದೆ."

೧೧. **ಸಂವಹನ :** ಆಯುಷ್ಯವಿಡೀ ಮಾತಾಡುತ್ತ ಮಾತಾಡುತ್ತ, ಈಗ ಅಂತಿಮ ಉಸಿರಾಟದ ಸಮಯದಲ್ಲಿ ನನಗೆ ಹೊಳೆದ ಸತ್ಯವೇನೆಂದರೆ : "ಸಂಪೂರ್ಣ ಮೌನ ತಾಳದ ಹೊರತು ಪರಿಪೂರ್ಣ ಸಂವಹನ ಸಾಧ್ಯವಾಗದು."

೧೨. **ಕಲಿಯುಗ :** "ನೀವು ಜೀವನವಿಡೀ ಇಷ್ಟು ಘೋರ ತಪಸ್ಸು ಏಕೆ ಆಚರಿಸಿದಿರಿ, ಸ್ವಾಮಿ?"

"ಮಗೂ, ಇಂದ್ರದೇವ ನನ್ನ ತಪಸ್ಸು ಭಂಗ ಮಾಡಲು ದೇವಲೋಕದಿಂದ ಅತಿ ಸುಂದರ ಅಪ್ಸರೆಯರನ್ನು ಕಳಿಸುತ್ತಿರಲಿ, ಎಂದು!"

೧೩. **ಹಸಿವು :** ಒಂದು ಕಾಲವಿತ್ತು. ಆಗ ನನಗೆ ತಿನ್ನುವುದು ಮತ್ತು ಕುಡಿಯುವುದರ ಹೊರತು ಬೇರೆ ಏನೂ ಹೊಳೆಯುತ್ತಿರಲಿಲ್ಲ. ಆದರೆ ಈಗ ಎಂತಹ ಪರಿಸ್ಥಿತಿ ಉಂಟಾಗಿದೆ ಎಂದರೆ, ನನ್ನ ಹಸಿವು ಮತ್ತು ನಾಲಗೆ ರುಚಿ ಒಮ್ಮೆಗೇ ಸತ್ತು ಹೋಗಿವೆ. ಹೊಟ್ಟೆ ಹಸಿದಿರುವಾಗಲೂ ನಾನು ಊಟದ ಕಡೆ ಕೈ ಚಾಚಿದರೆ ಸಾಕು ಸಾಕೆನಿಸುತ್ತದೆ.

ಆದರೆ ಇವತ್ತು ನಾನು ಚೆನ್ನಾಗಿ ಊಟ ಮಾಡಿದೆ.

ನನಗೇನು ಹೊಳೆಯಿತೋ ಗೊತ್ತಿಲ್ಲ. ಇಂದು ನಾನು ಬಾಜಾರಿನಿಂದ ಒಬ್ಬ ಮಲಿನ ವಸ್ತ್ರಗಳಲ್ಲಿದ್ದ, ಹಸಿದಿದ್ದ ಹುಡುಗನನ್ನು ಕರೆತಂದು, ನನ್ನ ಊಟದ ಮೇಜಿನ ಎದುರು ಕೂರಿಸಿದೆ. ಅವನು ಮಜವಾಗಿ ಊಟ ಮಾಡುತ್ತಿದ್ದುದನ್ನು ಕಂಡಾಗ ನನಗೆ ಅಚಾನಕವಾಗಿ ಹಸಿವಾಗತೊಡಗಿತು. ಅವನ ಹಸಿವು, ಮತ್ತು— ಹೌದು!— ಅವನ ರುಚಿಯೂ ನನ್ನ ನಾಲಗೆಯಲ್ಲಿ ಕರಗತೊಡಗಿತು. ತಕ್ಷಣ ನಾನು ಒಂದೇ ಏಟಿಗೆ ಊಟದ ಮೇಲೆ ಎರಗಿದೆ, ನಾನು ಉಣ್ಣಲು ಪ್ರಾರಂಭಿಸುವ ಮೊದಲೇ ಅವನು ಎಲ್ಲವನ್ನೂ ತಿಂದು ಬಿಡಬಾರದೆಂಬ ಕಾರಣದಿಂದ....!

೧೪. ಮನರಂಜನೆ : ಅತ್ಯಾಚಾರಿಗಳ ಸರದಾರ ಗಹಗಹಿಸುತ್ತ, ಹುತಾತ್ಮರ ಶವಗಳ ಕಡೆ ಬೊಟ್ಟು ಮಾಡಿ, ಅವರ ಸಂಬಂಧಿಕರಿಗೆ ಹೇಳಿದ : "ಏ ಬುದ್ಧಿಗೇಡಿಗಳೆ, ದೇವರು ನಿಮಗೆ ಕೊಟ್ಟಿರುವ ತಿಳಿವಳಿಕೆಯನ್ನಾದರೂ ಉಪಯೋಗಿಸಿರಿ. ಯಾವ ಸ್ವರ್ಗದ ವಿಷಯ ಹೇಳುತ್ತಿದ್ದೀರಿ? ಒಂದು ವೇಳೆ ಸ್ವರ್ಗ ಇರುವುದಾದರೂ, ಶವಗಳಂತೂ ಇಲ್ಲೇ ಬಿದ್ದಿರುತ್ತವೆ. ಅವು ಅಲ್ಲಿ ಹೇಗೆ ತಲಪುವುವು? ದೇಹರಹಿತ ತಲಪಿದರೆ ಸ್ವರ್ಗದ ಜೇನುತುಪ್ಪವನ್ನು ನೆಕ್ಕಲು ಅವರು ಬಾಯಿಗಳನ್ನು ಎಲ್ಲಿಂದ ತರುತ್ತಾರೆ? ಮತ್ತು ಅಪ್ಸರೆಯರನ್ನು ಆಲಿಂಗಿಸಲು ಕೈಗಳನ್ನು ಎಲ್ಲಿಂದ...?"

ಒಂದು ಶವ ಆಗ ಹಠಾತ್ತನೆ ಎದ್ದು ನಿಂತು, ತನ್ನ ವಸ್ತ್ರಗಳನ್ನು ಹರಿದು ಹಾಕುತ್ತ "ಅರೆ, ಹೌದು. ನನ್ನ ಗಮನ ಅತ್ತ ಹೋಗಿರಲಿಲ್ಲ. ಜೀವಂತವಿರುವಾಗ ಸ್ವರ್ಗ ಲಭಿಸಿವರೆ ಮಾತ್ರ ನಾನು ಸಾಯುತ್ತೇನೆ!" ಎಂದಿತು.

೧೫. ಅಸಹಾಯಕತೆ : ಕೊನೆಗೆ ನಾನು ಪ್ರಪಂಚವನ್ನು ತ್ಯಜಿಸಿ ಕಾಡಿಗೆ ಹೊರಟು ಹೋಗಬೇಕೆಂದು ಮನಸ್ಸು ಮಾಡಿದೆ.

ಆದರೆ ಎಲ್ಲಿ ಹೋಗಬೇಕು? ಭೂಮಿಯ ಅಡಿಯಡಿ ಜಾಗವೂ ಮಾರಾಟವಾಗಿ ಹೋಗಿದೆ. ದೇವರ ಹೆಸರಿನಲ್ಲಿ ಏನಾದರೂ ಒಂದಿಷ್ಟು ಉಳಿದುಕೊಂಡಿದ್ದರೆ....?

೧೬. ಸ್ನಾನ : ನೀರು ಕೆಳಗಿಂದ ಮೇಲಕ್ಕೆ ಹರಿಯುವುದಿಲ್ಲ. ಅದು ಯಾವಾಗಲೂ ಮೇಲಿಂದ ಕೆಳಕ್ಕೆ ಹರಿಯುತ್ತದೆ. ಆದ್ದರಿಂದ ಬಾಯಾರಿಕೆಯನ್ನು ನೀಗುವುದಾದರೆ ನಿನ್ನ ತಲೆಯಿಂದ ಹೊರಬಿದ್ದು ಕಾಲುಗಳ ಬಳಿ ಬಂದು ಕುಳಿತುಕೋ.

೧೭. ಮಲಿನತೆ : 'ಹರ್-ಕೀ-ಪಾವಡಿ'ಯ ಬಳಿ ಅಸಂಖ್ಯಾತ ಯಾತ್ರಿಗಳು ನೆರೆದಿದ್ದಾರೆ, ಮತ್ತು ಗಂಗೆಯಲ್ಲಿ ಮುಳುಗಿ ಎದ್ದು, ಮುಳುಗಿ ಎದ್ದು, ಮೊರೆಯಿಡುತ್ತಿದ್ದಾರೆ– "ಗಂಗೆ!... ಗಂಗಾಮಾತೆ, ನಮ್ಮ ಪಾಪಗಳನ್ನು ತೊಳೆದುಬಿಡು!..."

ಅವರ ಪಾಪಗಳ ಧೂಳು ಮತ್ತು ಕೊಳೆಯಿಂದ ಪವಿತ್ರ ಗಂಗೆ ಎಷ್ಟು ಮಲಿನಳಾಗಿದ್ದಾಳೆಂದರೆ, ಪಾಪಿಗಳು ಅದರಲ್ಲಿ ಸ್ನಾನ ಮಾಡಿದ ಮೇಲೆ ಇನ್ನೂ ಹೆಚ್ಚು ಪಾಪಿಗಳಾಗಿ ತೋರುತ್ತಾರೆ.

೧೮. ಸರಳ ಜನರು : ಎಲ್ಲರೂ ಅವನನ್ನು ಮೂರ್ಖನೆಂದು ತಿಳಿದಿದ್ದರು.

ಏಕೆ?

ಏಕೆಂದರೆ ಅವನು ಏನನ್ನೂ ಹೇಳುತ್ತಿರಲಿಲ್ಲ. ಮತ್ತು ಏನಾದರೂ ಮಾತಾಡುವ ಪ್ರಯತ್ನ ಮಾಡಿದಾಗ ಅವನು ನಿಜವಾಗಿಯೂ ಮೂರ್ಖನಂತೆ ಕಾಣತೊಡಗುತ್ತಿದ್ದ.

ಆದಾಗ್ಯೂ ನನ್ನನ್ನು ಸದಾ ಕೊರೆಯುತ್ತಿದ್ದ ಯೋಚನೆ ಏನೆಂದರೆ, ಯಾವುದೋ ಒಂದು ದೊಡ್ಡ ಜಟಿಲ ರಹಸ್ಯವನ್ನು ಹೇಳುವ ಪ್ರಯತ್ನ ಮಾಡಿದಾಗಲೆಲ್ಲ ಅವನು ಭೋಳೆಯಂತೆ ತೋರುತ್ತಾನೆ. ಇಲ್ಲವಾದರೆ, ಯಾವುದೋ ಸಪಾಟು ವಿಷಯವಾಗಿದ್ದರೆ ಕುಶಲಮತಿಗಳ ಹಾಗೆ ಅವನೂ ಸಹ ಬೇಕೆಂದೇ ಅದನ್ನು ಹಾಸುಹೊಕ್ಕಾಗಿ ಹೆಣೆದು ತನ್ನ ಪ್ರಭಾವ ಬೀರಿಬಿಡುತ್ತಿದ್ದ.

೧೯. ಮಾರ್ಕೆಟ್ ಇಕಾನಮಿ : ಕಂಪೆನಿಯ ಮ್ಯಾನೇಜರ್ ಒಬ್ಬ ಗಿರಾಕಿ ಮತ್ತು ಅವನ ಪತ್ನಿಯನ್ನು ಷೋ ರೂಮಿಗೆ ಕರೆದುಕೊಂಡು ಹೋದನು. ಅಲ್ಲಿ ಮೂಲೆಯೊಂದರಲ್ಲಿ ನಿಂತಿದ್ದ 'ರೋಬೋ'ನ ಪರಿಚಯ ಮಾಡಿಸತೊಡಗಿದನು....

"ಹೌ-ಡು-ಯು ಡೂ, ಸರ್?... ಮ್ಯಾಡಮ್, ಹೌ-ಡು-ಯು ಡೂ?" ರೋಬೋನ ಸಭ್ಯ ನಡತೆಯಿಂದ ಗಿರಾಕಿಯ ಪತ್ನಿ ಬಹಳ ಪ್ರಭಾವಿತಳಾದಳು..."ಬೆಲೆ?"

"ಐದು ಲಕ್ಷ ರೂಪಾಯಿ, ಮ್ಯಾಡಮ್!"

ರೋಬೋ ಈ ರೀತಿ ಆ ಮಹಿಳೆಯನ್ನು ಸಂಬೋಧಿಸಿದುದನ್ನು ಕೇಳಿ, ಮ್ಯಾನೇಜರ್ ನಿರರ್ಗಳವಾಗಿ ಉಸುರಿದ, "ಮೇಂಟೆನೆನ್ಸ್‌ಗೆ ಬಹಳವೆಂದರೆ ತಿಂಗಳಿಗೆ ಒಂದು ಸಾವಿರ ರೂಪಾಯಿ. ನಿಮ್ಮ ಮನೆಯ ಎಲ್ಲ ಕೆಲಸಗಳನ್ನು ಇವನು ಎಷ್ಟು ಮುತುವರ್ಜಿಯಿಂದ ಮಾಡುವನೆಂದರೆ, ನೀವು ಶಾಬಾಷ್ ಎನ್ನುವಿರಿ."

"ನೋ!" ಅವನನ್ನು ತಡೆದು ಶ್ರೀಮಂತ ಗ್ರಾಹಕ ಬಲು ಒರಟಾಗಿ ಹೇಳಿದ, "ಮಾಹೆಯಾನ ಕೇವಲ ಒಂದು ಸಾವಿರ ರೂಪಾಯಿಗಾಗಿ ನಾನು ಸ್ವತಃ ನನ್ನನ್ನು ಒಬ್ಬ ರೋಬೋನಾಗಿ ಪರಿವರ್ತಿಸಿಕೊಂಡಿರುವಾಗ, ನಿಮ್ಮ ರೋಬೋಗಾಗಿ ಐದು ಲಕ್ಷ ಏಕೆ ಹಾಳು ಮಾಡಲಿ?"

೨೦. ರಾಣಿಯರು : ನಾನು ಕಥೆಯನ್ನು ಟೀಕಿಸಿದೆ. "ಆದರೆ ಮೇಡಮ್, 'ಕಥೆಗಳಿಗೂ ರೈತರಿಗೂ ಏನು ಸಂಬಂಧ? ಕಥಾ ರಾಣಿಯರು ರಾಜರುಗಳಿಗೆ ಮಾತ್ರ ಸೇರಿದವರು'ಎಂದು ಪುರಾತನ ಜನರು ಹೇಳುತ್ತಿದ್ದರು."

ಕಥೆ ನನ್ನನ್ನು ತಡೆದು ಹೇಳಿತು : "ರಾಜರಂತೂ ಈಗ ನಿವೃತ್ತಿವೇತನ ಪಡೆದು ಎಲ್ಲಿ ಮಾಯವಾದರೋ ತಿಳಿಯದು. ಇಂತಹ ಪರಿಸ್ಥಿತಿಯಲ್ಲಿ ರಾಣಿಯರು ಕೈ ಮೇಲೆ ಹಾಕಿ ಅರಮನೆಗಳಲ್ಲಿ ಕುಳಿತಿರಬೇಕೆ?"

"ಹ್ನುಂ, ಇದೇನೋ ಸರಿ."

"ಆದ್ದರಿಂದ ನಾವು ಮುನ್ಷಿಗಳ, ರೊಟ್ಟಿ ಮಾಡುವವರ ಮತ್ತು ಸಿಪಾಯಿಗಳ ಜೊತೆ ಅರಮನೆಗಳಿಂದ ಓಡಿ ಬಂದಿದ್ದೇವೆ."

"ಈಗ ಹೇಗೆನ್ನಿಸುತ್ತೆ?"

"ಸಂತೋಷವೆನಿಸುತ್ತದೆ. ರಾಜರುಗಳೊಂದಿಗೆ ಮಲಗುವುದು ನಮ್ಮ 'ಕರ್ತವ್ಯ' ಎನಿಸುತ್ತಿತ್ತು. ಈಗ ಇವರೊಂದಿಗೆ... ನಮ್ಮ 'ಇಷ್ಟ'!"

೨೧. **ಸಂವೇದನೆ :** ಅವನು ಸಂತೋಷದಿಂದ ಚೀರಿದ : "ನನ್ನ ಮೂಗು ತೆರೆದುಕೊಂಡಿದೆ!"

"ಮೂಗು ತೆರೆದುಕೊಂಡಿದೆ?"

"ಹೌದು. ಕೆಲವು ವರ್ಷಗಳಿಂದ ಅದು ಮುಚ್ಚಿಹೋಗಿತ್ತು. ಈಗ ಅಕಸ್ಮಾತ್ ತೆರೆದುಕೊಂಡಿದೆ," ಸಂತಸದ ಅತಿರೇಕದಲ್ಲಿ ಅವನು ಮೂಗಿನ ಮೂಲಕ ಒಂದು ದೀರ್ಘವಾದ ಉಸಿರೆಳೆದು ಮುಂದುವರಿಸಿದ, "ನನಗೆ ನನ್ನ ಕೋಣೆಯಿಂದ ಸತ್ತ ಇಲಿಯೊಂದರ ವಾಸನೆ ಬರುತ್ತಿದೆ. ಹುರ್ರೇ...!"

೨೨. **ಸಂಶಯ :** "ಯಾರದು?" ಅವನು ಸುಮ್ಮನೆ ಒಂಟಿ ಕುಳಿತಿದ್ದಾಗ ಧ್ವನಿ ಕೇಳಿ ಬೆಚ್ಚಿಬಿದ್ದ.

"ಬಂದೆ", ಎನ್ನುತ್ತ ಚಂಗನೆ ಎದ್ದು ಬಾಗಿಲ ಬಳಿ ಧಾವಿಸಿದ. ಆದರೆ ಅಗುಳಿಯನ್ನು ತೆಗೆಯುತ್ತಿದ್ದಂತೆ ಅವನ ತುಟಿಗಳ ಮೇಲೆ ಒಂದು ವಿವಶ ಮುಗುಳುನಗೆ ಸುಳಿಯಿತು... "ನಾನೆಂತಹ ಮರುಳ! ಅವಳು ಸತ್ತು ಹೋಗಿ ಒಂದು ಯುಗವೇ ಕಳೆದಿದೆ!"

೨೩. **ದೋಷ :** ಸಾಮಾನ್ಯವಾಗಿ ನಾನು ತುಂಬ ಜಾಗರೂತೆಯಿಂದ ಕೆಲಸ ಮಾಡುತ್ತೇನೆ. ಆದರೆ ಒಮ್ಮೆ ಒಂದು ಕೋಮಲ ಮತ್ತು ನಾಜೂಕು ಕಥೆ ಸೃಷ್ಟಿಯ ಪ್ರಕ್ರಿಯೆಯಲ್ಲಿದ್ದಾಗ ನನ್ನ ಕೈಯಿಂದ ಜಾರಿತು. ಪಾಪ, ಅದರ ಒಂದು ಕಾಲು ಮುರಿಯಿತು!

ಈ ಅಪಘಾತ ಜರುಗಿ ಇಂದಿಗೆ ಹಲವು ವರ್ಷಗಳಾದವು. ಆ ಕಥೆ ಈಗ ಪೂರ್ಣ ಯುವತಿಯಾಗಿದ್ದಾಳೆ. ತುಂಬ ಸುಂದರಿಯಾಗಿದ್ದಾಳೆ. ಆದರೆ ಇಂದಿಗೂ ಕುಂಟುತ್ತ ನಡೆಯುತ್ತಾಳೆ!

■ **ಪ್ರೊ. ಅ. ಮ. ಖಾನ್ :**
೮/೧, ಆರ್.ವಿ. ಲೇ ಔಟ್, ಕುಮಾರ ಪಾರ್ಕ್ ವೆಸ್ಟ್, ಬೆಂಗಳೂರು-೫೬೦ ೦೨೦ ■

೫ ರುಬಾಯಿ + ೨ ಗಜಲು — ಜಂಬಣ್ಣ ಅಮರಚಿಂತ

ರುಬಾಯಿಗಳು

೧. ಒಂದಿದೆ ನದಿ, ನೂರಾರು ಅಲೆಗಳು
ಒಂದಿದೆ ನಾವೆ, ನೂರಾರು ಸುಳಿಗಳು
ಒಬ್ಬ ಮನುಷ್ಯ, ನೂರಾರು ರೂಪಗಳು
ಜೀವನ ಸೆಲೆ ಒಂದು, ನೂರಾರು ಕೂಪಗಳು

೨. ಒಂದು ಹೂ ನಕ್ಕರೆ ನನಗೆ ಹೃದಯದ ನೆನಪಾಗುವುದು
ಒಂದು ಕಿರಣ ಹೊಕ್ಕರೆ ನನಗೆ ಉದಯದ ನೆನಪಾಗುವುದು
ಪ್ರೇಮವದು ಎಲ್ಲರ ಎದೆಗಳನಾಳುತಿಹುದು
ಮಲಗಿದ ಹೃದಯದ ಕದ ತಟ್ಟಿ ತಟ್ಟಿ, ಎಬ್ಬಿಸುವುದು

೩. ಅವಳು ಬರಲಿಲ್ಲ, ಅವಳ ನೆನಪು ಬಂದಿದೆ
ತಿಂಗಳು ಬರಲಿಲ್ಲ, ಬೆಳದಿಂಗಳು ಬಂದಿದೆ

ಅವಳಿಗಿಂತ ಅವಳ ನೆನಪು ಮಧುರವಾಗಿದೆ
ಹಳೆ ಮದ್ಯದಲಿ ಹೊಸ ನಶೆ ತುಂಬಿದೆ

೪. ಕಲ್ಲೂರಿನಲಿ ಒಂದು ಗಾಜಿನ ಮನೆ ಕೊಂಡೆವು
ಕಂಡಕಂಡವರ ಕೈಯಲ್ಲಿ ಕಲ್ಲನ್ನೇ ಕಂಡೆವು
ಕಲ್ಲೂರಿನಲ್ಲಿ ಯಾಕೆ ಗಾಜಿನ ಮನೆ ಅಂದರು
ಹೃದಯವಿದ್ದ ಜಾಗದಲ್ಲಿ ಕಲ್ಲನಿಟ್ಟುಕೊಂಡೆವು

೫. ಹಕ್ಕಿಗಳು ಹಾರಿ, ಹಾರಿ, ಕಡ್ಡಿ ಕಡ್ಡಿ ಆರಿಸಿ
ಗುಡ್ಡದಂಥ ಗೂಡು ಕಟ್ಟಿದವು ಬಾಳಲು ಆಶಿಸಿ
ಅರಿಯದಾದವು ಆ ಮುಗ್ಧ ಸ್ನಿಗ್ಧ ಪಕ್ಷಿಗಳು
ಸುಡುವ ಇಂಧನ ಕಡ್ಡಿಯಲ್ಲಿದೆ ಸುಟ್ಟುಹೋಗಲು ನಶಿಸಿ

ಗಜಲುಗಳು

೧.

ಎಲ್ಲಿ ಹೃದಯವಿದೆಯೊ, ಅಲ್ಲಿ ವೇದನೆಯ ಆಗರವಿದೆ
ವಾಲ್ಮೀಕಿಯ ಹೃದಯ ಶೋಕದಿ ರಾಮಾಯಣದ ಶ್ಲೋಕಸಾಗರವಿದೆ
ಎಲ್ಲಿ ಮಿಲನವಿದೆಯೊ, ಅಲ್ಲಿ ವಿದಾಯದ ತಾಪವಿದೆ
ಕಾಳಿದಾಸನ ಶಾಕುಂತಲದಿ, ವಿಪ್ರಬಂಭ ರಸ ಶೃಂಗಾರವಿದೆ
ಎಲ್ಲಿ ಕೊಳಲಿದೆಯೊ, ಅದರ ಹೃದಯದ ತುಂಬಾ ರಂಧ್ರಗಳಿವೆ
ವೇದನೆ ಹೃದಯದಿ ರಂಧ್ರ ಕೊರೆದಾಗ ಜೀವಂತ ಕೊಳಲಿನ ಸುಸ್ವರವಿದೆ
ಎಲ್ಲಿ ಕಾವ್ಯವಿದೆಯೊ, ಅಲ್ಲಿ ಜೀವನದ ತಾನವಿದೆ
ಕಾವ್ಯದಲ್ಲಿ ಬಾಳಿನ ಭವಿಷ್ಯದ ಭವ್ಯ ಸಾಕಾರವಿದೆ

೨.

ನಮ್ಮ ಕಂಗಳಿಂದ ಅವರು ಕನಸುಗಳನು ದೂರ ಮಾಡಿದರು
ನಮ್ಮ ಕಂಗಳು ಪ್ರೇಮದ ಕನಸು ಕಾಣುವ ತಪ್ಪು ಮಾಡಿದ್ದವು
ಮಿಲನಕೆ ನಮ್ಮ ಹೃದಯಗಳು ಕರಾರು ಮಾಡಿಕೊಂಡಿದ್ದವು
ಮಿಲನಕೆ ಕೈ ಚಾಚುವ ಮುನ್ನ ಕೈಗಳು ಕತ್ತರಿಸಲ್ಪಟ್ಟಿದ್ದವು
ಯಾರನ್ನು ಹೇಳಿ ಕೇಳಿ ಯಾರನ್ನು ಯಾರೂ ಪ್ರೀತಿಸುವುದಿಲ್ಲ
ಸಹಜದಿ ಅರಳಿದ ಪ್ರೇಮಪುಷ್ಪಗಳು ಕಾಲಿಂದ ಹೊಸಕಲ್ಪಟ್ಟಿದ್ದವು
ಪ್ರೇಮವಿಲ್ಲದೆ ಈ ಜಗವು ಹುಟ್ಟಿದ್ದಾದರೂ ಹೇಗೆ ಹುಟ್ಟಿತು
ಪ್ರತಿ ಬಾರಿ ಪ್ರೇಮ ಹೃದಯಗಳು ನಿರ್ದಯದಿ ಕೊಲ್ಲಲ್ಪಟ್ಟಿದ್ದವು
ದ್ವೇಷಾಸೂಯೆಯ ಮೂರ್ತಿಗಳು ಮನದಲಿ ಪ್ರತಿಷ್ಠಾಪಿಸಲ್ಪಟ್ಟವು
ಪ್ರೇಮ-ಮಮಕಾರದ ಮೂರ್ತಿಗಳು ನಿಮಜ್ಜನ ಮಾಡಲ್ಪಟ್ಟಿದ್ದವು

■ ಜಂಬಣ್ಣ ಅಮರಚಿಂತ :
೮-೧೧-೧೮೧/೭೬, ಅಮರಚಿಂತ ನಿಲಯ, ವಿದ್ಯಾನಗರ, ರಾಯಚೂರು - ೫೮೪ ೧೦೩ ■

ದ್ರಾವಿಡ ಸಂಬಂಧ -೭

— ಷ. ಶೆಟ್ಟರ್

ಮುಸುಕು ಮುಂಜಾವಿನ ಕನ್ನಡ ನಾಡು ಮತ್ತು ನುಡಿ

ಇತಿಹಾಸದ ಮುಸುಕು ಮುಂಜಾವಿನ ಕಾಲದ ಕರ್ನಾಟಕವು ಎರಡು ವಿಭಾಗಗಳಲ್ಲಿ ಹಂಚಿಕೊಂಡಿತ್ತು: ಒಂದು, ಮೌರ್ಯ-ಪ್ರಾಕೃತ ಪ್ರಭಾವಕ್ಕೊಳಗಾಗಿದ್ದ (ಕಲಬುರ್ಗಿಯಿಂದ ಚಿತ್ರದುರ್ಗ ಜಿಲ್ಲೆವರೆಗಿನ) ಉತ್ತರಾರ್ಧ; ಇನ್ನೊಂದು, ಮೌರ್ಯ ಪ್ರಭಾವದಿಂದ ಹೊರಗಿದ್ದು ತಮಿಳರೊಂದಿಗೆ ಒಂದಿಲ್ಲೊಂದು ಬಗೆಯಲ್ಲಿ ಸ್ಪಂದಿಸುತ್ತಿದ್ದ ದಕ್ಷಿಣಾರ್ಧ. ಉತ್ತರ ಘಟಕದ ಬೃಹತ್ ಶಿಲಾಯುಗದ ಜನಾಂಗಗಳ ಮೇಲೆ ಅಧಿಕಾರ ಸಾಧಿಸಿಕೊಂಡವರಲ್ಲಿ ಮೌರ್ಯರಲ್ಲದೆ ಶಾತವಾಹನರು ಪ್ರಧಾನರಾಗಿದ್ದರು. ಇವರ ಒತ್ತಡದ ಇಲ್ಲವೆ ಮತ್ತಿನ್ನಾವ ಬಗೆಯ ಅನಿವಾರ್ಯತೆಗೆಒಳಗಾಗಿ ಈ ಜನಾಂಗಗಳು ಬ್ರಾಹ್ಮೀ ಲಿಪಿ ಮತ್ತು ಪ್ರಾಕೃತ ಭಾಷೆಯನ್ನು ವ್ಯವಹಾರ ಮಾಧ್ಯಮವನ್ನಾಗಿ ಮಾಡಿಕೊಂಡವು. 'ದಕ್ಷಿಣ ಬ್ರಾಹ್ಮೀ' ಪ್ರಭೇದವೊಂದು ಇಲ್ಲಿ ಅಸ್ತಿತ್ವದಲ್ಲಿದ್ದು, ಕಲಬುರ್ಗಿ(ಸನ್ನತಿ)ಯಿಂದ ಚಿತ್ರದುರ್ಗ (ಚಂದ್ರವಳ್ಳಿ), ಬಳ್ಳಾರಿ(ಹಿರೇಹಡಗಲಿ) ಉತ್ತರ ಕನ್ನಡ(ಬನವಾಸಿ)ದ ವರೆಗೂ ಅದು ಬಳಕೆಯಲ್ಲಿದ್ದುದನ್ನು ಆರಂಭಕಾಲದ ಶಾಸನಗಳು ತಿಳಿಸುವುವು. ಅಲ್ಲದೆ, ಈ ಕಾಲದ ಶಾತವಾಹನ ಹಾಲನು ಪ್ರಾಕೃತದಲ್ಲಿ ರಚಿಸಿದ ಕೃತಿಯೊಂದು *(ಸತ್ತಸಯೀ)* ಅಂದಿನ ಸಾಹಿತ್ಯ ಮಾಧ್ಯಮವನ್ನು ಪರಿಚಯಿಸುವುದು.

ಈ ಬಗೆಯ ಚಿತ್ರಣ ದಕ್ಷಿಣ ಘಟಕದಲ್ಲಿ ದೊರೆಯದಿದ್ದರೂ ಇಲ್ಲಿಯ ಬೃಹತ್ ಶಿಲಾಯುಗದ ಜನಾಂಗಗಳು ತಮಿಳಿಗಿಂತ ಭಿನ್ನವಾದ 'ವಡುಗ' ಭಾಷೆಯನ್ನು ಬಳಸುತ್ತಿದ್ದರೆಂಬುದನ್ನು ಶಂಗಂ ಸಾಹಿತ್ಯ ಸ್ಪಷ್ಟಗೊಳಿಸಿರುವುದು. ಇವುಗಳಲ್ಲಿ ಕೆಲವಾದರೂ ಬ್ರಾಹ್ಮೀಯನ್ನು ಪರಿಚಯಿಸಿಕೊಂಡಿದ್ದ ಸಾಧ್ಯತೆಯಿದೆ, ಆದರೆ ಸ್ಪಷ್ಟ ಆಧಾರಗಳಿಲ್ಲ. ಜೈನ ಧರ್ಮದೆಡೆ ವಾಲಿದ್ದ 'ಎರುಮೈ', 'ಪುನ್ನಾಟ' ಮುಂತಾದವರು ಬ್ರಾಹ್ಮೀ ಲಿಪಿಯನ್ನು ತಮಿಳುನಾಡಿನ ಗುಹಾಲಯಕ್ಕೆ ಕೊಂಡೊಯ್ದ ಸಾಧ್ಯತೆ ಇಲ್ಲದಿಲ್ಲ. ವಿರಳವಾಗಿಯಾದರೂ ಬೌದ್ಧರ ನೆಲೆಗಳು ಇಲ್ಲಿದ್ದು ಇಲ್ಲಿ ಬ್ರಾಹ್ಮೀ ಮತ್ತು ಪ್ರಾಕೃತ ಬಳಕೆಯಲ್ಲಿದ್ದವೆನ್ನಲು ಬೆಂಗಳೂರು ಬಳಿಯ ರಾಜಘಟ್ಟದಲ್ಲಿ ಇತ್ತೀಚೆಗೆ ಬೆಳಕು ಕಂಡ, ಕ್ರಿ.ಶ. ಸು. ೪-೫ನೆಯ ಶತಮಾನದ, ಕುರುಹುಗಳು ಸಾಕ್ಷಿ ಒದಗಿಸುವುವು.[೧] ಇದು ಏನೇ ಇರಲಿ, ಕನ್ನಡ ಭಾಷೆಯ ಮೊದಲ ಮೊಳಕೆಗಳು ಒಡೆದದ್ದು ಪ್ರಾಕೃತ ಪ್ರಭಾವದ ಹೊರಗಿದ್ದ ದಕ್ಷಿಣ ಕರ್ನಾಟಕದಲ್ಲಾಗಲಿ ಮೌರ್ಯ-ಶಾತವಾಹನರ ಪ್ರಭಾವಕ್ಕೊಳಗಾಗಿದ್ದ ಉತ್ತರ ಕರ್ನಾಟಕದಲ್ಲಾಗಲಿ ಅಲ್ಲ ಎಂಬುದರ ಬಗ್ಗೆ ಅನುಮಾನವಿಲ್ಲ. ಇದಾದ ಹಲವು ಶತಮಾನಗಳ ನಂತರ ಮಾರ್ಗಕಾರನು ಬೆಳ್ವೊಲ ಪರಿಸರದಲ್ಲಿ ತಿರುಳ್ಗನ್ನಡವನ್ನು ಗುರುತಿಸಿದ್ದು ಮತ್ತು ಪುಲಿಗೆರೆ-ಬನವಾಸಿಯಲ್ಲಿ ಕನ್ನಡದ ಕಂಪನ್ನು ಪಂಪನು ಆಸ್ವಾದಿಸಿದ್ದು ಬೇರೆ ಮಾತು.

ತಮ್ಮ ಉತ್ತರಕ್ಕಿದ್ದ ತಮಿಳೇತರ ಜನಾಂಗಗಳನ್ನೆಲ್ಲ ಸಾಮಾನ್ಯವಾಗಿ 'ವಡುಗ'ರೆಂದೂ ಒಮ್ಮೊಮ್ಮೆ 'ಆರ್ಯ'ರೆಂದೂ ಶಂಗಂ ತಮಿಳರು ಗುರುತಿಸುತ್ತಿದ್ದುದನ್ನು ಈಗಾಗಲೇ

ಕಂಡಿದ್ದೇವೆ. ಇದಲ್ಲದೆ ಪ್ರಾದೇಶಿಕ ಆಧಾರದ ಮೇಲೆ ಕೊಂಗ, ಕುಡುವ, ಕೊಂಕಣ, ಕರ್ಕ, ಮೈಸೆ, ಪುನ್ನಾಟ ಎಂಬುವರನ್ನೂ ಮನೆತನ ಅಥವಾ ವಂಶದ ಆಧಾರದ ಮೇಲೆ ಕೋಸರ್, ಕಟಂಬು(ಕದಂಬ), ನೂರ್ರವರ್-ಕಣ್ಣರ್, ಗಂಗರ್ ಮುಂತಾದವರನ್ನೂ ಅವರು ಗುರುತಿಸಿದ್ದುದನ್ನು ಇಲ್ಲಿ ಗಮನಿಸುವುದವಶ್ಯ.

ಮೈಸೂರು ಪ್ರದೇಶದ ಆದಿ ಕನ್ನಡಿಗರು : ಎರುಮೈ ಊರವರ್ : ಮೌರ್ಯರು ತಮ್ಮ ದಕ್ಷಿಣದ ರಾಜಧಾನಿಯನ್ನು ಸುವರ್ಣಗಿರಿಯಲ್ಲಿ ಸ್ಥಾಪಿಸಿಕೊಳ್ಳುತ್ತಿದ್ದ ಕಾಲದಲ್ಲಿ ಇಂದಿನ ಮೈಸೂರು ಪ್ರದೇಶ ಕೆಲವು ಸ್ವತಂತ್ರ ಜನಪದಗಳ ಅಂಕಿತಕ್ಕೊಳಗಾಗಿತ್ತು. ಇವು ಮೌರ್ಯರೊಡನೆ ಘರ್ಷಣೆಗಿಳಿಯುತ್ತಿದ್ದವೆಂಬುದಕ್ಕಾಗಲೀ ಅಶೋಕನು ಮಹಿಷ ಮಂಡಳಕ್ಕೆ ಕಳಿಸಿದ ಧರ್ಮಪ್ರಸಾರಕರನ್ನು ಪ್ರತಿರೋಧಿಸುತ್ತಿದ್ದರೆಂಬುದಕ್ಕಾಗಲೀ ಆಧಾರಗಳಿಲ್ಲ. ಅಂಥವರಲ್ಲಿ ಮೊದಲಿಗರು ಎರುಮೈನಾಯಕರು – ಅಂದರೆ ಮಹಿಷಮಂಡಲದ ಒಡೆಯರು. ಕಾವೇರಿಯಾಚೆಯ ರಾಜಮಂಡಲದಲ್ಲಿ ತಮ್ಮ ಸ್ಥಾನ ಗಳಿಸಿಕೊಳ್ಳುವ ಹೆಬ್ಬಯಕೆಯನ್ನು ಹೊಂದಿದ್ದ ಎರುಮೈಗಳು ತುರುಗೋಳ್ ಕಾಳಗ ಪ್ರಚಂಡರಾಗಿದ್ದರೆಂದು ಗುರುತಿಸಲಾಗಿದೆ.[3] ಶತ್ರುಗಳ ಪಶುಸಂಪತ್ತನ್ನು ಕೊಳ್ಳೆ ಹೊಡೆಯುವುದೆಂದರೆ ಅವರಿಗೆ ಯುದ್ಧಕ್ಕೆ ಆಹ್ವಾನವೀಯುವುದು, ಎಂಬ ಅಂದಿನ ಯುಗಧರ್ಮವನ್ನು ಅರಿತುಕೊಂಡರೆ ಎರುಮೈನಾಯಕರು ಮೇಲಿಂದ ಮೇಲೆ ಈ ಸಾಹಸಕ್ಕೇಕೆ ಕೈಹಾಕುತ್ತಿದ್ದರೆಂಬುದನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಆದರೆ ಇಂತಹ ಚಿಕ್ಕಪುಟ್ಟ ಕದನಗಳಲ್ಲಿಯೇ ಸಾರ್ಥಕತೆಯನ್ನು ಕಂಡುಕೊಳ್ಳದೆ ಇವರು ತಮಿಳುನಾಡಿನ ಮೂವರು ಕಿರೀಟಧಾರಿ ಅರಸರಾದ ಪಾಂಡ್ಯ, ಚೋಳ ಮತ್ತು ಚೇರರನ್ನು ಕೆಣಕಲೂ ಹಿಂಜರಿಯಲಿಲ್ಲವೆಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಪಾಂಡ್ಯರಾಜನ ಮೇಲೆ ದಂಡೆತ್ತಿ ಹೋದ ಅಂದಿನ ಏಳು ಪ್ರಧಾನ ರಾಜಶಕ್ತಿಗಳಲ್ಲಿ ಇವರೂ ಒಬ್ಬರಾಗಿದ್ದರೆಂಬುದನ್ನು ಮತ್ತು ಈ ಎರಡು ಪಂಗಡಗಳ ಮಧ್ಯ ನಡೆದ ಕಾಳಗವು ಅಲಂಕಾಲಮ್(ತಂಜಾವೂರು ಜಿಲ್ಲೆ)ನಲ್ಲಿ ಸಂಭವಿಸಿದುದನ್ನು ಶಂಗಂ ಕವಿಗಳು ಸಮಗ್ರವಾಗಿ ವರ್ಣಿಸಿರುವರು. ಅಂದರೆ ಮೈಸೂರು ಪ್ರದೇಶದಿಂದ ಆಳುತ್ತಿದ್ದ ಈ ನಾಯಕರು ತಂಜಾವೂರಿನ ವರೆಗೂ ತಮ್ಮ ದಂಡನ್ನು ಕೊಂಡೊಯ್ದಿದ್ದರೆಂಬ ಅಂಶ ಸ್ಪಷ್ಟಗೊಳ್ಳುವುದು. 'ಎರುಮೈನಲ್‌ನಾಟು'ವಿನ ಗಡಿ ಒಂದು ಕಾಲದಲ್ಲಿ 'ಅಯಿರಿ' ನದಿಯಿಂದ ಗುರುತಿಸಲ್ಪಟ್ಟಿತ್ತೆಂದು ತಿಳಿದುಬರುವುದು.[3] ಈ ನದಿಗೂ ಐವಾರ್ ಬೆಟ್ಟ ಪ್ರದೇಶಕ್ಕೂ ಏನಾದರೂ ಸಂಬಂಧವಿದ್ದರೆ, ಇಂದಿನ ದಿಂಡಿಗಲ್ ಜಿಲ್ಲೆಯ ವಾಯವ್ಯ ಪ್ರದೇಶಕ್ಕೆ ಇವರ ಅಧಿಕಾರ ವಿಸ್ತರಿಸಿತ್ತೆನ್ನಬೇಕಾಗುವುದು. ಅಲ್ಲದೆ ಇವರನ್ನು ಕುಡನಾಡ-ಎರುಮೈಗಳೆಂದು ಕವಿ ಮಾಮೂಲ್ನಾರ್ ಗುರುತಿಸಿರುವುದರಿಂದ ಇವರು ಕೊಡಗಿನ ಒಡೆಯರೂ ಆಗಿದ್ದರೆನ್ನಬೇಕಾಗುವುದು.[4] ಅಂದರೆ ಎರುಮೈನಾಯಕರ ಅಧಿಕಾರ ಕ್ಷೇತ್ರವು ಒಂದೆಡೆ ಕೊಡಗಿಗ, ಇನ್ನೊಂದೆಡೆ ದಿಂಡಿಗಲ್ ವಾಯವ್ಯ ಭಾಗಕ್ಕೆ ವಿಸ್ತರಿಸಿತ್ತೆಂಬುದು ಮತ್ತು ಅವರ ಕಾರ್ಯಕ್ಷೇತ್ರವು ತಮಿಳುನಾಡಿನ ತಂಜಾವೂರನ್ನು ತಲುಪಿತ್ತೆಂಬುದು ಇಲ್ಲಿ ಸ್ಪಷ್ಟಗೊಳ್ಳುವುದು.

ರಾಜಕೀಯ ಕ್ಷೇತ್ರದಲ್ಲಿ ಮಾತ್ರವಲ್ಲದೆ ಸಾಹಿತ್ಯ ಕ್ಷೇತ್ರದಲ್ಲಿಯೂ ತಮಿಳಹಂಸ ಪ್ರಧಾನ ಅರಸರನ್ನು ಸರಿಗಟ್ಟಲು ಎರುಮೈನಾಯಕರು ಪ್ರಯತ್ನಪಟ್ಟರೆಂದು ಕಾಣುವುದು. ಇವರ

ಪೋಷಣೆಯಲ್ಲಿದ್ದ ಇಬ್ಬರು ಶಂಗಂ ಕವಿಗಳ ಬಗ್ಗೆ ಮತ್ತು ಅವರಲ್ಲಿ ಹಿರಿಯನಾದ 'ಎರುಮೈವೆಳಿಯಾಣಾರ್' ತನ್ನ ಪೋಷಕನ ಹೆಸರಿನಿಂದ ಕರೆದುಕೊಂಡ ಬಗ್ಗೆ ವಿವರಗಳು ದೊರೆಯುವುವು.[೫]

ಸ್ವತಃ ಎರುಮೈನಾಯಕರ ಇಲ್ಲವೆ ಅವರ ಕೆಲವು ಅಧಿಕಾರ ವರ್ಗದವರ ಒಲವು ಜೈನ ಧರ್ಮದೆಡೆ ವಾಲಿತ್ತೆಂದು ತೋರುವುದು. ತಮಿಳುನಾಡಿನಲ್ಲಿ ಇವರ ವ್ಯವಹಾರವು ತಮಿಳು ಭಾಷೆ ಮತ್ತು ಬ್ರಾಹ್ಮೀ ಲಿಪಿಯಲ್ಲಿ ನಡೆಯುತ್ತಿತ್ತೆಂಬುದು ಎರುಮೈನಾಡಿನ ಕುಮಟೂರು (ಕುಂಬಳೂರು > ಕುಂಬ್ಳೂರು) ಗ್ರಾಮದ ಕವಟಿ(ಗೌಡತಿ)ಯೊಬ್ಬಳ ಬಗ್ಗೆ ಬರೆಸಿದ ಕ್ರಿ.ಪೂ. ೧ನೆಯ ಶತಮಾನದ ಶಾಸನದಿಂದ ವ್ಯಕ್ತವಾಗುವುದು. ಸಮಾಧಿ ವ್ರತಾಚರಣೆಗೆ ಸಿದ್ಧಳಾಗಿ ತಮಿಳುನಾಡಿನ ಸಿತ್ತನವಾಸಲ್ ಗುಹಾಲಯವನ್ನು ತನ್ನ ದೇಹದಂಡನೆಗೆ ಆಯ್ಕೆ ಮಾಡಿಕೊಂಡಾಗ ಅವಳ ಅನುಕೂಲಕ್ಕಾಗಿ ಒಂದು ಶಿಲಾಧಿಷ್ಠಾನವನ್ನು ಕೊರೆಸಿಕೊಟ್ಟ ವಿವರ ಈ ಶಾಸನದಲ್ಲಿ ಬರುವುದು.[೬] ಕನ್ನಡ ಪದಗಳನ್ನು ಅಲ್ಲಲ್ಲಿ ಬಳಸಿ ರಚಿಸಿರುವ ಈ ತಮಿಳು ಶಾಸನದಲ್ಲಿ ತಮಿಳಿನ 'ಎರುಮೈ' ಪದದ ಬದಲು ಕನ್ನಡದ 'ಎರುಮಿ'ಯನ್ನು ಮತ್ತು ತಮಿಳರಲ್ಲಿ ಬಳಕೆಯಲ್ಲಿರದ 'ಪೊಸಿಲ್'(ಹೊಸಿಲು=ಹೊಸ್ತಿಲು), 'ತಾಯಿಯರ್', ಎಂಬೆಲ್ಲ ಪದಗಳನ್ನು ಬಳಸಿರುವುದು ಆರಂಭಕಾಲದ ತಮಿಳಿನ ಮೇಲೆ ಪ್ರಾತಃಕಾಲದ ಕನ್ನಡವು ಬೀರಿದ ಪ್ರಭಾವವನ್ನು ಸೂಚಿಸುವುದೆಂದು ಬಗೆಯಲಾಗಿದೆ.

ಎಷ್ಟು ಕಾಲ ಬಾಳಿದರು? : ಕ್ರಿಸ್ತಪೂರ್ವ ಕಾಲದಲ್ಲಿ ಮೈಸೂರು ಪ್ರದೇಶದಿಂದ ಆಳುತ್ತಿದ್ದ ಈ ಎರುಮೈನಾಯಕರು ಎಷ್ಟು ಕಾಲ ಆಳಿ ಹೇಗೆ ಇತಿಹಾಸದಿಂದ ಕಣ್ಮರೆಯಾದರೆಂಬುದನ್ನು ನಾವಿನ್ನೂ ಖಚಿತಪಡಿಸಿಕೊಳ್ಳಬೇಕಾಗಿದೆ. ಅನಂತರದ ಕಾಲದ ಇವರ ಶಾಸನಗಳು ದೊರೆಯದಿರುವುದರಿಂದ ಶಂಗಂ ಕಾಲದ ಅನೇಕ ಪೆರುವೇಳಿರ್‌ಗಳಂತೆ ಇವರೂ ಶಂಗಂ ಕಾಲಾಂತ್ಯದಲ್ಲಿ ಕಣ್ಮರೆಯಾದರೆನ್ನಬಹುದು. ಆದರೆ ಸು. ೫ನೆಯ ಶತಮಾನದ ಕದಂಬರ ಶಾಸನಗಳಲ್ಲಿ ಈ ಹೆಸರು ಸಂಸ್ಕೃತೀಕರಣಗೊಂಡು 'ಮಹಿಷ-ವಿಷಯ'ವೆಂದು ರೂಪಾಂತರ ಪಡೆದದ್ದನ್ನು ಗಮನಿಸಿದರೆ, ಇದೇ ಹೆಸರಿನಲ್ಲಿ ೮-೯ನೆಯ ಶತಮಾನದ ಗಂಗರ ಶಾಸನಗಳಲ್ಲಿಯೂ ಈ ರಾಜ್ಯಘಟಕ ಪ್ರಸಾರದಲ್ಲಿತ್ತು ಎಂದು ತೀರ್ಮಾನಿಸಬೇಕಾಗುವುದು.[೭] ಇದು ಏನೇ ಇರಲಿ ಇವರ ಹೆಸರು ಮಧ್ಯಕಾಲದವರೆಗೂ ಹಸಿರಾಗಿ ಉಳಿದಿತ್ತೆನ್ನಲು ೧೧ನೆಯ ಶತಮಾನದ ಒಂದು ಚೋಳ ಶಾಸನವೊಂದು ಸಹಾಯಕ್ಕೆ ಬರುವುದು. 'ಎರುಮೈ ನಾಲ್ ಕಾಮುಂಟ'ನನ್ನು ಪ್ರಸ್ತಾಪಿಸುವ ಈ ತಮಿಳು ಶಾಸನ ಸುಮಾರು ಹನ್ನೆರಡು ಶತಮಾನಗಳ ಹಿಂದೆ ಸಂಭವಿಸಿದ್ದ ಕುಂಬ್ಳೂರು ಕವಟಿಯ ಪ್ರಸಂಗವನ್ನು ನೆನಪಿಗೆ ತಂದುಕೊಡುವುದು.[೮]

ಆದಿ ಕದಂಬರು ಮತ್ತು ಶಂಗಂ ಸಾಹಿತ್ಯ : ಬನವಾಸಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು, ದಖ್ಖಣದ ಪ್ರಧಾನ ಅರಸರುಗಳಲ್ಲೊಬ್ಬರಾಗುವುದಕ್ಕಿಂತ ಸುಮಾರು ಅರ್ಧ ಸಹಸ್ರಮಾನ ಕಾಲ ಮುಂಚೆ, ಅರಬ್ಬೀ ಸಮುದ್ರ ಮತ್ತು ಹಿಂದೂ ಮಹಾಸಾಗರದಲ್ಲಿ ಕದಂಬರು ತಮ್ಮ ಅಧಿಕಾರವನ್ನು ಪ್ರತಿಪಾದಿಸಿಕೊಳ್ಳತೊಡಗಿದ್ದರೆಂಬುದನ್ನು ಶಂಗಂ ಸಾಹಿತ್ಯದಿಂದ ತಿಳಿಯಬಹುದು. *ಪದಿಱ್ಱುಪತ್ತು* ಮತ್ತು *ಅಹನಾನೂಱುವಿನಲ್ಲಿ* ಮಾತ್ರವಲ್ಲದೆ *ಶಿಲಪ್ಪದಿಕಾರಂ* ನಲ್ಲಿ ಕದಂಬ(ಕಟಂಬು)ರೆಂಬ ಸಮುದ್ರ ನಾಯಕರ ವಿರುದ್ಧ

ಹಲವು ಬಾರಿ ಹೋರಾಡಿದ ಚೇರರಸರ ಬಗ್ಗೆ ಕವಿಗಳಾದ ಕುಮಟ್ಟೂರ್ ಕಣ್ಣನರ್, ಮಾಮೂಲ್ನಾರ್ ಮತ್ತು ಇಳಂಗೋ ಅಡಿಗಳ್ ವಿವರ ಕೊಟ್ಟಿರುವರು.[೯] ನೆಡುಂಚೇರಲ್ (ಅವನ ಮತ್ತೊಂದು ಹೆಸರು ಆದನ್ ನಾರ್ಮುಡಿ ಚೇರಲ್) ಮತ್ತು ಪೆರುಂಚೇರಲ್ ಶಂಗುಟ್ಟವನ್ ಎಂಬ ಚೇರ ಅರಸರನ್ನು ಹೆಸರಿಸುವ ಈ ಕವಿಗಳು ಅವರನ್ನು ಎದುರಿಸಿ ನಿಂತಿದ್ದ ಕದಂಬ ನಾಯಕರಾರನ್ನೂ ಹೆಸರಿಸುವುದಿಲ್ಲ, ಆದರೆ ಈ ಕಾದಾಟ ಒಬ್ಬ ಚೇರರಸನ ಕಾಲಕ್ಕೆ ಸೀಮಿತಗೊಳ್ಳದೆ ಬಹುಕಾಲ ಮುಂದುವರಿದಿತ್ತೆನ್ನುವುದರಲ್ಲಿ ಅನುಮಾನವಿಲ್ಲ.

ಇವರ ಕುಲಸಂಕೇತವಾದ ಕದಂಬ ವೃಕ್ಷವು 'ಕಟಂಪಿನ್ ಪೆರುವಾಯಿಲ್' (ಅಂದರೆ ಕದಂಬನ ದೊಡ್ಡ ಅರಮನೆಯ), ದ್ವಾರಮಂಟಪದ ಬಳಿ ಇದ್ದುದನ್ನು ಮತ್ತು ಅದರಲ್ಲಿ ಅರಳುತ್ತಿದ್ದ ಪುಷ್ಪಗಳು ರಥಚಕ್ರಾಕಾರವನ್ನು ಹೋಲುತ್ತಿದ್ದವೆಂಬುದನ್ನು ಪದಿಟ್ರುಪತ್ತುವಿನಲ್ಲಿ ವಿವರಿಸಲಾಗಿದೆ. ಈ ವೃಕ್ಷವನ್ನು ಬೇರುಸಹಿತ ಬುಡಮೇಲುಮಾಡಿ ನೆಡುಂಚೇರಲ್ ಆದನ್ ನಾಶಪಡಿಸಿದನೆಂದು ಹೇಳಿರುವುದಲ್ಲದೆ, ಇದರ ಕಾಂಡದಿಂದ ನಗಾರಿಯೊಂದನ್ನು ಸಿದ್ಧಪಡಿಸಿಕೊಂಡು ಅವನು ತನ್ನ ಅಗ್ಗಳಿಕೆಯನ್ನು ಮೆರೆದನೆಂದು ಪದಿಟ್ರುಪತ್ತು ಮತ್ತು ಅಹನಾನೂಱುವಿನಲ್ಲಿ ವರ್ಣಿಸಲಾಗಿದೆ. *ಶಿಲಪ್ಪದಿಕಾರಮ್* ಕವಿ ಕೂಡಾ ಈ ಘಟನೆಯನ್ನು ಸ್ಮರಿಸುವನು.[೧೦]

ಕಡಲ್ಗಳ್ಳರು ? : ಚೇರ-ಕದಂಬರ ಈ ಕಾದಾಟ ನಡೆಯುತ್ತಿದ್ದುದು ಸದಾ ಸಮುದ್ರದ ಮೇಲೆ, ನೆಲದ ಮೇಲಲ್ಲ. ಕಡಲ ದಾಳಿ ಕೈಕೊಂಡು ಒಂದು ದ್ವೀಪದಲ್ಲಿ ಶತ್ರುವಿನ ವಿರುದ್ಧ ನೆಡುಚೇರಲ್ ಹೋರಾಡಿದನೆಂದು ಪದಿಟ್ರುಪತ್ತು ತಿಳಿಸುವುದು. 'ಸಮುದ್ರ ಕಾಳಗ ತುಂಬಾ ದುಸ್ತರ ಎಂಬ ಮಾತನ್ನು ಶಂಗುಟ್ಟವನ್ ಸುಳ್ಳುಮಾಡಿದನು' ಎಂದು ಇಲ್ಲಿ ಘೋಷಿಸಲಾಗಿದೆ.[೧೧] ಆದನ್ ರವಿಮಂಡಲದ ವರೆಗೆ ತನ್ನ ಹಡಗುಪಡೆಯನ್ನು ಕೊಂಡೊಯ್ಯಬಲ್ಲವನಾಗಿದ್ದನೆಂದು ಕವಿ ಮಾಮೂಲ್ನಾರ್ ವರ್ಣಿಸಿರುವನು.[೧೨] 'ಕಡಲ್ಗಳ್ಳರಾದ ಕದಂಬರನ್ನು ನಾಶಮಾಡಿದ ಅರಸ[ಶಂಗುಟ್ಟವನ್]ನ ಕೀರ್ತಿ [ಸರ್ವದಿಕ್ಕಿಗೂ] ಹರಡಲಿ',[೧೩] ಎಂಬ ಆಶಯವನ್ನು ವ್ಯಕ್ತಪಡಿಸಿದ *ಶಿಲಪ್ಪದಿಕಾರಮ್* ಕವಿ, ಅವನ ಪ್ರತಾಪವನ್ನು ಉತ್ತರದ ಅರಸರಿಗೆ ತಿಳಿಸುತ್ತಾ 'ಕಪ್ಪ ತಂದೊಪ್ಪಿಸಿ ಕರುಣೆ ಗಳಿಸಿಕೊಳ್ಳಿ, ಇಲ್ಲವೇ ಕಡಂಬುವಿನ ಅನುಭವವನ್ನು ನೆನಪಿಸಿಕೊಳ್ಳಿ' ಎಂದು ಎಚ್ಚರಿಕೆ ಕೊಡುವನು.[೧೪] ಇಲ್ಲಿ ಉಲ್ಲೇಖಿಸಿರುವ ಉತ್ತರದ ಅರಸರಲ್ಲಿ ಕೊಂಗಣರ್, ಕರುನಾಡರ್, ಗಂಗರ್, ಆರ್ಯರ್, ಸೂರ್ತ್ರವರ್-ಕಣ್ಣರ್ ಸೇರಿದ್ದರೆಂಬುದನ್ನು ಗಮನಿಸುವುದವಶ್ಯ.[೧೫]

ಸಮುದ್ರಾಧಿಪತಿಗಳು ? : ಚೇರರಸನು ತನ್ನ ರಾಜಧಾನಿ ಪಟ್ಟಣ ವಂಜಿ(ಇಂದಿನ ಕರೂರು)ಯಿಂದ ಸಾಗರ ಪ್ರವೇಶಿಸಿ, ಕದಂಬರನ್ನು ನಾಶಮಾಡಿದನೆಂದು ಶಿಲಪ್ಪದಿಕಾರಮ್ ತಿಳಿಸುವುದು.[೧೬] ಅಂದರೆ ತನ್ನ ರಾಜಧಾನಿಯ ಬಳಿಯೇ ಲಂಗರು ಹಾಕಿದ್ದ ಕದಂಬನನ್ನು ಅಲ್ಲಿಂದ ಹಿಂದೂಡಲು ಅವನು ಸಮುದ್ರ ಕಾಳಗಕ್ಕಿಳಿಯಬೇಕಾಯಿತೆಂದು ಇದನ್ನು ಅರ್ಥೈಸಬಹುದು. ಆದರೆ ಈ ಕದನ ಸಂಭವಿಸಿದ ದ್ವೀಪವನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಇದು ಕರಾವಳಿಗಂಟಿಕೊಂಡಿದ್ದ ಒಂದು ಗಡ್ಡೆಯಾಗಿತ್ತೋ ಲಕ್ಷದ್ವೀಪಗಳಲ್ಲೊಂದಾಗಿತ್ತೋ ಇಲ್ಲವೇ ಶ್ರೀಲಂಕೆಯಾಗಿತ್ತೋ ಎಂಬುದು ಸ್ಪಷ್ಟಗೊಳ್ಳುತ್ತಿಲ್ಲ. ಒಂದು

ಕಾಲದಲ್ಲಿ ಅರಿಪ್ರೋ ನದೀಮುಖದಲ್ಲಿ 'ತಮಿಳು ಬುಡಕಟ್ಟಿನ' ಜನಾಂಗವೊಂದಿತ್ತೆಂದೂ ಆಗ ಅದನ್ನು ಕದಂಬನದಿ ಎಂದು ಕರೆಯಲಾಗುತ್ತಿತ್ತೆಂದೂ ತಿಳಿದುಬರುವುದು. 'ತಮಿಳು ಬುಡಕಟ್ಟಿನ' ಜನಾಂಗ ಎಂದು ತಪ್ಪಾಗಿ ಗುರುತಿಸಲ್ಪಟ್ಟವರು ವಾಸ್ತವವಾಗಿ ಈ ನದಿಗೆ ತಮ್ಮ ಹೆಸರು ಕೊಟ್ಟ ಕದಂಬರಾಗಿರಲು ಸಾಧ್ಯ.[೧೭] 'ಕದಂಬರೆಂದು ಕರೆಯಲಾಗುತ್ತಿದ್ದ ಈ ಜನಾಂಗದವರು ಕಡಲ್ಗಳ್ಳತನವನ್ನು ವೃತ್ತಿಯನ್ನಾಗಿಸಿಕೊಂಡ ಬಗ್ಗೆಯಾಗಲೀ ಬನವಾಸಿ ಕದಂಬರ ಪೂರ್ವಜರಾಗಿದ್ದರೆನ್ನುವುದರ ಬಗ್ಗೆಯಾಗಲೀ ಅನುಮಾನವಿಲ್ಲ', ಎಂದು ಪ್ರೊಫೆಸರ್ ಕೆ. ಕೆ. ಪಿಳ್ಳೈ ಅಭಿಪ್ರಾಯಪಟ್ಟಿರುವರು.[೧೮] ಕ್ರಿ.ಶ. ೧-೨ನೆಯ ಶತಮಾನದ ಗ್ರೀಕ್ ಮತ್ತು ರೋಮನ್ ದಾಖಲೆಗಳಲ್ಲಿ ನೌರ, ಮಲ್ಪೆ, ಓಲಖೌರ ಮುಂತಾದ ಕರಾವಳಿ ನೆಲೆಗಳ ಪ್ರಸ್ತಾಪವಿದೆ. ಟಾಲಮಿ ಉಲ್ಲೇಖಿಸುವ ಕಡಲ್ಗಳ್ಳರ ಕರಾವಳಿ ಪ್ರದೇಶವು ನಿತ್ರಣ ದಿಂದ ಮಂಗಳೂರಿನ ವರೆಗೂ ಹಬ್ಬಿತ್ತೆಂದು ಜೆ. ಡಬ್ಲ್ಯೂ ಮೆಕ್‌ಕ್ರಿಂಡ್ಲ್ ವಾದಿಸಿರು ವನು.[೧೯] ಕಾರವಾರದ ಸುತ್ತಮುತ್ತಲಿದ್ದ ಕಡಲ್ಗಳ್ಳರ ಬಗ್ಗೆ ಪೆರಿಪ್ಲಸ್‌ನಲ್ಲಿಯೂ ಉಲ್ಲೇಖ ಬರುವುದಲ್ಲದೆ, ನಿತ್ರಣ ಅವರ ನೆಲೆಯಾಗಿತ್ತೆಂಬುದನ್ನು ಪ್ಲಿನಿ ಕೂಡಾ ತಿಳಿದಿದ್ದನೆಂಬುದಕ್ಕೆ ಆಧಾರಗಳಿವೆ. ಅಂದರೆ ಕದಂಬರಿಂದ ರಕ್ಷಿಸಿಕೊಳ್ಳಲು ಗ್ರೀಕ್ ಮತ್ತು ರೋಮನ್ ಹಡಗು ಗಳು ಹರಪ್ರಯತ್ನ ಮಾಡಬೇಕಾಗುತ್ತಿತ್ತೆಂಬುದು ಈ ಆಕರಗಳಿಂದ ಹೊರಹೊಮ್ಮುವುದು.

ರಾಜ್ಯ ಸಂಸ್ಥಾಪಕರು : ಸಮುದ್ರಾಧಿಪತಿಗಳಾದ ಕದಂಬರು ಕ್ರಿಸ್ತಶಕದಾರಂಭದಲ್ಲಿ ಬನವಾಸಿಯಿಂದ ಶ್ರೀಲಂಕಾ ವರೆಗಿನ ಉಪ್ಪು ನೀರಿನ ಮೇಲೆ ತಮ್ಮ ಆಧಿಪತ್ಯ ಸಂಪಾದಿಸಿ ಕೊಂಡಿದ್ದರೆಂದು ಕಾಣುವುದು. ಆರಂಭಕಾಲದ ತಮಿಳು ಆಕರಗಳನ್ನು ಏಕಮುಖೀಯ ವಾಗಿ ನೋಡಿದರೆ ಕದಂಬ ವೃಕ್ಷವನ್ನು ಚೇರರು ಮೇಲಿಂದ ಮೇಲೆ ತರೆದು ಹಾಕಿದಂತೆಯೂ ಇವರನ್ನು ಅನೇಕ ಸಲ ನಾಶ ಮಾಡಿದಂತೆಯೂ ತೋರಬಹುದು, ಆದರೆ ಎಂದೂ ಮಣಿಯದ ಈ ಸಮುದ್ರಾಧಿಪತಿಗಳು ಕ್ರಿ.ಶ. ೪ನೆಯ ಶತಮಾನದಲ್ಲಿ ಬನವಾಸಿಯನ್ನು ನೆಲೆಯನ್ನಾಗಿ ಮಾಡಿಕೊಂಡು, ಒಂದು ರಾಜ್ಯದ ಒಡೆಯರಾಗಿ, ಕರ್ನಾಟಕದ ಇತಿಹಾಸದಲ್ಲಿ ಮೆರೆದದ್ದು ನಮಗೆಲ್ಲಾ ತಿಳಿದ ವಿಷಯ.

ಪುನ್ನಾಟರು : ಕದಂಬರಷ್ಟು ಯಶಸ್ವೀ ಸ್ಥಾನವನ್ನು ಇತಿಹಾಸದಲ್ಲಿ ಪಡೆಯಕೊಳ್ಳ ದಿದ್ದರೂ ಅವರ ಸಮಕಾಲೀನರಾಗಿ, ಸ್ವಲ್ಪಕಾಲ ಅವರ ವಿರುದ್ಧ ಸೆಣಸಾಡುತ್ತಾ ಒಂದು ಸ್ವತಂತ್ರ ಶಕ್ತಿಯಾಗಲು ಶ್ರಮಿಸಿದವರಲ್ಲಿ 'ಪುನ್ನಾಟ' ನಾಯಕರಿಗೆ ವಿಶಿಷ್ಟ ಸ್ಥಾನವಿದೆ. ಇವರ ಬಗ್ಗೆ ಹಿಂದೊಮ್ಮೆ ಪ್ರಸ್ತಾಪಿಸಿ ಆರಂಭಕಾಲದ ಕರ್ನಾಟಕ ಇತಿಹಾಸದಲ್ಲಿಯ ಅವರ ಪಾತ್ರದ ಬಗ್ಗೆ ಮತ್ತೊಮ್ಮೆ ಚರ್ಚಿಸುವುದಾಗಿ ತಿಳಿಸಿದ್ದೆ; ಅದನ್ನಿಲ್ಲಿ ಪೂರೈಸಿಕೊಡಲು ಪ್ರಯತ್ನಿಸುವೆ.[೨೦]

ಪುನ್ನಾಟರು ಮತ್ತು ಶಂಗಂ ಸಾಹಿತ್ಯ : ಮೊಟ್ಟಮೊದಲು ಶಂಗಂ ಸಾಹಿತ್ಯದಲ್ಲಿ ಕಾಣಸಿಕೊಳ್ಳುವ 'ಪುನ್ನಾಟ' ಹೆಸರನ್ನು 'ಪುಳ್ಳುನಾಟು', 'ಪುಣನಾಟು' ಎಂಬ ಪದಗಳಲ್ಲಿ ಗುರುತಿಸಲು ತಮಿಳು ವಿದ್ವಾಂಸರು ಪ್ರಯತ್ನಿಸಿರುವರು.[೨೧] ತೊಲ್ಕಾಪ್ಪಿಯಾರ್ ರಚಿಸಿದ ಭಾಷಾ ನಕ್ಷೆಯ ಹನ್ನೆರಡು ಕೋಟುನ್- ತಮಿಳ್-ನಾಟುಗಳಲ್ಲಿ (ಅಂದರೆ ಸೆಂತಮಿಳಿನ ಹೊರವಲಯದಲ್ಲಿ ಬಳಸುತ್ತಿದ್ದ ತಮಿಳು ಜನಾಂಗಗಳಲ್ಲಿ) 'ಪುಣನಾಟು' ಒಂದಾಗಿತ್ತೆಂದು ತಮಿಳು ಲೆಕ್ಸಿಕನ್ ಸೂಚಿಸುವುದು.[೨೨] 'ಪೊನಮ್ಮಿ ಎನ್ನಾಟುಂ ಪೊಯ್ಯಾದು ಅಳಿಕುಂ

ಪುನ್ನಾಡು' ಎಂಬ ವಿವರ ಪೆರಿಯಪುರಾಣದಲ್ಲಿ ಬರುವುದರಿಂದ ಸತತವಾಗಿ ಕಾವೇರಿಯಿಂದ ನೀರುಣ್ಣುತ್ತಿದ್ದ ಪ್ರದೇಶ ಇದಾಗಿತ್ತೆಂಬುದರಲ್ಲಿ ಅನುಮಾನವಿಲ್ಲ.[೨೩]

ಕ್ರಿ.ಶ. ೧೦೦೦ದಲ್ಲಿ ತೊಲ್ಕಾಪ್ಪಿಯಮ್-ಸೊಲ್ಲಧಿಕಾರಕ್ಕೆ ವ್ಯಾಖ್ಯಾನ ಬರೆದ ಸೇನಾವರೈ ಗ್ರಂಥವನ್ನು ಸಂಪಾದಿಸಿದ ಕಂದಸ್ವಾಮಿ ಮತ್ತು ಪಾದಾಣರ್ ಸೆನ್ತಮಿಳನ್ನು ಸುತ್ತುವರಿದಿದ್ದ ಘಟಕಗಳನ್ನು ಗುರುತಿಸುತ್ತಾ ೧೨ ಕೊಟ್ಟಮ್ ನಾಟುಗಳಲ್ಲಿ ಒಂದಾದ ಅರುವವಡತಲೈ ಎಂಬ ನಾಡೇ ಪುನ್ನಾಟವಾಗಿತ್ತೆಂಬ ನಿರ್ಣಯಕ್ಕೆ ಬಂದಿರುವರು.[೨೪] ಅಲ್ಲದೆ, 'ಕಡಲಪಡಂದ್ವೀಪಂ'(ಕಡಲಿನ ಪುರಾತನ ದ್ವೀಪ)ಗಳಾದ ಕೊಲ್ಲಂ, ಕೂಮಗಂ, ಸಿಂಗಳಂ, 'ತಮಿಳಹಂ'ನ ಗಡಿಪ್ರದೇಶದಲ್ಲಿದ್ದವೆಂದೂ ಕನ್ನಡಂ, ವಡುಗಂ, ತೆಲಿಂಗಮ್, ಕೊಂಕಣಂ, ತುಳುವಂ, ಕುಡಗಂ, ಕುನ್ರಗಂ ಮುಂತಾದವುಗಳು ಅದರ ಸಮೀಪದಲ್ಲಿದ್ದವೆಂದೂ ವಿವರಣೆ ಕೊಟ್ಟಿರುವರು. ಇದು ಏನೇ ಇರಲಿ, ಕ್ರಿ.ಶ. ೨ನೆಯ ಶತಮಾನದಾರಂಭದಿಂದ ಪುನ್ನಾಟರ ಅಧಿಕೃತ ದಾಖಲೆಗಳು ನಿಖರಗೊಳ್ಳತೊಡಗುತ್ತಾ ೧೪ನೆಯ ಶತಮಾನದವರೆಗೂ ಮುಂದುವರಿಯುವುವೆಂಬುದು ಇಲ್ಲಿ ಗಮನಾರ್ಹ. ಟಾಲಮಿ 'ಪೌನ್ನಟ'ದ ಪ್ರಸಿದ್ಧ ಪಚ್ಚೆಗಳ ಬಗ್ಗೆ ಕ್ರಿ.ಶ. ೧೨೭ರಲ್ಲಿ ಅರಿತುಕೊಂಡಿದ್ದ.[೨೫] ಇವನಿಗಿಂತ ಒಂದು ಶತಮಾನ ಮುಂಚೆ ಪ್ಲಿನಿ (ಕ್ರಿ.ಶ. ೨೩-೭೯)ಕೂಡಾ ಈ ಪಚ್ಚೆಕಲ್ಲುಗಳ ಮಾಹಿತಿ ಪಡೆದುಕೊಂಡಿದ್ದುದರಿಂದ ಅವನಿಗೂ ಪುನ್ನಾಟ ಪ್ರದೇಶದ ಪರಿಚಯವಿತ್ತೆನ್ನಬಹುದು.

ಶಾಸನದಲ್ಲಿ ಪುನ್ನಾಟರು : ಪುನ್ನಾಟದ ಶಾಸನಿತ ಉಲ್ಲೇಖಗಳು ಪ್ರಾರಂಭವಾಗುವುದು ಕ್ರಿ.ಶ. ೪ನೆಯ ಶತಮಾನದಲ್ಲಿ. ಕದಂಬ ಮಯೂರವರ್ಮನು ಜಯಿಸಿದ ರಾಜ್ಯಗಳಲ್ಲಿ ಪುನ್ನಾಟವೂ ಒಂದಾಗಿತ್ತೆಂದು ಚಂದ್ರವಳ್ಳಿಯ ಶಾಸನ ತಿಳಿಸಿದರೆ, ಕದಂಬ ಕುಲವಧು ಪ್ರಭಾವತಿ ಪುನ್ನಾಟ ರಾಷ್ಟ್ರವರ್ಮನನ್ನು ವರಿಸಿದ್ದನ್ನು ಕಾಕುತ್ಸವರ್ಮನ ತಾಳಗುಂದ ಶಾಸನ ತಿಳಿಸುವುದು.[೨೬] ಪಾಂಡ್ಯ, ಕೊಂಗಾಳ್ವ, ಅಳೂಪ ಮತ್ತು ಗಂಗ ರಾಜ್ಯಗಳನ್ನಲ್ಲದೆ ಪುನ್ನಾಟ ರಾಜ್ಯವನ್ನು ರವಿವರ್ಮನು ವಶಪಡಿಸಿಕೊಂಡದ್ದನ್ನು (ಕ್ರಿ.ಶ. ೫-೬ನೆಯ ಶತಮಾನದ) ಗುಡ್ನಾಪುರ ಶಾಸನದಲ್ಲಿ ಹೇಳಲಾಗಿದೆ.[೨೭]

ಇದಕ್ಕಿಂತಲೂ ಕುತೂಹಲಕರವಾದ ವಿವರಗಳು ಗಂಗವಂಶದ ಅವನೀತ(ಕ್ರಿ.ಶ. ೪೩೦-೪೮೨)ನ ಶಾಸನದಲ್ಲಿ ದೊರಕುತ್ತಿದ್ದು, ಇದರಂತೆ ಕಲಿಗಂಗನು ಪುನ್ನಾಟ ರಾಜಕುಮಾರಿಯನ್ನು ಮದುವೆಯಾದುದಲ್ಲದೆ ಪುನಾಡು-೬೦೦೦ರ ವಿಭಾಗವಾದ ಎಡನಾಡು-೭೦ರ ಬಡಣಗುಪ್ಪೆ ಗ್ರಾಮವನ್ನು ತಳವನ ನಗರದ ಜಿನಾಲಯಕ್ಕೆ ದತ್ತಿಬಿಟ್ಟನು.[೨೮] ಅವನೀತ ಮತ್ತು ಈ ಪುನ್ನಾಟ ರಾಜಕುಮಾರಿಗೆ ಜನಿಸಿದವನೇ ಗಂಗದುರ್ವಿನೀತ.[೨೯] ತನ್ನ ಮಗಳು ಜನಿಸಿದ ದಿನದಿಂದಲೇ ಅವಳನ್ನು ಇಂಥವನಿಗೇ ಕೊಟ್ಟು ಮದುವೆಮಾಡಬೇಕೆಂದು ಅಂದುಕೊಂಡ ಪುನ್ನಾಟ ಸ್ಕಂಧವರ್ಮನ ಸಂಕಲ್ಪವನ್ನು ತಿರಸ್ಕರಿಸಿ ಸ್ವಇಚ್ಛೆಯಿಂದ ಗಂಗನನ್ನು ಅವಳು ವರಿಸಿದಳೆಂದು ಗಂಗದುರ್ವಿನೀತನ ಶಾಸನದಲ್ಲಿ ವಿವರಿಸಲಾಗಿದೆ. ಇದರ ಫಲವಾಗಿ ಈ ಗಂಗನು ಪನ್ನಾಡು ಹಾಗೂ ಪುನ್ನಾಡು ಘಟಕಗಳ ಆಧಿಪತ್ಯ ಪಡೆದುಕೊಂಡನೆಂದೆನ್ನಲಾಗಿದೆ.

ಈ ಸಾಧನೆಯ ಬಗ್ಗೆ ಗಂಗರು ಎಷ್ಟೊಂದು ಹೆಮ್ಮೆಪಟ್ಟುಕೊಂಡಿದ್ದರೆಂದರೆ ಮುಂದಿನ ಮೂರು ಶತಮಾನಗಳ ಕಾಲದ ಇವರ ವಂಶಜರು ಇದನ್ನು ಪುನಃ ಪುನಃ ನೆನಪಿಸಿಕೊಳ್ಳುವ ಉತ್ಸಾಹ ತೋರಿದರು. ೬ನೆಯ ಶತಮಾನದ ದುರ್ವಿನೀತನ ಸಾಲಿಗ್ರಾಮ ಶಾಸನ,

೭ನೆಯ ಶತಮಾನದ ಮುಷ್ಕರನ ಕಿರುಮೋರಕೋಳಿ ಶಾಸನ ಮತ್ತು ಶಿವಮಾರನ ಕುಲಗಾಣ ಶಾಸನ, ಸು. ೭೦೦ರ ನವಕಾಮನ ಹೆಬ್ಬೂರು ತಾಮ್ರಪಟ ಮತ್ತು ೮೧೦ರ ದೇಬೂರು ಶಾಸನ ಇದಕ್ಕೆ ಸಾಕ್ಷಿ ಒದಗಿಸುವುವು.[೩೦] ಇವೆಲ್ಲವೂ ಗಂಗ-ಪುನ್ನಾಟರ ವೈವಾಹಿಕ ಸಂಬಂಧದ ವಿವರವಿತ್ತರೆ, ಮುಷ್ಕರನ ತಾಮ್ರಪಟವು ಈತನ ತಾಯಿ ದಗ್ಧಚರಣ(ಕರಿಕಾಲ) ಚೋಳಮನೆತನದ ವಸುಮತಿಯಾಗಿದ್ದಳೆಂಬ ಮತ್ತು ಕಪುನಿ(ಕಬಿನಿ)ಯ ದಕ್ಷಿಣ ದಡದ ಒಂದು ಗ್ರಾಮವನ್ನು ಈತನು ದಾನ ಮಾಡಿದನೆಂಬ ವಿವರಗಳನ್ನು ಒದಗಿಸುವುದು.

ರಾಜ್ಯದ ವ್ಯಾಪ್ತಿ : ಪುನ್ನಾಟರು ಕಾವೇರಿ-ಕಬಿನೀ ನಡುವಣ ಪ್ರದೇಶದ ಅಧಿಪತಿಗಳಾಗಿದ್ದರೆಂಬುದನ್ನು *(ಕಾಬೇರೀ ಕಪಿನೀ ಶ್ರೀನಿದೀಬಿರಲಂಕೃತಸ್ಯ)* ೫-೬ನೆಯ ಶತಮಾನದ ಮಾಂಬಳ್ಳಿ ಶಾಸನ ತಿಳಿಸುವುದು. ಈ ಪ್ರದೇಶದ ಮೇಲಿನ ಅವರ ಅಧಿಕಾರವು ಕೆಲವು ಶತಮಾನಗಳ ಕಾಲ ಮುಂದುವರಿಯಿತೆಂದು ತೋರುವುದು. ಅಂದರೆ ಪೆರಿಯ ಪುರಾಣದಲ್ಲಿ ಬರುವ ಪುನ್ನಾಟರ ಕಾವೇರಿ ಚೋಳದೇಶದಲ್ಲಿ ಹರಿಯುತ್ತಿದ್ದ ನದಿಯಾಗಿರದೆ ಕಬಿನಿಯ ಜೊತೆಗಾರ್ತಿಯಾದ ಮೇಲ್ಕಾವೇರಿಯಾಗಿದ್ದಳೆಂಬುದಿಲ್ಲಿ ಸ್ಪಷ್ಟಗೊಳ್ಳುವುದು.

ಪುನ್ನಾಟವು ಚೇರರಾಜ್ಯದ ಉತ್ತರಕ್ಕಿದ್ದ, (ಅಂದರೆ ಇಂದಿನ ದಕ್ಷಿಣ ಕನ್ನಡ ಜಿಲ್ಲೆಯ) ಪ್ರದೇಶವನ್ನು ಆವರಿಸಿತ್ತೆಂದೂ ಅದು ಇಂದಿನ ಮೈಸೂರು ಪ್ರದೇಶವಾಗಿತ್ತೆಂದೂ ಈ ಎರಡನ್ನೂ ಒಳಗೊಂಡ ಭೂಘಟಕವಾಗಿತ್ತೆಂದೂ ವಾದಿಸಲಾಗಿದೆ. ಇದು ಮೈಸೂರಿನ ಪಶ್ಚಿಮ-ದಕ್ಷಿಣಕ್ಕಿರುವ, ಇಂದಿನ ಹೆಗ್ಗಡದೇವನಕೋಟೆ ತಾಲೂಕನ್ನು ಒಳಗೊಂಡ, ಪ್ರದೇಶವೆಂಬ ಸೂಚನೆಯೂ ಇದೆ.[೩೧] ೧೬ನೆಯ ಶತಮಾನದ ಶಾಸನಗಳಲ್ಲಿ ಬರುವ 'ಪದಿನಾಡು' (ಹತ್ತುನಾಡು) ಮತ್ತು ಕಬಿನಿ-ಕಾವೇರಿ ನದಿಗಳ ಸಂಗಮದಲ್ಲಿರುವ ಇಂದಿನ ಹದಿನಾಡು (ಹದಿನಾರು) ವಿಭಾಗವೇ ಅಂದಿನ ಪುನ್ನಾಡಾಗಿತ್ತೆಂದು ಲೂಯೀಸ್ ರೈಸ್ ವಾದಿಸಿದರೆ ಈ ಎರಡು ಘಟಕಗಳ ಸಂಬಂಧವನ್ನು ಜೆ. ಎಫ್. ಫ್ಲೀಟ್ ಪ್ರಶ್ನಿಸಿರುವರು.[೩೨]

ಪುನ್ನಾಟ ರಾಜ್ಯದ ಗಡಿ ಆಗಾಗ್ಗೆ ಬದಲಾಗುತ್ತಿದ್ದರೂ ಕಾವೇರಿ-ಕಬಿನಿ ನಡುವಣ ಪ್ರದೇಶವು ಇದರ ಹೃದಯಭಾಗವಾಗಿತ್ತೆಂಬುದರಲ್ಲಿ ಮತ್ತು ಒಂದು ಹಂತದಲ್ಲಿ ಕೀರ್ತಿಪುರ (ಕಿತ್ತೂರು) ಅದರ ರಾಜಧಾನಿಯಾಗಿತ್ತೆಂಬುದರಲ್ಲಿ ಅನುಮಾನವಿಲ್ಲ. ಒಂದು 'ನಾಡ' ಘಟಕವಾಗಿ, 'ವಿಷಯ' ಘಟಕವಾಗಿ 'ರಾಜ್ಯ'ವಾಗಿ, ಪುನಾಡು-೭೦, ಪುನಾಡು-೧೦೦೦, ಪುನಾಟ-೬೦೦೦ ಎಂಬ 'ವಲಯ' ಘಟಕಗಳಾಗಿ, [ಗಂಗವಾಡಿ]-೯೬,೦೦೦ರ ವಿಭಾಗವಾಗಿ, ಶಾಸನಗಳಲ್ಲಿ ಇದು ಕಾಣಿಸಿಕೊಂಡಿರುವುದು.[೩೩] ೧೧ನೆಯ ಶತಮಾನದಲ್ಲಿ ಕೇರಳ ನಾಡೂ ಪುನ್ನಾಟದ ವಿಭಾಗವಾಗಿತ್ತೆಂದು ತಿಳಿದುಬರುವುದು.[೩೪]

'ಪುನ್ನಾಟ'ವನ್ನು ಪ್ರಸ್ತಾಪಿಸುವ ಇತ್ತೀಚಿನ ದಾಖಲೆಯೆಂದರೆ ದೊಡ್ಡಬಳ್ಳಾಪುರ ತಾಲೂಕಿನ ಶಿವಪುರದ ಕ್ರಿ.ಶ. ೧೩೨೦ರ ಶಾಸನ. ಇದರಲ್ಲಿ 'ಪುನ್ನಾಟ-೭೦' ನಾಡಿನ ಪ್ರಸ್ತಾಪವಿದೆ.[೩೫]

ಕದಂಬರೊಡನೆ ಘರ್ಷಣೆ : ಕ್ರಿ.ಶ. ೩ನೆಯ ಶತಮಾನದಲ್ಲಿ ಬನವಾಸಿಯಿಂದ ಆಳತೊಡಗಿದ ಕದಂಬರಿಗೆ ಅವರ ರಾಜ್ಯದ ದಕ್ಷಿಣ(ದಕ್ಷಿಣ-ಪೂರ್ವ)ಕ್ಕಿದ್ದ ಪುನ್ನಾಟರೊಡನೆ

ಘರ್ಷಣೆಗಿಳಿಯುವುದು ಅನಿವಾರ್ಯವಾಯಿತೆಂದು ಕಾಣುವುದು. ಇವರ ಚಂದ್ರವಳ್ಳಿ, ತಾಳಗುಂದ, ಗುಡ್ನಾಪುರ ಮುಂತಾದ ಶಾಸನಗಳಲ್ಲಿ ಇದು ಸ್ಪಷ್ಟವಾಗಿ ವ್ಯಕ್ತಗೊಂಡಿದೆ. ಆದರೆ ಕದಂಬರು ಎಷ್ಟೇ ಪ್ರಯತ್ನಿಸಿದರೂ ಪುನ್ನಾಟರನ್ನು ಅವರ ನೆಲೆಯಿಂದ ಕದಲಿಸಲಾಗಲಿಲ್ಲವೆಂಬುದನ್ನು ಮತ್ತು ಕಾಲಕ್ರಮದಲ್ಲಿ ಅವರೊಡನೆ ರಕ್ತಸಂಬಂಧ ಬೆಳೆಸಿಕೊಂಡು ಸೌಹಾರ್ದ ಸಂಪಾದಿಸಿಕೊಳ್ಳ ಬೇಕಾಯಿತೆಂಬುದನ್ನೂ ಕದಂಬ ಪ್ರಭಾವತಿ ಮತ್ತು ಪುಂರಾಜ ರಾಷ್ಟ್ರವರ್ಮರ ವಿವಾಹದಿಂದ ಅರಿತುಕೊಳ್ಳಬಹುದು. ಸುಮಾರು ೬ನೆಯ ಶತಮಾನದಲ್ಲಿ ಕದಂಬರು ಬದಾಮಿ ಚಾಳುಕ್ಯರ ಒತ್ತಡಕ್ಕೊಳಗಾಗಿ ತತ್ತರಿಸತೊಡಗಿದಾಗ, ಆ ಸಂದರ್ಭದ ಅವಕಾಶವನ್ನು ಪಡೆದುಕೊಂಡು ಗಂಗರು ತಮ್ಮ ಪ್ರಭಾವವನ್ನು ಪುನ್ನಾಟರ ಮೇಲೆ ಬೀರಲು ತೊಡಗಿದರು. ಇದನ್ನು ಇವರ ಮಡಕೆರೆ (ಸು. ೪೬೬), ಸಾಲಿಗ್ರಾಮ (ಸು. ೬ನೆಯ ಶತಕ) ತಿರುಮೋರೆಕೋಳಿ (ಸು. ೭ನೆಯ ಶತಕ), ಕುಲಗಾಣ, ದೇಬೂರು ಮತ್ತು ಹೆಬ್ಬೂರು (ಸು. ೭-೮ನೆಯ ಶತಕ) ಮೊದಲಾದ ಶಾಸನಗಳು ಸ್ಪಷ್ಟಪಡಿಸುವುವು. ಸಾಧ್ಯವಾದಾಗ ಒಬ್ಬರ ಮೇಲೆ ಮತ್ತೊಬ್ಬರು ಪ್ರಭಾವ ಬೀರುವುದು, ಅನಿವಾರ್ಯ ವಾದಾಗ ಒಂದು ಮನೆತನವು ಮತ್ತೊಂದು ಮನೆತನದೊಡನೆ ವೈವಾಹಿಕ ಸಂಬಂಧವನ್ನು ಏರ್ಪಡಿಸಿಕೊಳ್ಳುವುದು, ಈ ಮೂರು ಕರ್ನಾಟಕ ಮನೆತನಗಳ ಕಾಯಕವಾಗಿತ್ತೆಂಬುದು ಇದರಿಂದ ವ್ಯಕ್ತಗೊಳ್ಳುವುದು.

ಇತಿಹಾಸದಲ್ಲಿ ಸ್ಥಾನ : ಇದು ಏನೇ ಇರಲಿ, ಕದಂಬ ಹಾಗೂ ಗಂಗರಿಗೆ ದೊರೆತ ಸ್ಥಾನ ಕರ್ನಾಟಕ ಆರಂಭ ಕಾಲದ ಇತಿಹಾಸದಲ್ಲಿ ಪುನ್ನಾಟರಿಗೆ ದೊರತಿಲ್ಲವೆಂಬುದನ್ನು ನಾವು ಒಪ್ಪಲೇಬೇಕು. ಇತಿಹಾಸಕಾರರು ಒಂದು ಬಗೆಯಲ್ಲಿ ಇವರನ್ನು ಉಪೇಕ್ಷಿಸಿರುವುದು ಇದಕ್ಕೊಂದು ಕಾರಣವಾದರೆ, ಇವರ ಬಗ್ಗೆ ದೊರಕುವ ದಾಖಲೆಗಳು ಅತ್ಯಲ್ಪವಾಗಿ ರುವುದು, ಇನ್ನೊಂದು ಕಾರಣವಾಗಿರುವುದು. ಸುಮಾರು ಒಂದೂವರೆ ಸಹಸ್ರಮಾನ ಕಾಲ ತಮ್ಮ ಹೆಸರನ್ನು ಇತಿಹಾಸದಲ್ಲಿ ಉಳಿಸಿಕೊಂಡ ಈ ಮನೆತನವು ಹಾಕಿಸಿದ ಮೂರು ಶಾಸನಗಳು ಮಾತ್ರ ಇಲ್ಲಿಯವರೆಗೂ ಲಭ್ಯವಾಗಿರುವುವು. ಇವು ಮತ್ತು ಇನ್ನಿತರ ಪರೋಕ್ಷ ಉಲ್ಲೇಖಗಳ ಸಹಾಯದಿಂದ ಇವರ ಆಳ್ವಿಕೆಯ ದಾಖಲಿತ ಇತಿಹಾಸವನ್ನು ೪ನೆಯ ಶತಮಾನದ ಆರಂಭಕ್ಕೆ ಕೊಂಡೊಯ್ಯಲು ಸಾಧ್ಯ. ಆದರೆ ಇದಕ್ಕಿಂತ ಪುರಾನ ಇತಿಹಾಸ ಅವರಿಗಿತ್ತೆಂಬುದನ್ನು ಶಂಗಂ ಸಾಹಿತ್ಯ ತಿಳಿಸುವುದು. ಬಹುಕಾಲ ತಮ್ಮ ನಾಯಕವಾಡಿಯ ವ್ಯವಹಾರವನ್ನು ಮೌಖಿಕವಾಗಿ ನಿರ್ವಹಿಸಿಕೊಂಡು ಬಂದಿದ್ದ ಇವರು ಕದಂಬರೊಡನೆ ಒಡನಾಟ ಹೊಂದಿದ ನಂತರ, ಬಹುಶಃ ಅವರಿಂದ ಪ್ರಭಾವಿತರಾಗಿ, ಶಾಸನಗಳನ್ನು ಬರೆಸತೊಡಗಿದರೆಂದು ಕಾಣುವುದು. ಆದರೆ ಇದನ್ನವರು ಬಹುಕಾಲ ಮುಂದುವರಿಸಲಿಲ್ಲ.

ಬುಡಕಟ್ಟು ಜನಾಂಗವೊಂದರ ನಾಯಕರಾಗಿದ್ದ ಪುನ್ನಾಟರು ಅನಿವಾರ್ಯವಾದಾಗ ಮಾತ್ರ ಸುತ್ತಮುತ್ತಲ ನಾಯಕರೊಡನೆ ಘರ್ಷಣೆಗಿಳಿಯುತ್ತಿದ್ದರೆಂದು ಕಾಣುವುದು. ಕೊಂಕಣಾಧಿಪತಿಯಾದ ನನ್ನನ್ ಮತ್ತು ಇವರ ನಡುವಿನ ಇಂತಹ ಒಂದು ಘಟನೆಯನ್ನು ಶಂಗಂ ಸಾಹಿತ್ಯದಲ್ಲಿ ದಾಖಲಿಸಲಾಗಿದೆ. ಗುಡ್ಡಗಾಡುಗಳ ಮಧ್ಯ ನೆಲೆಸಿದ್ದ ಇವರ ಆಶೋತ್ತರಗಳು ತುಂಬಾ ಸರಳವೂ ಸೀಮಿತವೂ ಆಗಿದ್ದುವಲ್ಲದೆ, ಅವು ಹೆಚ್ಚು ಕೇಂದ್ರೀಕೃತ

ವಾಗಿದ್ದುದು ಅವರ ಸ್ವಾತಂತ್ರ್ಯ ರಕ್ಷಣೆಯೆಡೆಗೆ. ಸ್ಥಳೀಯವಾಗಿ ಲಭ್ಯವಿದ್ದ ಪಶು, ಕ್ಷೇತ್ರ ಮತ್ತು ಖನಿಜಸಂಪತ್ತನ್ನು ರಕ್ಷಿಸಿಕೊಂಡು, ಕಾಡಿನ ನಡುವೆ ಮಾಡಿಕೊಂಡಿದ್ದ ಹೊಲಗದ್ದೆ-ತೋಟಪಟ್ಟಿಗಳಲ್ಲಿ ಭತ್ತ, ಗೋಧಿ, ಯವ ಮತ್ತು ದ್ವಿದಳಧಾನ್ಯ, ಕಬ್ಬು, ತೆಂಗು, ಬಾಳೆ, ಅಡಕೆ, ಎಲೆ, ಹಲಸು, ಚಂಪಕ, ವಕುಲ, ಅಶೋಕ, ಪುನ್ನಾಗ ಮೊದಲಾದವುಗಳನ್ನು ಬೆಳೆದು, ಸಾಂಪ್ರದಾಯಿಕ ಮನರಂಜನೆಗಳಾದ ನಾಟಕ, ನಾಟ್ಯ, ಉತ್ಸವ ಮತ್ತು ವಿವಾಹ-ಸಮಾರಂಭಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಆನೆಗಳನ್ನು ಪಳಗಿಸುವ ಕಲೆಯಲ್ಲಿ ಹೆಮ್ಮೆಪಟ್ಟುಕೊಂಡು, ಕಾಲಕಳೆಯುತ್ತಿದ್ದ ಇವರ ಸರಳ ಜೀವನದ ಒಂದು ಚಿತ್ರ ಮಾಂಬಳ್ಳಿ ಶಾಸನದಿಂದ ಹೊರಹೊಮ್ಮುವುದು.[೩೭] ಇದರಲ್ಲಾಗಲೀ ಇನ್ನುಳಿದ ಶಾಸನಗಳಲ್ಲಾಗಲೀ ಅವರು ತಮ್ಮ ರಾಜಕೀಯ ಸಾಧನೆಯ ಬಗ್ಗೆ ಹೇಳಿಕೊಂಡಿರುವುದು ಅತ್ಯಲ್ಪ.

ಪ್ರಾಕೃತದಿಂದ ಸಂಸ್ಕೃತಕ್ಕೆ : ಆರಂಭಕಾಲದ ಕರ್ನಾಟಕ ಇತಿಹಾಸದಲ್ಲಿ ಹೆಜ್ಜೆಯ ಸ್ಪಷ್ಟ ಗುರುತನ್ನು ಮೂಡಿಸಿದವರಲ್ಲಿ ಮೊದಲಿಗರಾದ ಪುನ್ನಾಟರು ಮತ್ತು ಕದಂಬರು ಮೂಲತಃ ಶೂದ್ರರಾಗಿದ್ದರೆಂಬುದನ್ನು ತಮಿಳು ಶಂಗಂ ಸಾಹಿತ್ಯದಿಂದ ಅರಿತುಕೊಳ್ಳಬಹುದು. ಕಡಲ ಸಂಪತ್ತನ್ನೇ ಅವಲಂಬಿಸಿದ್ದ ಮೊದಲ ತಲೆಮಾರಿನ ಕದಂಬರು ಹಲವು ಶತಮಾನ ಕಾಲ ಶಾಸನಗಳನ್ನು ಹಾಕಿಸಬೇಕಾದ ಆವಶ್ಯಕತೆಯನ್ನು ಕಂಡುಕೊಳ್ಳಲಿಲ್ಲವೆಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಬನವಾಸಿಯಲ್ಲಿ ಭದ್ರನೆಲೆಯನ್ನು ಕಂಡುಕೊಂಡ ನಂತರ ಈ ಪ್ರದೇಶದಲ್ಲಾಗಲೇ ಬೇರು ಬಿಟ್ಟಿದ್ದ ಬ್ರಾಹ್ಮೀ ಲಿಪಿ ಮತ್ತು ಪ್ರಾಕೃತ ಭಾಷೆಯನ್ನು ಬಳಸಿಕೊಂಡು, ಅವರು ತಮ್ಮ ಮೊದಲ ಶಾಸನಗಳನ್ನು ಹೊರಡಿಸಿದರು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಮಳವಳ್ಳಿ ಶಾಸನ ಇದಕ್ಕೊಂದು ನಿದರ್ಶನ.[೩೮] ಅಶೋಕನ ಕಾಲದಲ್ಲಿ ಪ್ರಾರಂಭವಾದ ಈ ಮಾಧ್ಯಮಗಳ ಬಳಕೆ ಶಾತವಾಹನರ ಕಾಲದಲ್ಲಿ (ಸಣ್ಣತ್ತಿ, ಬನವಾಸಿ, ಹಿರೇಹಡಗಲಿ ಮುಂ.) ಮುಂದುವರಿದು ಕದಂಬರ ಕಾಲದಲ್ಲಿ ಅಂತಿಮ ಘಟ್ಟವನ್ನು (ಶಿವಮೊಗ್ಗ-ಚಿತ್ರದುರ್ಗ ಜಿಲ್ಲೆಯಲ್ಲಿ) ಮುಟ್ಟಿತೆನ್ನಬಹುದು. ಪ್ರಾಕೃತ ಮಿಶ್ರಿತ ಸಂಸ್ಕೃತದಲ್ಲಿ ಬರೆದ ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯ ಬ್ರಾಹ್ಮೀ ಶಾಸನದಲ್ಲಿ ಈ ಮಾಧ್ಯಮದ ಮತ್ತೊಂದು ರೂಪಾಂತರವನ್ನು ಕಾಣುವೆವು.[೩೯]

ಕನ್ನಡ ಲಿಪಿಯ ಪ್ರವೇಶ : ಪ್ರಾಕೃತದ ಪ್ರಭಾವ ಕುಗ್ಗಿ ಅದರ ಸ್ಥಾನವನ್ನು ಸಂಸ್ಕೃತ ಪಡೆದುಕೊಳ್ಳುವ ಸರಿಸುಮಾರು ಕಾಲದಲ್ಲಿ - ಅಂದರೆ ಕ್ರಿ.ಶ. ೪ನೆಯ ಶತಮಾನದಾರಂಭದಲ್ಲಿ - ಬ್ರಾಹ್ಮೀ ಸ್ಥಾನವನ್ನು ಕನ್ನಡ ಲಿಪಿ ಪಡೆದುಕೊಳ್ಳಲು ಮುಂದಾಗಿದ್ದುದನ್ನು ಇಲ್ಲಿ ಗಮನಿಸುವುದವಶ್ಯ. ಕದಂಬರು ಸಂಸ್ಕೃತ ಭಾಷೆಯಲ್ಲಿ ಶಾಸನಗಳನ್ನು ಬರೆಸತೊಡಗಿದಾಗ 'ಪೆಟ್ಟಿಗೆ ತಲೆಕಟ್ಟಿನ ದಕ್ಷಿಣ ಲಿಪಿ'ಯನ್ನು ಅವರು ಬಳಸಿದರು. ಈ ಲಿಪಿಗೂ ಕನ್ನಡ ಲಿಪಿಗೂ ಗಾಢ ಸಂಬಂಧವಿದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟರೆ ಅದು ತುಂಬಾ ಗೌಣವೆಂದು ಇನ್ನು ಕೆಲವರು ವಾದಿಸಿರುವರು. ಇದು ಏನೇ ಇರಲಿ, ಪುನ್ನಾಟರು ಕನ್ನಡ ಲಿಪಿಯಲ್ಲಿ ಬರೆಸಿದ ಮೂರು ಶಾಸನಗಳಲ್ಲಿ ಒಂದು ಪೂರ್ಣ ಸಂಸ್ಕೃತ ಭಾಷೆಯಲ್ಲಿದ್ದರೆ ಇನ್ನೆರಡು ಕನ್ನಡ ಪದಗಳನ್ನು ಪೋಣಿಸಿಕೊಂಡ ಅಶುದ್ಧ ಸಂಸ್ಕೃತದಲ್ಲಿದೆ. ಇಪ್ಪತ್ತೊಂದು ಸಾಲುಗಳ ಅಪೂರ್ಣ ಮಾಂಬಳ್ಳಿ ಶಾಸನ(ಕ್ರಿ.ಶ. ೫೫೦)ದಲ್ಲಿಯ ಪ್ರಬುದ್ಧ ಸಂಸ್ಕೃತ ಪಾಠವನ್ನು ಕನ್ನಡ ಲಿಪಿ ಸಮರ್ಥವಾಗಿ ನಿರ್ವಹಿಸಿರುವುದನ್ನು ನೋಡಿದರೆ, ಈ

ಕಾಲಕ್ಕಾಗಲೇ ಕನ್ನಡ ಲಿಪಿ (ಮತ್ತು ಭಾಷೆ) ಪ್ರಬುದ್ಧಾವಸ್ಥೆಯನ್ನು ತಲುಪಿ ಶತಮಾನಗಳೇ ಗತಿಸಿರಬೇಕೆನಿಸುವುದು. ಆನುಷಂಗಿಕವಾಗಿ, ಈ ಕಾಲದ ಕನ್ನಡ ಬೆಳವಣಿಗೆಯ ಮೂರು ಪ್ರಭೇದಗಳನ್ನು ನಾವು ಗುರುತಿಸಬಹುದು. ಒಂದು, ಕನ್ನಡ ಭಾಷೆಯ ವಾಹನವಾಗಿ ಕನ್ನಡ ಲಿಪಿ ವಿಕಾಸಗೊಳ್ಳುವುದು; ಎರಡು, ಸಂಸ್ಕೃತ ಭಾಷೆಯನ್ನು ಕನ್ನಡ ಲಿಪಿ ಸಮರ್ಥವಾಗಿ ನಿರ್ವಹಿಸುವುದು; ಮತ್ತು ಮೂರು, ಸಂಸ್ಕೃತ ಪಾಠಗಳಲ್ಲಿ ಕನ್ನಡ ವಾಕ್ಯಗಳನ್ನು ಕೂಡಿಸಿಕೊಂಡು ಸಂಸ್ಕೃತ-ಕನ್ನಡ ಮಿಶ್ರ ಪಾಠಗಳನ್ನು ಸೃಷ್ಟಿಸುವುದು.

ಕನ್ನಡ ಭಾಷೆಯ ಪ್ರವೇಶ : ಕನ್ನಡ ಲಿಪಿಯನ್ನು ಬಳಸಿ ಬರೆದ ಕನ್ನಡ ಶಾಸನಗಳ ಪ್ರಾರಂಭವನ್ನು ಕ್ರಿ.ಶ. ೫ನೆಯ ಶತಮಾನದ ಹಳ್ಮಿಡಿಯಲ್ಲಿ ಗುರುತಿಸಿರುವೆವು. ಇಲ್ಲಿಂದ ಮುಂದಿನ ಐವತ್ತು ವರ್ಷಗಳಲ್ಲಿ ಈ ಮಾಧ್ಯಮ ಬಲಗೊಂಡದ್ದು ದಕ್ಷಿಣ ಕರ್ನಾಟಕದಲ್ಲಿ ಎಂಬುದನ್ನು ಕೆಳಗುಂದಿ (ಸೊರಬ ತಾ.), ಮಲ್ಲೋಹಳ್ಳಿ (ಬೆಂಗಳೂರು ತಾ.), ಮತ್ತು ತಮಟಕಲ್ಲು (ಚಿತ್ರದುರ್ಗ ತಾ.) ಶಾಸನಗಳಿಂದ ಅರಿತುಕೊಳ್ಳಬಹುದು.[೯] ಮಲೆನಾಡ ಸೆರಗಿನಲ್ಲಿ ಮುಂದುವರಿದು, ತಗರೆ (ಬೇಲೂರು ತಾ.), ಆಡೂರು (ಹಾನಗಲ್ಲು ತಾ.), ಸಿರಿಗುಂದ (ಚಿಕ್ಕಮಗಳೂರು ತಾ.)ಗಳ ಮೂಲಕ, ಇದು ೬ನೆಯ ಶತಮಾನದ ಕೊನೆಗೆ ಉತ್ತರ ಕರ್ನಾಟಕದ ಬದಾಮಿಯನ್ನು ತಲುಪಿತೆಂದು ಕಂಡುಬರುವುದು.[೧೦] ೬-೭ನೆಯ ಶತಮಾನಗಳಲ್ಲಿ ಇದು ಕವಲೊಡೆದು ಮಡುಗಟ್ಟಿದ್ದು ಆಂಧ್ರ ಪ್ರದೇಶದ ಗುಂಟೂರು (ಮಾಡುಗಲ) ಮತ್ತು ಕರ್ನೂಲು (ಸಾತನಿಕೋಟ) ತಾಲೂಕುಗಳಲ್ಲಲ್ಲದೆ ಕರ್ನಾಟಕದ ಹಾಸನ ಜಿಲ್ಲೆಯ ಶ್ರವಣಬೆಳ್ಗೊಳದಲ್ಲಿ.[೧೧]

ಸಂಸ್ಕೃತ ಪಠ್ಯದಲ್ಲಿ ಕನ್ನಡಕ್ಕೆ ಸ್ಥಾನ : ಸಂಸ್ಕೃತ ಭಾಷೆಯ ವಾಹನವಾಗಿ ಮಾತ್ರವಲ್ಲದೆ, ಸಂಸ್ಕೃತ ಪಠ್ಯದಲ್ಲಿ ಸಹಸ್ಥಾನ ಪಡೆದುಕೊಂಡು ಪರಿಣಾಮಕಾರಿಯಾಗಿ ಕನ್ನಡ ಭಾಷೆ ತನ್ನ ಅಸ್ತಿತ್ವವನ್ನು ಪ್ರತಿಪಾದಿಸಿಕೊಂಡ ಶಾಸನಗಳು ಮೊದಲು ಕಾಣಿಸಿಕೊಳ್ಳುವುದೂ ದಕ್ಷಿಣ ಕರ್ನಾಟಕದಲ್ಲಿಯೇ. ಇದರ ಆರಂಭವನ್ನು ಗುರುತಿಸಲು ನನಗೆ ಸಾಧ್ಯವಾಗಿ ರುವುದು ಸು. ೫-೬ನೆಯ ಶತಮಾನಗಳ ಮಲ್ಲೋಹಳ್ಳಿ (ಬೆಂಗಳೂರು ತಾ.) ಮತ್ತು ತಗರೆ(ಬೇಲೂರು ತಾ.)ಯ ಗಂಗರ ಶಾಸನಗಳಲ್ಲಿ.[೧೨] ತಗರೆಯಿಂದ ಪಶ್ಚಿಮೋತ್ತರ ಮುಖವಾಗಿ ಮುಂದುವರಿದು, ಆಸಂದಿ ಮತ್ತು ಮಲ್ಲೇನಹಳ್ಳಿ (ಎರಡೂ ಕಡೂರು ತಾ.), ಮಾಚೇನಹಳ್ಳಿ (ತರೀಕೆರೆ ತಾ.), ಹರಿಹರ (ಹರಿಹರ ತಾ.) ಮೂಲಕ ಹಾಯ್ದು ಈ ಮಿಶ್ರ ಭಾಷಾ ಮಾಧ್ಯಮವೂ ೭ನೆಯ ಶತಮಾನದ ಕೊನೆಯಲ್ಲಿ ಚಾಳುಕ್ಯ ರಾಜಧಾನಿ ಬದಾಮಿ ಯನ್ನು ತಲುಪಿತೆಂದು ತೋರುವುದು.[೧೩]

ಸು. ೭೦೦-೮೦೦ರ ಅವಧಿಯಲ್ಲಿ ಪುನ್ನಾಟರು ಬರೆಸಿದ ಬಸವನಪುರ (ನಂಜನಗೂಡು ತಾ.) ಮತ್ತು ಕೊಮರಲಿಂಗಂ (ಕೋಯಮತ್ತೂರು ಜಿಲ್ಲೆಯ ಉಡಮಲ್ ಪೇಟೆ ತಾ.) ತಾಮ್ರಪಟಗಳು ಈ ಮಿಶ್ರಮಾಧ್ಯಮದ ವೈಲಕ್ಷಣ್ಯಗಳನ್ನು ಸಮರ್ಥವಾಗಿ ಬಿಂಬಿಸಿರುವುವು.

ಈ ಎರಡು ಶಾಸನ ಕವಿಗಳಿಗೆ ಸಂಸ್ಕೃತಕ್ಕಿಂತ ಕನ್ನಡ ಭಾಷೆಯ ಮೇಲೆ ಹೆಚ್ಚು ಪ್ರಭುತ್ವವಿತ್ತೆನ್ನಲು ಇಲ್ಲಿಯ ಸಂಸ್ಕೃತ ಪಾಠದಲ್ಲಿರುವ ಹೇರಳ ಮತ್ತು ಕನ್ನಡ ಪಾಠದಲ್ಲಿರುವ ವಿರಳ ದೋಷಗಳು ಸಹಾಯಕ್ಕೆ ಬರುವುವು. ಬಸವನಪುರದ ತಾಮ್ರಪಟ ಸಂಸ್ಕೃತ ಭಾಷೆಯ ಗದ್ಯಪದ್ಯದಲ್ಲಿದೆ. ದಾನಕ್ಷೇತ್ರದ ಮೇರೆಗಳನ್ನು ಇಲ್ಲಿ ಕನ್ನಡದಲ್ಲಿ ಗುರುತಿಸಲಾಗಿ

ರುವುದಲ್ಲದೆ ಸಂಸ್ಕೃತದಲ್ಲಿರುವ ಶಾಪೋಕ್ತಿಯನ್ನು ಕನ್ನಡದಲ್ಲಿ ಪುನರುಕ್ತಿಗೊಳಿಸಲಾಗಿದೆ. ಸಂಸ್ಕೃತ ಬಲ್ಲ ಫಲಾನುಭವಿಗಳು ಮಾತ್ರವಲ್ಲದೆ ಕನ್ನಡವನ್ನು ಬಲ್ಲ ಸ್ಥಳೀಯರು ಇದನ್ನು ಅರಿತುಕೊಂಡು ಶಾಸನವನ್ನು ಗೌರವಿಸಬೇಕೆಂಬುದು ಇದರ ಉದ್ದೇಶವಾಗಿದ್ದರೂ ವಲಸೆ ಬಂದವರ ಮತ್ತು ನಾಡನಿವಾಸಿಗಳ ಭಾಷೆಗಳನ್ನು ಅರಿತುಕೊಳ್ಳಲು ಇಂತಹ ಶಾಸನಗಳು ಎಷ್ಟು ಉಪಯುಕ್ತವಾಗಿವೆ ಎಂಬುದನ್ನು ನಾವಿಲ್ಲಿ ಕಂಡುಕೊಳ್ಳಬಹುದು.

ಈ ಮಿಶ್ರಭಾಷಾ ಪ್ರಯೋಗದ ಮತ್ತೊಂದು ಮುಖವನ್ನು ಕೊಮರಲಿಂಗಂ ತಾಮ್ರಪಟ ಪರಿಚಯಿಸುವುದು. ತುಂಬಾ ಅಶುದ್ಧ ಹಾಗೂ ಅಪೂರ್ಣ ಸಂಸ್ಕೃತ ಗದ್ಯ-ಪದ್ಯದಿಂದ ಪ್ರಾರಂಭವಾಗುವ ಈ ಶಾಸನದ ಸಂಸ್ಕೃತ ಪದಗಳ ಮಧ್ಯ ಮಧ್ಯ ಒಮ್ಮೆಲೇ ಕನ್ನಡ ಪದಗಳು ಪ್ರವೇಶಿಸಿ ಪುನಃ ಸಂಸ್ಕೃತ ಪದಗಳಿಗೆ ಎಡೆಮಾಡಿಕೊಡುವುವು.[೪೪] ಸಂಸ್ಕೃತ-ಕನ್ನಡ ಪದಗಳನ್ನು ಮಿಶ್ರಣ ಮಾಡಿದಂತೆ, ದ್ರಾವಿಡ 'ಱ' ಮತ್ತು 'ೞ'ಕಾರ ಪ್ರಯೋಗಗಳನ್ನೂ ಅಲ್ಲಲ್ಲಿ ಬಳಸಿ ಬರೆಯಲಾಗಿದೆ. ಈ ಕಾರಣಗಳಿಂದಾಗಿ ಕೊಮರಲಿಂಗ ತಾಮ್ರಪಟದಲ್ಲಿಯ ಸಂಸ್ಕೃತ-ಕನ್ನಡ ಪದಗಳ ಮಿಶ್ರಣದ ಸ್ವರೂಪವು ಬಸವನಪುರ ಶಾಸನದಲ್ಲಿಯ ಸಂಸ್ಕೃತ-ಕನ್ನಡ ವಾಕ್ಯಗಳ ಮಿಶ್ರಣಕ್ಕಿಂತ ವಿಭಿನ್ನವೆನಿಸುವುದು.

ಆರಂಭಕಾಲದ ಅರಸರ ಸಂಸ್ಕೃತ ವ್ಯಾಮೋಹ : ಇಲ್ಲಿ ಉದ್ಭವವಾಗುವ ಪ್ರಶ್ನೆಯೆಂದರ: ಹೊರಗಿನಿಂದ ಬಂದು ಕರ್ನಾಟಕ ಪ್ರದೇಶದಲ್ಲಿ ಆಳಿದ ಮೌರ್ಯ, ಶಾತವಾಹನ ಮುಂತಾದವರು ತಾವೇ ತಂದ ಪ್ರಾಕೃತ ಭಾಷೆಯಲ್ಲಿ ವ್ಯವಹರಿಸಿದ್ದು ಸಹಜವೆನಿಸಿದರೂ ಆರಂಭಕಾಲದ ಸ್ಥಳೀಯ ಜನಾಂಗ ನಾಯಕರುಗಳಾದ ಕದಂಬ, ಪುನ್ನಾಟ, ಗಂಗ ಮುಂತಾದವರು ಕನ್ನಡವನ್ನು ಬಿಟ್ಟು ಸಂಸ್ಕೃತ ಭಾಷೆಯನ್ನು ತಮ್ಮ ಮಾಧ್ಯಮವಾಗಿ ಮಾಡಿಕೊಂಡಿದುದ್ದೇಕೆ? ಎಂಬುದು.

ಕ್ರಿ.ಶ. ೩ನೆಯ ಶತಮಾನಕ್ಕಿಂತ ಮುಂಚಿನ ಕನ್ನಡ ಭಾಷೆ ಮತ್ತು ಲಿಪಿಯ ಬಗ್ಗೆ ನಮಗೆ ಅಸ್ಪಷ್ಟ ಕಲ್ಪನೆ ಮಾತ್ರ ಇದೆ. ಈ ಕಾಲಾವಧಿಯಲ್ಲಿ ನಾಯಕಸ್ಥಾನಕ್ಕೇರಿದ್ದ ಸ್ಥಳೀಯರೆಲ್ಲರೂ ಮೌಖಿಕವಾಗಿಯೇ ತಮ್ಮ ವ್ಯವಹಾರವನ್ನು ನಿರ್ವಹಿಸಿಕೊಳ್ಳುತ್ತಿದ್ದುದರಿಂದ ಕನ್ನಡವನ್ನಾಗಲೀ ಇನ್ನಾವ ಭಾಷೆಯನ್ನಾಗಲೀ ಬಳಸುವ ಆವಶ್ಯಕತೆ ಅವರಿಗೆ ಉಂಟಾಗಲಿಲ್ಲ. ಲಿಖಿತ ವ್ಯವಹಾರದ ಆವಶ್ಯಕತೆಯನ್ನು ಅವರು ಅರಿತುಕೊಂಡದ್ದು ತಮ್ಮ ಅಂತಸ್ತನ್ನೂ ವಂಶಾವಳಿಯನ್ನೂ ಉತ್ತಮಪಡಿಸಿಕೊಂಡು ತಮ್ಮ ಅರಸೊತ್ತಿಗೆಯನ್ನು ಅಧಿಕೃತಗೊಳಿಸಿಕೊಳ್ಳಬೇಕೆಂಬ ದಾಹ ಅವರಲ್ಲಿ ಉಂಟಾದಾಗ ಮಾತ್ರ. ಇದನ್ನು ಪೂರೈಸಿಕೊಳ್ಳಲು ಅವರು (ಅಹಿಚ್ಛತ್ರ ಮುಂತಾದ) ದೂರ ದೇಶದ ವಿದ್ವಾಂಸರನ್ನು ಬರಮಾಡಿಕೊಂಡು, ಅವರಿಗೆ ಪೋಷಣೆ ಒದಗಿಸಿ ಇಲ್ಲಿ ನೆಲೆಸಲು ಅವರ ಮನವೊಲಿಸಬೇಕಾಯಿತೆಂದು ಕಾಣುವುದು. ಈ ಪ್ರಕ್ರಿಯೆ ಆರಂಭಕಾಲದ ಕದಂಬರ ಶಾಸನಗಳಲ್ಲಿ ಹೆಚ್ಚು ಸ್ಫುಟಗೊಂಡಿರುವುದು. ಇವರು ಹಾಕಿಸಿದ (೪೪) ಶಾಸನಗಳಲ್ಲಿ ಸುಮಾರು ೩೦ ಬ್ರಾಹ್ಮಣರಿಗೆ ಹಾಕಿಕೊಟ್ಟ ಭೂದತ್ತಿಯನ್ನು ೧೨ ಜೈನ ಮತ್ತು ೨ ಬೌದ್ಧ ಧರ್ಮಸಂಸ್ಥೆಗಳಿಗೆ ಮಾಡಿದ ದಾನಕಾರ್ಯಗಳನ್ನು ಪ್ರಸ್ತಾಪಿಸುವುವು. ಅಪರೂಪವಾಗಿ ಕದಂಬರ ವಂಶಾವಳಿಯನ್ನೂ ಪ್ರಸ್ತಾಪಿಸುವ ತಾಳಗುಂದ, ಗುಡ್ನಾಪುರ, ಹಲಸಿ ಮುಂತಾದ ಮೂರು ನಾಲ್ಕು ಶಾಸನಗಳನ್ನು ಬಿಟ್ಟರೆ, ಉಳಿದವುಗಳೆಲ್ಲವೂ ಫಲದಾಯಿಗಳನ್ನು ಕೀರ್ತಿಸಲು, ಅವರ ಮೂಲಕ ಆಳರಸರ ಹೆಗ್ಗಳಿಕೆಯನ್ನು

ಪ್ರದರ್ಶಿಸುವ ಶಾಸನಗಳಾಗಿವೆ. ಕೆಲವು ಶತಮಾನ ಕಾಲ ಸಮುದ್ರ ಸಂಪತ್ತಿನ ಮೇಲೆಯೇ ಅವಲಂಬನ ಹೊಂದಿದ್ದ ಕದಂಬರನ್ನು ಇಲ್ಲಿ ಬ್ರಾಹ್ಮಣೋತ್ತಮ ಮತ್ತು ಕ್ಷತ್ರಿಯಶ್ರೇಷ್ಠ ಎಂದು ಹೊಗಳಲಾಗಿದೆ. ಅವರಿಗೆ ಭವ್ಯ ವಂಶಾವಳಿಯನ್ನೂ ಕುಲ-ಗೋತ್ರವನ್ನೂ ಒದಗಿಸಿ, ಗುಪ್ತ ಮುಂತಾದ ಸಮ್ರಾಟರೊಡನೆ ಮಾಡಿದ ಅವರ ನೆಂಟಸ್ತಿಕೆಯನ್ನು ಕೊಂಡಾಡುವುದು ಇವುಗಳ ಮುಖ್ಯ ಉದ್ದೇಶವಾಗಿತ್ತೆಂಬ ಭಾವನೆ ಬರುವುದು. ಆರಂಭಕಾಲದ ಇವರ ಕಡಲ ಮೇಲಿನ ಶ್ರಮಜೀವನವನ್ನು ಎಷ್ಟು ಸಾಧ್ಯವೋ ಅಷ್ಟು ಮಂದಗೊಳಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಅವರು ತೋಡಿಸಿದ ಕೆಲವು ಕೆರೆ-ತಟಾಕಗಳ ಪ್ರಸ್ತಾಪ ಬಿಟ್ಟರೆ, ಬಹುಸಂಖ್ಯಾತ ಸಮಾಜಕ್ಕೆ ಸಂಬಂಧಪಡುವ ಅವರ ಜನಪರ ಕಾರ್ಯಗಳ ಪ್ರಸ್ತಾಪ ಇಲ್ಲವೇ ಇಲ್ಲವೆನ್ನುವಷ್ಟು ಇಲ್ಲಿ ಅಪರೂಪವಾಗಿದೆ. ಅಂದರೆ ಇಲ್ಲಿ ಬಳಸಿದ ಭಾಷೆ ಬಹುಸಂಖ್ಯಾ ಸಮಾಜಕ್ಕೆ ಸಂಬಂಧಿಸಿದ್ದಾಗಿರದೆ ಆಶ್ರಿತ ಬ್ರಾಹ್ಮಣ ವಿದ್ವಾಂಸರಿಗೆ ಮಾತ್ರ ಸಂಬಂಧಪಟ್ಟದ್ದಾಗಿದೆಯೆಂದು ಅರ್ಥ. ಈ ಕಾಲದಲ್ಲಿ ಸ್ಥಳೀಯ ಭಾಷೆಯನ್ನೂ ಜನಪದ ಸಂಸ್ಕೃತಿಯನ್ನೂ ರಕ್ಷಿಸಿಕೊಂಡು ಬಂದವರು ಅರಸರಲ್ಲ, ಜನಸಾಮಾನ್ಯರು. ರಾಜ್ಯದ ವ್ಯವಹಾರ ವೃದ್ಧಿಸಿ ಸಮಾಜದ ಎಲ್ಲ ವರ್ಗಗಳೊಡನೆ ಒಂದಿಲ್ಲೊಂದು ಬಗೆಯಲ್ಲಿ ಸ್ಪಂದಿಸಬೇಕಾದ ಅನಿವಾರ್ಯತೆ ಉಂಟಾದಾಗ ಮಾತ್ರ ಇಂತಹ ಆಳರಸರು ಜನನುಡಿಯಲ್ಲಿ ವ್ಯವಹರಿಸಲು ಆಸಕ್ತರಾದರೆಂದು ಕಾಣುವುದು. ಕನ್ನಡ ನುಡಿಯ ಇತಿಹಾಸವನ್ನು ಸ್ಪಷ್ಟವಾಗಿ ಗುರುತಿಸಿದಾಗ ಮಾತ್ರ ಈ ಬದಲಾವಣೆಯ ಗತಿಯನ್ನು ಗುರುತಿಸಲು ಸಾಧ್ಯವಾಗಬಹುದೆನಿಸುವುದು.

ಆಕರಟಿಪ್ಪಣಿ :

೧. *ಇತಿಹಾಸ ದರ್ಶನ* XVII (೨೦೦೨), ಪು. ೧-೧೧
೨. *ಪುರಂ.* ೮೦; ೭೪-೭೫
೩. *ಅಹಂ.* ೨೫೩:೧೯
೪. *ಅಗನಾ.* ೧೧೫, ೯೧
೫. *ಅಗನಾ.* ೨೩,೭೨; *ಪುರಂ.* ೨೭೩,೩೦೩
೬. ಮಹದೇವನ್, ಅದೇ., ಸಂ. ೪೯
೭. *ಎಎಸ್‌ಎಂಎಆರ್* (ಮೈಸೂರು ಪ್ರಾಕ್ತನ ವರದಿ) ೧೯೨೭, ಪು.೬೮; ಅದೇ ೧೯೧೬, ಪು.೩.೧
೮. *ಎಸ್‌ಐಐ* XXIV, ೨೬೯, ನೊ. ಮುನ್ನುಡಿ, ಪು. iii
೯. *ಪದಿಜ್ಞು.* II, ೧:೪-೧೬; ೨,೩; ೨೮, ೧-೫; IVರ ಪದಿಹಂ; *ಅಹನಾ.* ಮಣಿಮಿಡಪವಳಂ ೧೨೭; ೩-೧೦, ೩೪೭:೩೫; *ಶಿಲಪ್ಪ.* ಅದ್ಯಾ.೧೭, ಉಳ್ವರಿವಳ್ತು ೧-೨; ಅಧ್ಯಾ.೨೩: ೧-೧೮; ೨೫: ೧೮೫-೧೮೯; ೨೮: ೧೩೫; ೨೯ ಉಸುಲ್‌ವಾರಿ ೧೧-೩ ಮತ್ತು ವಳ್ಳೈಪತ್ತು ೩:೩ ಮುಂ.
೧೦. *ಪದಿಜ್ಞು.* ೭:೫; *ಅಹನಾ.* ೩೪೭: ೩-೭; *ಶಿಲಪ್ಪ* ವಳ್ಳೈಪಾಟ್ಟು ೩:೩
೧೧. *ಪದಿಜ್ಞು.* ೨೦: ೨-೫; V: ೧೨
೧೨. *ಅಹನಾ.* ೧೨೭, ೩-೧೦
೧೩. *ಶಿಲಪ್ಪ* ೨೩: ೧-೮೧
೧೪. *ಅದೇ.* ೨೫: ೧೮೫-೧೮೯
೧೫. *ಅದೇ.* ೨೫: ೧೫೬-೧೫೯; ೧೦೩, ೧೪೮-೧೪೯

೧೬. ಶಿಲಪ್ಪ XVII: ಉಳ್ವರಿವಳ್ತು ೧.೨
೧೭. ರಸನಾಯಗಮ್, ಏನ್ಷಿಯಂಟ್ ಜಾಫ್ನಾ ಪು.೧೧೪
೧೮. ಪಿಳ್ಳೈ ಕೆ.ಕೆ., ಸೌತ್ ಇಂಡಿಯಾ ಅಂಡ್ ಶ್ರೀಲಂಕಾ: ಸರ್ ವಿಲ್ಲಿಯಮ್ ಮೆಯರ್ ಎಂಡೋಮೆಂಟ್ ಲೆಕ್ಚರ್ಸ್, ಮವಿವಿ. (ಮದ್ರಾಸ್, ೨೦೦೧ (ಪು.ಮು.) ಪು.೩೪
೧೯. ಇಅ. XIII, ಪು. ೩೧೩-೪೧೧
೨೦. ನೊ. ಸಂಕಲನ ೨೬, ಪು.೬೩-೬೪
೨೧. ಅಹಂ. ೩೯೬; ನೋ. ಮಾರ್. ಜಿ.ಆರ್., ಅದೇ, ಪು.೨೮೬, ಅ.ಟಿ. ೧೧ ,
೨೨. ತಮಿಳ್ ಲೆಕ್ಸಿಕನ್ V, (ಮದ್ರಾಸ್. ೧೯೮೨), ಪು. ೨೪೧೬
೨೩. ಪೆರಿಯಪುರಾಣಂ-ಚಂಡೇಶ್ವರಿ ಚರಿತ್ರೆ, ಭಾ. ೧
೨೪. ತೊಲ್ಕಾಪ್ಪಿಯಮ್-ಸೊಲ್ಲಧಿಕಾರಮ್, ಶೈವಸಿದ್ಧಾಂತ ಪಬ್ಲಿಕೇಶನ್ ಲಿ., ತಿರುವೆಲ್ವೇಲಿ-ಚೆನ್ನೈ, ೧೯೫೨ (೨ನೆಯ ಸಂ.). ಪು. ೨೦೭
೨೫. ಮೆಕ್‌ಕ್ರಿಂಡ್ಲ್, ಜೆ.ಡಬ್ಲ್ಯು., ಏನ್ಷಿಯಂಟ್ ಇಂಡಿಯ IV, (ಬಾಂಬೆ, ೧೮೮೫), ಪು.೧೮೦
೨೬. ಮೈಸೂರು ಪ್ರಾಕ್ತನ ವರದಿ ೧೯೨೯, ಪು. ೨-೮; ಅದೇ. ೧೯೧೧, ಪು.೩೩
೨೭. ಗಾಯ್ ಜಿ.ಎಸ್., ಇನ್ಸ್‌ಕ್ರಿಪ್ಷನ್ ಆಫ್ ದಿ ಅರ್ಲಿ ಕದಂಬಾಸ್, ದೆಹಲಿ, ೧೯೯೬, ಶಾ.ಸಂ. ೨೨, ಪು.೧೦೭-೧೧೧
೨೮. ಎಕ ೧, ಕೂರ್ಗ ೧ (ಸು.೪೬೬)
೨೯. ಅದೇ. ಮುನ್ನುಡಿ, ಪು.೬ ಅಲ್ಲದೆ ದುರ್ವಿನೀತನ ತಾಯಿ ಕೂಡಾ ಕದಂಬ ಮನೆತನದವಳಾಗಿದ್ದಳು.
೩೦. ಮೈಸೂರು ಪ್ರಾಕ್ತನ ವರದಿ ೧೯೪೧, ಪು. ೧೨೮-೩೧; ಎಇ XLI, ಪು.೧೦೫-೧೧೩, ಎಕ. (ರೈ) IV, ಚನ ೩೪೭. ಮೈಸೂರು ಪ್ರಾಕ್ತನ ವರದಿ ೧೯೨೫, ಪು.೯೦-೯೨, ಎಕ XII, ತುಮು. ೨೩, ಎಕ III, ನಂಜ. ೨೬ ; ಮುಂ).
೩೧. ಮೈಸೂರು ಪ್ರಾಕ್ತನ ವರದಿ ೧೯೩೬, ಪು. ೧೩೫
೩೨. ಇಅ XII, ಪು. ೧೩; ಅದೇ. XVIII, ಪು. ೩೬೩
೩೩. ಎಕ. IV, ಮು. ಪು.೪-೫; ಎಕ. IX, ಮು. ಪು.೩
೩೪. ಎಕ. IV, ಹೆಗ್ಗಡ. ೫೬, ಮು. ೩-೪
೩೫. ಎಕ. XI, ದೊಡ್ಡ ಬ. ೩೮
೩೬. ಎಕ VII, ಶಿಕಾ. ೨೬೪: ಸು. ೩-೪ನೆಯ ಶತಕ.
೩೭. ಜಿಎಸ್‌ಗಾಯ್, ಅದೇ. ಪು. ೬೧. ಮತ್ತು ರಾಜಶೇಖರಪ್ಪ ಬಿ., ಕಸಾಪಪ ೧೯೮೪, (ಸಂ. ೬೯). ಪು.೧ ರಿಂದ.
೩೮. ಅದೇ.
೩೯. ಜೆಇಎಸ್‌ಐ X, ಸೊರಬ. ಪು. ೧೧೯; ಇಅ V, ಬೆಂಗ. ಪು. ೧೩೩: ಎಕ XI, ಚಿ.ದು. ೪೩
೪೦. ಎಕ(ಮೈ) IX, ಬೇಲೂ. ೫೩೭: ಎಕ(ಮೈ) XI, ಚಿ.ಮ. ೧೪; ಕಐಐ IX, ಬಾದಾ. ೨೨೨ ಮತ್ತು ೩೦೦
೪೧. ಎಸ್‌ಐಐ XXVII, ಪಲ್ನಾಡ್ ೨೫೮, ೨೬೦; ನಂದಿಕೊಟ್ಟೂರು ೨೬೧, ೨೬೨, ೨೬೪-೨೬೯, ೨೭೧-೨೭೪; ಎಕ II, ಶ್ರಬೆ. ೧೪, ೧೫, ೨೦-೨೫; ೨೭-೩೬; ಮುಂ.
೪೨. ಇಅ V, ಬೆಂಗ. ೧೩೩; ಎಕ(ಮೈ) IX, ಬೇಲೂ. ೫೩೭
೪೩. ಎಕ(ಮೈ) XII, ಕಡೂ. ೨೩; ಎಸ್‌ಐಐ XXVI, ಕಡೂ. ಪು. ೪೮-೫೦; ಎಕ(ಮೈ) XII. ತರೀ. ೧೦೩; ಎಕ XI, ದಾವ. ೬೬
೪೪. ಉದಾ. 'ಆತ್ರೇಯಗೋತ್ರಾಯ ಪಡುವಶರ್ಮಗಂ ಇತಿ ಇರ್ವ್ವರ್ಗಂ ಏಕೋಭಾಗಮು....' ಎಂದೆಲ್ಲ.

■ ಡಾ. ಷ. ಶೆಟ್ಟರ್ : ಡಾ. ಎಸ್. ರಾಧಾಕೃಷ್ಣನ್ ಸಂದರ್ಶಕ ಪ್ರಾಧ್ಯಾಪಕ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಐಐಎಸ್‌ಸಿ ಕ್ಯಾಂಪಸ್, ಬೆಂಗಳೂರು - ೫೬೦ ೦೧೨
email : settar@nias.iisc.ernet / profssettar@yahoo.co.in ■

೧. ಗುರುತುಗಳೇ ಇರಲಿಲ್ಲ

ನಡೆನಡೆಯುತ್ತ ನಾನರಿತೆ
ನಾ ನಡೆದುದಲ್ಲಿಗೆಂದು.
ಬಹುವಾಗಿ ದ್ವೇಷಿಸುತ, ಪ್ರೀತಿಸುವುದರಿತೆ
ಪ್ರೀತಿಸುತ, ಯಾರನ್ನು-ಏನನ್ನು ಪ್ರೀತಿಸುವುದೆಂದರಿತೆ
ದುಃಖಿಸುತ, ಹೊಟ್ಟೆ ಬಿರಿವಂತೆ ನಗುವುದನ್ನರಿತೆ
ದುರ್ಬಲತೆಯಿಂದಲೇ ಬಲ ಬೆಳೆಸಿಕೊಂಡೆ
ಅಸತ್ಯದೊಡಲಿಂದ ಸತ್ಯವನು ತಿಳಿದೆ
ಇಬ್ಬಗೆಯ ನಡೆಯಿಂದ ನೇರತನ ನೆಯ್ದೆ
ಕೊನೆಗೊಮ್ಮೆ ನಾನೀಗ ಯಾರೆಂಬುದರಿತೆ
ಅಂತೆಯೇ ಆ ಮನುಜನಾಗುವ ಧೈರ್ಯ ಪಡೆದೆ.
ಇನ್ನೊಂದು ಹೆಜ್ಜೆಯಿಟ್ಟಲ್ಲಿ
ನಾ ಹೊರಟ ತಾಣವನೆ ತಲುಪಬಲ್ಲೆ.

೨. ನನಗೊಂದು ನಾಯಿ ಕಚ್ಚಿತ್ತು

ಡಾಕ್ಟರನೊಬ್ಬ ಬರಿ ಮೋಜಿಗಾಗಿ
ಅನಗತ್ಯ ಶಸ್ತ್ರಕ್ರಿಯೆಗೈದಾಗ
ಅವನ ಹಾಗೆಯೇ ಆಗಿಬಿಟ್ಟಿತ್ತೆನ್ನ ಮೂಗು;
ಮತ್ತೊಂದು ಶಸ್ತ್ರಕ್ರಿಯೆ ಅಂಥದೇ ಕಾರಣಕೆ
ಕುರುಡುಗೊಳಿಸಿತು ನನ್ನ ಕಣ್ಣು.
ಪ್ರೇಮಗೀತೆಗಳ ರಚನೆ ಮತ್ತು
ತ್ಯಾಗಭಾವನೆಗೆ ಹೆಸರಾದ ಕವಿಯೊಬ್ಬ
ನನ್ನ ಮಡದಿಯ ಮಾನಭಂಗಕ್ಕೆ ಯತ್ನಿಸುವನು;
ನನ್ನನ್ನು ಕೊಲ್ಲಬಯಸುವ ಮಾನವರು
ಸೇನಾಪಡೆಯ ಘಟಕವೊಂದೆನಿಸುವರು.
ಒಂದೇ ಒಂದು ಸಲ
ನನ್ನನ್ನು ಕಚ್ಚಿದೆಯೊಂದು ನಾಯಿ.

೩. ಬಂಡೆಗಲ್ಲಿನ ಮೇಲೆ ಪಾತರಗಿತ್ತಿ

ಸ್ತಬ್ಧ ಸ್ಥಿತಿಯೊಳಗಿದ್ದ
ಕರಿಯ ಗೆರೆಗಳು ಬೆರೆತ ದೊಡ್ಡ ಹಳದಿ ಪಕ್ಕಗಳು.
ಮೃತ ಶರೀರದ ಮುಖದ ಮೇಲೆಯೂ ಹೀಗೆ
ಮೃತನಾತ್ಮ ನೆಲೆಸುವುದೆಂದು ಹೇಳುವರು ಜನರು.

ಮಾತ್ರ ನನಗೆನಿಸಿದ್ದು : ಬಂಡೆಗಲ್ಲಿಗೆ ಜೀವ ಬಂದಂತೆ
ಈ ಪತಂಗವು ಶಿಲೆಯ ಮೊಗದ ಮೇಲಿನ ಕಳೆಯು
ಕಲ್ಲಿನೊಡಲಲಿ ಬೆಳೆದ ಗೂಢ ಹಂಬಲವೊಂದು
ಜೀವಧಾರಣಗೈದು ಹೀಗೆ ಕಂಗೊಳಿಸುತಿಹುದು.
ಜೋಡು ಹಲ್ಲಿನ ಎರಡು ಹಿಂಸ್ರ ಪ್ರಾಣಿಗಳು ಕಾಡಿನಲಿ
ಕಡಿದಾಡಿ ಸತ್ತುದನು ಕಂಡಿದ್ದರೂ ಈಗ ಮರೆತ ಮಾತು.
ನೋವೆಂಬುದು ನಿಜವಲ್ಲ, ಸಾವೆಂಬುದು ಭ್ರಮೆಯು
ಇಲ್ಲಿ ಭೂಮಿಯ ಮೇಲೆ ಸಾವೆಂಬುದೇ ಇಲ್ಲ.
ನನ್ನ ಒಳದನಿಯಿಂತು ಎಚ್ಚರಿಸಿತು.
ಪಾತರಗಿತ್ತಿಯ ಬಳಿ ನನ್ನ ಕೈ ಸರಿದಾಗ
ಕೆಳಗಡೆಯ ಬಂಡೆಯೇ ಚಲಿಸಿದಂತೆನಿಸಿತು!

■ ಡಾ. ಬಿ. ಎ. ಸನದಿ : ಮಿಲನ, ಸಾ ಮಿಲ್ ಎದುರು, ಹೆರವಟ್ಟಾ, ಕುಮಟಾ-೫೮೧ ೩೩೨ ■

ಪಯಣ

ಜಗದೀಶ ಮಂಗಳೂರಮಠ

ನಡೆದು ನಡೆದು ಹಾದಿಯಾಗಿ
ಹಾದಿ ಬೀದಿಯಾಗಿ ರಾಜಮಾರ್ಗವಾಗಿ
ಬೆಳೆದದ್ದು ಹಳೆಯ ಕಥೆ.
ನಡೆವ ಓಡುವ ಹುಡುಕುವ
ಕುತೂಹಲ ಕ್ರಿಯೆಗಳೆಲ್ಲ ಮಾಯವಾಗಿ
ದಾರಿದಾರಿಗಳು ಥಿಕ್ಕಿ ಹೊಡೆಯುವ ಕಣ್ಣು ಕುಕ್ಕುವ ವ್ಯಥೆ.
ಹುಚ್ಚು ಕುದುರೆಯ ಬೆನ್ನೇರಿ
ಕುಳಿತದ್ದೊಂದೇ ಸಂತೋಷದಲಿ ಸಂಭ್ರಮಿಸಿ
ಎತ್ತ ಕಡೆ ಪಯಣ ಯಾವ ದಿಕ್ಕಿನ ಗುರಿ
ಎಲ್ಲ ಮರೆತುಬಿಟ್ಟಿರುವ ಪರಾಕ್ರಮಿ.
ಕೋಟೆ ಕಟ್ಟಿದವರೆಲ್ಲ ಕಾಣದೂರುಗಳಲ್ಲಿ
ಹಳಹಳಿಸುವರು ಸಂಜೆ ಮೋಡಗಳ ನೋಡಿ
ಸುಲಿಗೆಕೋರರ ದಂಡು ಬೀಡುಬಿಟ್ಟಿದೆ ಇಲ್ಲಿ
ಫಿರಂಗಿ ಬುಲ್ಡೋಜರುಗಳೊಡನೆ ಒಟ್ಟುಗೂಡಿ.
ಅಳುತ್ತಲಿದೆ ನೆಲದೆಲ್ಲ ಚೆಲುವು
ಸುಡುವ ನೇಸರ ಅಣಕಿಸುವ ಚಂದಿರ
ಅಟ್ಟಹಾಸದ ತಾರೆಗಳ ಅಂಬರ.
ಎದೆಗಳಲ್ಲಿ ಭಗ್ಗನೆದ್ದು ಉರಿವ ಉರಿ
ಶಾಂತವಾಗಿಸುವ ಜಲವೂ ಬತ್ತಿದೆ
ಒಳದನಿಯೂ ಬಾಯಾರಿ ಸತ್ತಿದೆ.
ಓಡುತ್ತಲಿದೆ ಕುದುರೆ ಮುಂದೆ ಮುಂದೆ
ಸವಾರನಿಗಿಲ್ಲ ಯಾವುದರ ಚಿಂತೆ.
ಹಾರುವ ಹಕ್ಕಿಗಳ ರೆಕ್ಕೆ ಕತ್ತರಿಸಿ

ಜೋಡಿಸಲಾಗಿದೆ ಪ್ಲ್ಯಾಸ್ಟಿಕ್ ಪಕ್ಷಿಗೆ
ನರ್ತಿಸುವ ನವಿಲ ಕಾಲುಗಳ ಕತ್ತರಿಸಿ
ಅಳವಡಿಸಲಾಗಿದೆ ಇಲೆಕ್ಟ್ರಾನಿಕ್ ಗೊಂಬೆಗೆ.
ದುಡಿವ ಕೈಗಳಿಗೆ ಅದೃಶ್ಯ ಹೆಡೆಮುರಿ ಕಟ್ಟಿ
ಕಾಂತದ ತಂತು ತಂತಿಗಳಿಗರ್ಪಿಸಿ ನಿಯತಿ
ಮಂತ್ರಫಲಾಪೇಕ್ಷೆಯಲಿ ಕೇಕೆ ಹಾಕುವ ಒಲವು
ಬಲವುಳ್ಳವರದೇ ನಾಡಲ್ಲಿ ಸದಾ ಗೆಲುವು.
ಅಂತರಂಗದ ಲಿಂಗಕ್ಕೆ ಕಣ್ಣು ಮುಚ್ಚಿ
ಸ್ಥಾವರಕ್ಕೆ ನಿತ್ಯ ಪುಷ್ಪ ಪತ್ರಿ
ಎಲ್ಲಿದೆ ಕಲ್ಯಾಣದ ಹಾದಿ
ಕಂಗಾಲಾಗಿ ನಿಂತುಬಿಟ್ಟಿದೆ ಬಿಡದಿ.
ಹಣದ ಹೊಳೆ ಹಳ್ಳ ಕಾಲುವೆಗಳೇ ಸರಿ
ಸದಾ ತುಂಬಿ ತುಂಬಿ ಹರಿಯಿರಿ
ಎಲ್ಲ ಬಂಧಗಳೇ ದೂರ ಸರಿಯಿರಿ
ನೀವೀಗ ಮ್ಯೂಜಿಯಮ್ಮಿನ ಮೂಕ ಗೊಂಬಿ.
ಓಡುತ್ತಲಿದೆ ಕುದುರೆ ಮುಂದೆ ಮುಂದೆ
ಓಡಿದ್ದೇ ದಿಕ್ಕು ಹಾರಿದ್ದೇ ದಾರಿ
ಸುತ್ತಲೂ ಬಾಯ್ತೆರೆದು ನಿಂತ ಕಮರಿ.

■ ಜಗದೀಶ ಮಂಗಳೂರಮಠ : ೧೧೩, ಮಮತಾ, ಮಾನಸಗಿರಿ, ಗೋಕುಲ ರಸ್ತೆ, ಹುಬ್ಬಳ್ಳಿ-೩೦ ■

ನಾಲ್ಕು ಕಿರುಗವಿತೆ — ಬಸವರಾಜ ಪಿ. ಡೋಣೂರ

೧. ಕನಸು ನನಸು

ಕನಸಿನಲಿ ಕಂಡು / ನನ್ನ ಸಕ್ಕರೆ ನಿದ್ದೆ / ಕೆಡಿಸಿದಾಕೆ
ನನಸಾಗಿ ಬಂದು / ಸಂಸಾರ ಕೆಡಿಸಬೇಡ.

೨. ಆಗ ಈಗ

ಮಾತಾಡು ಮಾತಾಡು / ಅಂತ ಗಂಟು ಬಿದ್ದರ / ಬರಿ ಹಾಡು ಹಾಡ್ತಿದ್ದಿ ಆಗ!
ಹಾಡು ಹೇಳು ಹಾಡು / ಅಂತ ದುಂಬಾಲು ಬಿದ್ದರ / ಬರಿ ಮಾತಾಡ್ತಿ ಈಗ!

೩. ಅವಳು ಕೇಳಿದ್ದು + ನಾನು ಹೇಳಿದ್ದು

ಕೇಳಿದಳು ಕಣ್ಣು ಮಿಟುಕಿಸುತ್ತ / ನಿಜವೆ, ನಿಮಗೆ ಪ್ರೇಯಸಿಯರುಂಟೆ / ಎಲ್ಲೆಲ್ಲೂ.
ಕತ್ತು ಹೊರಳಿಸಿದೆ / ಪ್ರೀತಿ ನುಡಿದೆ, ಹೌದು ಪ್ರಿಯೆ, / ಎಲ್ಲರಲ್ಲೂ ನೀನೆ
ಕಾಣುವೆ ನಿನ್ನನೇ ಎಲ್ಲರಲ್ಲೂ.

೪. ಹೇಗೆ ಕೇಳಲಿ?

ಹಸಿದ ಹೊಟ್ಟೆಗೆ ಹಿಟ್ಟು ಹಾಕಿದವರ / ಜಾತಿ ಹೇಗೆ ಕೇಳಲಿ?
ಸೋತ ಜೀವಕೆ ಪ್ರೀತಿ ಧಾರೆ ಎರೆದವರ / ಧರ್ಮ ಹೇಗೆ ಕೇಳಲಿ?
ಒಂಟಿ ಜೀವಕೆ ಸ್ನೇಹ ಹಸ್ತ ಚಾಚಿದವರ / ಅಂತಸ್ತು ಹೇಗೆ ಕೇಳಲಿ?

■ ಡಾ. ಬಸವರಾಜ ಪಿ. ಡೋಣೂರ : ಎಫ್೩೦, ಕವಿವಿ ಕ್ವಾರ್ಟರ್ಸ್, ಪಾವಟೆನಗರ, ಧಾರವಾಡ-೩ ■

ಪುಸ್ತಕ ಪರಿಶೀಲನೆ

೧. *ಒರೆಗಲ್ಲು : ಡಾ. ಬೆಸಗರಹಳ್ಳಿ ರಾಮಣ್ಣ,* ಸಿ.ವಿ.ಜಿ. ಪ್ರಕಾಶನ, ೭೦, ೨ ನೇ ಮೇನ್, ಜಬ್ಬಾರ್ ಬ್ಲಾಕ್, ಬೆಂಗಳೂರು-೩, ಪ್ರಮು. ೨೦೦೫, ಪು. ೨೦೮, ರೂ. ೧೫೦/-

ಮಂಡ್ಯ ಕರ್ನಾಟಕದ ಲೇಖಕ ಡಾ. ಬೆಸಗರಹಳ್ಳಿ ರಾಮಣ್ಣ (೧೯೩೬-೧೯೯೮), ಗ್ರಾಮೀಣ ಜೀವನದ ನಡುವೆ ಬದುಕಿ, ಸಣ್ಣಕತೆಗಳನ್ನೂ ಬರೆದವರು. ಕತೆಗಾರಿಕೆಯಲ್ಲಿ ಮುನ್‌ಶಿ ಪ್ರೇಮ್‌ಚಂದರನ್ನು ಸಾಕಷ್ಟು ಹೋಲುವ ರಾಮಣ್ಣ ಬಡ ಹಳ್ಳಿಗರ ಸಂವೇದನೆಯನ್ನು ಯಥಾರ್ಥವಾಗಿ ಪಡಿಮೂಡಿಸಿದ್ದಾರೆ. ಸ್ವಾತಂತ್ರ್ಯದ ಮೌಲ್ಯಕ್ಕೆ ೫೦ ವರ್ಷಗಳಲ್ಲಿ ಉಂಟಾದ ಧಕ್ಕೆಯನ್ನು ವಿವಿಧ ಸಂಗತಿ, ಸನ್ನಿವೇಶಗಳ ಚಿತ್ರಣದಿಂದ ಹೃದಯಸ್ಪರ್ಶಿಯಾಗಿ ಓದುಗರಿಗೆ ತಲುಪಿಸಿದವರು ರಾಮಣ್ಣ. ಸರಕಾರೀ ವೈದ್ಯಕೀಯ ವೃತ್ತಿಯನ್ನವರು ಹಳ್ಳಿಗಳಲ್ಲೇ ನಿರ್ವಹಿಸಿ ಬದುಕು ಬರಹದ ನಡುವಿನ ಪ್ರವೃತ್ತಿಗೆ ಪ್ರಾಮಾಣಿಕತೆ ತಂದವರು. ಜತೆಗೆ, ತನ್ನ ಜಿಲ್ಲೆಯ ಪರಿಸರದಲ್ಲಿ ಸಾಹಿತ್ಯಕ-ಸಾಂಸ್ಕೃತಿಕ ವಾತಾವರಣವನ್ನು ಹರಡಿದವರು. ರಾಮಣ್ಣನವರ ಈ ಪ್ರವೃತ್ತಿಯ ಪರಿಣಾಮ : 'ಒರೆಗಲ್ಲು' ಗ್ರಂಥ. ಅವರ ಮರಣೋತ್ತರದಲ್ಲಿ ಪ್ರಕಟವಾದ ಈ ಗ್ರಂಥದಲ್ಲಿ ಐವತ್ತಾರು ಅಂಕಣ ಬರಹಗಳಿದ್ದು, ಇವೆಲ್ಲ ೧೯೯೫-೯೭ ರ ಅವಧಿಯಲ್ಲಿ ಮಂಡ್ಯದ 'ಕನ್ನಂಬಾಡಿ' ಪತ್ರಿಕೆಯಲ್ಲಿ ಪ್ರಕಟವಾಗಿದ್ದವು.

೪ ಭಾಗಗಳಲ್ಲಿ ಲೇಖನಗಳನ್ನು ಬಿ. ಆರ್. ರವಿಕಾಂತೇಗೌಡ ಮತ್ತು ಎನ್. ಆರ್.ವಿಶುಕುಮಾರ್ ವಿಂಗಡಿಸಿ ಪ್ರಕಟಿಸಿದ್ದು, ಮೊದಲ ಭಾಗ 'ಸಾಹಿತ್ಯ ಸನ್ನಿಧಿ'ಯಲ್ಲಿ ರಾಮಣ್ಣನವರ ಸಾಹಿತ್ಯಾಧ್ಯಯನದ ಪ್ರತಿಫಲಿತ ಲೇಖನಗಳಿವೆ. ಕುವೆಂಪು, ಬೇಂದ್ರೆ, ಚದುರಂಗ, ಪ್ರೇಮಚಂದ್, ಕುಮಾರವ್ಯಾಸ, ಧರ್ಮವೀರ ಭಾರತೀ, ಕಟ್ಟೀಮನಿ, ದೇವನೂರು, ಸಂಸ, ನರಸಿಂಹಸ್ವಾಮಿಯವರಂತಹ ಬಹು ತೂಕದ ಕವಿ, ಕತೆಗಾರ, ನಾಟಕಕಾರರ ಒಂದೊಂದು ಕೃತಿಗಳ ಕುರಿತ ಟಿಪ್ಪಣಿಗಳಿವೆ. ಪ್ರತಿಯೊಬ್ಬ ಕರ್ತೃ ಮತ್ತು ಪ್ರತಿಯೊಂದು ಕೃತಿಯ ಓದಿನಿಂದ ತಮಗುಂಟಾದ ಸಾಹಿತ್ಯಕ ಸಂತೃಪ್ತಿಯನ್ನು ರಾಮಣ್ಣ ಪಾರಿಭಾಷಿಕ ಪದಕ್ಕೆ ಹೊರತಾದ, ರಸವಿಮರ್ಶೆಯ ನುಡಿಗಟ್ಟಿನಲ್ಲಿ ವ್ಯಕ್ತಪಡಿಸುತ್ತಾರೆ. ಲೇಖಕರ 'ಶಕ್ತಿ'ಯನ್ನು ಗುರುತಿಸುತ್ತಾರೆ. ಬಂಡಾಯ ಸಾಹಿತ್ಯ ಸಮ್ಮೇಳನ (೧೯೯೦) ಚಿತ್ರದುರ್ಗದಲ್ಲಿ ನಡೆದ ಸಂದರ್ಭವನ್ನು ನೋಡಿ ವರದಿ ಮಾಡುತ್ತ ರಾಮಣ್ಣ ಬರೆದ ಟಿಪ್ಪಣಿ, ಅವರ ಬರಹದ ಧೋರಣೆಯ ಪ್ರತಿಪಾದನೆಯಂತಿದೆ.

ಎರಡನೆಯ ಭಾಗ 'ನೆಲದೊಡಲು', ಏಳು ಅಂಕಣ ಲೇಖನಗಳ ಭಾಗವಾಗಿದ್ದು, ಕನ್ನಡ ನುಡಿಯ ವಿವೇಚನೆ, ನಾಡಿನ ಕಾಳಜಿ ಪ್ರಕಟಗೊಳಿಸಿದೆ. 'ಎದೆಯ ಬೇಗುದಿ'ಯ ೨೧ ಬರಹಗಳು ರಾಮಣ್ಣನವರ ಸಾಮಾಜಿಕ-ಸಾರ್ವಜನಿಕ-ಪರಿಸರಪ್ರಜ್ಞೆಯ ಪ್ರತಿಕ್ರಿಯೆಗಳಾಗಿವೆ. ವೈದ್ಯರಾದ ಈ ಕತೆಗಾರ, ಜನಸಾಮಾನ್ಯರಿಗೆ ಆರೋಗ್ಯದ ಪ್ರಜ್ಞೆ ಏಕಿರಬೇಕೆಂಬ ಬಗ್ಗೆ ವಿವರಿಸುವ ಅಂಶಗಳು ಮನೋಜ್ಞವಾಗಿವೆ.

೪ ನೆಯ ಭಾಗ 'ಮರೆಯಲಾರದವರು' ಹತ್ತು ಜನ ವ್ಯಕ್ತಿಗಳ ಚಿತ್ರಣವಾಗಿದೆ. ಕೆ. ವಿ. ಶಂಕರಗೌಡ, ಚಂಪಾ, ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ ಮುಂತಾದ ಲೇಖಕರ ಬಗ್ಗೆ, ಹತ್ತಿರದಿಂದ ಕಂಡು ಮೆಚ್ಚಿದ ಗುಣಗಳ ಉಲ್ಲೇಖವಿದೆ. ರಾಮಣ್ಣನವರ ಗಮನ, ಶ್ರೀಸಾಮಾನ್ಯರಲ್ಲಿಯೂ ಅಪರೂಪ ವ್ಯಕ್ತಿತ್ವಗಳಿರುವುದರ ಕಡೆಗೆ ಹರಿಗಿತ್ತೆಂಬುದಕ್ಕೆ 'ಜೆ. ಎಲ್. ಜವರೇಗೌಡ : ಓರ್ವ ನಿಷ್ಕಳಂಕ ಅಧಿಕಾರಿಯ ನಿರ್ಗಮನ' ಮತ್ತು 'ನಮ್ಮೂರಿನ ಕಿರೀಟ : ಮಂಡ್ಯ ನೆಲದ ಓರ್ವ ಪ್ರಾಮಾಣಿಕ ಮನುಷ್ಯ' ಲೇಖನಗಳು ಓದುವಂತಿವೆ. 'ಒರೆಗಲ್ಲು' ಅಂಕಣ ಬರಹಗಳ ಮೂಲಕ, ಬೆಸಗರಹಳ್ಳಿ ರಾಮಣ್ಣನವರು, ಪತ್ರಿಕಾ ಓದುಗರಿಗೆ, ಸಾಹಿತ್ಯ-ಸಂಸ್ಕೃತಿಯ ಆಪ್ತ ಪರಿಚಯ ಮಾಡಿಕೊಟ್ಟಿದ್ದಾರೆ. ಅವರ 'ಕಥಾ ಸಾಹಿತ್ಯ'ದ ಓದುವಿಕೆ ಎಷ್ಟು ಪರಿಣಾಮಕಾರಿಯೋ ಅಷ್ಟೇ ಆಪ್ಯಾಯಮಾನವಾದ ಅನುಭವ ಈ ಅಂಕಣ ಬರಹದ ಓದಿನಿಂದ ನಮಗಾಗುತ್ತದೆ.

೨. ಧರೆ ಮೇಲೆ ಉರಿಪಾದ : ಕೃಷ್ಣಮೂರ್ತಿ ಬಿಳಿಗೆರೆ (ಗುಬ್ಬಿ)

ನಮ್ಮ ಪ್ರಕಾಶನ, ಬಿಳಿಗೆರೆ, ತಾ. ತಿಪಟೂರು. ಪ್ರಮು. ೨೦೦೫, ಪು. ೧೦೭, ರೂ. ೪೦/-

ನಮ್ಮೆಲ್ಲರ ಓದು-ಬರಹಗಳ ಹಂಗಿಲ್ಲದೆ ಇಂದು ಸಂಭವಿಸುತ್ತಿರುವ ಬದಲಾವಣೆಗಳು ಮನುಷ್ಯನ ಮನಸ್ಸು-ಸಂವೇದನೆಗೂ ಪ್ರಕೃತಿಪ್ರಧಾನವಾದ ಈ ಸುಂದರ ಧರೆಗೂ ಇರುವ ಸಂಬಂಧ-ಅನುಬಂಧಗಳನ್ನು ನಿಷ್ಕರುಣೆಯಿಂದ ಸಡಿಲುಗೊಳಿಸುತ್ತಿವೆ; ಸಂಬಂಧಗಳು ಹಾಳಾಗಿ ಹೋಗುವಷ್ಟು ರಭಸದ ಉರಿಗಾಳಿ ಬೀಸುತ್ತಿದೆ. ಪ್ರಕೃತಿಯ ಶಕ್ತಿಯನ್ನೂ, ಸಂಪನ್ಮೂಲವನ್ನೂ ಆದಷ್ಟು ತೀವ್ರವಾಗಿ ಶೋಧಿಸಿ-ಸೋಸಿ ಹೊರತೆಗೆದು, ಕೃತಕ ತಂತ್ರಜ್ಞಾನದ ಬಲದಿಂದ ಶಕ್ತಿಮೂಲಗಳನ್ನು ಹುಟ್ಟುಹಾಕಿ, ನೆಲ, ಆಕಾಶ, ಪರಿಸರ-ಪರಿಸ್ಥಿತಿಗಳನ್ನು ಅಯೋಮಯಗೊಳಿಸುವ `ಟೆಕ್ನಾಲಜಿ', 'ಮಾರುಕಟ್ಟೆ', 'ಹಣ' ಪ್ರಧಾನ ರಾಜಕೀಯ ಅಬ್ಬರದಲ್ಲಿ ಜೀವಧ್ವನಿಗೆಲ್ಲಿದೆ ಕಿವಿ, ಕರುಳು? ಕೃಷ್ಣಮೂರ್ತಿ ಬಿಳಿಗೆರೆ ತಮ್ಮ ಈ ನಾಲ್ಕನೆಯ ಕವನ ಸಂಕಲನದ ಐವತ್ತೇಳೂ ಪದ್ಯಗಳಿಗೆ ವಸ್ತು ಮಾಡಿಕೊಂಡಿದ್ದು, ಹತಾಶೆಯ ಈ ಪ್ರಶ್ನೆಯನ್ನೇ. ಆದರೆ ಹತಾಶೆಗೊಳಪಟ್ಟು ಕೃಷ್ಣಮೂರ್ತಿಯ ಚೇತನ ಅಸಹಾಯಕವಾಗಿ ನಿಲ್ಲುವುದಿಲ್ಲ; ಆಂದೋಲನಕ್ಕೆ ಕರೆ ಕೊಡುತ್ತವೆ ಮತ್ತು ಪ್ರಕೃತಿಯನ್ನು ಉಳಿಸಲು ಹೊರಟ ಮಾನವೀಯ ಶಕ್ತಿ, ಯುಕ್ತಿಗಳ ಹೋರಾಟದ ಜತೆ ಕೈಗೂಡಿಸುತ್ತದೆ. `ಭೂಮಿಯೊಂದು ಮಹಾಬೀಜ'ವೆನ್ನುವ ಕವಿ, ಬಯೋಟೆಕ್ನಾಲಜಿ ಪ್ರೇರಿತ 'ನಿರ್‌ಬೀಜೀಕರಣ'ದ ವಿರುದ್ಧ ದನಿ ಎತ್ತುತ್ತಾರೆ. ರೈತರನ್ನು ಎಚ್ಚರಗೊಳಿಸುತ್ತಾರೆ. ಈ ದನಿ ಅಬ್ಬರದ್ದಲ್ಲ, ಆವೇಶದ ಹುಚ್ಚು ಹೊಳೆಯೂ ಅಲ್ಲ; ಇದು ನೆಲತಾಯಿಯ ಅಂತಃಕರಣವಾದ ಆಳದಿಂದ ಸ್ಫುರಿಸಿದ್ದು. ಕ್ರಿಯಾಶೀಲ ಚಳವಳಿಯ ಘೋಷಣೆ ಕಾವ್ಯಾತ್ಮಕ ರೂಪ ಪಡೆದದ್ದು 'ಧರೆಯ ಮೇಲೆ ಉರಿಪಾದ'ದ ಯಶಸ್ಸಿನ ನೆಲೆ.

ಮಣ್ಣು, ನೀರು, ಮೋಡ, ಬೀಜ, ಬೇರು ಸಸಿ, ಕಾಂಡ, ಎಲೆ, ಹೂವು ಕಾಯಿ, ಹಣ್ಣು, ಹಕ್ಕಿ– ಜೀವಜಗತ್ತಿನ ಈ ವಸ್ತು ಪ್ರತಿರೂಪಗಳು ಬಿಳಿಗೆರೆಯವರ ಕಾವ್ಯಜಗತ್ತಿನ ಚೇತನಗಳಾಗಿವೆ. ನೆಲ, ಇಲ್ಲಿ ತಾಯಿ, ಮಗಳು ಪಾತ್ರ ಆಡುತ್ತಾಳೆ. ನೆಲದ ಮೇಲೆ ಬಿದ್ದ ಮಳೆ ನೀರನ್ನು ಕೊಯ್ಲು ಮಾಡಿ ಉಳಿಸುವ ಉಪಾಯದ ಬಗ್ಗೆ ಕವಿಗಿರುವ ಕಾಳಜಿ; ಬೀಜಗಳ ಸ್ವಾಭಾವಿಕತೆಯನ್ನು ಕಾಯುವ ಕಾತರ, ಹಲವು ಕವಿತೆಗಳಿಗೆ ಹೊಸ ಜೀವ ಕೊಟ್ಟಿದೆ, ಮಣ್ಣಿನ ಮಕ್ಕಳ ಅಂತರಂಗದ ಹಾಡು-ಪಾಡು 'ಧರೆ ಮೇಲೆ ಉರಿಪಾದ'ವನ್ನು ತಣ್ಣಗೆ ಮೆಟ್ಟಿ ನಿಲ್ಲುವಂತಿದೆ. ದೇಸೀ ಪ್ರಜ್ಞೆ, ದೇಸೀ ಅಭಿವ್ಯಕ್ತಿಯನ್ನು ಸಾಧಿಸಿದ ಬಗೆ ಸಂಕಲನವನ್ನು ನವನವೀನಗೊಳಿಸಿದೆ.

– ಡಾ. ಶ್ಯಾಮಸುಂದರ ಬಿದರಕುಂದಿ, ೧೫೧, ೫ನೇ ಮುಖ್ಯರಸ್ತೆ, ಸವನಗರ, ಹುಬ್ಬಳ್ಳಿ-೫೮೦ ೦೨೫

೩. ಒಂಟಿ ಸಲಗ : ಡಾ. ಮ. ಸು. ಕೃಷ್ಣಮೂರ್ತಿ

ಮಂಜುಶ್ರೀ ಪ್ರಕಾಶನ, ೧೬ ನೇ ಮೇನ್, ಕುವೆಂಪು ಹೈಸ್ಕೂಲು ಹಿಂಭಾಗ, ಸರಸ್ವತಿಪುರಂ, ಮೈಸೂರು-೯, ಪ್ರಮು. ೨೦೦೩, ಪು. ೧೧೨, ರೂ. ೪೦/-

ಭರತಖಂಡದ ಅನೇಕ ಸಂತರುಗಳಲ್ಲಿ, ಅಗ್ರಪಂಕ್ತಿಯಲ್ಲಿ ನಿಲ್ಲುವ ಹೆಸರು, ಕಬೀರ. 'ಬದುಕಿನುದ್ದಕ್ಕೂ ಪವಾಡಗಳ ವಿರುದ್ಧ ಹೋರಾಡಿದ ಆತನ ಬದುಕೇ ಒಂದು ಪವಾಡ, ರಸಕವಿತೆ'. ಇಂಥ ಸಂತನ ಬಗ್ಗೆ, ತಮ್ಮದೇ ಆದ ರೀತಿಯಲ್ಲಿ ಅರಿಯುವ ಮತ್ತು ಅಭಿವ್ಯಕ್ತಿಸುವ ಪ್ರಯತ್ನಗಳು, ಕರ್ನಾಟಕದಲ್ಲೂ ಸಾಕಷ್ಟು ಕಾಲ ಹಿಂದಿನಿಂದಲೇ ನಡೆದುಬಂದಿವೆ. '...ಪಂಡಿತ ತಾರಾನಾಥರು ೧೯೨೬ ರಲ್ಲೇ 'ದೀನಬಂಧು ಕಬೀರ' ಎಂಬ ನಾಟಕವನ್ನು ಹಿಂದಿಯಲ್ಲಿ ಬರೆದರು... ಅದಾದ ತರುವಾಯ 'ದೀನಬಂಧು ಕಬೀರ' ಎಂಬ ಪುಸ್ತಕವನ್ನು ಕನ್ನಡದಲ್ಲಿ ಅನಕೃ ಬರೆದರು. ...ಅನಂತರ ಕಬೀರನ ಬಗ್ಗೆ ನಾಟಕ ಬಂತು, ಚಲನಚಿತ್ರ ಬಂತು. ಕಬೀರನನ್ನು ಕುರಿತ ಕಾದಂಬರಿ, ನಾಟಕಗಳ ಕನ್ನಡ ಅನುವಾದಗಳೂ ಬಂದಿವೆ.

ಕಬೀರನ ಬದುಕನ್ನು ಕುರಿತಾದ ಈ ಎಲ್ಲ ಪ್ರಯತ್ನಗಳ ಹಿನ್ನೆಲೆಗಳಲ್ಲಿ ಈಗ ಬಂದಿದೆ, ಕಬೀರನ ಬದುಕನ್ನು ಆಧರಿಸಿದ ಒಂದು ಕಾದಂಬರಿ, ಡಾ. ಮ. ಸು. ಕೃಷ್ಣಮೂರ್ತಿ ಅವರ 'ಒಂಟಿ ಸಲಗ'. ಡಾ. ಕೃಷ್ಣಮೂರ್ತಿ ಅವರೇ 'ನಿವೇದಿಸಿದ' (ಮೇಲಿನ ಪ್ಯಾರಾದ) ಈ ಹಿಂದಿನ ಅನೇಕರ ಬರಹಗಳ ಹಿನ್ನೆಲೆಯಲ್ಲಿ, ಈ ಕಾದಂಬರಿ, ಹಿಂದಿನ ಎಲ್ಲ ಪ್ರಯತ್ನಗಳಲ್ಲಿಯ ದೋಷಾದಿಗಳನ್ನು ನಿವಾರಿಸಿಕೊಂಡ ಮತ್ತು ಇನ್ನಷ್ಟು ಗುಣಗಳನ್ನು ಮೈಗೂಡಿಸಿಕೊಂಡ ಒಂದು ಅತ್ಯುತ್ತಮ ಬರಹವೇ ಆಗಿ ಮೂಡಿ ಬರಬೇಕಾಗಿತ್ತು.

ಹಾಗೆ ನೋಡಿದರೆ; ಕಬೀರನ ಬದುಕನ್ನು ಕುರಿತಾಗಿ ಬಹಳಷ್ಟು ವಿವರ ಇಲ್ಲಿವೆ. ಆತನ ಅನಾಥ ಹುಟ್ಟು-ಬೆಳವಣಿಗೆ, ಆಕಸ್ಮಿಕವಾಗಿ ಆರಂಭಗೊಂಡ ರಾಮಾನಂದರೊಂದಿಗಿನ ಆತನ ಸಾಹಚರ್ಯ, ನಾಥಪಂಥ ಜೋಗಿಗಳೊಡನೆಯ ಆತನ ಪರ್ಯಟನ ಮತ್ತು ನಂತರದ ಮುಖಾಮುಖಿ, ಬಾದಶಹನೆದುರಿಗಾದ ಬೇಗುದಿ ಬೆಳಕುಗಳು, ತಂದೆ-ತಾಯಿ, ಹೆಂಡತಿ-ಮಕ್ಕಳು, ಅವರೊಂದಿಗಿನ ನಿರ್ವ್ಯಾಜ ಸಂಬಂಧ, ಸಹವರ್ತಿಗಳು, ಸಮಾಲೋಚಕರು, ಸಂತರು, ಶಿಷ್ಯರು, ಶರಣರು, ಹೀಗೇ, ನೂರೆಂಟು ಸಂಬಂಧಗಳು, ನೂರೆಂಟು ಅನುಬಂಧಗಳು.

ಅಷ್ಟೇ ಅಲ್ಲ; ಹೀಗೆ ಆತನ ಭೌತಿಕ ಬದುಕು ಕುರಿತಂತಹ ವಿವರಗಳು ಮಾತ್ರವಲ್ಲದೆ; ಕಬೀರನ ಮಾನವೀಯತೆ, ಗುರುಭಕ್ತಿ, ನಿಷ್ಠೆ ಕುರಿತ ಆದರ ಇತ್ಯಾದಿ ಬಗ್ಗೆ, ಲೇಖಕರು ಸಾಕಷ್ಟು ಅಧ್ಯಯನ ಗೈದಿರಬಹುದಾದ ಸಾಕಷ್ಟು ಸೂಚನೆ ಈ ಕೃತಿಯಲ್ಲಿವೆ.

ಆದರೆ, ಮುಖ್ಯ ಊನವೆಂದರೆ, ಈ ಎಲ್ಲ ಮಾಹಿತಿಗಳ ಸಂಗ್ರಹ ಮತ್ತು ಅಧ್ಯಯನಗಳಲ್ಲಿ ಒಟ್ಟುಗೂಡಿಸಿಕೊಳ್ಳಲಾದ ಸಾಮಗ್ರಿ ಒಂದು ಉತ್ತಮ ಕಾದಂಬರಿಯಾಗಿ ಅರಳದೇ ಹೋಗಿರುವದು; ಇಲ್ಲಿಯ ಎಲ್ಲ ಮಾಹಿತಿಗಳು ಮತ್ತು ವಿವೇಚನೆಗಳು, ಒಂದು ಏಕತ್ರ ಶಿಲ್ಪವಾಗಿ ಕಟ್ಟಿಕೊಳ್ಳದೆ ಬಿಡಿಬಿಡಿಯಾಗಿಯೇ ನಿಂತುಬಿಡುವದು. ಹೀಗಾಗಿ ತಲುಪಬೇಕಾದಷ್ಟು ಮಟ್ಟಿಗೆ ಮತ್ತು ತಲುಪಬೇಕಾದ ರೀತಿಯಲ್ಲಿ, ಕಬೀರ, ಓದುಗನನ್ನು ಮುಟ್ಟುವದಿಲ್ಲ.

ಕೊನೆಯಲ್ಲಿ ಒಂದು ಮಾತು : ಕಾದಂಬರಿಯುದ್ದಕ್ಕೂ, ಕಬೀರನ ಪ್ರಗತಿಪರ ವಿಚಾರಗಳನ್ನು ಕುರಿತು ಅಷ್ಟೆಲ್ಲ ದೀರ್ಘವಾಗಿ (ಮತ್ತು ಪ್ರಶಂಸಾಪೂರ್ವಕವಾಗಿ) ಬರೆದ ಕಾದಂಬರಿಕಾರರು, ಕಥಾನಕದ ಅಂತ್ಯದಲ್ಲಿ ಬರೆಯುತ್ತಾರೆ : "ಒಳಗೆ ಹೋದಾಗ ಕಂಡದ್ದೇನು?" ಆವರೆಗೂ, ಒಳಗಡೆ ಹೆಣವಾಗಿ ಮಲಗಿದ್ದ "ಕಬೀರ ಹೂವಾಗಿದ್ದ. ಇಡೀ ಮನೆ ಅದರ ಪರಿಮಳದಿಂದ ಮಗಮಗಿಸುತ್ತಿತ್ತು" ಬದುಕಿನುದ್ದಕ್ಕೂ, ಪವಾಡಗಳ ವಿರುದ್ಧ ಪವಾಡ ಕಥಾನಕಗಳ ವಿರುದ್ಧ ಹೋರಾಟಗೈದ ಕಬೀರನ ಕೊನೆಯನ್ನು ಒಂದು ಪವಾಡವಾಗಿಯೇ ಚಿತ್ರಿಸಿದ್ದು, ಕಬೀರನಿಗೊಂದು ಚೋದ್ಯದ ಕಿರೀಟ.

– ದೇಶಪಾಂಡೆ ಸುಬ್ಬರಾಯ, 'ನೆಲೆ', # ೧೩, ಕುಸುಮನಗರ, ಶ್ರೀರಂಗಮಾರ್ಗ, ಧಾರವಾಡ-೮

೪. ಗದಗ ತೋಂಟದಾರ್ಯಮಠದ ಹಸ್ತಪ್ರತಿ ಸೂಚಿ : ಸಂ. ಪಿ. ಕೆ. ರಾಠೋಡ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು-೧, ಪ್ರಮು. ೨೦೦೪. ಪು.೪೨೨,ರೂ. ೨೦೦/-

ಗದಗಿನ ತೋಂಟದಾರ್ಯ ಮಠಕ್ಕೆ ಜ್ಞಾನಪ್ರಸಾರ ಕ್ಷೇತ್ರದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಸುಮಾರು ನಾಲ್ಕುನೂರು ವಿವಿಧ ವಿಷಯದ ಶೀರ್ಷಿಕೆಗಳನ್ನು ಮಠವು ಪ್ರಕಟಿಸಿದೆ. ಗತಕಾಲದ ಹಸ್ತಪ್ರತಿಗಳನ್ನು ಸಂಗ್ರಹಿಸುವಲ್ಲಿ ಸದರಿ ಮಠವು ತೋರಿದ ಆಸಕ್ತಿಯಿಂದಾಗಿ ಐತಿಹಾಸಿಕ ಹಸ್ತಪ್ರತಿ ಹಾಗೂ ಕಾಗದಪ್ರತಿ ದಾಖಲೆಗಳ ಅಮೂಲ್ಯ ಸಂಗ್ರಹ ಅಲ್ಲಿದೆ. ಕೆಳದಿ ಅರಸರು, ಇತರ ಸಣ್ಣ ಸಂಸ್ಥಾನಗಳಿಗೆ ಸಂಬಂಧಿಸಿದ ಕಾಗದಪತ್ರಗಳು, ಕವಿಕಾವ್ಯ ಹಸ್ತಪ್ರತಿಗಳು, ವಚನ, ರಗಳೆ, ಷಟ್ಪದಿ, ಸ್ವರವಚನಗಳು, ಧಾರ್ಮಿಕ-ಲೌಕಿಕ ಶಾಸ್ತ್ರಕೃತಿಗಳೇ ಮೊದಲಾದವುಗಳನ್ನು ಈ ಸಂಗ್ರಹ ಹೊಂದಿದ್ದು ಆಯಾ ಕಾಲಘಟ್ಟಗಳ ಚರಿತ್ರೆಯ ಸಂದರ್ಭದಲ್ಲಿಟ್ಟು, ಅಭ್ಯಸಿಸುವವರಿಗೆ ನಾಡಿನ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಧಾರ್ಮಿಕ ಇತಿಹಾಸದ ಪುನರ್ರಚನೆಗೆ ಮೂಲ ಸಾಮಗ್ರಿಯಾಗಬಹುದಾದ ಮಹತ್ವ ಅವುಗಳಿಗಿವೆ.

ಮಠದ ಸಂಗ್ರಹದಲ್ಲಿರುವ ತಾಳೆಪ್ರತಿ, ಕಾಗದಪ್ರತಿಗಳ ಯಾದಿರೂಪದ ಸೂಚಿ ಈ ಮೊದಲು ಮಠದಿಂದಲೇ ಪ್ರಕಾಶಿತವಾಗಿದ್ದು ಪ್ರಸ್ತುತ ಕರ್ನಾಟಕ ಸರಕಾರ ಪತ್ರಾಗಾರ ಇಲಾಖೆಯು ಪ್ರಕಟಿಸಿದ ಈ ಕೃತಿಯು ಮಠದ ಸಂಗ್ರಹದಲ್ಲಿರುವ ಕಾಗದ ಪ್ರತಿಗಳ ವಿವರಣಾತ್ಮಕ ಸೂಚಿಯಾಗಿದೆ (descriptive catalogue). ಹಸ್ತಪ್ರತಿಗಳ ಸ್ಥೂಲ ಮಾಹಿತಿ ಒದಗಿಸುವ ಹಸ್ತಪ್ರತಿ ಸೂಚಿಯಲ್ಲಿ ವರ್ಣನಾತ್ಮಕ ಎಂಬುದೊಂದು ಉಪಯುಕ್ತ ವಿಧಾನ. ಇಂಥ ಸೂಚಿಗಳ ಕುರಿತು ಡಾ. ಎಂ. ಎಂ. ಕಲಬುರ್ಗಿಯವರು ಸಿದ್ಧಪಡಿಸಿದ ಮಾದರಿಯೊಂದನ್ನು ಅನುಸರಿಸಿ ಈ ಸೂಚಿಯನ್ನು ಸಂಪಾದಕ ಪಿ. ಕೆ. ರಾಠೋಡರು ಸಿದ್ಧಗೊಳಿಸಿದ್ದಾರೆ.

ಇಲ್ಲಿ ಮುಖ್ಯವಾಗಿ ಕೃತಿ ಮತ್ತು ಅದರ ಪ್ರತಿ ಇವೆರಡರ ಸಂಕ್ಷಿಪ್ತ ಪರಿಚಯವೂ ಇದೆ. ಕೃತಿ ಪರಿಚಯದಲ್ಲಿ ಪುಟದ ಮಧ್ಯಭಾಗದಲ್ಲಿ ಕೃತಿಯ ಕ್ರಮಾಂಕ, ಅದರ ಕೆಳಗೆ ಕೃತಿಯ ಹೆಸರು, ಒಂದು ಪಾರ್ಶ್ವದಲ್ಲಿ ಕವಿಯ ಹೆಸರು, (ತಿಳಿದಿದ್ದರೆ) ಕೃತಿಯ ಕಾಲ, ಹಾಗೂ ಇನ್ನೊಂದು ಪಾರ್ಶ್ವದಲ್ಲಿ ಆ ಕೃತಿಯ ಪ್ರಕಾರ (ಗದ್ಯ, ವಚನ, ಷಟ್ಪದಿ, ಇತ್ಯಾದಿ) ಇವುಗಳನ್ನು ನಮೂದಿಸಲಾಗಿದೆ. ಇದರ ಕೆಳಗಿರುವ ಎರಡು ಸಾಲುಗಳು ಪ್ರತಿಯನ್ನು ಪರಿಚಯಿಸುತ್ತವೆ. ಒಂದು ಸಾಲಿನಲ್ಲಿ ನಿಶ್ಚಿತ ಕ್ರಮವೊಂದರಲ್ಲಿ ಹಸ್ತಪ್ರತಿಗಳಿಗೆ ಬಳಸಿರುವ ವಸ್ತು, ಕಟ್ಟಿನ ಕ್ರಮಸಂಖ್ಯೆ, ಹಸ್ತಪ್ರತಿಯ ಆಕಾರ ಮತ್ತು ಗರಿ/ಪುಟಗಳ ಸಂಖ್ಯೆಗಳ ನಮೂದುಗಳಿದ್ದರೆ ಇನ್ನೊಂದು ಸಾಲಿನಲ್ಲಿ ಹಸ್ತಪ್ರತಿಯ ಸ್ವರೂಪ, ಅದರ ಲಿಪಿ ಹಾಗೂ ಭಾಷೆಗಳ ಸ್ವರೂಪದ ಗುಣಮಟ್ಟವನ್ನು (ಉತ್ತಮ, ಮಧ್ಯಮ ಇಲ್ಲವೆ ಸಾಧಾರಣ ಎಂಬುದಾಗಿ) ನಿರ್ದೇಶಿಸಲಾಗಿದೆ.

ಆದಿ ಮತ್ತು ಅಂತ್ಯ ಎಂಬ ಪಾರ್ಶ್ವ ಶೀರ್ಷಿಕೆಗಳ ಮುಂದೆ ಹಸ್ತಪ್ರತಿಯ ಪ್ರಾರಂಭದ ಮತ್ತು ಅಂತ್ಯದ ಪಾಠವನ್ನು ಮೂರು ಅಥವಾ ನಾಲ್ಕು ಸಾಲುಗಳಷ್ಟು ಸಂಕ್ಷಿಪ್ತವಾಗಿ ನೀಡಲಾಗಿದೆ. ಹಾಗೆಯೇ ವಿಷಯ ಎಂಬಲ್ಲಿ ಹಸ್ತಪ್ರತಿ ಯಾವುದರ ಕುರಿತಾಗಿದೆ ಎಂಬುದನ್ನು ಸಂಗ್ರಹವಾಗಿ ಹೇಳಲಾಗಿದೆ. ವಿಶೇಷ ಎಂಬ ಇನ್ನೊಂದು ನಮೂದಿನಲ್ಲಿ ಹಸ್ತಪ್ರತಿ ಸಮಗ್ರವೋ ಅಸಮಗ್ರವೋ ಎಂಬುದನ್ನು ತಿಳಿಸಿ ಅಕ್ಷರಗಳ ಗುಣಸ್ವರೂಪವನ್ನು ಹೇಳಲಾಗಿದೆ. ಕೊನೆಯದಾಗಿ ಅದೇ ಕಟ್ಟಿನಲ್ಲಿರುವ ಇತರ ಕೃತಿಗಳನ್ನು ಅವುಗಳ ಕ್ರಮಸಂಖ್ಯೆಯೊಂದಿಗೆ ಉಲ್ಲೇಖಿಸಿ ಪ್ರಸ್ತುತ ಸೂಚಿಯಲ್ಲಿ ಅವು ಪ್ರತ್ಯೇಕವಾಗಿ ಪ್ರಕಟವಾಗಿರುವ ಕ್ರಮಸಂಖ್ಯೆಯನ್ನು ಸೂಚಿಸಲಾಗಿದೆ.

ಎರಡನೇ ಶತಮಾನದ ಶಂಕರಾಚಾರ್ಯರ ಅನ್ನಪೂರ್ಣಾಷ್ಟಕದಿಂದ ೧೯೦೦ ರ ಮುಳ್ಳೂರ ರಡ್ಡಿ ವಿರಚಿತ ಹೇಮರಡ್ಡಿ ಮಲ್ಲಮ್ಮನ ಚರಿತ್ರೆಯ ವರೆಗೆ ಹಲವಾರು ಕೃತಿಗಳ, ವಿವಿಧ ಕಾಲಘಟ್ಟಗಳಲ್ಲಿ ಬರೆಯಲ್ಪಟ್ಟ ಈ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯನ್ನು ರಾಠೋಡರು ಶ್ರಮವಹಿಸಿ ಸಿದ್ಧಗೊಳಿಸಿದ್ದಾರೆ.

೫. ಡಾ. ಎಚ್. ಆರ್. ರಘುನಾಥಭಟ್ಟ ಸ್ಮರಣೆ : ಸಂ. ಪ್ರೊ. ಲಕ್ಷ್ಮಣ್ ತೆಲಗಾವಿ

ಚಿತ್ರಕಲ್ಲು ಪ್ರಕಾಶನ, ಚಿತ್ರದುರ್ಗ-೫೭೭ ೫೦೧, ಪ್ರಮು. ೨೦೦೪, ಪು. ೫೬, ರೂ. ೨೦/-

೧೯೪೬ ರಲ್ಲಿ ಶಿವಮೊಗ್ಗದ ಜಿಲ್ಲೆ ಸೊರಬ ತಾಲೂಕಿನ ಹರೀತಿಯಲ್ಲಿ ಜನಿಸಿದ ಡಾ. ಎಚ್. ಆರ್. ರಘುನಾಥ ಭಟ್ಟರು ಕರ್ನಾಟಕ ಇತಿಹಾಸ ಅಧ್ಯಯನ ಕ್ಷೇತ್ರದಲ್ಲಿ ಪರಿಚಿತ ಹೆಸರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಹಾಗೂ ಪಿಹೆಚ್.ಡಿ. ಅಧ್ಯಯನಗೈದುಮೊದಲು ಅದೇ ವಿಶ್ವವಿದ್ಯಾನಿಲಯದಲ್ಲಿ, ನಂತರ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ಹಾಗೂ ಶಾಸನಶಾಸ್ತ್ರ ಮತ್ತು ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದ ಭಟ್ಟರು ಪ್ರಾಚೀನ ಕರ್ನಾಟಕದ ಚರಿತ್ರೆ, ಕಲೆ, ಸಂಸ್ಕೃತಿಯ ಅಧ್ಯಯನಕ್ಕೆ ವಿವಿಧ ಸ್ವರೂಪದ ಕೊಡುಗೆಯನ್ನು ನೀಡಿದವರು. ಯಾವುದೋ ಪ್ರಾಚೀನ ನಾಣ್ಯ, ಶಾಸನ, ಶಿಲ್ಪ ಹೊಸದಾಗಿ ಗಮನಕ್ಕೆ ಬಂದರೆ ಅಥವಾ ಹೊಸ ವಿಚಾರವೊಂದು ಹೊಳೆದರೆ

ಅದನ್ನು ಪೂರ್ಣಪ್ರಮಾಣದ ಅಧ್ಯಯನಕ್ಕೆ ಒಳಪಡಿಸದೆ ಆ ಕ್ಷಣಕ್ಕೆ ತಮಗೆ ತೋಚಿದ ಅಂಶಗಳನ್ನಷ್ಟೇ ಆದರೂ ಟಿಪ್ಪಣಿ ಮಾಡಿಕೊಂಡು ಬಂದು ವಿದ್ವತ್‌ಗೋಷ್ಠಿ, ಸಮ್ಮೇಳನಗಳಲ್ಲಿ ಪ್ರಸ್ತುತಪಡಿಸುವ ವಾಡಿಕೆ ಅವರದಾಗಿತ್ತು. ವಿಚಾರಗೋಷ್ಠಿಗಳಲ್ಲಿ ಮಂಡಿಸಲ್ಪಡುತ್ತಿದ್ದ ಪ್ರಬಂಧಗಳ ಮುಖ್ಯ ಅಂಶಗಳನ್ನೆಲ್ಲ ಬರೆಮಕೊಳ್ಳುತ್ತ ಕುಳಿತಿರುತ್ತಿದ್ದರು ಭಟ್ಟರು. ಕೆಲವು ಉತ್ಖನನ ಕ್ಯಾಂಪುಗಳಲ್ಲಿ, ಸರ್ವೇಕ್ಷಣಗಳಲ್ಲಿ ಪಾಲ್ಗೊಂಡ ಅನುಭವವಿದ್ದ ಅವರು ಸಾಂಪ್ರದಾಯಿಕ ಅರ್ಥದಲ್ಲಿ ಪುರಾತತ್ವವಿದರೂ ಆಗಿದ್ದರು. ಸಭೆ ಸಮ್ಮೇಳನಗಳ ಸಂಘಟನೆ, ವೇದಿಕೆಯ ಅಲಂಕಾರದಲ್ಲಿ ಇನ್ನಿಲ್ಲದ ಉತ್ಸಾಹದಿಂದ ತೊಡಗಿಕೊಳ್ಳುತ್ತಿದ್ದರು.

ಪಾದರಸದಂತೆ ಸದಾ ಓಡಾಡಿಕೊಂಡಿದ್ದ ಇಂಥ ಭಟ್ಟರು ಅಕಾಲಿಕವೆನ್ನಬಹುದಾದ ವಯಸ್ಸಿನಲ್ಲಿ ೨೦೦೪ ರಲ್ಲಿ ಅನಿರೀಕ್ಷಿತವಾಗಿ ನಿಧನರಾದಾಗ ಎಲ್ಲರಿಗೂ ಆಶ್ಚರ್ಯವೂ, ಅವರ ಸ್ನೇಹಿತ, ಸಹೋದ್ಯೋಗಿ, ವಿದ್ಯಾರ್ಥಿ, ಸಂಬಂಧಿಗಳಂಥ ನಿಕಟ ಬಳಗದವರಿಗೆ ಆಘಾತವೂ ಆದದ್ದು ಸಹಜ. ಪ್ರಸ್ತುತ ಕೃತಿ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಅವರೊಂದಿಗಿನ ಸ್ನೇಹ-ಸಂಬಂಧಗಳನ್ನು ನೆನಪಿಸಿಕೊಂಡ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಇತಿಹಾಸ ಮತ್ತು ಪುರಾತತ್ವ ವಿಭಾಗಗಳ ಕೆಲ ಅಧ್ಯಾಪಕರು ಆ ನೆನಪುಗಳನ್ನು ದಾಖಲಿಸಿದ ಬರಹಗಳ ಸಂಗ್ರಹ. ಭಟ್ಟರ ಜೀವನಪ್ರೀತಿ, ಹಿರಿಯರು ಕಿರಿಯರೆನ್ನದೆ ಎಲ್ಲರೊಡನೆ ಆತ್ಮೀಯವಾಗಿ ವ್ಯವಹರಿಸುತ್ತಿದ್ದ ಸ್ನೇಹಶೀಲ ಸ್ವಭಾವ, ಒರೆಕೋರೆಗಳನ್ನು ಅವಗಣಿಸಿ ಒಳ್ಳೆಯದನ್ನು ಗಮನಿಸಿದೆ ಎಗ್ಗು ಸಿಗ್ಗಿಲ್ಲದೆ ಅದರ ಕುರಿತು ಮೆಚ್ಚುಗೆಯ ನಾಲ್ಕು ಮಾತಾಡುತ್ತಿದ್ದ ಅವರ ವೈಶಾಲ್ಯ ಹೀಗೆ ಭಟ್ಟರನ್ನು ಬಲ್ಲ ನಮಗೆ ಸುಪರಿಚಿತವಾಗಿದ್ದ ಅವರ ಗುಣವಿಶೇಷಗಳು ಈ ಸಂಕಲನದ ಬರಹಗಳಲ್ಲಿವೆ.

ಇದರ ಸಂಪಾದಕರು ಪ್ರೊ. ಲಕ್ಷ್ಮಣ್ ತೆಲಗಾವಿಯವರು ವಿದ್ಯಾರ್ಥಿದೆಸೆಯಿಂದಲೇ ಮಾನಸ ಗಂಗೋತ್ರಿಯಲ್ಲಿ ಸಹವಿದ್ಯಾರ್ಥಿಯಾಗಿ ಭಟ್ಟರನ್ನು ಬಲ್ಲವರು. ತಮ್ಮ ಲೇಖನದಲ್ಲಿ ತೆಲಗಾವಿಯವರು ಭಟ್ಟರೊಂದಿಗಿನ ತಮ್ಮ ವೈಯಕ್ತಿಕ ಸ್ನೇಹ, ಒಡನಾಟಗಳನ್ನು, ಅವರ ಗುಣವಿಶೇಷಗಳನ್ನು ಸ್ಮರಿಸಿದ್ದಾರೆ. ಅವರ ಆಸಕ್ತಿ, ಅಭಿರುಚಿ, ಸಾಮರ್ಥ್ಯವನ್ನು ಮೌಲ್ಯೀಕರಿಸಿದ್ದಾರೆ. ಇದೊಂದು ಪುಟ್ಟದಾದ ಆದರೆ ಆತ್ಮೀಯವಾದ ಬರಹ. ಇಂಥದೇ ಇನ್ನೊಂದು ಬರಹ ಡಾ. ಸಿ. ಮಹದೇವ ಅವರದು ತಮ್ಮ ಒಡನಾಟದಲ್ಲಿ ಭಟ್ಟರಲ್ಲಿ ತಾವು ಕಂಡುಕೊಂಡ ಸಹೃದಯ ಪ್ರಾಧ್ಯಾಪಕ-ವಿದ್ವಾಂಸನ ಲಕ್ಷಣಗಳನ್ನು ಮಹದೇವ ಚಿತ್ರಿಸಿದ್ದಾರೆ.

ಇನ್ನುಳಿದಂತೆ ಅವರ ನೇರ ವಿದ್ಯಾರ್ಥಿಗಳಾಗಿದ್ದ ಡಾ. ಬಾಲಸುಬ್ರಹ್ಮಣ್ಯ, ಡಾ. ವಾಸುದೇವ ಬಡಿಗೇರ, ಹಾಗೂ ಅವರ ನೇರ ವಿದ್ಯಾರ್ಥಿಗಳಾಗಿರದಿದ್ದರೂ ಅವರ ಸಂಶೋಧನೆ-ವ್ಯಕ್ತಿತ್ವಗಳಿಂದ ಪ್ರಭಾವಿತರಾದ ಡಾ. ಎಫ್. ಟಿ. ಹಳ್ಳಿಕೇರಿ, ರಮೇಶ ನಾಯಕರ ಬರಹಗಳಿವೆ. ಬೇರೆ ಕಾರ್ಯಕ್ಷೇತ್ರ, ಇಲಾಖೆಗಳಲ್ಲಿದ್ದು ಅಧ್ಯಯನ ಸಂಬಂಧಿ ಸಮಾಗಮಗಳ ಮುಖಾಂತರ ರಘುನಾಥ ಭಟ್ಟರೊಂದಿಗೆ ಆತ್ಮೀಯತೆ-ಸಂಪರ್ಕ ಬೆಳೆಸಿಕೊಂಡ ಡಾ. ಕೆ. ಎಂ. ಸುರೇಶ್, ಡಾ. ಕೆ. ಜಿ. ಭಟ್ ಸೂರಿ, ಡಾ. ಡಿ. ವಿ. ಪರಶಿವಮೂರ್ತಿ, ಡಾ. ಕೆ. ರವೀಂದ್ರನಾಥ, ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಮತ್ತು ಡಾ. ಸಿ. ಎಸ್. ವಾಸುದೇವನ್ ಅವರ ಬರಹಗಳಲ್ಲಿ ಭಟ್ಟರ ಅಧ್ಯಯನಾಸಕ್ತಿ, ಮಾನವಪ್ರೀತಿ. ಉತ್ಸಾಹ, ಪ್ರೋತ್ಸಾಹಕ ಗುಣಗಳ ಸ್ಮರಣೆ ಇದೆ.

ಮುಖಪುಟದಲ್ಲಿ ರಘುನಾಥ ಭಟ್ಟರ ನಗುಮೊಗದ ಭಾವಚಿತ್ರ ಹೊಂದಿದ ಬರೀ ಐವತ್ತು ಪುಟಗಳಿಗೆ ಮಿತವಾದ ಈ ಚಿಕ್ಕ ಪುಸ್ತಕ ಅವರ ವ್ಯಕ್ತಿತ್ವ-ಸಾಧನೆಗಳ ಪರಿಚಯವನ್ನು ಸಮರ್ಥವಾಗಿಯೇ ಮಾಡಿಕೊಟ್ಟಿದೆ.

— ಪ್ರೊ. ಅಶೋಕ ಶೆಟ್ಟರ್, ಅಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

೬. ಎತ್ತಣಿಂದೆತ್ತ : ಕು. ಗೋ., ಸುಹಾಸ-ಹಾಸ್ಯಪ್ರಿಯರ ಮತ್ತು ಲೇಖಕರ ಸಂಘಟನೆ, ವಾಗ್ದೇವಿ, ಪಯಸ್ವಿನೀ ನಗರ, ಉಡುಪಿ-೫೭೬ ೧೦೧, ಪ್ರಮು. ೨೦೦೨, ಪು. ೧೯೮, ರೂ. ೭೫/-

'ಎತ್ತಣಿಂದೆತ್ತ' ಸಂಕಲನದ ಹೆಸರೇ ಹೇಳುವಂತೆ ಓದಿಸಿಕೊಂಡು ಎತ್ತಣಿಂದ ಎತ್ತಲೋ ಕರೆದುಕೊಂಡು ಹೋಗುವ ಕಥಾಸಂಕಲನ. ಕೆಲವು ಕಥೆಗಳಿರುತ್ತವೆ, ಚೆನ್ನಾಗಿದ್ದರೂ ಕೂಡಾ ಓದುವುದಕ್ಕೆ ಬೆಟ್ಟ ಹತ್ತುವಷ್ಟು ಪ್ರಯಾಸ. ಇನ್ನು ಕೆಲವು ಕಥಾಶೈಲಿಗಳಿರುತ್ತವೆ. ನಾವು ಪ್ರಯಾಸ ಪಡಬೇಕಾಗೇ ಇಲ್ಲ. ಹರಿಯುವ ನೀರಿನಂತೆ ತಾನಾಗೇ ನಮ್ಮನ್ನು ಸೆಳೆದುಕೊಂಡು ಹೋಗಿ ಆಚೆ ದಡದಲ್ಲಿ ತಂದು ಹಾಕುತ್ತವೆ. 'ಎತ್ತಣಿಂದೆತ್ತ' ಕೂಡಾ ಒಂದು ರೀತಿಯ ವಿಶಿಷ್ಟ ಶೈಲಿಯಿಂದಾಗಿ, ನಮ್ಮ ಕಣ್ಣಮುಂದೆ ನಡೆಯುತ್ತಿರುವಂತಹ ಘಟನೆಗಳೋ ಎಂಬಂತೆ ನಮ್ಮನ್ನು ತಲ್ಲೀನರನ್ನಾಗಿಸಿ ತನ್ನಲ್ಲಿ ಸೆಳೆದುಕೊಂಡು ಬಿಡುತ್ತದೆ. ಸಣ್ಣ ಘಟನೆಯೋ, ಕಿರುವಿಷಯವೋ, ಸಣ್ಣಬಣ್ಣ ಹೊಡೆಸಿಕೊಂಡು ಸರಳವಾಗಿ ಕಣ್ಣಿಗೆ, ಮನಸ್ಸಿಗೆ ನಾಟುವಂತೆ ಚಿತ್ರಿತಗೊಳ್ಳುತ್ತದೆ. ಈ ಲೇಖಕರ ಲೇಖನಿಯಲ್ಲಿ.

೨೨ ಕತೆಗಳಿರುವ ಈ ಸಂಕಲನದಲ್ಲಿ ಎಲ್ಲವೂ ಏನೋ ಒಂದು ಜೀವನದ ಅನುಭವವನ್ನು, ಬಹ್ವಂಶ ಸ್ವಾನುಭವವನ್ನು ನಮ್ಮ ಮುಂದೆ ತೆರೆದಿಟ್ಟಿದೆ. ಸಂಕಲನದ ಕತೆಗಳಲ್ಲಿ ಲೇಖಕರು ಕೆಲವೊಂದು ಬದುಕಿನ ಸತ್ಯಗಳನ್ನು, ಕೆಲವೊಂದು ಆದರ್ಶಗಳನ್ನು, ಆಸೆಗಳನ್ನು ಹಾಗೆಯೇ ಮನುಷ್ಯ ಸಂಬಂಧಗಳಲ್ಲಿ ಕಣ್ಣಿಗೆ ಕಾಣಿಸದ ಇನ್ನೊಂದು ಮಗ್ಗುಲನ್ನು ತೆರೆದು ತೋರಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಸಂಕಲನದ ಕೇಂದ್ರಬಿಂದುವಾದ 'ಎತ್ತಣಿಂದೆತ್ತ' ಕತೆಯಲ್ಲಿ ನಡೆದಿರುವ ಘಟನೆ, ಮನುಷ್ಯನ ಮನೋವಿಕಾರದಲ್ಲಿ ನಂಬಲಸಾಧ್ಯವಾದ ಹೊಲಸು ಇದೆ ಎಂಬುದನ್ನು ತೋರಿಸುತ್ತದೆ. ಹೀಗೆಲ್ಲಾದರೂ ನಡೆಯಲಿಕ್ಕೆ ಸಾಧ್ಯವಾ? ಅಪ್ಪ ಅನ್ನಿಸಿಕೊಂಡ ಮನುಷ್ಯ ಮಗಳ ಜೊತೆಗೆ ಇಂತಹ ವ್ಯವಹಾರವಾ ಎಂದೇನಾದರೂ ಯೋಚಿಸಿದರೆ, ಧರ್ಮಬಾಹಿರವಾದ, ಅಮಾನವೀಯವಾದ, ಎಲ್ಲೋ ಅವಿತು ಕುಳಿತಿರಬಹುದಾದ ಅಂತಹ ಸಂಬಂಧ ಹೊಂದಿರುವಂತಹ ಅಪ್ಪನೂ ಇದ್ದಾನಲ್ಲ ಎಂದು ಮೊನಚಾದ ಲೇಖನಿಯಿಂದ ತಿವಿದು ಒಂದು ಕ್ಷಣ ಬೆಚ್ಚಿಬೀಳುವಂತೆ ಮಾಡುವುದರಲ್ಲಿ ಲೇಖಕರು ಸಫಲರಾಗಿದ್ದಾರೆ.

ಇನ್ನೊಂದು ಕತೆ 'ಓ ಲಕ್ಷ್ಮಣಾ'. ಸಮಯಕ್ಕೊದಗುವ ಒಬ್ಬ ಅಪರೂಪದ ಅಪದ್ಬಾಂಧವನ ಬಗ್ಗೆ ಹೇಳುತ್ತಾ, ಇಂಥವರ ಸಂತತಿ ಸಾವಿರವಾಗಬಾರದೇ ಎಂದು ಒಂದು ಕ್ಷಣ ಮನಸ್ಸು ಉದಾತ್ತವಾಗಿ ಯೋಚಿಸುವಂತೆ ಮಾಡುತ್ತಾರೆ ಲೇಖಕರು. 'ಅನಂತಶಯನ' ಕತೆಯಲ್ಲಿ ಮನುಷ್ಯನ ಯೋಚನೆಗಳು ಹರಿಯುವ ದಿಕ್ಕನ್ನು ತೋರಿಸುತ್ತಾ, ಅವನಲ್ಲಿರುವ ನಿರಾಶೆ, ಕೋಪ, ಸಂಕಟ, ದ್ವಂದ್ವ ಕೊನೆಗೊಂದು ನಿರ್ಲಿಪ್ತತೆಯನ್ನು ಎತ್ತಿ ತೋರಿಸುತ್ತಾ ಯಾವುದೋ ಒಂದು ಕ್ಷಣ ಏನಾದರೂ ಘಟಿಸಬಹುದು ಎಂಬಂತಹ ತಲ್ಲಣ, ಆ ಒಂದು ಕ್ಷಣ ಕಳೆದು ಹೋದರೆ ಮತ್ತೆ ಪುನಃ ಬದುಕಿನತ್ತ ಮುಖ ಮಾಡಿ ನಿಲ್ಲುವ ಪರಿಯನ್ನು, ಒಟ್ಟಾರೆ ಒಂದು ಮಾನಸಿಕ ಏರುಪೇರನ್ನು ಚಿತ್ರಿಸಿದ್ದಾರೆ.

'ಗುಪ್ತಸೇವೆ', 'ನಾಳೆ ಏನೋ', 'ಸ್ವರ್ಗ ಸಮಾನ', 'ಮರ್ಕಟ ಮಹಾಯಜ್ಞ', ಹಾಗೆಯೇ 'ಅಚ್ಯುತಾನಂದ ಗೋವಿಂದ' ಕತೆಗಳು ಅತೀ ಸಾಧಾರಣವಾದ ಕತೆಗಳು. ಕತೆಗಳು ಅನ್ನುವುದಕ್ಕಿಂತ ಇವನ್ನು ಹೊತ್ತು ಕಳೆಯುವುದಕ್ಕೋಸ್ಕರ ಹೇಳಿದ ಹರಟೆ ಅನ್ನಬಹುದೇನೋ. ಇಂತಹ ಒಂದು ಮೌಲಿಕವಾದ ಸಂಕಲನದಲ್ಲಿ ಲೇಖಕರು ಇವನ್ನೇಕೆ ತುಂಬಿದರು ಎಂದು ಆಶ್ಚರ್ಯವಾಗುತ್ತದೆ. ಹಾಗೆಯೇ 'ಜೈ(ಯುವ) ಶಕ್ತಿಮಾನ್' ಹಾಗೂ 'ರಥೋತ್ಸವ' ಕತೆಗಳು, ಯುವಶಕ್ತಿಯನ್ನು ಸಮರ್ಥವಾಗಿ ಹೇಗೆ ಬಳಸಿಕೊಳ್ಳಬಹುದು ಎಂದು ಹೇಳಿದರೆ, ಇದನ್ನೊಂದು ಅತೀ ಮಾಮೂಲಿ ಗಂಡ ಹೆಂಡಿರ ದಾಂಪತ್ಯದ ಒಂದು ಕ್ಷಣ - ತುಂಬಾ ಸರಳವಾದ ತುಂಬಾ ಸುಂದರವಾದ ಆದರೂ ಇಷ್ಟೇನಾ! ಅನ್ನಿಸುವಂತಹ ಕತೆಗಳು.

"ಬದುಕನ್ನು ಯಾರು ರೂಪಿಸುತ್ತಾನೆ, ಯಾಕೆ ರೂಪಿಸುತ್ತಾನೆ, ನಮ್ಮ ಹತ್ತಿರ ಏನೇನೆಲ್ಲಾ ಮಾಡಿಸುತ್ತಾನೆ ಅಂತ ಹೇಳುವುದು ಕಷ್ಟ. ಆದರೆ ಕೆಲವರಿಗೆ ಬುದ್ಧಿ ಕಲಿಸಲು, ಬೇರೆ ಕೆಲವರು ಶಿಕ್ಷೆ ಅನುಭವಿಸಬೇಕೂಂತ ಇದೆಯೋ ಏನೋ"– ಹೀಗೆಂದು 'ಒಂದು ಸಾವಿನ ಬಳಿಕ' ಕತೆಯಲ್ಲಿ ನಮ್ಮ ಮುಂದೆ ಬದುಕಿನ ಯಾವುದೋ ಒಂದು ಪರಮಾರ್ಥವನ್ನು ಸೂಕ್ಷ್ಮವಾಗಿ ಬಿಚ್ಚಿಡುತ್ತಾ, ಅರೆಕ್ಷಣ ಇಹಪರಗಳ ನಡುವಿನ ಯೋಚನೆಯಲ್ಲಿ ಮನಸ್ಸು ಭ್ರಾಂತಿಗೊಳಗಾಗುವಂತೆ ಮಾಡುತ್ತದೆ. ಹಾಗೆಯೇ ಒಳ್ಳೆಯದು ಕೆಟ್ಟದ್ದು ಎಲ್ಲವೂ ನಮ್ಮ ಮನಸ್ಸಿನಲ್ಲಿ ಹೇಗಿದೆಯೋ ಹಾಗೆ. ಮನಸ್ಸೇ ಎಲ್ಲದಕ್ಕೂ ಮೂಲ ಕಾರಣ. ಭಯ, ನೆಮ್ಮದಿ, ಎಲ್ಲವನ್ನೂ ನಮ್ಮಲ್ಲಿ ಕಂಡುಕೊಳ್ಳುವವರು ನಾವೇ ಎಂಬ ಚಿರಂತನ ಸತ್ಯವನ್ನು 'ಭಯಕ್ಕದ್' ಕತೆ ಅನಾವರಣಗೊಳಿಸುತ್ತದೆ.

ಸುಖವಾಗಿರುವಾಗ ಬಂಧುಬಾಂಧವರು, ನೆಂಟರು, ಮಕ್ಕಳು. ಕಷ್ಟ ಕಾಲದಲ್ಲಿ ಯಾರಿಗೆ ಯಾರೋ ಎಂಬ ಧ್ವನಿ 'ಮುದುಕಿ ಮತ್ತು' ಕತೆಯಲ್ಲಿ ಕಾಣಬರುತ್ತದೆ. ಕರುಳು ಚುರ್ರೆನ್ನುವಂಥಾ ಸ್ಥಿತಿಯಲ್ಲಿ ತಾಯಿ ಇದ್ದರೂ ಕೂಡಾ ಮಗಳು ತನ್ನಲ್ಲಿಗೆ ಕರೆತರಲು ಗಂಡನ ಭಯ; ಆದರೂ ಪ್ರಪಂಚದಲ್ಲಿ ಮಾನವೀಯತೆ ಅನ್ನುವುದು ಅಲ್ಲೊಬ್ಬ ಇಲ್ಲೊಬ್ಬರಲ್ಲಿ ಇದೆ ಎನ್ನುವ ಕಾರಣದಿಂದಾಗಿ ಮುದುಕಿ ಮಗಳ ಮನೆ ಸೇರಿಕೊಂಡರೂ ಹಣಕ್ಕಾಗಿ ಬದುಕಿರುವವರನ್ನು ಸಾಯಿಸುವಂತಹ ಪ್ರವೃತ್ತಿಯ ಅಧಮತನವನ್ನು ಅಳಿಯ ಕರಿಯನ ಮೂಲಕ ತೋರಿಸಿಕೊಟ್ಟಿದ್ದಾಳೆ.

ಇನ್ನು 'ಸಾಕುಮಗಳು' ಒಂದು ಸುಂದರವಾದ, ನವಿರಾದ, ಸರಳವಾದ ನಿರೂಪಣೆ. ಓದಿದ ನಂತರ ಅನಿಸುವುದು ಪ್ರೀತಿಗೇಕೆ ಜಾತಿ? ಒಂದರೆಕ್ಷಣ ಓದುಗರ ಎದೆ ಹೆಮ್ಮೆಯಿಂದ ಭಾರವಾದರೆ ಆಶ್ಚರ್ಯವಲ್ಲ. ಮನಸ್ಸು ಪ್ರೀತಿಯ ಅರಮನೆಯಾದರೆ ಸಾಕು. ಒಂದು ಮನೋಜ್ಞವಾದ ಮನಮುಟ್ಟುವಂತಹ ಕತೆ 'ಅಕ್ಕನ ಮದುವೆ'. ಈ ಕತೆಯ ನಿರೂಪಣೆಯೇ ಚೆನ್ನ. ಮುಗ್ಧ ಹುಡುಗನ ಆಸೆ, ಆಕಾಂಕ್ಷೆಗಳು, ಅದರಲ್ಲೂ ಹೊಟ್ಟೆ ತುಂಬಾ ಊಟ ಮಾಡಬೇಕು ಎಂಬಂತಹ ಸಣ್ಣ ಆಸೆ ಕೂಡಾ ಅಪ್ಪನ ಭಯದ ನೆರಳಿನಲ್ಲಿ ಕರಗಿ ಹೋಗುವಂತಹ ಸನ್ನಿವೇಶ ಕಲ್ಲೆದೆಯನ್ನೂ ಕರಗಿಸಬಹುದೇನೋ? ತಿನ್ನುವ ಒಂದೊಂದು ತುತ್ತನ್ನೂ ಲೆಕ್ಕಾಚಾರವಾಗಿಯೇ ತಿಂದು, ಒಂದಿಷ್ಟು ಬೇಕೆನಿಸಿದರೂ ಕೂಡಾ ಅಪ್ಪನ ಭಯದಿಂದ ಕೇಳಲು ಹಿಂಜರಿದು ಅಷ್ಟರಲ್ಲೇ ಏಳುವ, ಪುಟ್ಟ ಹೃದಯದ ಭಯ, ನೋವು, ಆಸೆ, ಹಸಿವು, ನಿರಾಶೆ, ಕುತೂಹಲ ಇವೆಲ್ಲಕ್ಕೂ ಅಕ್ಕನ ಮದುವೆಯಲ್ಲಿ ಅಪ್ಪ ಹೇಳುವ ಮಾತು ಉತ್ತರವಾಗುತ್ತದೆ. 'ಊಟ ಮಾಡು ಮಗೂ, ಹೊಟ್ಟೆ ತುಂಬಾ ಊಟ ಮಾಡು. ಈ ಊಟಕ್ಕಾಗಿಯೇ ಇಷ್ಟು ದಿನ ಕಷ್ಟಪಟ್ಟಿದ್ದು'– ಎಂದಾಗ ಒಬ್ಬ ಜವಾಬ್ದಾರಿಯುತ ತಂದೆ ತನ್ನ ಮಗಳಿಗೆ ಒಂದು ಒಳ್ಳೆಯ ನೆಲೆ ಹುಡುಕಿ ಮದುವೆ ಮಾಡಲು, ಮನಸ್ಸು ಮಮ್ಮಲ ಮರುಗುತ್ತಿದ್ದರೂ ಕೂಡಾ ಹೊಟ್ಟೆಬಟ್ಟೆ ಕಟ್ಟಿ ಮಕ್ಕಳನ್ನು ಸಾಕಿದ ಪರಿಗೆ ಓದುಗರ ಕಣ್ಣು, ಮನಸ್ಸು, ಹೃದಯ ಒದ್ದೆಯಾಗದೆ ಇರಲು ಸಾಧ್ಯವಾ?

'ಗತಿ' ಕತೆಯಲ್ಲಿ ಕೂಡಾ ಏನೇನೋ ಅಂದುಕೊಳ್ಳುವುದು, ಅದು ಇನ್ನೇನೋ ಆಗಿಬಿಡುವುದು. ಜೀವನದ ಗತಿ ಅದೆಲ್ಲಿಂದ ಎಲ್ಲಿಗೆ ಮುಟ್ಟಿಸುತ್ತದೋ! ಆಟ ಮುಗಿವತನಕವೂ ಆಡಿಸುವಾತನ ಇಚ್ಛೆ, ಆಡುತ್ತಾ ಆಡುತ್ತಾ ಅನುಭವಿಸುವುದೊಂದೇ ಅವನ ಅಣತಿ ಎಂಬ ಕಹಿಸತ್ಯವನ್ನು ತೋರುವ ಕತೆ ಇದು. 'ರಂಗೀಲಾ' ಕತೆಯಲ್ಲಿ ರಂಗಿಯ ಬೇಸರದ ಬಾಳಿನಲ್ಲೂ ಎಲ್ಲೋ ಒಟ್ಟು ಮೂಡಿದ ರಂಗನ್ನು ತೋರಿಸುತ್ತಾ ರಂಗಿ ಮುದುಕಿ ಆಗುವ ವರೆಗಾದರೂ ಬದುಕಿರಬೇಕಿತ್ತು ಎಂದು ಹಂಬಲಿಸುತ್ತಾರೆ.

'ಶನಿ ಹಿಡಿದವ' ಒಂದು ಹೃದಯವಿದ್ರಾವಕವಾದ ಕತೆ. ಈ ಕತೆಯಲ್ಲಿ ತನ್ನದ್ದೇ ಆದ ತನಗೆ ಅನುಭವಿಸಲು ಸಿಗುವುದಿಲ್ಲ ಎಂಬ ಚಿಂತನೆಯ ಒರೆಗಲ್ಲಿಗೆ ಹಚ್ಚುತ್ತಾ ಈ ಲೋಕದ ವ್ಯಾಪಾರದ ಬಗ್ಗೆ ಹನಿಗಣ್ಣಾಗುವಂತೆ ಮಾಡಿದ್ದಾರೆ ಲೇಖಕರು. 'ನಂಬಿ ಕೆಟ್ಟವರಿಲ್ಲವೇ' ಮತ್ತು 'ವಸೂಲಿ' ಕತೆಗಳು ಹಾಸ್ಯಲೇಖಕರ ಲೇಖನಿಯಿಂದ ಕರುಣಾಜನಕವಾದ ಸನ್ನಿವೇಶಗಳೂ ಕೂಡಾ ಹೇಗೆ ಮೂಡಿಬರುತ್ತವೆ

ಎಂಬುದಕ್ಕೆ ಸಾಕ್ಷಿ. 'ಒಪ್ಪಿಗೆಯಾಯ್ತೆ?' ಅತೀ ಸಾಧಾರಣವಾದ ಕತೆ ಅನ್ನಿಸದಂತಹ ಘಟನೆ. 'ಶಂಕರನ ಹೋಟೇಲು' ಬದುಕಿನ ಗತಿ-ಇತಿ-ಪರಿಮಿತಿಗಳನ್ನು ತೋರುವ ಒಂದು ಉತ್ತಮ ಕತೆ.

ಒಟ್ಟಿನಲ್ಲಿ 'ಎತ್ತಣೆಂದೆತ್ತ' ಸಂಕಲನದ ಕತೆಗಳಲ್ಲಿ ಅಡಗಿರುವ ಜೀವನಾನುಭವ ಮಾತ್ರ ಅನನ್ಯ.

– ಅರುಣಾ ಹೆಬ್ರಿ, ಸಿಂಡಿಕೇಟ್ ಬ್ಯಾಂಕ್ ಎದುರು, ಮುಖ್ಯರಸ್ತೆ, ಹೆಬ್ರಿ ಗ್ರಾಮ
ಅಂಚೆ : ಹೆಬ್ರಿ-೫೭೬ ೧೧೨ (ತಾ. ಕಾರ್ಕಳ, ಜಿ. ಉಡುಪಿ)

೭. ಗಾಂಧೀಜಿ ಎಂದೆಂದಿಗೂ ಪ್ರಸ್ತುತ : ಕೃಷ್ಣ ಶ್ರೀಪಾದ ದೇಶಪಾಂಡೆ

ರಾಹವೇ ಸಾಂಸ್ಕೃತಿಕ ಕೇಂದ್ರ, ಮಾಳಮಡ್ಡಿ, ಧಾರವಾಡ-೫೮೦ ೦೦೭ ೪೦೧. ಪ್ರಮು. ೨೦೦೪, ಪು. ೧೦೦, ರೂ. ೬೦/-

ನಮ್ಮ ದೇಶದ ಸ್ವತಂತ್ರ ಭಾರತವೆನಿಸುವ ಪೂರ್ವದಲ್ಲಿ ನಮ್ಮ-ನಿಮ್ಮ ಹಾಗೆ ಎಲ್ಲರ ಮಧ್ಯ ಓಡಾಡಿಕೊಂಡಿದ್ದಂಥ ಸಾಧಾರಣ ಮನುಜ ತನ್ನ ಅಸಾಧಾರಣ ಸಾತ್ವಿಕ ಸಾಹಸಮಯ ಜೀವನಕ್ರಮ, ಸಾಧನೆ-ಚಿಂತನೆಗಳ ಮೂಲಕ ಜೀವನ ಶಾಶ್ವತ ಮೌಲ್ಯಗಳನ್ನು ಇಡೀ ಮಾನವ ಜನಾಂಗಕ್ಕೆ ನೀಡಿ ತನ್ನ ಅಮೂಲ್ಯ ಗುಣ ಹಾಗೂ ಕಠಿಣ ತಪೋಮಯ ಜೀವನ ನಡೆಸಿ ಬರಿ ಮಹಾನ್ ಸಂತನೆನಿಸಿಕೊಂಡದ್ದಷ್ಟೆ ಅಲ್ಲದೆ ಮಹಾತ್ಮನಾಗಿ ದೇವರಂತೆ ಎಲ್ಲರಿಂದಲೂ ಪೂಜಿಸಲ್ಪಡುವಂತಾದುದು ಪ್ರತ್ಯಕ್ಷ ನಿದರ್ಶನ. ಇದಕ್ಕೆ ಕಾರಣ ಅವರ ಶಾಶ್ವತ ಜೀವನ ಮೌಲ್ಯಗಳು ಎಂದು ಬೇರೆ ಹೇಳಬೇಕಾಗಿಲ್ಲ.

ಆದರೆ ಇಂದಿನ ಸ್ವತಂತ್ರ ಭಾರತದಲ್ಲಿ ಪ್ರಜೆಗಳು ಅನುಭವಿಸುತ್ತಿರುವ ಕೋಮುಗಲಭೆ, ಸಾವಿರ ಸಾವಿರ ಹೋಳಾಗಿರುವ 'ವಸುಧೈವ ಕುಟುಂಬಕಂ'ದ ದುರಂತ ಪಾಡು, ಜನನ ನಿಯಂತ್ರಣ, ಬಿಳಿಕಾಲರಿನ ಉದ್ಯೋಗ ದೊರಕಿಸುವ ಸಾಧನವನ್ನಾಗಿಸಿಕೊಂಡ ಪಾಶ್ಚಾತ್ಯ ಪ್ರಭಾವಕ್ಕೊಳಗಾದ ಕೃತ್ರಿಮ ಶಿಕ್ಷಣ ಪದ್ಧತಿ, ಜಾಗತೀಕರಣ, ಮೀಸಲಾತಿ ಇತ್ಯಾದಿಯಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವ ಹಾಗೂ ಗಾಂಧೀಜಿ ಅವರ ಸಾಧನೆ-ಚಿಂತನೆಗಳ ಕುರಿತು ಎಳ್ಳಷ್ಟೂ ತಿಳಿದುಕೊಳ್ಳುವ ಗೋಜಿಗೆ ಹೋಗದೆ ಅವರನ್ನು ಕುರಿತು ಅಧ್ಯಾನದ ಬೇಜವಾಬ್ದಾರಿ ಹೇಳಿಕೆಗಳನ್ನು ಕೊಡುತ್ತಿರುವ ಹಾಗೂ ಬರಹಗಳಲ್ಲಿಯೂ ಅಭಿವ್ಯಕ್ತಿಸಿ ಯುವಜನಾಂಗದ ದಿಕ್ಕು ತಪ್ಪಿಸುತ್ತಿರುವವರಿಗೂ, ಅಂತಹವರ ಮಾತೇ ವೇದವಾಕ್ಯವೆಂದು ನಂಬಿ ನಮ್ಮ ಹಿರಿಯರನ್ನು ಅವಜ್ಞೆಗೊಳಿಸುತ್ತಿರುವವರಿಗೂ ಕಣ್ಣು ತೆರೆಸಿ ಸತ್ಯದರ್ಶನ ಮಾಡಿಕೊಡುವ ಪ್ರಸ್ತುತ ಕೃತಿ ಅಪರೂಪದ್ದೆಂದೇ ಹೇಳಬೇಕಾಗುತ್ತದೆ– ಮಾತ್ರವಲ್ಲ– ಇಂದಿಗಷ್ಟೇ ಸೀಮಿತವಾಗಿರದೆ ಎಂದೆಂದಿಗೂ ಪ್ರಸ್ತುತವಾದದ್ದು.

– ಮೋತಿಲಾಲ ಹಲವಾಯಿ, 'ವಿಶಾಲ', ೨ನೇ ಮುಖ್ಯರಸ್ತೆ, ಶಕ್ತಿನಗರ, ಧಾರವಾಡ-೫೮೦ ೦೦೪

೮. ಎಲೆಯ ಮರೆಯಲ್ಲಿ : ಎಸ್ಕೆ ಕೊನೆಸಾಗರ

ಸಂಗಮ ಪ್ರಕಾಶನ, 'ಸಾಧನೆ', ನವನಗರ, ಹುನಗುಂದ-೫೮೭ ೧೧೮, ಪ್ರಮು. ೨೦೦೪, ಪು. ೧೩೬, ರೂ. ೪೫/-

ಎರಡು ಭಾಗದಲ್ಲಿ ೪೫ ಲೇಖನಗಳು ಹರಡಿಕೊಂಡಿವೆ. ಭಾಗ ಒಂದರಲ್ಲಿ ೩೦ ಲೇಖನಗಳು ವೃತ್ತಿರಂಗಭೂಮಿಯ ನಟ-ನಟಿಯರು ಮತ್ತು ರಂಗಭೂಮಿಗೆ ಮೀಸಲಾಗಿವೆ. ಭಾಗ ಎರಡರಲ್ಲಿ ವಿಭಿನ್ನ ಕಾಯಕದ ೧೯ ಜನ ಮತ್ತು ಮೂರು ಪುಸ್ತಕ ಪರಿಚಯಗಳು, ಮೂರು ಇತರ ಲೇಖನಗಳು ಸೇರಿವೆ.

ಮುನ್ನುಡಿಯಲ್ಲಿ ಬಾಳಾಸಾಹೇಬ ಲೋಕಾಪುರ ಅವರು ಹೇಳುವಂತೆ 'ಮೇಲುನೋಟಕ್ಕೆ ವ್ಯಕ್ತಿಗಳ ಪರಿಚಯದಂತೆ ಕಂಡರೂ ಹುನಗುಂದ ಭಾಗದ ೫೦ ವರ್ಷಗಳ ಸಾಂಸ್ಕೃತಿಕ ಇತಿಹಾಸವನ್ನು ಲೇಖನಗಳು ಸಾಂದರ್ಭಿಕವಾಗಿ ಬರೆದವುಗಳಾದ್ದರೂ, ಉಪಯುಕ್ತ ಮಾಹಿತಿ ನೀಡುತ್ತವೆ. ಹಾಗೇ ಸ್ವಲ್ಪ ವಿಸ್ತರಿಸಿದ್ದರೆ ರಂಗ ಲೋಕದ 'ರಂಗ ದೀಪಗಳು' ಎನ್ನುವ ಮಹತ್ವದ ಪುಸ್ತಕವೇ ತಯಾರಾಗಿಬಿಡುತ್ತಿತ್ತು. ಅವಿಭಜಿತ ಬಿಜಾಪುರ ಜಿಲ್ಲೆಯ ಹುನಗುಂದ ತನ್ನ ಒಡಲಿನಲ್ಲಿ ಅನೇಕ ರಂಗಚೇತನಗಳಿಗೆ ಜನ್ಮ ನೀಡಿದೆ. ಅವರಲ್ಲಿ ಪಟೇಲ ಚಂದಪ್ಪ ಮಾಸ್ತರ, ಪಿ. ಬಿ. ಧುತ್ತರಗಿ, ಬಿ. ಆರ್. ಅರಿಷಿಣಗೋಡಿ, ಟಿ. ಕೆ. ಮಹಮ್ಮದಲಿ,

ಅಬ್ಬಾಸ್ ಅಲಿ, ಆರ್. ಆರ್. ದೋಟಿಹಾಳ ಮುಂತಾದವರು ಮತ್ತು ನಟಿಯರಾದ ಸರೋಜಮ್ಮ ಘುತ್ತರಗಿ, ಶಾಂತಮ್ಮ ಪತ್ತಾರ, ಪ್ರಮೀಳಾ ಬಾಯಿ ಗುಡೂರ, ರಂಗಮ್ಮ ಗುರ್ಲ ಕುರಿತು ಅಭಿನಂದನೆ, ಪ್ರಶಂಸೆ, ಮತ್ತು ಮನಮಿಯಿಡುವ ಸನ್ನಿವೇಶಗಳ ಚಿತ್ರಣಗಳಿವೆ.

ಎರಡನೆಯ ಭಾಗದಲ್ಲಿರುವ ಅನೇಕ ಶೀರ್ಷಿಕೆಗಳು ಚೌಡಕಿಯ ಮುದುಕವ್ವ, ಕ್ಲಾರಿಯೋನೆಟ್ ಖ್ಯಾತಿಯ ಬಸವರಾಜ, ಕಾಯಕದ ಶಿವನಾಗಪ್ಪ, ವಾದನಕ್ಕೆ ಬಾಲಿದ ಹನುಮಂತಪ್ಪ, ಕುಶಲ ನೇಕಾರ, ಚಿತ್ರಕಲಾ ಸಾಧಕ ಗವಿಮಠ, ಹೀಗೆ ಇನ್ನೂ ಅನೇಕ ಸಾಧಕರ ವ್ಯಕ್ತಿಚಿತ್ರಗಳಿವೆ, ಹಾಗೆ, ಕೂಡಲಸಂಗಮ ಸ್ಥಳ ಪರಿಚಯ ಮತ್ತು ಹುನಗುಂದ ತಾಲೂಕಿನಿಂದ ಸ್ವಾತಂತ್ರ್ಯ ಚಳುವಳಿಗೆ ದೊರೆತ ಕೊಡುಗೆ ಮುಂತಾದ ವಿಷಯಗಳ ಕುರಿತು ಮಾಹಿತಿಯೂ ಇಲ್ಲಿನ ಲೇಖನಗಳಲ್ಲಿ ದೊರೆಯುತ್ತದೆ.

– ಶಶಿಧರ ತೋಡಕರ, ಪ್ರಾಚಾರ್ಯರು, ಡಾ. ಹಿರೇಮಲ್ಲೂರ ಈಶ್ವರನ್ ವಿಜ್ಞಾನ ಕಾಲೇಜು, ೮ನೇ ಕ್ರಾಸ್, ಕಲ್ಯಾಣನಗರ, ಧಾರವಾಡ-೫೮೦ ೦೦೭

೯. ಕುಣಿಸಲು ನೀನು : ಸುಮಿತ್ರಾ ಹಲವಾಯಿ

ಮಹಿಳಾ ಸಾಹಿತ್ಯಿಕಾ, ನವನಗರ, ಹುಬ್ಬಳ್ಳಿ-೫೮೦ ೦೨೫, ಪ್ರಮು. ೨೦೦೭, ಪ್ರ. ೧೧೬, ರೂ. ೫೦/-

ಸುಮಿತ್ರಾ ಹಲವಾಯಿ ಇವರ 'ಕುಣಿಸಲು ನೀನು' ಕಥಾಸಂಕಲನದಲ್ಲಿ ಎರಡು ಅಪರೂಪದ ಕತೆಗಳಿವೆ– 'ಅಜ್ಜ ಹಾಗೂ ಸುಕ್ರಿ'. ಅಜ್ಜ ತೀರಿಕೊಂಡ ಟೆಲಿಗ್ರಾಂ ಬಂದೊಡನೆ, ಕುಗ್ರಾಮ ಸಿದ್ದಾಪುರದಿಂದ ಶಿವಮೊಗ್ಗೆಗೆ ಹೋಗುವ ಶಾಸ್ತ್ರಿಗಳ ಕುಟುಂಬದ ಆ ಅಜ್ಜನ ಮೊಮ್ಮಕ್ಕಳ ಒಟ್ಟೂ ನೆನಪುಗಳು– ಆ ಅಜ್ಜನನ್ನು, ಆ ಕಾಲವನ್ನು ಅನನ್ಯವಾಗಿ ಕಟ್ಟುವಲ್ಲಿ ಕತೆಗಾರ್ತಿ ಹೊರಗಿನವಳಾಗಿ ನಿಂತು ಪರಿಣಾಮಕಾರಿಯಾಗಿ ನಿರೂಪಣೆಗೈದಿದ್ದಾರೆ. 'ಸುಕ್ರಿ' ಇದಕ್ಕಿಂತ ಹೆಚ್ಚು ಓದುಗನನ್ನು ಸೆಳೆದುಕೊಳ್ಳುವುದು ಅದು ಕೊಡುವ 'a slice of life'ನಿಂದ. ಒಂದು ವಿಶಿಷ್ಟ ಮನೆತನದ ಪರಿಸರಕ್ಕೆ ಹೊರಗಿನವರಾಗಿ ಬಂದು ಸೇರಿಕೊಂಡ ದೇವಿ-ಸುಬ್ಬ; ಸುಬ್ಬನ ಬೈಗಳದ ಸಹಜ ಸ್ಫೋಟದಿಂದ ಹಾಗೂ ಅವನ ಸಾವಿನ ನಂತರ ದೇವಿ ನಡೆಸುವ ಅತ್ಯಂತ ಸಂಯಮದ ದಿಗಿಲು ಹುಟ್ಟಿಸುವ ಜೀವನದಿಂದ ಹಾಗೂ ಅಚ್ಯುತರಾಯನ ಗಟ್ಟಿ ನಡತೆಯಿಂದ ನಿರ್ಮಾಣವಾಗುವ ಒಟ್ಟು ವಾತಾವರಣ ambience- ಪರಿಣಾಮ ಬೀರುವುದಿಲ್ಲ.

ಉಳಿದಂತೆ ಸರಳ ಸಹಜ ಭಾಷೆಯಲ್ಲಿ ತನ್ನ ಅನುಭವದಲ್ಲಿ ಕಂಡ ಕೆಲವು ವ್ಯಕ್ತಿಗಳ, ಸಂದರ್ಭಗಳ ಚಿತ್ರಣ ಬಹಳ ಕಡಿಮೆ ಕತೆಯೆನಿಸಿಕೊಳ್ಳುವಂತಹವು. ಕೆಲವೊಂದು ಕತೆಗಳಲ್ಲಿಯ ದಟ್ಟ ವಿವರಗಳು, ಜವಾಬ್ದಾರಿಯುತ ನೈತಿಕ ನಿಲುವು ಗಮನ ಸೆಳೆಯುತ್ತವೆ. ಇವು ಓದುಗನಲ್ಲಿ ಹೆಚ್ಚಿನ ಅಪೇಕ್ಷೆ ಮೂಡಿಸುವಂತೆ ಮಾಡಿದ್ದಲ್ಲಿ, ಈ ಕತೆಗಳಿಗೆ ಹೆಚ್ಚಿನ ಸಾಹಿತ್ಯಿಕ ಬೆಲೆ ದಕ್ಕುತ್ತಿತ್ತು.

– ದುಷ್ಯಂತ ನಾಡಗೌಡ, ವೆಂಕಟಾದ್ರಿ, ೧೨೪, ೨ನೇ ಮೇನ್, ಗಾಂಧೀನಗರ, ಧಾರವಾಡ-೫೮೦ ೦೦೪

•

೧೦. ಜನ್ಮ ಸಾರ್ಥಕ : ಬಿ. ಸುಬ್ರಾಯ ಶಾಸ್ತ್ರೀ

ಪುಸ್ತಕ ನಿಧಿ, ಅಂಚೆ : ಹಳ್ನಾಡಿ-ಹರ್ಕಾಡಿ, ಕುಂದಾಪುರ, ಜಿ. ಉಡುಪಿ, ಪ್ರಮು. ೨೦೦೬, ಪ್ರ. ೧೨೦, ರೂ. ೪೫/-

ಇದು ಕಲಾವಿದ ಚಿಂತಕ ಬಿ. ಸುಬ್ರಾಯ ಶಾಸ್ತ್ರೀ ಅವರು 'ಚಿತ್ರಪ್ರಿಯ' ಎಂಬ ಕಾವ್ಯನಾಮದಿಂದ ಕನ್ನಡದಲ್ಲಿ ಪ್ರಕಟಿಸುತ್ತಿರುವ ಚೊಚ್ಚಲ ಕೃತಿ. ತಮಿಳುನಾಡಿನ ತಿರುಮಂಗಲಂನಲ್ಲಿ ಬಹಳ ಕಾಲ ಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಅವರು ತಮಿಳಿನಲ್ಲಿ ಇಂಥ ಕೃತಿಗಳನ್ನು ಪ್ರಕಟಿಸಿದ್ದಿದೆ. 'ತೋಚಿದ್ದನ್ನು ಗೀಚುವ' ಪ್ರವೃತ್ತಿಯನ್ನು ರೂಢಿಸಿಕೊಂಡಿರುವ ಅವರ ಅನೇಕ ಬರಹಗಳು ಪತ್ರಿಕೆಗಳಲ್ಲೂ ಪ್ರಕಟಗೊಂಡಿವೆ. ಅಂಥವನ್ನು ಸಂಗ್ರಹಿಸಿ ಈ ಪುಸ್ತಿಕೆಯನ್ನು ಹೊರತಂದಿದ್ದಾರೆ. ಈ ಕೃತಿಯಲ್ಲಿ ನಮ್ಮನ್ನು ಚಿಂತನೆಗೊಡ್ಡುವ ೧೪ ಲೇಖನಗಳಿವೆ. ಅಲ್ಲದೆ 'ದಾರಿದೀಪ', 'ಹಿತೋಪದೇಶ' ಎಂಬ ಸಂಗ್ರಹ ಬರಹಗಳೂ ಇವೆ.

'ನಾವು ವಾಸ ಮಾಡುವ ಭೂಮಿ'ಯ ರಚನೆಯ ಕುರಿತು ವಿವರಿಸುವ ಲೇಖಕರು ವೈಜ್ಞಾನಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾರೆ. ಅನಂತರದ ಆರೇಳು ಲೇಖನಗಳು ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಮೂಡಿಬಂದಿವೆ. 'ಮಾನವನ ತಿಳಿವಳಿಕೆ', 'ಸಾಮಾಜಿಕ ಜೀವನ ಕ್ರಮ', 'ಮತಧರ್ಮಗಳು ಮಾನವನ ಮೇಲೆ ಬೀರಿದ ಪ್ರಭಾವ', 'ಜಗತ್ತು ಕಲುಷಿತಗೊಂಡ ಬಗೆ', 'ವ್ಯಕ್ತಿ ತನ್ನನ್ನು ತಾನೇ ತಿಳಿದುಕೊಳ್ಳಬೇಕಾದ ರೀತಿ'– ಇಂಥ ಗಂಭೀರ ವಿಚಾರಗಳ ವಿಶದ ವಿವರಣೆ ಇಲ್ಲಿವೆ.

'ಮಾನವ ಜನ್ಮ ದೊಡ್ಡದು' ಎಂದು ದಾಸರ ಹೇಳಿಕೆಯನ್ನು ಪುನಃ ಘೋಷಿಸುವ ಲೇಖಕರು ಮನೋನಿಗ್ರಹದಿಂದ ಕಲಾತ್ಮಕ ಬದುಕು ಸಾಧ್ಯ ಎನ್ನುತ್ತಾರೆ. ಹೀಗೆ ಕಲಾತ್ಮಕ ಮನಸ್ಸುಳ್ಳವರು ಯಾರಿಗೂ ಗುಲಾಮರಾಗಿರದೆ ಸ್ವತಂತ್ರವಾಗಿ ಬದುಕಬಹುದು ಎನ್ನುತ್ತಾರೆ.

ತಾವು ಓದಿದ, ಅಲ್ಲಲ್ಲಿ ಕೇಳಿದ ಹಾಗೂ ವಿವಿಧ ಶಿಬಿರ-ಸತ್ಸಂಗಗಳಲ್ಲಿ ಅನುಭವಿಸಿದ ಅನುಭವಗಳಿಗೆ ತಮ್ಮದೇ ಆದ ವಿಚಾರಧಾರೆಯೊಂದಿಗೆ ವಿವರಣೆ ನೀಡುವ ಸುಬ್ರಾಯ ಶಾಸ್ತ್ರೀ ಅವರ ಈ ಕೃತಿ ಓದುಗರಲ್ಲಿ ಕುತೂಹಲ ಮೂಡಿಸಿ ಮನಸ್ಸನ್ನು ಚಿಂತನೆಗೆ ಒಡ್ಡುತ್ತದೆ.

ಯುವ ಪೀಳಿಗೆಯನ್ನುದ್ದೇಶಿಸಿ ಈ ಬರಹಗಳನ್ನು ಬರೆದುದಾಗಿ ಶಾಸ್ತ್ರೀಗಳು ಒಂದೆಡೆ ಹೇಳಿದ್ದಾರೆ. ಆದರೂ ಹಿರಿಯರಿಗೂ ಇದು ಕೈದೀವಿಗೆಯಾಗುವ ಯೋಗ್ಯತೆ ಹೊಂದಿದೆ. ಹೆಸರಾಂತ ಕಲಾವಿದರೂ ಆಗಿರುವ ಅವರು ರಚಿಸಿದ ಅನೇಕ ಕಲಾಕೃತಿಗಳ ಪಡಿಯಚ್ಚುಗಳು ರಕ್ಷಾಪುಟಗಳಲ್ಲಿ ಮೂಡಿದ್ದರಿಂದ ಪುಸ್ತಕದ ಶೋಭೆ ಹೆಚ್ಚಿದೆ.

– ನೆಂಪು ನರಸಿಂಹ ಭಟ್ಟ, 'ಸಂಹಿತಾ', # ೩೨೪, ಅಚ್ಯುತನಗರ, ೨ ನೇ ಹಂತ, ಪರ್ಕಳ-೫೭೬ ೧೦೭, ಜಿ. ಉಡುಪಿ

೧೧. ಒಂದು ಬೊಗಸೆ ಧ್ಯಾನ : ಸಂಕುಲಜೀವ

ಆತ್ಮದೀಪ, ಧಾರವಾಡ-೫೮೦ ೦೦೭, ಪ್ರಮು. ೨೦೦೩, ಪು. ೧೪೪, ರೂ. ೫೦/-

ಸಂಕುಲಜೀವ ಅವರ 'ಒಂದು ಬೊಗಸೆ ಧ್ಯಾನ' ನೋಡುತ್ತಿದ್ದಂತೆಯೇ ಎತ್ತಿಕೊಳ್ಳಬೇಕೆನಿಸುವ ಪುಸ್ತಕ. ಹೆಸರು, ಆಕೃತಿ ಎರಡೂ ಆಕರ್ಷಕ. ಲೇಖಕರು ಪಡೆದ ಝೆನ್‌ನ ಅರಿವು ಮತ್ತು ಧ್ಯಾನದ ಅನುಭವಗಳ ಎರಕದಿಂದ ಈ ಪುಸ್ತಕ ತನ್ನ ಸತ್ವವನ್ನು ಪಡೆದಿದೆ. ಎರಡು ಭಾಗಗಳಿರುವ ಪುಸ್ತಕದಲ್ಲಿ 'ಹನಿ ಹನಿ ಜೇನು' ಹನಿಗವನಗಳ ಭಾಗ, 'ಒಂದು ಪತ್ರ ಗೆಳೆಯನಿಗೆ' ಧ್ಯಾನದ ಬಗೆಗಿನ ನೀಳ ಪ್ರಬಂಧ.

'...ಮೊದಲ ಭಾಗದ ಹನಿಗವನಗಳು ಸುಮಾರು ಮೂರು ವರ್ಷದ ಅವಧಿಯಲ್ಲಿ ನನ್ನ ಬದುಕಿನ ಹುಲ್ಲುಗಾವಲಿನಲ್ಲಿ ತಾವೇ ತಾವಾಗಿ ಸಾಕಾರಗೊಂಡ ಇಬ್ಬನಿಯ ಹನಿಗಳು' ಎಂದು ಲೇಖಕರು ತಮ್ಮ 'ಬಿನ್ನಹ'ದಲ್ಲಿ ಹೇಳುತ್ತಾರೆ. ಅನುಭಾವವನ್ನು ಕಟ್ಟಿಕೊಡುವಲ್ಲಿ ಪ್ರಬಂಧಕ್ಕಿಂತಲೂ ಕವನ ಹೆಚ್ಚು ಶಕ್ತ ಎನ್ನುವುದು ಪುಸ್ತಕ ಓದಿದಾಗ ಮನವರಿಕೆಯಾಗುತ್ತದೆ. ಮುನ್ನುಡಿ ಬರೆದ ಎ. ಎಸ್. ನಾಗರಾಜ್ ಇದೇ ಅರ್ಥದ ಮಾತನ್ನು ಹೇಳುತ್ತಾರೆ. 'ನಮ್ಮ ಧ್ಯಾನದ ಅನುಭವಗಳನ್ನೂ ಅನುಭಾವಗಳನ್ನೂ ವಿವರಿಸಿ ಹೇಳುವುದು ಸಂಜೀವ ಕುಲಕರ್ಣಿಯವರಂತಹ ಕವಿಗಳಿಗೆ ಮಾತ್ರ ಭಾಗಶಃ ಸಾಧ್ಯ.' ಧ್ಯಾನದ ಮೇಲೆ ಬೇರೆ ಬೇರೆ ಮಗ್ಗಲುಗಳು ಬೇರೆ ಬೇರೆ ಸಮಯಗಳಲ್ಲಿ ಕವಿಗೆ ಕಂಡಿದ್ದಕ್ಕೆ ಹನಿಗವನಗಳಲ್ಲಿ ದಾಖಲೆಯಿದೆ. ಒಮ್ಮೆ ಧ್ಯಾನವೆಂಬುದು 'ಅಂತರಂಗದ ನಿತ್ಯಸ್ನಾನ'ವಾಗಿ ಕಂಡರೆ ಇನ್ನೊಮ್ಮೆ 'ಅಂತರಂಗದ ನಿತ್ಯ ವ್ಯಾಯಾಮ'ವಾಗಿ ಕಾಣುತ್ತದೆ.

'ಒಬ್ಬ ಚಂದ್ರನಲ್ಲಿ / ಅದೆಷ್ಟು ಬೆಳದಿಂಗಳು ತುಂಬಿದೆ! / ಒಂದು ಉಸಿರಿನಲ್ಲಿ /ಅದೆಷ್ಟು ಧ್ಯಾನ!!' ಇಂತಹ ಧ್ವನಿಪೂರ್ಣ ಹನಿಗವನಗಳು ಪುಸ್ತಕದಲ್ಲಿ ಸಾಕಷ್ಟಿವೆ. ಅವುಗಳ ನಡುವೆ ಅಲ್ಲಲ್ಲಿ ನುಸುಳುವ ಹೇಳಿಕೆಗಳಾಗಿಯಷ್ಟೇ ನಿಲ್ಲುವ ಹನಿಗವನಗಳೂ ಇವೆ. ಇವನ್ನು ಬಿಟ್ಟಿದ್ದರೇ ಒಳ್ಳೆಯದಿತ್ತೇನೊ.

ಇಷ್ಟಾಗಿಯೂ ಧ್ಯಾನದ ಅರ್ಥ ಹಾಗೂ ಸೌಂದರ್ಯದ ಕಲ್ಪನೆ ಮಾಡಿಕೊಡುವಲ್ಲಿ 'ಹನಿ ಹನಿ ಜೇನು' ಭಾಗ ಸಫಲವಾಗಿದೆ.

ಪ್ರಬಂಧ ಭಾಗದಲ್ಲಿ ಮುಖ್ಯವಾಗಿ ಕಾಣುವುದು ಲೇಖಕರ ಉತ್ಸಾಹ. ಇದು ಲೇಖಕರ ಅರಿವಿನ ಭಾಗ. ಇಲ್ಲಿ ಅನುಭಾವದ ಸೆಲೆಯಿಲ್ಲ. ಎಲ್ಲವನ್ನೂ ಬಿಡಿಸಿ ಹೇಳುವ ತವಕ. ಧ್ಯಾನ ಎಂದರೇನೆಂದು ತಿಳಿಯದ ಗೆಳೆಯನಿಗೆ ಬರೆದ ಪತ್ರದ ರೂಪದಲ್ಲಿ ಪ್ರಬಂಧ ಇರುವುದರಿಂದ ಉದ್ದೇಶ ಸ್ಪಷ್ಟ. ಧ್ಯಾನದ ಸರಳ ಪರಿಚಯವೇ ಈ ಭಾಗದ ಗುರಿ. ಒಮ್ಮೊಮ್ಮೆ 'ತೀರ ಸರಳವಾಯ್ತಲ್ಲ' ಅನಿಸಿದರೂ ಬಗೆಬಗೆಯ ದೃಷ್ಟಾಂತಗಳಿಂದ, ಶಾಸ್ತ್ರದ ಶೈಲಿಯನ್ನು ಬಿಟ್ಟು ಉತ್ಸಾಹದಿಂದ, ಧ್ಯಾನದ ಸಾಧನೆ, ಉಪಯೋಗ, ವೈವಿಧ್ಯ ಎಲ್ಲ ಚರ್ಚಿತವಾಗಿವೆ. ಧ್ಯಾನದ ಕುರಿತು ಸಾಮಾನ್ಯರಿಗಿರಬಹುದಾದ ಅನುಮಾನಗಳಿಗೂ ಉತ್ತರಗಳಿವೆ. ಲೇಖಕರೇ ಬರೆದ ರೇಖಾಚಿತ್ರಗಳು ಪುಸ್ತಕಕ್ಕೆ ಕಳೆ ತಂದಿವೆ. ಎಲ್ಲಕ್ಕಿಂತ ಮಿಗಿಲಾಗಿ ಧ್ಯಾನದಿಂದ ಸಾಧಿತವಾಗುವ ಆನಂದ, ಮುಟ್ಟಿ ಅನುಭವಿಸುವಷ್ಟಿದೆ, ಈ ಪುಸ್ತಕದಲ್ಲಿ.

– ಡಾ. ಪ್ರಕಾಶ ಭಟ್, ೧೯, ಬಯಲು, ಹೊಯ್ಸಳನಗರ, ಧಾರವಾಡ-೫೮೦ ೦೦೩

೧೨. ಇರುಳು ಕಾಣಿಸಿದ ಆಕಾಶ : ಟಿ. ಆರ್. ರಾಧಾಕೃಷ್ಣ

ಪ್ರಕಾಶನ : ಸಿ. ವಿ. ಜಿ. ಪಬ್ಲಿಕೇಶನ್ಸ್ ಬೆಂಗಳೂರು, ಪು. ೯೭, ರೂ. ೪೦/-

ಟಿ. ಆರ್. ರಾಧಾಕೃಷ್ಣ ಅವರ ಇತ್ತೀಚಿನ ಕಥಾಸಂಕಲನ 'ಇರುಳು ಕಾಣಿಸಿದ ಆಕಾಶ'. ಇಲ್ಲಿರುವ ಒಂಭತ್ತು ಕಥೆಗಳಲ್ಲಿ ೭ ಕಥೆಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದರೆ ೨ ಕಥೆಗಳು ಚಿತ್ರದುರ್ಗದ ಆಕಾಶವಾಣಿಯಿಂದ ಬಿತ್ತರಗೊಂಡಿವೆ.

'ಇರುಳು ಕಾಣಿಸಿದ ಆಕಾಶ' ಸಂಕಲನದ ಕಥೆಗಳಲ್ಲಿ ಎದ್ದುಕಾಣುವ ಸಾಮಾನ್ಯ ಅಂಶ; ಮಧ್ಯಮ ವರ್ಗದ ಬದುಕಿನ ಚಿತ್ರಣ ಹಾಗೂ ಒಳಿತಿನಲ್ಲಿ ನಂಬಿಕೆ.

'ಮೃತ್ಯೋರ್ಮಾ ಅಮೃತಂಗಮಯ' ಕಥೆಯಲ್ಲಿ ಗಂಧದ್ ಮಾಸ್ತರ್, 'ಮೃಗಗಳಿಗಂಜಿ ದೊಡೆಂತಯ್ಯಾ'ದ ಪ್ರಾಚಾರ್ಯ ವೀರಣ್ಣ, 'ಮುದ್ರಿಸದ ಧ್ವನಿಯ' ಅಂಜಲಿ ಮೇಡಂ, 'ಭಸ್ಮ'ದ ಗೌರಮ್ಮ ಈ ಎಲ್ಲ ಪಾತ್ರಗಳು ನಮ್ಮ ಸುತ್ತಮುತ್ತಲೆ ನಮ್ಮ ಕೈಯೆಟುಕಿನಲ್ಲೇ ಇರುವಂಥವು. ಕಥೆಗಾರರ ಮಾನವೀಯ ಅನುಕಂಪ ಕಾರಣವಾಗಿ ಈ ಪಾತ್ರಗಳೂ ಒಳ್ಳೆಯತನದ ಎರಕದಲ್ಲಿ ಅಚ್ಚು ಹೊಯ್ಯುವಂಥವುಗಳು. ಇಲ್ಲಿ ಕಾಣುವುದು ಕಥೆಗಾರನ ಒಳ್ಳೆಯತನವನ್ನು ಗುರುತಿಸುವ ಗುಣವೋ ಅಥವಾ ನಿಜಕ್ಕೂ ಪಾತ್ರಗಳೇ ಒಳ್ಳೆಯವೋ ಎಂಬ ಸಂದಿಗ್ಧಕ್ಕೆ ನಮ್ಮನ್ನು ನೂಕುವಂಥ ಪಾತ್ರಗಳು. ಹೀಗಾಗಿ ಇಂಥ ಕಥೆಗಳನ್ನೋದಿದಾಗ ಓದಿದ ಸಂತೃಪ್ತಿ ಇರುತ್ತದೆಯೇ ವಿನಃ ಪಾತ್ರಗಳ ತಳಮಳ, ಆತಂಕ, ತಲ್ಲಣಗಳು ತಟ್ಟಬೇಕಾದ ಪ್ರಮಾಣದಲ್ಲಿ ತಟ್ಟುವುದಿಲ್ಲ.

ಬದುಕಿನ ನೋವನ್ನು ಅತ್ಯಂತ ಸಹಜವೆಂಬಂತೆ ಸ್ವೀಕರಿಸುವ ಗಂಧದ್ ಮಾಸ್ತರ, ಬದುಕಿನ ಪ್ರೀತಿಯೊಂದಿಗೇ ಬಂಡಾಯದ ಆರ್ಭಟವನ್ನೂ ಮೈಗೂಡಿಸಿಕೊಂಡ ಗೌರಮ್ಮ, ಬಂದುದನ್ನು ಎದುರಿಸಲಾರದ ಜಗದೀಶ, ಆತನಲ್ಲಿ ಆತ್ಮವಿಶ್ವಾಸ ತುಂಬುವ ಅಂಬುಜಕ್ಕ, ಅವಮಾನ ದುಃಖ ಮರೆಯಲು ಸಮಾಜ ಸೇವೆಗೆ ತೊಡಗುವ, ವಿಶಿಷ್ಟ ಸಂದರ್ಭವೊಂದರಲ್ಲಿ ಚಿನ್ನಮ್ಮನಲ್ಲಿ ಅನುರಕ್ತನಾಗಿ ಆಕೆಯ ಸಂಬಂಧ ಬೆಳೆಸಿ ಕೊನೆಗೆ ಆಕೆಯ ಕೋರಿಕೆಯಂತೆಯೆ ಆಕೆಯ ಸ್ವಂತ ಮಗಳನ್ನೇ ಮದುವೆಯಾಗುವ ರಾಜಪ್ಪ; ವಿದ್ಯಾರ್ಥಿಗಳ, ಸಹೋದ್ಯೋಗಿಗಳ ದೌರ್ಜನ್ಯಕ್ಕೆ ಒಳಗಾಗಿ ಪ್ರಾಣ ನೀಗುವ ವೀರಣ್ಣ, ಮಾರಣಾಂತಿಕ ರೋಗಕ್ಕೆ ತುತ್ತಾದಾಗಲೂ ಪ್ರೀತಿಯ ಬಗ್ಗೆ ಬದುಕಿನ ರೀತಿಯ ಬಗ್ಗೆ ಒಂದು ನಿಷ್ಠೆ ಇಟ್ಟುಕೊಂಡ ಸೋಮು, ತನ್ನದಲ್ಲದ ತಪ್ಪಿಗೆ ಬದುಕು ಬಲಿಗೊಟ್ಟೂ ಆ ವೇದನೆಯಲ್ಲೆ ಕೊರಗದೆ ಜೀವನ ಪ್ರೀತಿ ಉಳಿಸಿಕೊಂಡ ಅಂಜಲಿ ಮೇಡಂ, ಖಳನಾಯಕನಂತಿದ್ದ ಬೆಟ್ಟಪ್ಪನ ಕಥೆ ಕೇಳಿಯೂ ಅದೇ ನೆಪವಾಗಿ

ಆತ್ಮವಿಮರ್ಶೆಗೆ ತೊಡಗಿ ಬೆಟ್ಟಪ್ಪನಿಗೆ ನೆರವಾಗುವ ವೆಂಕಟೇಶ, ನಿಗೂಢವಾಗಿಯೆ ಉಳಿವ ಶಿವಸ್ವಾಮಿ ದಂಪತಿಗಳು ಇವು ಟಿ. ಆರ್. ರಾಧಾಕೃಷ್ಣರ ಒಂಬತ್ತು ಕಥೆಗಳಲ್ಲಿ ವಿವಿಧ ನೆಲೆಗಳಲ್ಲಿ ಕಂಡುಬರುವ ಪಾತ್ರಗಳು. ಕಥೆಗಳು ಘಟನಾಪ್ರಧಾನವಾದುದರಿಂದ ಪಾತ್ರಗಳ ಆಟದ ಅರಾಜಕತೆ, ಖಿನ್ನತೆಗಳ ಚಿತ್ರಣ ಪರಿಣಾಮಕಾರಿಯಾಗಿಲ್ಲ; ಇದಕ್ಕೆ ಕಾರಣ ಕಥೆಗಾರರ ಬಹಿರ್ಮುಖತೆ.

ಇಲ್ಲಿರುವ ಎಲ್ಲ ಕಥೆಗಳಲ್ಲಿ ತುಂಬಿ ತುಳುಕುತ್ತಿರುವುದು ಮಾನವೀಯ ಅನುಕಂಪ. ಈ ಕಾರಣಕ್ಕಾಗಿಯೇ ಕಥೆಗಳು ಓದಿಸಿಕೊಂಡು ಹೋಗುತ್ತವೆ. ರಾಧಾಕೃಷ್ಣ ಅವರು ಬಯಸಿದರೆ ಭಿನ್ನವಾಗಿ ಬರೆಯಬಲ್ಲರು ಎಂಬುದಕ್ಕೆ 'ಸ್ಥಲ' ಕಥೆ ಮಾತ್ರ ಸೂಚನೆ ನೀಡುತ್ತದೆ.

೧೩. ದಾರಿ ಯಾವುದಯ್ಯಾ : ಬಂದಗದ್ದೆ ರಾಧಾಕೃಷ್ಣ

ಪ್ರಕಾಶನ : ಪುಸ್ತಕ ಹೊಂಬಾಳೆ, ಕೆಳದಿ, ಸಾಗರ-೫೭೭ ೪೦೧, ಪು. ೩೧, ರೂ. ೨೦/-

ರಂಗಭೂಮಿ, ಚಿತ್ರಕಲೆಯಂತೆಯೆ ಸಾಹಿತ್ಯಕ್ಷೇತ್ರದಲ್ಲೂ ತಮ್ಮ ಆಸಕ್ತಿಯನ್ನು ಉಳಿಸಿ-ಬೆಳೆಸಿ ಕೊಂಡವರು ಬಂದಗದ್ದೆ ರಾಧಾಕೃಷ್ಣ. ಅವರ 'ದಾರಿ ಯಾವುದಯ್ಯಾ' ನೀಳ್ಗತೆ ಮಲೆನಾಡಿನ ಕಾಡಿನ ಹಾಗೆ ದಟ್ಟ, ನಿಗೂಢ. ಒಂದೊಂದು ದಿಕ್ಕಿನಲ್ಲಿ ಒಂದೊಂದು ಪರಿ.

ಮಲೆನಾಡಿನ ಕಾಡು ಮಲೆನಾಡಿನ ಬದುಕು ಹಾಗೂ ತತ್ತ್ವಮೀಮಾಂಸೆ ಈ ಮೂರು ಎಳೆಗಳಿಂದ ಹುರಿಗೊಂಡ ಕಥೆ 'ದಾರಿ ಯಾವುದಯ್ಯಾ'. ಒಂದೆಡೆ ದಟ್ಟವಾದ ಕಾಡು ಇನ್ನೊಂದೆಡೆ ದಟ್ಟವಾದ ಬದುಕು. ಕಾಡಿನಲ್ಲಿ ಕತ್ತಲೆ, ಬೆಳದಿಂಗಳು, ಮೋಡ, ಮಳೆ, ಹಾವು, ಭಯ. ಆ ಕಾಡನ್ನು ಹೊದ್ದುಕೊಂಡು ಮಲಗಿರುವ ಜನರ ಬದುಕಿನಲ್ಲಿ ಛಲ, ಜೀವನಶ್ರದ್ಧೆ, ವಂಚನೆ, ಮೋಸ, ಕಾಮ, ಉಲ್ಲಾಸ. ಈ ಎರಡರ ಹಿನ್ನೆಲೆಯಾಗಿ ಶಂಕರರ ಭಜಗೋವಿನಂದ ಸಾಲುಗಳು; 'ಪುನರಪಿ ಜನನಂ ಪುನರಪಿ ಮರಣಂ ಪುನರಪಿ ಜನನೀ ಜಠರೇ ಶಯನಂ...' –ಬಿಡುಗಡೆಯ ದಾರಿ ಹುಡುಕುವ ತವಕ.

ಕಥಾನಾಯಕ ವಿನಾಯಕ ಎಲ್ಲೋ ನಮ್ಮೊಳಗೆ ಮೊಳೆತು ಚಿಗಿವ ಜೀವ. ಜೀವನದ ಬಗ್ಗೆ ಒಂದು ಶ್ರದ್ಧೆ ಇಟ್ಟುಕೊಂಡು ಜಾಣ್ಮೆಯಿಂದ ಬದುಕು ಸಾಗಿಸುವ ಶೇಷಮ್ಮ, ಲಾಲಸೆಯ ವ್ಯಕ್ತಿ ವೆಂಕಪ್ಪ, ರಸಿಕ ಸುರೇಶ, ಪತಿಯೆಡೆಗಿನ ಗುಪ್ತ ಪ್ರತಿಭಟನೆಯೇನೊ ಎಂಬಂತೆ ತನ್ನಲ್ಲಿ ಕಾಮವನ್ನು ಹೆಡೆಯೆತ್ತಗೊಡುವ ಮತ್ತೆ ವಿವೇಕದ ಮಾತಿಗೆ ಓಗೊಡುವ ಭಾರತಿ –ಕಾಡಿನಲ್ಲಿ ಸರಿದು ಹೋದ ಕಪ್ಪು ನಾಗರದ ನೆನಪು– ಈ ಎಲ್ಲ ಬದುಕಿನಲ್ಲಿ ನಾವು-ನೀವು ಅಲ್ಲಿ-ಇಲ್ಲಿ ಕಂಡಂಥ ಪಾತ್ರಗಳೆ. ಚಿತ್ರಕಲಾವಿದ ಎಲ್ಲಿ ದಟ್ಟ ಬಣ್ಣ ಬಳಸಬೇಕು ಎಲ್ಲಿ ತೆಳುವಾಗಿಸಬೇಕು ಎಂಬುದನ್ನು ಅರಿತಿರುತ್ತಾನಲ್ಲವೆ, ಆ ಮಾಧ್ಯಮವನ್ನೂ ಬಲ್ಲ ಕಥೆಗಾರ ಬಂದಗದ್ದೆ ಬರಹದಲ್ಲೂ ಅದೇ ತಂತ್ರ ಬಳಸಿದ್ದಾರೆ. ನೀಳ್ಗತೆ ಒಂದು ದಟ್ಟ ಅನುಭವವಾಗಿ ನಮ್ಮ ಮನಸ್ಸಿನಲ್ಲಿ ಉಳಿಯುತ್ತದೆ; ಜತೆಗೆ ಲೌಕಿಕ ಪ್ರಶ್ನೆಯೂ ಒಂದು ಉಳಿಯುತ್ತದೆ. ೩೦ ಪುಟಗಳ ಪುಸ್ತಕಕ್ಕೆ ೨೦ ರೂಪಾಯಿ ಬೆಲೆ ಉಚಿತವೆ?!

– ಪ್ರೊ. ಚಂದ್ರಶೇಖರ ವಸ್ತ್ರದ, 'ಬೆಳಗು', ಆನಂದಾಶ್ರಮ ರಸ್ತೆ, ಮಸಾರಿ, ಗದಗ-೫೮೨ ೧೦೧

೧೪. ಪುಟ್ಟ ಪಾದದ ಗುರುತು : ಸುನಂದಾ ಪ್ರಕಾಶ ಕಡಮೆ

ಛಂದ ಪುಸ್ತಕ, ಮಂತ್ರಿ ಪ್ಯಾರಾಡೈಸ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-೭೬, ಪ್ರಮು. ೨೦೦೫, ಪು. ೯೦, ರೂ.೪೦/-

ಇದು ಹನ್ನೊಂದು ಕಥೆಗಳ ಸಂಗ್ರಹ. ಈ ಕೃತಿಗೆ ಛಂದ ಪುಸ್ತಕ ಬಹುಮಾನ ದೊರಕಿದೆ. ಇಲ್ಲಿನ ಅನೇಕ ಕಥೆಗಳು ಬೇರೆ ಬೇರೆ ಪತ್ರಿಕೆಗಳ ಕಥಾಸ್ಪರ್ಧೆಯ ಬಹುಮಾನ ಪಡೆದಿವೆ. ಬಹುಮಾನಗಳು ಕೃತಿಯ ಗುಣಾತ್ಮಕತೆಯನ್ನು ಹೆಚ್ಚಿಸುವುದಿಲ್ಲವಾದರೂ ಒಂದು ಬಗೆಯ ವಿಮರ್ಶೆಗಳಂತೂ ಹೌದು. ಬಹುಮಾನದ ಪೂರ್ವಗ್ರಹಿಕೆ ಮರೆಸುವ ಗುಣವಿರುವ ಕಥೆಗಳು ಮಾತ್ರ ಓದಿನ ಸಾರ್ಥಕತೆಯನ್ನು

ಹೆಚ್ಚಿಸುತ್ತವೆ ಎಂದುಕೊಂಡಿರುವವ ನಾನು. ಇಲ್ಲಿನ ಕಥೆಗಳನ್ನು ನಾನು ಅವು ನನ್ನೊಳಗೆ ಉಳಿಸಿದ 'ಪುಟ್ಟ ಪಾದದ ಗುರುತಿಗಾಗಿ' ಮೆಚ್ಚುವೆ.

ಸುನಂದಾ ಕಡಮೆಯವರು ತಮ್ಮ ಕಥಾ ಹೆಣಿಗೆಯಲ್ಲಿ ಸಹಜ ಚೆಲುವನ್ನು ಸಾಧಿಸಿದ್ದಾರೆ. ಇಲ್ಲಿನ ಕಥೆಗಳನ್ನು ಓದಿ ಮುಗಿಸಿದಾಗ ಇವು ಹೆಣ್ಣು ಮಗಳೊಬ್ಬಳು ಬರೆದ ಕಥೆಗಳೆಂಬುದೂ ಗೌಣವಾಗಿ ಬಿಡುತ್ತದೆ. ಯಾವುದೆ ಬ್ರ್ಯಾಂಡಿಗೆ ಒಳಪಡದೆ ಬರೆದ ಕಥೆಗಳ ಹೆಚ್ಚುಗಾರಿಕೆ ಇದು. ಅಂದಮಾತ್ರಕ್ಕೆ ಇಲ್ಲಿನ ಕಥೆಗಳೆಲ್ಲ ಅನನ್ಯ, ಪರಿಪೂರ್ಣ ಎಂದೆಲ್ಲ ಹೇಳಿಬಿಡುವ ಅವಸರ ನನಗಿಲ್ಲ. ಈ ಕಥೆಗಳಲ್ಲಿ ನನಗೆ ಮೆಚ್ಚಿಗೆಯಾದವುಗಳು ಯಾವವು? ಹಾಗೆ ಮೆಚ್ಚಲು ಕಾರಣವೇನು? ಹಿಡಿಸಲಿಲ್ಲವಾದರೆ ಯಾಕೆ? ಎಂಬ ಸಂಗತಿಗಳನ್ನು ಬಿಡಿಸಿಡಲು ನಾನು ನಿರಂಕುಶಮತಿ. ಜತೆಗೆ ವಿಮರ್ಶೆಯು ಅಂಕುಶವಾಗಬಾರದೆಂಬ ಎಚ್ಚರವೂ ನನಗಿದೆ ಎಂದುಕೊಂಡಿರುವೆ.

ಎಲ್ಲ ಕಥೆಗಳನ್ನು ಒಂದೇ ಸಲ ಓದಿ ಒಟ್ಟಂದದ ಪರಿಣಾಮದ ಕಾವು ಆರುವ ಮೊದಲು ಅವುಗಳ ಕುರಿತು ಬರೆಯುವದು ಸೂಕ್ತವೆಂದುಕೊಂಡು ಇಡಿಯಾಗಿ ಓದುವ ಕಾಲಾವಕಾಶಕ್ಕಾಗಿ ಸುಮಾರು ಒಂದು ವರ್ಷದಿಂದ ಈ ಸಂಕಲನವನ್ನು ಟೇಬಲ್ ಮೇಲೆ ಕಾಯಿಸಿದ್ದೇನೆ. ನನ್ನ ಕುತೂಹಲಕ್ಕಾಗಿ ಮೊದಲು 'ಪುಟ್ಟ ಪಾದದ ಗುರುತು' ಕಥೆಯನ್ನೇ ಓದಿದೆ. ಅಂಚಕ್ಕನ ಪಾತ್ರ ಹಂಸದಂತೆ ತೇಲಿ ಸದಾ ನನ್ನೊಳಗೆ ನೆನಪಾಗಿ ಉಳಿವ ಬಿಳಿ ರೆಕ್ಕೆಯಾಯಿತು. ಆ ಕಥೆಯ ಎಲ್ಲ ವಿವರಗಳು ಮುಖ್ಯ ಅನುಭವವೊಂದಕ್ಕೆ ಪೂರಕವಾಗುತ್ತ ಮಾತುಗಳ ಹಿಂದಿನ ಮನಸ್ಸುಗಳನ್ನು, ಮನಸ್ಸುಗಳ ಹಿಂದಿನ ಮೌನವನ್ನು ಜೀವಂತ ಸನ್ನಿವೇಶಗಳ ಆವರಣದಲ್ಲಿ ಪಾರದರ್ಶಕವಾಗಿ ಅಡಗಿಸಿವೆ. ಮಗ, ಸೊಸೆ, ಮೊಮ್ಮಗಳೊಂದಿಗೆ ಕೂಡ ಅಸಮಾಧಾನಗೊಂಡ ಅಂಚಕ್ಕನ ಮನಸ್ಥಿತಿ, ದೇಹಸ್ಥಿತಿಗಳ ತಳಮಳಗಳನ್ನು ಅಳಿಸಿಬಿಡುವ ಬಾಲ್ಯದೊಂದಿಗಿನ ಸೇತುವೆ ಇಂದಿನ ಬಹಳಷ್ಟು ಬದುಕುಗಳ ದುರವಸ್ಥೆ ಹಾಗೂ ಅವುಗಳ ಆಂತರಿಕ ಶಮನಕ್ಕೆ ಅಗತ್ಯವಿರುವ ಸರಳ ಸಂಗತಿಗಳಿಗೆ ರೂಪಕಾತ್ಮಕ ಪ್ರತಿಫಲನ ಈ ಕಥೆಯಲ್ಲಿದೆ. ಈ ಯಶಸ್ಸು ಬೇರೆ ಕಥೆಗಳಲ್ಲಿ ಭಿನ್ನ ಪ್ರಮಾಣದಲ್ಲಿ ಸಾಧಿಸಿದೆ.

ಟ್ರಂಕಿನಲ್ಲಿ ಮಗು ಸಿಕ್ಕಿಕೊಳ್ಳುವುದು 'ಮಗು ಚಿತ್ರ ಬರೆಯಿತು' ಕಥೆಯ ಜೀವಾಳ. ಮುಗ್ಧತೆ, ಸರಳತನಗಳು ಇಂದಿನ ನಾಗರಿಕ ಪರಿಸರದಲ್ಲಿ ಉಸಿರುಗಟ್ಟುವ ಸ್ಥಿತಿ ತಲುಪಿರುವುದನ್ನು ಅತ್ಯಂತ ಸಹಜವಾಗಿ ಇದು ಧ್ವನಿಸುತ್ತದೆ. ಟ್ರಂಕಿನ ಬದಲಾಗಿ ಕಪಾಟು ಬರುವುದು ಕೃತಕವೆನಿಸಿ ಟ್ರಂಕಿನೊಳಗೆ ಸಿಕ್ಕಿಹಾಕಿಕೊಂಡ ಮಗುವಿನ ರೂಪಕ ಬೆಳೆಯದೆ ಕಥೆಯ ಸಾಧ್ಯತೆ ಮುರುಟಿ ಹೋದಂತಿದೆ. ಎಲ್ಲವೂ ಸುಖಾಂತ್ಯಗೊಂಡಾಗ ಅಲ್ಲಿ ಅಳು ಅಪ್ರಸ್ತುತ. ಮಗುವಿನ ತೀರ್ಥಪ್ರೋಕ್ಷಣೆ ಕಪಾಟೇ ನಿಂತು ಕಣ್ಣೀರಿಡುತ್ತಿದ್ದಂತೆ ಎಂದು ಹೇಳುವಲ್ಲಿ, ಕಪಾಟಿಗೆ ಜೀವ ತುಂಬುವ ಅವಸರದಲ್ಲಿ ಕಥಾ ಸನ್ನಿವೇಶದ ಜೀವವನ್ನೆ ಕಳೆದಂತಿದೆ. ಆದ್ದರಿಂದ ಸೂಕ್ಷ್ಮ ಸಂಗತಿಗಳನ್ನು ಗಮನಿಸುವ ಹರಿತ ದೃಷ್ಟಿಯ ಜತೆಗೆ ಸಣ್ಣ ಸಂಗತಿಯನ್ನೂ ಔಚಿತ್ಯಪೂರ್ಣವಾಗಿ ಬಳಸುವ ಒಳ ಎಚ್ಚರದ ಅಗತ್ಯವೂ ಅಷ್ಟೇ ಮಹತ್ವದ್ದಲ್ಲವೇ? ಇದೇ ರೀತಿ ಸಶಕ್ತ ಕಥಾ ಬೀಜವನ್ನೊಳಗೊಂಡೂ ಫಲವತ್ತಾದ ಪರಿಕರಗಳನ್ನೊಳಗೊಂಡೂ ನಿರೀಕ್ಷಿತ ಯಶಸ್ಸು ಪಡೆಯದ ಇನ್ನೊಂದು ಕಥೆ 'ಕಿಚನ್ ಪ್ಯಾರಾಡೈಸ್'. ಇಲ್ಲಿನ ವಿವರಗಳು ಇವರ ಇತರ ಕಥೆಗಳಲ್ಲಿಯಂತೆಯೇ ತಮ್ಮಷ್ಟಕ್ಕೇ ಸುಂದರವೆನಿಸಿದರೂ ಅವು ಅಗತ್ಯಕ್ಕಿಂತ ಹೆಚ್ಚಾದಂತೆನಿಸಿ ಕಥೆಯ ಒಟ್ಟೂ ಆಶಯವನ್ನು ತೆಳುವಾಗಿಸುತ್ತವೆ. ಒಮ್ಮೊಮ್ಮೆ ಬಾಲಿಶವೆನಿಸುವಷ್ಟು ವಿವರಗಳು ಇಡಿಕಿರಿದು ಬಿಡುತ್ತವೆ. ಹೀಗಾಗಿ ಖಾಲಿತನ, ವಿಷಾದಗಳ ತೀವ್ರತೆಯನ್ನು ಅನುಭೂತಗೊಳಿಸಬೇಕಾದ ಕಥೆ ಮಕ್ಕಳಾಟದಲ್ಲಿ ಮುಳುಗಿಸಿಬಿಡುವ ಸರಳೀಕರಣವಾಗಿಬಿಡುತ್ತದೆ. ನಿರ್ವಾತಕ್ಕಿಂತ ವಾತ ಬೆಳೆಯುತ್ತದೆ.

'ನಕ್ಷತ್ರದ ಬೆಳಕ ಹಿಡಿದು...' ನಾನು ಮೆಚ್ಚಿಕೊಂಡ ಇನ್ನೊಂದು ಕಥೆ. ಅಪಘಾತಕ್ಕೆ ಸಿಕ್ಕಿಕೊಳ್ಳುವ ನಾಯಿಮರಿಯ ಸುತ್ತ ತನ್ನ ಪದರುಗಳನ್ನು ಬಿಡಿಸಿಡುವ ಈ ಕಥೆ ಎಲ್ಲೂ ಸರಳ ತೀರ್ಮಾನಗಳ ವಾಚ್ಯತೆಗೆ

ಇಳಿಯದೆ ತನ್ನ ಅನುಕ್ತ ನೆಲೆಗಳಲ್ಲಿ ಹಿಡಿದು ನಿಲ್ಲಿಸುತ್ತದೆ. 'ಪ್ರಕೃತಿ ಧಾವಂತ'ದಲ್ಲಿ ಧಾವಂತವಿಲ್ಲದ ಸಂಯಮದ ನಿರೂಪಣೆಯಿದೆ. ಆದರೆ ಕಥಾ ಕೌತುಕದ ಯಾವ ಸನ್ನಿವೇಶಗಳೇ ಇರದ ಕೇವಲ ಹದಿವಯಕ್ಕೆ ಹಾಲಿಡುತ್ತಿರುವ ಹೆಣ್ಣುಮಗಳೊಬ್ಬಳ 'ಋತು' ಕುರಿತಾಗ ಬೆರಗಿನಲ್ಲಿ ಕಥೆ ಮುಗಿದುಬಿಟ್ಟಿದೆ. 'ವಶ' ಕೂಡ ಇಂಥದೆ ಒಂದು ಸಾಮಾನ್ಯ ರಚನೆ. ಇಲ್ಲೆಲ್ಲ ಸಾಮಾನ್ಯ ಸಂಗತಿಗಳನ್ನೂ ಆಪ್ತಗೊಳಿಸುವ ಕಥನ ಕೌಶಲ ಬೆರಗುಗೊಳಿಸುವಷ್ಟಿದೆ ಎಂಬುದನ್ನೂ ಮರೆಯಲಾಗದು. ಒಂದು ಜೀವಂತ ಪರಿಸರವನ್ನವರು ಅತ್ಯಂತ ಸಹಜವಾಗಿ ನಿರ್ಮಿಸಬಲ್ಲರು. ಆ ಪರಿಸರದ ಭಾಗವಾಗಿ ಪಾತ್ರಗಳಿಗೆ ಜೀವ ತುಂಬುವಲ್ಲಿ, ಸಂಘರ್ಷದ ವಿಭಿನ್ನ ಮಗ್ಗುಲಗಳನ್ನು ಪಾತ್ರಗಳ ಮೂಲಕವೆ ದೀಪ್ತಗೊಳಿಸುವಲ್ಲಿ ಯಶಸ್ಸು ಕೆಲವು ಕಥೆಗಳಿಗೇ ಸೀಮಿತ.

'ಬಣ್ಣದ ಕೌದಿ', 'ನೋ ಎಂಟ್ರಿ'ಯಂಥ ಕಥೆಗಳಲ್ಲಿ ಪಾತ್ರಗಳು ಶಕ್ತಿಯುತವಾಗಿ (ವೇದಾ, ಗಿರಿ) ವಸ್ತು ಏಕಮುಖವಾಗಿಬಿಡುತ್ತದೆ. ಗ್ಲಾಸ್ ಹೌಸ್, ಕಂದಿಲು ಕಥೆಗಳಲ್ಲಿ ಇದನ್ನು ಮೀರುವ ಯತ್ನ ಇದೆಯಾದರೂ ಅವರ ಪೂರ್ಣಪ್ರಮಾಣದ ಯಶಸ್ವಿ ಕಥೆಯಾಗಿ 'ಪುಟ್ಟ ಪಾದದ ಗುರುತು' ಕಥೆಯನ್ನೂ ಮೀರಿ ನನಗೆ ತೋರಿದ್ದು 'ಗುಬ್ಬಿ ಗೂಡು'. ಅದಕ್ಕಿರುವ ಇಂದಿನ ಜ್ವಲಂತ ಪ್ರಸ್ತುತತೆ ಹಾಗೂ ಮಾನವೀಯ ನೆಲೆಗಳ ಶೋಧ ಕಥೆಗಾರ್ತಿಯ ಬಗೆಗೆ ಹೆಚ್ಚಿನ ನಿರೀಕ್ಷೆ ಹುಟ್ಟಿಸುತ್ತವೆ. ಹಿಂದೂ-ಮುಸ್ಲಿಮ್ ಸಂಬಂಧಗಳ ಕುರಿತ ವಸ್ತು ಚರ್ವಿತ ಚರ್ವಣ ಎನಿಸುವಷ್ಟು ಹಾಳತವಾಗಿದ್ದರೂ ಅದನ್ನು ಅಕೃತ್ರಿಮವಾಗಿ ನಿರ್ವಹಿಸುವ ರೀತಿ ಹಾಗೂ ಕಥೆಯಲ್ಲಿ ಉಂಟುಮಾಡಿರುವ ನಿರಂತರ ಸಂಚಲನ ಕಥೆಗಾರ್ತಿಯ ಜೀವಶಕ್ತಿ.

ಮೊದಲ ಓದಿನ ಆ ಕ್ಷಣಕ್ಕೆ ದಕ್ಕಿದ್ದನ್ನು ಇಲ್ಲಿ ದಾಖಲಿಸಿರುವೆ. ಇದಕ್ಕಿಂತ ಭಿನ್ನ ಓದು, ಗ್ರಹಿಕೆಗಳು ಇರಬಹುದು ಎಂಬ ಅನುಮಾನವೂ ನನಗಿದೆ. ಸುನಂದಾ ಅವರು ನಮ್ಮ ಮಹತ್ವದ ಲೇಖಕಿಯಾಗಿ ರೂಪುಗೊಳ್ಳಲಿ ಎಂಬ ಹಾರೈಕೆಯಿಂದ ಅವರ ಶಕ್ತಿ-ಮಿತಿಗಳೆರಡನ್ನು ಗುರುತಿಸುವ ಪ್ರಯತ್ನ ಇಲ್ಲಿದೆ.

– ಬಸವರಾಜ ಪಕ್ಕುಂದ, ಮಾಲತೇಶ ಬಿಲ್ಡಿಂಗ್, # ೩೨, ೧ನೇ ಕ್ರಾಸ್, ಕೆಲಗೇರಿ ರಸ್ತೆ, ಕುಸುಮನಗರ, ಧಾರವಾಡ - ೫೮೦ ೦೦೭

೧೫. ಕಪ್ಪು ಕಾಗೆಯ ಹಾಡು : ಪ್ರಮು. ೨೦೦೦, ಪು. ೫೬, ರೂ. ೨೫/- ಮತ್ತು

೧೬. ಗುಡುಗುಡು ಗುಮ್ಮಟ ದೇವರು : ಮೂರ್ತಿ ದೇರಾಜೆ

ಸಮನ್ವಯ ಪ್ರಕಾಶನ, ಆರಾಧನಾ, ವಿಟ್ಲ (ದ.ಕ.)-೫೭೪ ೨೪೩, ಪ್ರಮು. ೨೦೦೪, ಪು. ೬೪, ರೂ. ೫೦/-

ವಿಶ್ವವಿಖ್ಯಾತ ಚಿತ್ರಕಾರ ಪಾಬ್ಲೊ ಪಿಕಾಸೊ ತಾನು ನಲವತ್ತು ವರ್ಷಗಳಿಂದ ಮಕ್ಕಳಂತೆ ಚಿತ್ರಿಸಲು ಪ್ರಯತ್ನಿಸುತ್ತಿದ್ದೇನೆ ಎಂದೊಮ್ಮೆ ಹೇಳಿಕೊಂಡಿದ್ದಾನೆ. ನಾವೆಲ್ಲ ಒಂದಲ್ಲ ಒಂದು ಸಂದರ್ಭದಲ್ಲಿ ಮಕ್ಕಳಂತಿರಲು ಬಯಸಿದವರೋ ಹಂಬಲಿಸಿದವರೋ ಆಗಿಯೇ ಇದ್ದೇವೆ. ನಮ್ಮ ನಡುವಿನ ರಂಗನಿರ್ದೇಶಕ ಮೂರ್ತಿ ದೇರಾಜೆ ಕಳೆದ ನಲವತ್ತಕ್ಕಿಂತ ಹೆಚ್ಚು ವರ್ಷಗಳಿಂದ (ಅವರಿಗೀಗ ೫೦+) ಮಕ್ಕಳೊಂದಿಗೆ ಮಗುವಾಗಿಯೇ ಇದ್ದಾರೆ. ಮಕ್ಕಳೊಂದಿಗೆ ನಿರಂತರ ರಂಗದಲ್ಲಿ ಆಟವಾಡುತ್ತ ಬಂದಿರುವ ಮೂರ್ತಿ ದೇರಾಜೆಯವರ ನಾಟಕಗಳು ಹಲವು, ಆದರೆ ಈಗ ಪ್ರಕಟಗೊಂಡ ನಾಟಕ ಎರಡು– 'ಕಪ್ಪು ಕಾಗೆಯ ಹಾಡು' ಮತ್ತು 'ಗುಡುಗುಡು ಗುಮ್ಮಟ ದೇವರು'. ಇವೆರಡೂ ರಂಗಾಯಣದ ಚಿಣ್ಣರ ಮೇಳಗಳಲ್ಲಿ ಚಿಣ್ಣರಿಂದ ರೂಪ ಪಡೆದು ಲಿಖಿತಗೊಂಡಂಥವು. ಮೂರ್ತಿಯವರ ವಿಧಾನವೇ ಹಾಗೆ– ಅವರು ನಾಟಕ ರಚನೆ ಮಾಡಿ ಮಕ್ಕಳಿಂದ ಆಡಿಸುವುದಿಲ್ಲ, ತಾನು ಹಿಂದೆ ನಿಂತು ಮಕ್ಕಳಿಂದ ಅವರದ್ದೇ ಆದ ನಾಟಕ ಮಾಡಿಸಿಬಿಡುತ್ತಾರೆ.

ಕಪ್ಪು ಕಾಗೆಯ ಹಾಡು ಉತ್ತರ ಭಾರತದ ಜಾನಪದ ಕತೆಯೊಂದರ ಎಳೆಯನ್ನು ಹಿಡಿದು ಮೂಡಿಬಂದಿದೆ. ಇದು ಹಲವು ಪ್ರಯೋಗಗಳನ್ನು ಕಂಡಿದೆ. ಹೆಸರೇ ಹೇಳುವಂತೆ ಇದು ಕಾಗೆಯ ಕತೆ.

ಬರೀ ಕಾಗೆಯ ಕತೆಯಲ್ಲ, ಕಪ್ಪು ಕಾಗೆಯ ಕತೆ. ಶಕ್ತಿಯ, ಫಲವತ್ತತೆಯ ಸಂಕೇತವೂ ಆಗಿರುವ ಕಪ್ಪು ಬಣ್ಣ ಮನುಷ್ಯರಲ್ಲಿ ತಿರಸ್ಕಾರಕ್ಕೆ, ಕೊಳಕಿಗೆ ಮತ್ತು ತಾರತಮ್ಯಕ್ಕೆ ಸಂಕೇತವಾಗಿಬಿಟ್ಟಿರುವುದು ಇತಿಹಾಸ. ತನ್ನ ಕಪ್ಪು ಬಣ್ಣವೇ ಮುಖ್ಯ ಕಾರಣವಾಗಿ ತಿರಸ್ಕಾರಕ್ಕೊಳಗಾಗಿರುವ ಕಾಗೆ ತನ್ನೆಲ್ಲ ಶ್ರಮ ಪ್ರಯತ್ನಗಳ ನಂತರವೂ ಇತರ ಹಕ್ಕಿಗಳಿಂದ ತಿರಸ್ಕಾರಕ್ಕೊಳಗಾಗಿ ಸೋತು ಬಸವಳಿದು ಬಿದ್ದು, ಕೊನೆಗೆ ಪುಟ್ಟ ಹಕ್ಕಿಗಳ ಕರುಣೆಯಿಂದ ಆಹಾರ ಪಡೆಯುವುದು, ನಂತರ ಉಳಿದ ಹಕ್ಕಿಗಳಿಗೂ ಮನಃ ಪರಿವರ್ತನೆಯಾಗಿ ಕಾಗೆಯನ್ನು ತಮ್ಮೊಂದಿಗೆ ಸ್ವೀಕರಿಸುವ ಸೂಚನೆಯೊಂದಿಗೆ ನಾಟಕ ಮುಗಿಯುತ್ತದೆ.

ನಾಟಕ ಕೊನೆಗೊಳ್ಳುವ ರೀತಿಯ ಬಗೆಗಿನ ತಾತ್ವಿಕ ನಿಲುವುಗಳನ್ನು ಈಗಾಗಲೇ ಕೆಲವರು ಪ್ರಶ್ನಿಸಿದ್ದಾರೆ. ಕಾಗೆ ಇತರರ ಕರುಣೆಯನ್ನೇ ಅವಲಂಬಿಸಬೇಕೇ? ಎಂಬ ಪ್ರಶ್ನೆಗೆ ನಾಟಕದಲ್ಲಿ ಉತ್ತರವಿಲ್ಲ. ಬಹುಶಃ ಅದು ನಾಟಕಕಾರರ ಉದ್ದೇಶವೂ ಅಲ್ಲ. ಪುಸ್ತಕದ ಮುನ್ನುಡಿಯಲ್ಲಿ ಸಿ. ಬಸವಲಿಂಗಯ್ಯನವರು ಹೇಳಿದಂತೆ ಭೇದ ಭಾವಗಳು 'ಎಳೆಯ ಮನಸ್ಸಿಗೆ ಬೇರು ಬಿಡದಂತೆ ಆರಂಭದಲ್ಲೇ ತಿಳಿಹೇಳುವ' ಅಗತ್ಯ ಮೂರ್ತಿಯವರಿಗೆ ಮುಖ್ಯವಾಗಿ ಕಂಡಿರಬಹುದು. ಕೃತಿಯಲ್ಲಿ ತಾತ್ವಿಕತೆ-ತಾರ್ಕಿಕತೆಗಳ ಕೊರತೆ ಕಂಡರೂ ರಂಗದಲ್ಲಿ ನಿರ್ದೇಶಕ ಮೂರ್ತಿ ದೇರಾಜೆ ಈ ಕೊರತೆಗಳನ್ನು ಮೀರಿ ನಾಟಕವನ್ನು ಕಟ್ಟಿಕೊಡುತ್ತಾರೆ. ಇದು ಅವರ ಶಕ್ತಿ ಕೂಡಾ, ಈ ಕಾರಣಕ್ಕಾಗಿಯೇ ಕಪ್ಪು ಕಾಗೆಯ ಹಾಡು ಅತಿ ಹೆಚ್ಚು ಕಡೆಗಳಲ್ಲಿ ಪ್ರಯೋಗವಾಗುತ್ತಿರುವ ಕೃತಿ.

'ಗುಡುಗುಡು ಗುಮ್ಮಟ ದೇವರು'. ಪಂಜೆ ಮಂಗೇಶರಾಯರ ಅದೇ ಹೆಸರಿನ ಕತೆಯಿಂದ ಆಧಾರಿತವಾಗಿದೆ. 'ಮಿಕ್ಕಿ' ಕುರಿಮರಿ ಕಾಡಿನ ಅಜ್ಜಿ ಮನೆಗೆ ಹೊರಡುವುದು. ದಾರಿಯಲ್ಲಿ ಕಾಡಿನ ಪ್ರಾಣಿಗಳೆಲ್ಲ ಒಂದೊಂದಾಗಿ ಮಿಕ್ಕಿಯನ್ನು ಅಡ್ಡಗಟ್ಟಿ ತಿನ್ನಲು ಬರುವುದು. ಮಿಕ್ಕಿ ಅವುಗಳನ್ನು ಮಾತಿನಿಂದ ಮರುಳು ಮಾಡಿ ತಿಂಡಿ ಕೊಟ್ಟು ತಪ್ಪಿಸಿಕೊಂಡು ಅಜ್ಜಿ ಮನೆ ತಲುಪುವುದು. ಹಿಂದಿರುಗಿ ಹೊರಟಾಗ ಮಿಕ್ಕಿಯನ್ನು ಅಜ್ಜಿ ಒಂದು ಡೋಲಿನೊಳಗೆ ಕೂರಿಸಿ ಗಾಳಿ ರಾಯರ ಸಹಾಯದಿಂದ ಕಳುಹಿಸಿಕೊಡುವುದು. ಹೀಗೇ ಡೋಲಿನೊಳಗೆ ಕುಳಿತು ಮಿಕ್ಕಿ 'ಗುಡುಗುಡು ಗುಮ್ಮಟ ದೇವರಾಗಿ' ಪ್ರಾಣಿಗಳಿಗೆ ಚಳ್ಳೆಹಣ್ಣು ತಿನ್ನಿಸಿ ಊರಿಗೆ ಮರಳುವುದು ನಾಟಕದ ಕತೆ.

ಮಕ್ಕಳಿಗೆ ಇಷ್ಟವಾಗುವ ಕಾಡು, ಪ್ರಾಣಿಗಳು, ಚಿಟ್ಟೆಗಳು, ಅಜ್ಜಿ ಇತ್ಯಾದಿ ಪಾತ್ರಗಳ ಜೊತೆಯಲ್ಲಿ ರಂಗುರಂಗಿನ ಫ್ಯಾಂಟಸಿ ಲೋಕದಲ್ಲಿ ನಡೆಯುವ ನಾಟಕವಿದು. ಮೂರ್ತಿಯವರ ನಾಟಕ ಕೃತಿ– ಉದ್ದಕ್ಕೂ ಗೇಯತೆಯಿಂದ ಕೂಡಿದ್ದು, ಮಾತುಗಳಿಗೆ ಒಂದು ರೀತಿಯ ಲಯ ಮತ್ತು ಚಲನೆ ತನ್ನಿಂತಾನೇ ಲಭ್ಯವಾಗಿದೆ. ಈ ದೃಷ್ಟಿಯಿಂದ 'ಕಪ್ಪು ಕಾಗೆಯ ಹಾಡಿ'ಗಿಂತ 'ಗುಡುಗುಡು ಗುಮ್ಮಟ ದೇವರು' ರಂಗದ ಮೇಲೆ ಹೆಚ್ಚು ಪರಿಣಾಮಕಾರಿಯಾಗಬಲ್ಲದು.

ಮಕ್ಕಳಿಗೆ ಇಷ್ಟವಾಗುವ ಅಜ್ಜಿ ಕತೆಯೊಂದನ್ನು ಹೇಳುತ್ತಲೇ, ಮಕ್ಕಳ ಸಹಜ ಮನೋವಿಕಾಸಕ್ಕೆ ಯಾವುದೇ ಸೂತ್ರದ ಕಟ್ಟುಪಾಡು ಇರಬಾರದೆಂಬ, ಸರಳ, ಆದರೆ ನಾವೆಲ್ಲ ಅನೇಕ ವೇಳೆ ಮರೆತುಬಿಡುವ ಸತ್ಯವನ್ನು ಮೂರ್ತಿ, ತಮ್ಮ ನಾಟಕ-ರಂಗಕೃತಿ ಮೂಲಕವೇ ನಮ್ಮ ಮುಂದಿಟ್ಟುಬಿಡುತ್ತಾರೆ. ಸೂತ್ರ ಹರಿದು ಸ್ವತಂತ್ರರಾಗುವ ಮಕ್ಕಳು ತಾವೇ ಒಳ್ಳೆಯ ರಂಗಕೃತಿಯನ್ನು ಕಟ್ಟುತ್ತಾ ಹೋಗುವುದು. ಆ ಮೂಲಕವೇ ಮಕ್ಕಳಿಗೆ ಸೂತ್ರದ ಅಗತ್ಯವಿಲ್ಲವೆಂದು ಸೂತ್ರಧಾರನಿಗೆ ಅರಿವಾಗುವುದು. ಇದು ನಾಟಕ ಕೃತಿಯಲ್ಲಿ ಮಾತ್ರವಲ್ಲ ರಂಗಾಯಣದಲ್ಲಿ ಪ್ರಸ್ತುತಪಡಿಸಿದ ರಂಗಕೃತಿಯಲ್ಲೂ ಸಮರ್ಥವಾಗಿ ಬಿಂಬಿತವಾಯಿತು.

ಮೊದಲನೆಯ ನಾಟಕ 'ಕಪ್ಪು ಕಾಗೆಯ ಹಾಡು' ಎಲ್ಲೋ ಒಂದು ಕಡೆ ಸಂದೇಶವೊಂದನ್ನು ನೀಡುವ ಉದ್ದೇಶವನ್ನು ತೋರುತ್ತಾ ಬೆಳೆದು, ಆ ಸಂದೇಶ ಸ್ಪಷ್ಟತೆಯನ್ನು ಪಡೆದುಕೊಳ್ಳದೆ ಮಕ್ಕಳಲ್ಲಿ ಭೇದಭಾವ ತೋರಬಾರದೆಂಬ ಭಾವನೆಯನ್ನು ಮೂಡಿಸುವ ಪ್ರಯತ್ನವಾಗಿ ಮಾರ್ಪಟ್ಟರೆ, 'ಗುಡುಗುಡು ಗುಮ್ಮಟ

ದೇವರು' ಮಕ್ಕಳನ್ನು - ದೊಡ್ಡವರು ತಮ್ಮ ನಿಲುವು, ಧೋರಣೆ, ಅಭಿಪ್ರಾಯಗಳ ಸೂತ್ರದಲ್ಲಿ ಬಂಧಿಸದೆ ಇದ್ದರೆ, ಮಕ್ಕಳಿಗೆ ಯಾವ ಸಂದೇಶದ ಅಗತ್ಯವೂ ಇಲ್ಲದೆ ನಾವು ಅವರಿಗೆ `ತಿಳಿಹೇಳಬೇಕೆಂದಿರುವ' ಸಮಾನತೆ, ಸಹಬಾಳ್ವೆಯ ಗುಣಗಳನ್ನು ಅವರು ಸಹಜವಾಗಿಯೇ ಹೊಂದಿರುತ್ತಾರೆಂಬುದನ್ನು ನಿರೂಪಿಸುತ್ತದೆ.

ರಂಗಾಸಕ್ತರು ಮೂರ್ತಿಯವರ ಈ ಎರಡೂ ನಾಟಕಗಳನ್ನು ಒಟ್ಟಿಗೆ ಸರಣಿಯಲ್ಲಿ ಮೂಡಿಸುವುದು ಹೆಚ್ಚು ಸೂಕ್ತ. ಮೂರ್ತಿ ಮಕ್ಕಳಿಂದ ಮಾಡಿಸಿದ ಎಲ್ಲಾ ನಾಟಕಗಳು ಪುಸ್ತಕಕ್ಕಿಳಿದಾಗ ಮಕ್ಕಳ ರಂಗಭೂಮಿಗೆ ಅವರ ಕೊಡುಗೆಯ ಸಮಗ್ರ ಪರಿಚಯ ಮತ್ತು ಮಕ್ಕಳ ರಂಗಭೂಮಿಯ ಹೊಸ ಸಾಧ್ಯತೆಗಳ ಅನಾವರಣ ಎರಡೂ ಸಾಧ್ಯ.

– ಪ್ರಸಾದ್ ರಕ್ಷಿದಿ, ಅಂಚೆ : ಕ್ಯಾಮನಹಳ್ಳಿ, ಸಕಲೇಶಪುರ- ೫೭೩ ೧೩೪ (ಹಾಸನ)

ಸಂಕಲನ : ಅನಿಸಿಕೆ

೧. ಈವತ್ತು (೨೨.೧೧.೦೬) ಹೊಸ ಸಂಕಲನ ಸಿಕ್ಕಿತು. ಮೊದಲು 'ಕಡೀಪುಟ' ಓದಿದೆ. ಅದರ ಆಪ್ತ ಗದ್ಯವು ನನ್ನನ್ನು ಸೆಳೆಯಿತು. ಹಾಗೆಯೇ ಪುಟ ತಿರುಗಿಸುತ್ತ ಇಡೀ ಸಂಚಿಕೆಯನ್ನೇ ಒಂದು ಪಟ್ಟಿಗೆ ಓದಿ ಮುಗಿಸಿದೆ. ಈ ಸಂಚಿಕೆಯ ಹದ ಬಹಳ ಚೆನ್ನಾಗಿದೆ. ನಾನೂ ಒಬ್ಬ ಸಂಪಾದಕನಾಗಿರುವುದರಿಂದ ಇದನ್ನು ಸಾಧಿಸುವ ಕಷ್ಟ ಗೊತ್ತಿದೆ. ಕೇವಲ ಅದೃಷ್ಟದಿಂದ ಇದು ಸಾಧ್ಯವಾಗುವ ಮಾತಲ್ಲ. ಬಹಳಷ್ಟು ಪ್ರಯತ್ನ (ಮತ್ತು ಒಂದಿಷ್ಟು ಅದೃಷ್ಟವೂ) ಬೇಕಾಗುತ್ತದೆ. ಇದು ನಿಮಗೆ ಒದಗಿ ಬಂದಿರುವುದು ಇಲ್ಲಿ ಕಾಣುತ್ತದೆ.

ಒಮ್ಮೆ ಕಣ್ಣು ಹಾಯಿಸಿದರೆ ಓದಬೇಕು ಅನಿಸುವಂಥ ಲೇಖನಗಳು ಈ ಸಂಚಿಕೆಯಲ್ಲಿ ಇವೆ. ಪ್ರತಿ ಲೇಖನವೂ (ಉಷಾ ರೈ, ತಾರಿಣಿ, ವಸಂತ ಕವಲಿ, ಭರಣ್ಯ, ಹುದೆಂಗಜೆ) ಮನಸ್ಸಿನ ವಿಭಿನ್ನ ಸ್ತರಗಳನ್ನು ತಾಕುತ್ತವೆ. ಹಾಗಾಗಿ ಇಡೀ ಸಂಚಿಕೆಯನ್ನು ಒಟ್ಟಿಗೇ ಓದಿದರೂ ಹೊರೆಯೆನಿಸುವುದಿಲ್ಲ. ಪುಸ್ತಕ ಪರಿಶೀಲನೆ ಮತ್ತು ವಿಮರ್ಶೆಯನ್ನು ನೀವು ಸತತವಾಗಿ ಮಾಡುತ್ತಿದ್ದೀರಿ. ಇದು ಮಹತ್ವದ ಕೆಲಸ. ಇಂಥ ಒಳ್ಳೆಯ ಸಂಚಿಕೆಗಾಗಿ ನಿಮಗೆ ಕೃತಜ್ಞತೆಗಳು ಮತ್ತು ಅಭಿನಂದನೆಗಳು.

– ವಿವೇಕ ಶಾನಭಾಗ, ಬೆಂಗಳೂರು

೨. ಸಂಕಲನದಲ್ಲಿ ಪ್ರಕಟವಾಗುತ್ತಿರುವ 'ನನ್ನ ಅವ್ವ ನನ್ನ ಅಪ್ಪ' ಹಾಗೂ 'ನನ್ನ ಶಾಲಾ ಗುರುಗಳು' ಮಾಲಿಕೆಯ ಒಂದೊಂದು ಲೇಖನವೂ ನಮ್ಮ ಬದುಕಿಗೆ ಮತ್ತು ಸಂಸ್ಕೃತಿಗೆ ಸಲ್ಲುತ್ತಿರುವ ಹೊಸ ಕೊಡುಗೆಗಳು. ಈಚೆಗೆ ಒಂದು ದೂರದರ್ಶನದವರೂ ಸಹ ಇದನ್ನು ಅನುಕರಿಸಿ, ಅನುಸರಿಸಿ ಇಂಥ ಕಾರ್ಯಕ್ರಮ ಆರಂಭಿಸುತ್ತಿರುವುದೂ ಸಂಕಲನಕ್ಕೇ ಸಲ್ಲುವ ಹೆಗ್ಗಳಿಕೆ. ನಮ್ಮ ಮಾನವೀಯ ಮೌಲ್ಯಗಳನ್ನು ನಿರಂತರ ನೆನಪಿಸುವ ಈ ಲೇಖನಗಳು ಅಮೂಲ್ಯವಾಗಿವೆ. ಇತ್ತೀಚಿನ ದಿನಗಳಲ್ಲಿ ಇಂಥ ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವ, ಅದರಿಂದಾಗಿ ಕ್ಷೀಣಿಸುತ್ತಿರುವ ನಮ್ಮ ಸಮಾಜವನ್ನು ಮತ್ತೆ ಕಟ್ಟುವ ಪ್ರೇರಣೆ ಮತ್ತು ಪ್ರೋತ್ಸಾಹವನ್ನು ಇಂಥ ಲೇಖನಗಳು ನೀಡುತ್ತವೆ. ಇದಕ್ಕಾಗಿ ಸಂಕಲನಕ್ಕೆ ಅಭಿನಂದನೆಗಳು.

ಡಾ. ಷ. ಶೆಟ್ಟರ್ ಅವರ 'ಕವಿರಾಜಮಾರ್ಗ' ಲೇಖನಗಳಂತೂ ಕನ್ನಡ ಸಾಹಿತ್ಯ, ವಿಮರ್ಶೆ, ಇತಿಹಾಸ ಮತ್ತು ಸಂಶೋಧನ ಕ್ಷೇತ್ರಕ್ಕೆ ಸಂಕಲನ ನೀಡಿದ ಅದ್ಭುತ ಕೊಡುಗೆ. ಈ ಲೇಖನಗಳೆಲ್ಲ ಪುಸ್ತಕರೂಪದಲ್ಲಿ ಬಂದಾಗ ಖಂಡಿತವಾಗಿಯೂ ಅದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಸಲ್ಲಲೇಬೇಕು, ಸಲ್ಲುತ್ತದೆ ಎಂದು ಈಗಲೇ ಖಂಡಿತವಾಗಿ ಹೇಳಬಹುದೆನಿಸುತ್ತದೆ.

– ಶಿವಶಂಕರ ಹಿರೇಮಠ, ಧಾರವಾಡ

೩. **ಸಂಕ್ರಮಣ**ದ ಸಾಹಸದ ನಂತರ ಸಿದ್ಧಲಿಂಗ ಪಟ್ಟಣಶೆಟ್ಟಿಯವರು ಅಷ್ಟೇ ಮಹತ್ವದ **ಸಂಕಲನ**ವನ್ನು ನಿಯಮಿತವಾಗಿ ಪ್ರಕಟಿಸುತ್ತಿರುವುದು ನನಗೆ ಸಂತೋಷ ಕೊಟ್ಟಿದೆ. ಈಗ ಅವರ ಜೊತೆಗೆ ಕವಿ ಎಂದು ಒಳ್ಳೆಯ ಹೆಸರು ಮಾಡಿದ ಹೇಮಾ ಇದ್ದಾರೆ. ಪತ್ರಿಕೆಯ ಹುಟ್ಟಿನಿಂದಲೂ ನಾನು ಅದನ್ನು ಗಮನಿಸುತ್ತ ಬಂದಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಇಂಥ ಪತ್ರಿಕೆಗಳ ಮುಖ್ಯ ಉದ್ದೇಶ ಹೊಸ ಲೇಖಕ-ಲೇಖಕಿಯರನ್ನು ಬೆಳಕಿಗೆ ತರುವುದು. ಈ ಕಾರ್ಯವನ್ನು ಗೆಳೆಯ ಲಂಕೇಶ್ ತುಂಬ ಆಸಕ್ತಿಯಿಂದ, ಯಶಸ್ವಿಯಾಗಿ ನೆರವೇರಿಸಿದರು. ಪಟ್ಟಣಶೆಟ್ಟಿ ದಂಪತಿಗಳೂ ಈ ದಿಕ್ಕಿನಲ್ಲಿ ಶ್ರದ್ಧೆಯಿಂದ ದುಡಿಯುತ್ತಿದ್ದಾರೆ. ಇದರ ಅರ್ಥ ಪ್ರಸಿದ್ಧ ಲೇಖಕರಿಗೆ ಇಲ್ಲಿ ಸ್ಥಾನವಿರಬಾರದು ಎಂದೇನೂ ಅಲ್ಲ. ಷ. ಶೆಟ್ಟರ್ ಅವರು 'ಕವಿರಾಜಮಾರ್ಗ'ವನ್ನು ಕುರಿತು ಬರೆಯುತ್ತಿರುವ ಲೇಖನಮಾಲೆ **ಸಂಕಲನ**ವನ್ನು ಎಷ್ಟು ಶ್ರೀಮಂತಗೊಳಿಸಿದೆ ಎನ್ನುವುದನ್ನು ಪತ್ರಿಕೆಯ ಓದುಗರಿಗೆ ತಿಳಿಸಿ ಹೇಳಬೇಕಾಗಿಲ್ಲ. ನಮ್ಮ ಎಲ್ಲ ಸಾಂಸ್ಕೃತಿಕ ಆಸ್ಥೆಗಳನ್ನು ಒಳಗೊಳ್ಳುವಷ್ಟು ಶಕ್ತಿಯುತವಾಗಿ ಪತ್ರಿಕೆ ಬೆಳೆಯಲಿ. **– ಡಾ. ಜಿ. ಎಸ್. ಆಮೂರ, ಧಾರವಾಡ**

೪. **ಸಂಕಲನ** ಯಥಾಪ್ರಕಾರ ಅಚ್ಚುಕಟ್ಟಾಗಿ ಸಂಪದ್ಭರಿತವಾಗಿ ಬರುತ್ತಿದೆ. ಶ್ರೇಷ್ಠತೆಯ ಮಾನದಂಡವನ್ನು ಎಷ್ಟು ನಿಷ್ಠುರವಾಗಿ ಕಾಯ್ದುಕೊಂಡಿದ್ದೀರಿ ಎಂದರೆ ನನಗಂತೂ ಅದಕ್ಕೆ ಲೇಖನ ಬರೆಯಲೂ ಭಯವಾಗುತ್ತಿದೆ. ಬರೆಯದೆ ಇರುವುದು ಕೂಡಾ ಒಂದು ರೀತಿಯ ಸಾಹಿತ್ಯಸೇವೆ ಎಂದು ನಂಬಿಕೊಂಡವನು ನಾನಾದುದರಿಂದ **ಸಂಕಲನ**ಕ್ಕೆ ಲಾಭವೇ ಆಗಿದೆ ಅಂದುಕೊಳ್ಳುತ್ತೇನೆ.

– ಶ್ರೀನಿವಾಸ ಕಾರ್ಕಳ, ಮಂಗಳೂರು

೫. **ಸಂಕಲನ** ಪತ್ರಿಕೆ ಅತ್ಯಂತ ವೈಶಿಷ್ಟ್ಯ ಹಾಗೂ ವೈವಿಧ್ಯಪೂರ್ಣವಾಗಿ ಬರುತ್ತಿದೆ. ಅದರಲ್ಲಿ ನಿಮ್ಮ ವ್ಯಕ್ತಿತ್ವವನ್ನು ಹಾಗೂ ಅದರ ಹಿರಿಮೆಯನ್ನು 'ಕಡೇಪುಟ' ಪರಿಚಯಿಸುತ್ತದೆ. ಪತ್ರಿಕೆ ನಮ್ಮದಾಗುತ್ತದೆ, ನಿಮ್ಮದಲ್ಲ! **– ಡಾ. ಜಿ. ಡಿ. ಜೋಶಿ, ಮುಂಬಯಿ**

೬. ಎಲ್ಲ ದೃಷ್ಟಿಯಿಂದಲೂ ಉತ್ತಮವೆನಿಸುತ್ತ, ಶಿಶಿರದ ಬಸಿರಿನಿಂದ ಬಂದ ಐದು ವಸಂತಗಳನ್ನು ಕಂಡ ನಮ್ಮ **ಸಂಕಲನ**ದ ಬಗ್ಗೆ ನಮಗ ಭಾಳ ಹೆಮ್ಮೆ ಅದ. ಕಾಫೀ ಸೀಮಿ ಚಿಕ್ಕಮಗಳೂರಿನ್ಯಾಗ ಕೂತ ನಮಗ 'ಒನ್ನೇಪುಟ', 'ಕಡೇಪುಟ' ಅನ್ನೋ ಬಿಳೇ ಜ್ವಾಳದ ಬಿಸಿ ಭಕ್ರಿ ಸುಳ್ಯಾಗ ಏನೇನರ ರುಚಿ ರುಚಿ ಮಜಾಗಟಾ ಇಟ್ಟು ಕಳಿಸ್ತೀರಿ. ಜಗದು ಜಗದು ತಿನ್ನಬೇಕಂತ ಅನಸ್ತದ. ಜಗದಷ್ಟೂ ರುಚಿ ಹತ್ತದ. ತಿಂದಷ್ಟೂ ಕಸು ಬರ್ತದ. **ಸಂಕಲನ-೩೦** ರಲ್ಲಿ ಪ್ರಕಟವಾದ ಸಿ. ಸೋಮಶೇಖರಯ್ಯ ನವರ 'ಗೀತೆಯಲ್ಲಿ ಪುನರ್ಜನ್ಮ : ಒಂದು ತಾತ್ವಿಕ ಜಿಜ್ಞಾಸೆ' ಮತ್ತೆಮತ್ತೆ ಓದಿಸಿಕೊಳ್ಳುತ್ತಿದೆ.

– ವಾಸಂತಿ ಪ್ರಭಾಕರ ನಾಯಕ, ಚಿಕ್ಕಮಗಳೂರು

೭. **ಸಂಕಲನ** ಚೆನ್ನಾಗಿ ಬರುತ್ತಿದೆ. ಕನ್ನಡ ಸಾಹಿತ್ಯದ ಹಲವಾರು ಮಜಲುಗಳನ್ನು ದೂರದಲ್ಲಿರುವ ನನ್ನಂಥವರಿಗೆ ತಂದು ಕೊಡುತ್ತಿದೆ. ಪತ್ರಿಕೆ ವೈವಿಧ್ಯಪೂರ್ಣವಾಗಿ ಮೂಡಿಬರುತ್ತಿದೆ. ಸಂಶೋಧನೆ. ವಿಮರ್ಶೆ ವಿಚಾರದಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ನೀವು ತೋರುತ್ತಿರುವ ಕಳಕಳಿ, ಪ್ರೀತಿಗಳು ಸ್ಪಷ್ಟ. ಗೆಟಪ್ ಇನ್ನಷ್ಟು ಸುಧಾರಿಸಲು ಸಾಧ್ಯವೆ? **– ಡಾ. ಹರಿಕೃಷ್ಣ ಭರಣ್ಯ, ಮಮರ್ಶೆ**

೮. **ಸಂಕಲನ-೩೦** ಸಾಹಿತ್ಯಾಸಕ್ತರಿಗೆ ರಸದೂಟವಾಗಿದೆ. ಬಾಲ್ಯದಲ್ಲಿ ಕಬ್ಬನ್ನು ಸಿಗಿದು ತಿನ್ನುವಾಗ. ರಸವು ಬಾಯಿಂದ ಇಳಿದು ಕೈಯಿಂದ ಒರೆಸಿ, ಉಟ್ಟುಕೊಂಡ ಅಂಗಿಯ ಚುಂಗಿಗೆ ತಿಕ್ಕುತ್ತಿದ್ದ ಅನುಭವ ಪುನಃ ಮನಸ್ಸಿನಲ್ಲಿ ಸುಳಿಯಿತು. 'ಒನ್ನೇಪುಟ' ಹಾಗೂ 'ಕಡೇಪುಟ'ಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಹತ್ತಿಯ ತೊಳೆಯಿಂದ ಒಂದೊಂದೆ ತಂತುವನ್ನು ಬಿಡಿಸಿ ತೆಗೆದಂತಹ ಶೈಲಿ. ಅಲ್ಲದೇ ಹೀಗೂ ಅನಿಸಿತು– ಮಳೆಯ ಮುತ್ತು ಅಂದು/ತನುವ ತೋಯಿಸಿದಂದು/ಮರುಳಾಯ್ತು ಮನವು ಮುಳುಗಿತ್ತು/ಹೊರಳಿದ್ದ ದಾರೀಲಿ/ಹೊಳೆ ಅಡ್ಡ ಬಂದರೂ/ತಿಳಿಯದೇ ದಾರಿ ತುಳಿದಿದ್ದೆ/ ಹುಡುಕಲು ನನ್ನೊಳಗೆ ಇಳಿದಿದ್ದೆ. **– ದಾಕ್ಷಾಯಣಿ ಯಡಹಳ್ಳಿ, ಡೊಂಬಿವಲಿ**

೯. ಸಂಕಲನ-೩೦ ಚೇತೋಹಾರಿಯಾಗಿದೆ. 'ಮಹಾನಾಟಕ ರಂಗಸಂಗೀತ', 'ಗೀತೆಯಲ್ಲಿ ಪುನರ್ಜನ್ಮ' ವಿಶೇಷ ಮೆಚ್ಚಿಕೆಯಾದವು. ಇನ್ನು, ಹಿಂದಿನ ಸಂಚಿಕೆಯ, 'ಸಂಗವ್ವಕ್ಕನ ಸುದ್ದಿ' ಮದ್ಲ ಮದ್ಲ ಮಜಾ ಅನಿಸಿದ್ರೂ ಚಿಂತನೆಗೆ ಹಚ್ಚಿತ್ತು. ಈ ಸಲ ಆ 'ಸುದ್ದಿ'ಗೆ ಬಂದ 'ಗುದ್ದು'ಗಳು ಭಿನ್ನ ಅರಿವು ಮೂಡಿಸುವಲ್ಲಿ ಯಶಸ್ವಿ ಆದವು. ನಾನೂ ಸಹಿತ ಸಾದಾ ಹರಟೆ ಇರಲಿ, ಹಾಡು ಕೇಳ್ತಿರಲಿ, ನಾಟಕ ನೋಡ್ತಿರಲಿ ಸದಾ 'ಪ್ರಾಣ', ವ್ಯಾಕರಣದೋಷ ಗಮನಿಸಿಕೋತ ಒಂಥರಾ nit picker ಆಗಿಬಿಟ್ಟಿದ್ದೆ. ಸರ್ವಜಿತರ ಯಶೋ'ಧಮ್ಮ', ಶರಣಗೌಡರ ಜಾದೂಅರಳಿ ಬಗ್ಗೆ ಗೊತ್ತಾಗಿ ಸ್ವಲ್ಪ ನಿರಾಳ ಆದೆ. ಆದ್ರ ವಸಂತ ಕವಲಿಯವರ 'ಮಹಾನಾಟಕ'ದೊಳಗ ಬಂದ 'ರಾಗಧಾರೀ' ಶಬ್ದ ಓದಿದ ಕೂಡಲೇ ನಾ ಇಷ್ಟ ದಿನ 'ರಾಗದಾರೀ' ಅಂತ ತಪ್ಪ ಹೇಳತಿದ್ದೆನಲ್ಲಾ ಅಂತ ಪಶ್ಚಾತ್ತಾಪ ಪಡ್ಲಿಕ್ಕೆ ಹತ್ತೇನಿ. ಅಂತೂ ಜ್ಞಾನದ ಬುತ್ತೀ ಸಂತೀ ಭಾಷಾ ಶುದ್ಧಿ ಉಪ್ಪಿನಕಾಯಿನೂ ಬಡಸ್ಲಿಕ್ಕೆ ಹತ್ತೀರಿ. ಅಭಿನಂದನೆಗಳು. **– ವಸುಂಧರಾ ದೇಸಾಯಿ**, ಶಿವಮೊಗ್ಗ

೧೦. **ಸಂಕಲನ-೩೦** ರಲ್ಲಿ ಬಂದ ಸಿ. ಸೋಮಶೇಖರಯ್ಯ ಅವರ 'ಗೀತೆಯಲ್ಲಿ ಪುನರ್ಜನ್ಮ', ತಾರಿಣಿ ಅವರ 'ಶಾಲಾ ಗುರುಗಳು' ಮತ್ತು ಉಷಾ ಪಿ. ರೈ ಅವರ 'ಅವ್ವ ಅಪ್ಪ' ಲೇಖನಗಳು ಬಹಳ ಇಷ್ಟವಾದವು. **ಸಂಕಲನ** ಸಂಚಿಕೆಯಿಂದ ಸಂಚಿಕೆಗೆ ಸಮೃದ್ಧಗೊಳ್ಳುತ್ತ ಪ್ರಕಟವಾಗುತ್ತಿದೆ.

– ಪ್ರೊ. ನ. ವಜ್ರಕುಮಾರ, ಧಾರವಾಡ

೧೧. **ಸಂಕಲನ**ವನ್ನು ಕಳೆದ ಎರಡು ವರ್ಷಗಳಿಂದ ನಿಯಮಿತವಾಗಿ ಓದುತ್ತಿದ್ದೇನೆ. ಎಷ್ಟೊಂದು ಮೌಲಿಕ ಲೇಖನಗಳನ್ನು ಕೊಡುತ್ತಿದ್ದೀರಿ... **– ಖಾಜಾವಲಿ ಈಚನಾಳ**, ಈಚನಾಳ

೧೨. **ಸಂಕಲನ**ದ ಸಂಚಿಕೆಗಳನ್ನು ಓದುತ್ತಿದ್ದಂತೆ ಅವುಗಳ ಮಹತ್ವ ತಾನಾಗಿ ಹೊಳೆಯುತ್ತದೆ. ಪತ್ರಿಕೆ ಸಂಪನ್ನ ಕನ್ನಡಿಗರ, ಸಹೃದಯಿಗಳ ಕಣ್ಮಣಿಯಾಗಿ ಬರುತ್ತಿದೆ. **– ಎಂ. ಎಸ್. ಕುಲಕರ್ಣಿ**, ಧಾರವಾಡ

೧೩. ಪ್ರತಿ ಸಲದಂತೆ **ಸಂಕಲನ-೩೦** ರ 'ಒನ್ನೇಪುಟ', 'ಕಡೀಪುಟ' ಮತ್ತು 'ಅವ್ವ ಅಪ್ಪ', 'ಗುರುಗಳ' ಲೇಖನಗಳು ತುಂಬ ಹೊಸತನದಿಂದ ಕೂಡಿವೆ. **– ಶಂಕರಗೌಡ ಸಾತ್ಮಾರ**, ಮುಂಡಗೋಡ

೧೪. **ಸಂಕಲನ-೩೦** ತುಂಬ ಮೌಲಿಕವಾಗಿ ಬಂದಿದೆ. ಮೊದಲಿಗೆ 'ಕಡೀಪುಟ' ನೋಡಿದೆ. ಕನಿಷ್ಠ ಎರಡು ಪುಟವಾದರೂ ಇರಲಿ. 'ಉಪದೇಶ ಅನ್ನೂದು ಅವರವರ ಅನುಭವದ ಒಟ್ಟು ಮೊತ್ತ' ಎಂಬ ಮಾತು ಮತ್ತೆಮತ್ತೆ ಓದಾಕ ಹಚ್ಚತೈತಿ. ಸತ್ಯವನ್ನು ಎಷ್ಟು ನಿರಾಳವಾಗಿ, ನಿರಾಯಾಸವಾಗಿ ಹೇಳಿದ್ದೀರಿ. ವಿಭಾಳ ಕವಿತೆಗಳು ಮತ್ತು 'ಅವ್ವ ಅಪ್ಪ' ಹಾಗೂ 'ಶಾಲಾ ಗುರುಗಳು' ಲೇಖನಗಳು ಎಂದಿನಂತೆ ತುಂಬಾ ಲವಲವಿಕೆಯಿಂದ ಬಂದಿವೆ. ಎರಡು ವರ್ಷಗಳ ಎಲ್ಲ ಲೇಖನಗಳ ಸಮಗ್ರ ಸಾಮಗ್ರಿ ದರ್ಶನ ಕೊಟ್ಟಿದ್ದಂತೂ ಸ್ತುತ್ಯಾರ್ಹ. **– ಡಾ. ಅಶೋಕ ನರೋಡೆ**, ಮಹಾಲಿಂಗಪುರ

೧೫. **ಸಂಕಲನ-೩೦** ರಲ್ಲಿ ಡಾ. ವಸಂತ ಕವಲಿಯವರ 'ಮಹಾನಾಟಕ ರಂಗಸಂಗೀತ' ಲೇಖನವನ್ನು ಪುನರ್ದಾಖಲಿಸುವ ಮೂಲಕ ಓದುಗರನ್ನು ಉಪಕರಿಸಿದ್ದೀರಿ. ಈ ಮಾದರಿಯ ಬರಹಗಳನ್ನು ಮತ್ತೆ ಮತ್ತೆ ಪ್ರಕಟಿಸುವುದರ ಮೂಲಕ ಸಾಂಸ್ಕೃತಿಕ ಪರಂಪರೆಯನ್ನು ಮೆಲುಕು ಹಾಕುವಲ್ಲಿನ ತಮ್ಮ ಪ್ರಯತ್ನ ಅಭಿನಂದನೀಯ. **– ಎ. ಡಿ. ನಂಜುಂಡಸ್ವಾಮಿ**, ಮೈಸೂರು

೧೬. **ಸಂಕಲನ** ನಿರೀಕ್ಷೆಗೂ ಮೀರಿ ಚೆನ್ನಾಗಿ ಬರ್‍ತಿದೆ. **– ಕುಂ. ವೀರಭದ್ರಪ್ಪ**, ಕೊಟ್ಟೂರು

೧೭. **ಸಂಕಲನ-೩೦** ರಲ್ಲಿ ಆರ್. ತಾರಿಣಿ ಶುಭದಾಯಿನಿಯವರು ಬರೆದ 'ನನ್ನ ಶಾಲಾ ಗುರುಗಳು' ಬಹಳ ಸುಂದರವಾಗಿದೆ. **– ಸದಾನಂದ ಹೆಗಡೆ**, ಧಾರವಾಡ

೧೮. **ಸಂಕಲನ** ನಿಜಕ್ಕೂ ಚೆನ್ನಾಗಿ ಬರುತ್ತಿದೆ. ಲೇಖನಗಳಲ್ಲಿ ವೈವಿಧ್ಯತೆ ಮತ್ತು ಶ್ರೇಷ್ಠತೆಗೆ ತುಂಬ ಗಮನ ಕೊಡುತ್ತಿದ್ದೀರಿ. ಇಂಥದ್ದೊಂದು ಪತ್ರಿಕೆ ಈ ಸಮಕಾಲೀನ ಸಂದರ್ಭದಲ್ಲಿ ಬರುತ್ತಿರುವುದು ಸಂತೋಷದ, ಅಭಿಮಾನದ ವಿಷಯ. – ಬಿ. ಎಸ್. ನಾಗರತ್ನಕುಮಾರಿ, ಮೈಸೂರು

ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ಕಟಗೋಬೇಕು, ಕಟಗೊಂಡ ಮ್ಯಾಲ ಇಟಗೋಬೇಕು, ಇಟಗೊಂಡ ಮ್ಯಾಲ ಅಟಗೋಬೇಕು ಅಂತ ನಮ್ಮವ್ವ ಆಗಾಗ ಯಾರಿಗೆರ ಉಪದೇಶ ಹೇಳವರ್ಹಂಗ ತನಗ ತಾನ್ಅ ಹೇಳಿಕೋತಿದ್ಲು. ನನಗ ಎಷ್ಟೋ ವರ್ಷ ಈ ಶಬ್ದ, ಅವುಗಳ ಹಿಂದಿನ ಅರಿವಿನ ಅರ್ಥ ತಿಳಿದಿರಲೇ ಇಲ್ಲ. ಈಗಾದರೂ ತಿಳದಾವಂತ ಏನಲ್ಲ. ಆದರೂ ಆಗಾಗ ಅವ್ವ ಧಿಗ್ ಅಂತ ತನ್ನ ಕುಣ್ಯಾಗಿಂದ ಹೊರಗ ಬಂದಬಿಡತಾಳ– ಕನಸಾಗಿ, ನೆನಪಾಗಿ, ಆತಂಕ ಆಗಿ, ಆಧಾರ ಆಗಿ ಶಬ್ದಗಳನ್ನ ಮಿಡೀತಾಳ, ಅರ್ಥಗಳನ್ನ ನುಡೀತಾಳ.

ಒಮ್ಮೆ ನಾನೂ ಕೇಳೇ ಬಿಟ್ಟೆ– ಅವ್ವಾ, ಕಟಗೋ, ಇಟಗೋ, ಅಟಗೋ ಅಂತ ಮತ್ತ ಮತ್ತ ತಟವಟಸತಿದ್ದೆಲ್ಲ, ಏನ ಹಂಗಂದ್ರ– ಅಂತ. ಇಷ್ಟ ಸಾಲೀ ಕಲತೀ, ಬರದ ಬರದ ಹಾಳೀ ಹಾಳ ಮಾಡತೀ, ನಿನಗ ತಿಳದಿಲ್ಲಂದರ ಹೆಂಗೋ ಮಗನ, ಅಂದಾಕಿನ ನನ್ನ ಮಾರೀ ನೋಡಿ ನಕ್ಕಳು. ಮಾಯವಾಗಿ ಹೋದಳು.

ಬೆಳಕಿನ ಸುಳಿ ಬಿಚ್ಚಿತು. ಅರ್ಥದ ಹೊಳಿ ಹರೀತು.

ಕಟ್ಟಿಕೊಂಡ ಮನಿ, ಇಟ್ಟುಕೊಂಡ ಸಂಬಂಧ, ಅಟ್ಟುಕೊಂಡ ಕನಸು ಇವು ನಮ್ಮನ್ನ ಒಂದ ನಿಟ್ಟಿನ್ಯಾಗ, ಒಂದು ಕಡೆಗೆ, ಒಂದು ರೀತೀಲೆ ಊರಿಬಿಡತಾವು. ಬೇರು ಬಿಡೂಹಂಗ ಮಾಡತಾವು. ಹಂಗ ನೆಲದಾಗ ಹೊಕ್ಕ ಮ್ಯಾಲ ನಿಲ್ಲೂದು, ನೆಲೆಸೂದು, ನೆನೆಯೂದು; ಅಲ್ಲಿಂದನ್ಅ ಮತ್ತ ಪುಟಿಯೂದು, ಚಿಮ್ಮೂದು, ಚಿಗಿಯೂದು ಅನಿವಾರ್ಯ ಆಕ್ಕತಿ. ಈ ಅನಿವಾರ್ಯತೆ ಅನ್ನೂದು ನಮ್ಮ ಸೃಜನಶೀಲತೆಯನ್ನ ಒಂದು ನಿಶ್ಚಲ ಸರೋವರದಂಥ ವಿಶಾಲ ಕುಂಡದೊಳಗ ಸೀಮಿತಗೊಳಿಸಿ ಬಿಡತಯ್ತಿ. ಅಥವಾ ಅಲೆಮಾರಿಯಾಗಿ ಅಲೆ ಅಲೆಯೊಳಗ ಅಳೆದು ಸುರಿದು ಹಾಳಾಗಿ ಬಿಡಬಹುದಾಗಿದ್ದ ದುಃಸ್ಥಿತಿಗೆ ಒಂದು ರೀತಿಯ ಸಂಸ್ಕಾರ ನೀಡತೆಯ್ತಿ. ಹೌದು ಅಲ್ಲ ಸರಿ ತಪ್ಪು ಮೇಲು ಕೀಳು ಹಳೆ ಹೊಸ ನಾನು ನೀನುಗಳ ನಡಕಿನ ಅಂತರ ನಮ್ಮ ಅರಿವಿಗೆ ಬರದಂಥ ರೀತಿಯೊಳಗ ಸಂಕೀರ್ಣ ಆಗಿರೂದರಿಂದ ಇಂಥ ಮನಃಸ್ಥಿತಿಯನ್ನ ಕಲಾವಂತ ಹೃದಯಗಳು ಒಪ್ಪಿಕೋಬೇಕಾಕ್ಕತಿ.

ಕಟ್ಟಿಗೊಂಡ ಮನೆಯೊಳಗ ಸೇರಿಕೊಂಡ ಮ್ಯಾಲ ನಿಡುಗಡೆ, ಸ್ಥಗಿತತೆ ಅನ್ನೂದು ನಿಧಾನವಾಗಿ ಸುರು ಆಗಿಬಿಡತಯ್ತಿ. ನೀವು ಒಪ್ಪರಿ ಬಿಡರಿ, ಮುಂದಕ ಹರಿದಾಡೂದು ನಿಂತು ಹೊಕ್ಕತಿ ಅಥವಾ ಕಡಿಮಿ ಆಕ್ಕತಿ. ಮನಿ ಕಟ್ಟಿ ಮುಗಸೂದರಾಗ ಮನಶ್ಯಾ ಎಲ್ಲಾ ರೀತೀಲೆ ಹೈರಾಣ ಆಗಿಬಿಡತಾನ, ಇನ್ನಮ್ಯಾಗ ಸಾಕಪಾ, ಈ ಹ್ವಾರೆ ಎಂದೂ ಮಾಡಬಾರದು ಅನ್ನಾಕ ಸುರು ಮಾಡತಾನ. ವಸ್ತು, ಸ್ಥಳ, ಪ್ರಾಣಿ, ಮನಶಾರು, ಭಾವಗಳ ಜೊತೆಗೆ ನಮ್ಮನ್ನ ಬೆಳೆಸುವ ಪ್ರೀತಿ, ಉಳಿಸುವ ಸ್ನೇಹ ಮಮಕಾರಕ್ಕ ಕಾರಣ ಆಗತಾವು. ಆಗ ಅವುಗಳ ಜೊತೆಗೆ ಅಂಥಾ ಸಂಬಂಧವನ್ನ ನಾವೇ ಇಟಗೊಂಡರೂ ಬರಬರ್ತ ಆ ಸಂಬಂಧಗಳು ತಾವಾಗಿ ನಮ್ಮನ್ನ

ಇಟಗೊಂಡುಬಿಡತಾವು. ನಾವೂ ಆ ಹಂತಕ್ಕ ತಲುಪಿಬಿಡತೇವಿ. ಇದು ಬರೇ ಅವ್ವ ಅಪ್ಪ ಹೇಣ್ತಿ ಮಕ್ಕಳು ಅರಿವಿ ಅಂಚಡಿ ಇನ್ನೊಂದು ಮುನ್ನೊಂದು ಅಂತ ಸಾಗಿಯೇ ಇರತಯ್ತಿ, ಮುಗಿಯೂದೇ ಇಲ್ಲ. ಅವೆಲ್ಲ ನಮ್ಮೊ್ವ್‌ಅ ಆಗಿ, ಅವುನ್ನ ಹಳೇವಾದರೂ, ಹರಿದು ಹೋದರೂ, ಕೆಟ್ಟರೂ, ಬ್ಯಾಡಾದರೂ ಒಗ್ಯಾಕ ಮನಸ ಆಗೂದುಲ್ಲ. ಕಟಿಗೊಂಡ ಮನಿತುಂಬ ಇಟಗೊಂಡ ಸಂಬಂಧದ ವಾಸ್ತವಗಳು ಬರೇ ವಸ್ತುವಾಗಿ, ಹಳೇವಾಗಿ, ಮುರುಕಲಾಗಿ, ಮೋಡಕಾ ಆಗಿ, ಭೂತ ಆಗಿ ಜಾಗಾ ತುಂಬಾಕ ಸುರು ಮಾಡತಾವು. ಕಡೀಕ ಮೂಲೀ ಹಿಡೀತಾವು.

ಹಿಂಗೆಲ್ಲ ಯಾಕ ಅಕ್ಕತಿ ಅಂದರ, ಅವ್ರಕ್ಕ ಮೂಲ ನಾವ್ರ ಬಯಸಿದ, ಬೇಡಿದ, ಅಟ್ಟುಕೊಂಡ ಕನಸುಗಳು ಕಾರಣ ಅನ್ನೂದು ನಮಗ ಹೊಳಿದಿರೂದುಲ್ಲ. ಅದು ಹೊಳಿಯೂದರಾಗ ಎಲ್ಲಾ ಮುಗದು ಹೋಗಿರತಯ್ತಿ. ಮನೀನೂ ನಾವೇ ಅಟ್ಟುಕೊಂಡ ಕನಸು, ಅಡುಗೆ ಮಾಡಿಕೊಂಡ ಅನ್ನದ ಊಟ. ಎಲ್ಲಾದರ ಸಂಬಂಧಗಳೂ ನಾವೇ ಅಟ್ಟುಕೊಂಡ ಕನಸಿನ ತಿನಿಸುಗಳು. ಮತ್ತ ಇಂಥಾ ಕನಸು ಕಾಣಲಿಲ್ಲಾ ಅಂದರ ಎಲ್ಲಿಯೂ ನೆಲಿ ನಿಲ್ಲದ ಕಡೀಕ ಅಂತರ್ ಪಿಶಾಚಿ ಹಂಗ, ದೆವ್ವಗಾಳಿಗೆ ಸಿಕ್ಕ ರವದಿ ಹಂಗ ಚಿಪ್ಪಾಡಿ ಆಗಿ ಹೋಗತೇವು. ಅದಕ್ಕಂತನ್‌ಅ ಎಷ್ಟು ಲಗೂ ಸಾಧ್ಯನೋ ಅಷ್ಟ ಲಗೂ ಕನಸಿನ ಹಗ್ಗಾ ಕಟಗೊಳ್ಳೂದು ವಾಜಮಿ ಕೆಲಸ.

ಖರೆ ಅಂದರ ಹಿಂಗ ಮೊದಲು ಮೊದಲು ಅಟ್ಟುಕೊಂಡು, ಅಡಗೀ ಮಾಡಿಕೊಂಡು ರುಚಿ ನೋಡಿದ ಕನಸು; ಕಟಗೊಂಡ ಮನಿ, ಇಟಗೊಂಡ ಸಂಬಂಧಗಳ ಕೂಡ ಸಮಾಧಿ ಆಗಿಬಿಡಬೇಕಿತ್ತು. ಆದರ ಹಂಗ ಆಗೂದುಲ್ಲ. ಕನಸಿಗೆ ಮತ್ತ ಮತ್ತ ಚಿಗಿಯುವ ಶಕ್ತಿ ಅಯ್ತಿ, ಜಿಗಿಯುವ ಯುಕ್ತಿ ಅಯ್ತಿ. ಮನಿ ಆಗಲಿ ಸಂಬಂಧ ಆಗಲಿ, ಅವುನ್ನ ತಡ್ಯಾಕ ಆಗೂದುಲ್ಲ. ತಡ್ಯಾಕ ಹ್ವಾದರ ಮನಿ ಒಡೀತಾವು, ಸೀಳತಾವು, ಬಿರಕಬಿಡತಾವು, ಕುಸೀತಾವು; ಸಂಬಂಧ ಸಿಡಕತಾವು, ಸೆಟಗೋತಾವು, ಹುಸಿಯಾಗಿ ಹರಿದುಹೋಗತಾವು. ಹಿಂಗಾಗಿ ಮತ್ತ ಹೊಸಾ ಕನಸು ಕಾಣೂದು ಅನಿವಾರ್ಯ ಅಕ್ಕತಿ. ಹೊಸಾ ಆಶೆ ಇಟಗೊಳ್ಳೂದು, ಹೊಸಾ ಮನಸು ಕಟ್ಟೂದು ಈ ರೀತಿ ನಿರಂತರ ನಡೀತಿರತಯ್ತಿ. ಪ್ರತಿಯೊಬ್ಬ ಜೀವನರತನಿಗೆ ಇದ್‌ಅ ಜೀವನರಥ. ಇದರೊಳಗ ಇಲ್ಲಿ ಕನಸು ದೇವರು. ಮನಿ ತೇರು. ಸಂಬಂಧ ಹಗ್ಗ. ಎಳ್ಯಾವರು ಯಾರು? ಪ್ರತಿಯೊಬ್ಬರ ಭವಿಷ್ಯ ಕೈ ಮಾಡಿ ಕರೀತಯ್ತಿ, ಹೋಗದಿದ್ದರೂ ಎಳೀತಯ್ತಿ...

ತಡಿ ತಡೀ ಅಂದ್ಲು ಅವ್ವ. ಯಾಕವಾ ಅಂದೆ. ನಾ ಏನ ಹೇಳಿದೆ, ನೀ ಏನ ಅಂದ್ಕೊಳ್ಳಾಕ ಹತ್ತೀದಿ... ಏನಾಗೇತಿ ನಿನಗ? ಅಂದ್ಲು.

ಅವ್ವಾ, ನೀ ನನ್ನ ದೇವರು, ನೀ ನನ್ನ ತೇರು, ನೀ ನನ್ನ ಹಗ್ಗ ಅಂದೆ.

•

ಅಪ್ಪಾ, ಬೆಳಕಾಗೇತಿ ಏಳು, ಏನೋ ಬಡಬಡಸಾಕ ಹತ್ತೀಯಲ್ಲ ಅಂದ್ಲು ಮಗಳು. ಎದ್ದೆ. ಹಾರಗುದುರಿ ಆಗಿ ಹಾರಿ ಹೋತು ನಿದ್ದೆ. ಅವ್ವಾ, ನೀ ಎಲ್ಲಿದ್ದೆ...

ಜೀವನದ ರಥವನ್ನ ಮತ್ತ ಯಾರೋ ಎಳ್ಯಾಕ ಹತ್ತಿದರು...

SA. 'ALANA: RNI No. KARKAN 14160/10/1/2002-TC

ಸಂಕಲನ : ಜನೆವರಿ + ಫೆಬ್ರವರಿ ೨೦೦೭

ಸಂಪುಟ ೬, ಸಂಚಿಕೆ ೧

ಸಂಪಾದಕರು : ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ

•

ವೆಂಕಟೇಶ ಕುಲಕರಣಿ / ಶಂಕರ ತಲ್ಲೂರ

ಭಾರತಿ / ಪಿ.ಪಿ.ಕೆ.

ಎಲ್. ವಿ. ಶಾಂತಕುಮಾರಿ / ವಿದ್ಯಾಧರ ಮುತಾಲಿಕ ದೇಸಾಯಿ

ಪ್ರಸನ್ನ / ಪರಮೇಶ್ವರ ಹೆಗಡೆ

ಜೋಗಿಂದರ್ ಪಾಲ್ / ಅಬ್ದುಲ್ ಮಜೀದ್ ಖಾನ್

ಜಂಬಣ್ಣಾ ಅಮರಚಿಂತ / ಷ. ಶೆಟ್ಟರ್

ಬಿ. ಎ. ಸನದಿ / ಜಗದೀಶ ಮಂಗಳೂರಮಠ

ಬಸವರಾಜ ಪಿ. ಡೋಣೂರ

•

ಶ್ಯಾಮಸುಂದರ ಬಿದರಕುಂದಿ / ದೇಶಪಾಂಡೆ ಸುಬ್ಬರಾಯ / ಅಶೋಕ ಶೆಟ್ಟರ್ /
ಅರುಣಾ ಹೆಬ್ರಿ / ಮೋತಿಲಾಲ ಹಲವಾಯಿ / ಶಶಿಧರ ತೋಡಕರ /
ದುಷ್ಯಂತ ನಾಡಗೌಡ / ನೆಂಪು ನರಸಿಂಹ ಭಟ್ಟ / ಪ್ರಕಾಶ ಭಟ್ /
ಚಂದ್ರಶೇಖರ ವಸ್ತ್ರದ / ಬಸವರಾಜ ವಕ್ಕುಂದ / ಪ್ರಸಾದ್ ರಕ್ಷಿದಿ

•

ವಿವೇಕ ಶಾನಭಾಗ \ ಶಿವಶಂಕರ ಹಿರೇಮಠ \ ಜಿ. ಎಸ್. ಆಮೂರ \
ಶ್ರೀನಿವಾಸ ಕಾರ್ಕಳ \ ಜಿ. ಡಿ. ಜೋಶಿ \ ವಾಸಂತಿ ಪ್ರಭಾಕರ ನಾಯಕ \
ಹರಿಕೃಷ್ಣ ಭರಣ್ಯ \ ದಾಕ್ಷಾಯಣಿ ಯಡಹಳ್ಳಿ \ ವಸುಂಧರಾ ದೇಸಾಯಿ \
ನ. ವಜ್ರಕುಮಾರ \ ಖಾಜಾವಲಿ ಈಚನಾಳ \ ಎಂ. ಎನ್. ಕುಲಕರ್ಣಿ \
ಶಂಕರಗೌಡ ಸಾತ್ಮಾರ \ ಅಶೋಕ ನರೋಡೆ \ ಎ. ಡಿ. ನಂಜುಂಡಸ್ವಾಮಿ \
ಕುಂ. ವೀರಭದ್ರಪ್ಪ \ ಸದಾನಂದ ಹೆಗಡೆ \ ಬಿ. ಎಸ್. ನಾಗರತ್ನಕುಮಾರಿ

•

ಸಿದ್ಧಲಿಂಗ ಪಟ್ಟಣಶೆಟ್ಟಿ

•

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪